ಶನಿವಾರ ಫೆಬ್ರುವರಿ 28 2026 ₹ 7.00

www.prajavani.net

ಪ್ರಜಾ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪ



ಪ್ರತಿಭಟನೆ
ಕಲಬುರಗಿಯ ಜಗತ್ ಸರ್ಕಲ್‌ನಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ಆಶಾ ಕಾರ್ಯಕರ್ತೆಯರು ಶುಕ್ರವಾರ ಪ್ರತಿಭಟನಾ ಮೆರವಣಿಗೆ ನಡೆಸಿದರು

ಹರಾಜು: ಬಾರದ ಬಿಡ್‌ದಾರರು


14 ಮಂದಿಯಿಂದ ಬಾಕಿ ತೆರಿಗೆ ಪಾವತಿ; 36 ಆಸ್ತಿ ಹರಾಜು ಪ್ರಕ್ರಿಯೆ ಮುಂದೂಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಕ್ಷಿಣ ನಗರ ಪಾಲಿಕೆ ವತಿಯಿಂದ ಬೊಮ್ಮನಹಳ್ಳಿ ವಲಯದಲ್ಲಿ ಆಯೋಜಿಸಿದ್ದ ಆಸ್ತಿ ಹರಾಜು ಪ್ರಕ್ರಿಯೆ ಯಲ್ಲಿ ಬಿಡ್‌ದಾರರು ಪಾಲ್ಗೊಳ್ಳದೆ ಇದ್ದುದರಿಂದ ಹರಾಜನ್ನು ಮುಂದೂಡಲಾಗಿದೆ.

ಸುಸ್ತಿದಾರರಿಂದ ಆಸ್ತಿ ತೆರಿಗೆ ವಸೂಲಿ ಮಾಡಲು ಬೊಮ್ಮನಹಳ್ಳಿ ವ್ಯಾಪ್ತಿಯ ಒಟ್ಟು 50 ಆಸ್ತಿಗಳನ್ನು ಹರಾಜು ಹಾಕುವ ಪ್ರಕ್ರಿಯೆಯನ್ನು ಶುಕ್ರವಾರ ನಡೆಸಲಾಯಿತು. ಸುಸ್ತಿದಾರರಿಂದ ₹1.08 ಕೋಟಿ ತೆರಿಗೆ ಬಾಕಿ ಇತ್ತು. ಈ ಆಸ್ತಿಗಳ ಹರಾಜು ಪ್ರಕ್ರಿಯೆ ಆರಂಭವಾಗುವ ಮುನ್ನ 14 ಸುಸ್ತಿದಾರರು ₹27,62,525 ತೆರಿಗೆಯನ್ನು ಪಾವತಿಸಿದರು. ಹೀಗಾಗಿ, ಹರಾಜು ಪ್ರಕ್ರಿಯೆಯಿಂದ ಆಸ್ತಿಗಳನ್ನು ಕೈಬಿಟ್ಟಿರುವ ಹಿಂಬರಹವನ್ನು ಅವರಿಗೆ ನೀಡಲು ಸಹಾಯಕ ಕಂದಾಯ ಅಧಿಕಾರಿಗಳಿಗೆ ಸೂಚಿಸಲಾಯಿತು.

ಇನ್ನುಳಿದ 36 ಸುಸ್ತಿದಾರರು ಶುಕ್ರವಾರ ಮಧ್ಯಾಹ್ನದವರೆಗೂ ತೆರಿಗೆ ಪಾವತಿಸಿರಲಿಲ್ಲ. ಈ ಆಸ್ತಿಗಳ ಹರಾಜು ಪ್ರಕ್ರಿಯೆ ಆರಂಭಿಸಿದಾಗ, ಸ್ಥಳದಲ್ಲಿ ಹಾಜರಿದ್ದ ಕೆಲವು ಸಾರ್ವಜನಿಕರು ಠೇವಣಿ ಮೊತ್ತ ಪಾವತಿಸಿ ಬಿಡ್ ಮಾಡಲು ಸಿದ್ಧರಾಗಿರಲಿಲ್ಲ. ಯಾವುದೇ ಸಾರ್ವಜನಿಕರು ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಿ ಬಿಡ್ ಮಾಡಲು ಮುಂದೆ ಬಾರದ ಕಾರಣ, 36 ಆಸ್ತಿಗಳ ಮರು ಹರಾಜು ಪ್ರಕ್ರಿಯೆಗೆ ಮತ್ತೆ ಸಿದ್ಧತೆ ನಡೆಸಲು ಅಧಿಕಾರಿಗಳಿಗೆ ಸೂಚಿಸಲಾಯಿತು ಎಂದು ಆಯುಕ್ತ ಕೆ.ಎನ್. ರಮೇಶ್ ತಿಳಿಸಿದರು.



ಮುಖ್ಯಾಂಶಗಳು

- ಸುಸ್ತಿದಾರರಿಂದ ₹1.08 ಕೋಟಿ ತೆರಿಗೆ ಬಾಕಿ
- 50 ಆಸ್ತಿಗಳ ಹರಾಜು
- ಹರಾಜಿಗೆ ಮುನ್ನ ₹27,62,525 ತೆರಿಗೆ ಪಾವತಿ

ವಿಳಂಬ ಬೇಡ: ವಾರ್ಡ್‌ಗಳಿಗೆ ಸಂಬಂಧಿಸಿದ ಸಮಸ್ಯೆಗಳಿಗೆ ಪರಿಹಾರ, ಅಭಿವೃದ್ಧಿ ಕಾರ್ಯ, ಅಗತ್ಯ ಸೌಲಭ್ಯಗಳು ವಿಳಂಬವಿಲ್ಲದೆ ನಾಗರಿಕರಿಗೆ ತಲುಪಬೇಕು ಎಂದು ಶಾಸಕ ಸುರೇಶ್ ಕುಮಾರ್ ಸೂಚಿಸಿದರು.

ಪೂರ್ವ ನಗರ ಪಾಲಿಕೆ ಆಯುಕ್ತ ಡಾ. ಕೆ.ವಿ. ರಾಜೇಂದ್ರ ಅವರೊಂದಿಗೆ ರಾಜಾಜಿನಗರ ಕ್ಷೇತ್ರದಲ್ಲಿ ಪ್ರಗತಿ ಪರಿಶೀಲನೆ ನಡೆಸಿದ ಅವರು, ಅಧಿಕಾರಿಗಳು ಕ್ರಮಬದ್ಧವಾಗಿ ಕಂದಾಯ ಸಂಗ್ರಹ ಕಾರ್ಯವನ್ನು ನಿರ್ವಹಿಸಿ, ಆಸ್ತಿಗಳಿಗೆ ತಪ್ಪಾಗಿ ಕಂದಾಯ ಪಾವತಿಸಿರುವ ಪ್ರಕರಣಗಳನ್ನು ಪರಿಶೀಲಿಸಿ, ಪರಿಷ್ಕೃತ ಕಂದಾಯ ವಸೂಲಿ ಮಾಡುವಂತೆ ಸೂಚಿಸಿದರು.

ಇದಲ್ಲದೆ, ದಾಖಲಾತಿಗಳನ್ನು ಡಿಜಿಟಲೀಕರಣ ಮಾಡುವ ಕಾರ್ಯಕ್ಕೆ ಹೆಚ್ಚಿನ ವೇಗ ನೀಡುವುದರೊಂದಿಗೆ, ನಿಗದಿತ ಅವಧಿಯಲ್ಲಿ ಅದನ್ನು ಪೂರ್ಣ ಗೊಳಿಸುವಂತೆ ನಿರ್ದೇಶನ ನೀಡಿದರು.

ಘನತ್ಯಾಜ್ಯ ನಿರ್ವಹಣೆಯನ್ನು ಖಚಿತಪಡಿಸಿಕೊಳ್ಳುವ ಉದ್ದೇಶದಿಂದ, ಆರೋಗ್ಯ ಅಧಿಕಾರಿಗಳು, ವ್ಯವಸ್ಥಾಪಕರು ಕಾರ್ಯಯೋಜನೆ ರೂಪಿಸಿ, ಬ್ಲ್ಯಾಕ್ ಸ್ಪಾಟ್‌ಗಳನ್ನು ಸಂಪೂರ್ಣವಾಗಿ ತೆರವುಗೊಳಿಸಬೇಕು. ಅವು ಮರುಕಳಿಸದಂತೆ ಕ್ರಮ ಕೈಗೊಳ್ಳಬೇಕು ಎಂದರು.

ಹೊರ ವರ್ತುಲ ರಸ್ತೆ–ಪಿಆರ್‌ಆರ್‌ಗೆ ಸಂಪರ್ಕ

ಪೂರ್ವ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಪರಿಷ್ಕೃತ ಮಹಾಯೋಜನೆ–2015ರ ಪ್ರಕಾರ, ಹೊರ ವರ್ತುಲ ರಸ್ತೆಯಿಂದ ಪೆರಿಫೆರಲ್ ರಿಂಗ್ ರಸ್ತೆಗೆ (ಪಿಆರ್‌ಆರ್) ಸಂಪರ್ಕಿಸುವ ರಸ್ತೆ ವಿಸ್ತರಣೆಗೆ ವೇಗ ನೀಡಲು ಹೆಚ್ಚುವರಿ ಆಯುಕ್ತ ಲೋಖಂಡೆ ಸ್ನೇಹಲ್ ಸುಧಾಕರ್ ಅವರು ಸೂಚಿಸಿದರು.

ಮಹದೇವಪುರ, ದೊಡ್ಡನೆಕ್ಕುಂದಿ, ಪಟ್ಟಂದೂರು ಅಗ್ರಹಾರ ಹಾಗೂ ನಾಗೊಂಡನಹಳ್ಳಿ ಮಾರ್ಗವಾಗಿ ಪಿಆರ್‌ಆರ್ ಸಂಪರ್ಕಿಸುವ ಪ್ರಸ್ತಾಪಿತ 24 ಮೀಟರ್ ಅಗಲದ ರಸ್ತೆ ವಿಸ್ತರಣೆಗೆ ಅಗತ್ಯವಿರುವ ಭೂಸ್ವಾಧೀನ ಪ್ರಕ್ರಿಯೆಗೆ ವೇಗ ನೀಡಬೇಕು. ಸ್ವತ್ತುಗಳ ಮಾಹಿತಿಯನ್ನು ಪಡೆದುಕೊಂಡು ಸ್ವಾಧೀನಕ್ಕೆ ಅಧಿಸೂಚನೆ ಹೊರಡಿಸಬೇಕು ಎಂದು ಹೇಳಿದರು.

ಸೀತಾರಾಂಪಾಳ್ಯ ಮೆಟ್ರೊ ನಿಲ್ದಾಣ ಸಮೀಪದಲ್ಲಿ ಕೆಐಎಡಿಬಿಯಿಂದ ಅಭಿವೃದ್ಧಿಪಡಿಸಿರುವ ವಿಶೇಷ ವಲಯದಲ್ಲಿನ ಸ್ವತ್ತುಗಳ ಬಳಿ ರಸ್ತೆ ವಿಸ್ತರಣೆಗೆ ಅಗತ್ಯವಿರುವ ಭೂಸ್ವಾಧೀನ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಕೆಐಎಡಿಬಿಯೊಂದಿಗೆ ಸಮನ್ವಯಕ್ಕೆ ಸೂಚಿಸಿದರು.

ಎಲ್ಲ ಪ್ರಕ್ರಿಯೆ ಪೂರ್ಣಗೊಂಡ ನಂತರ, ಮಾರ್ಚ್ 10ರೊಳಗೆ ಭೂಸ್ವಾಧೀನಕ್ಕೆ ಅಧಿಸೂಚನೆ ಹೊರಡಿಸಬೇಕು ಎಂದರು.

ಬೃಹತ್ ಸ್ವಚ್ಛತಾ ಅಭಿಯಾನ

ಬೆಂಗಳೂರು ಉತ್ತರ ನಗರ ಪಾಲಿಕೆ ವತಿಯಿಂದ 2025-26ನೇ ಸಾಲಿನ ಸ್ವಚ್ಛ ಸರ್ವೇಕ್ಷಣ ಯೋಜನೆಯಡಿ ಬೃಹತ್ ಸ್ವಚ್ಛತಾ ಅಭಿಯಾನವನ್ನು ಮಾರ್ಚ್ 1ರಿಂದ 6ರವರೆಗೆ ಆಯೋಜಿಸಲಾಗಿದೆ ಎಂದು ಆಯುಕ್ತ ಪೊಮ್ಮಲ ಸುನೀಲ್ ಕುಮಾರ್ ತಿಳಿಸಿದರು.

ಪಾಲಿಕೆಯ 44 ವಾರ್ಡ್‌ಗಳಲ್ಲಿ ಸಾರ್ವಜನಿಕ ಸಹಭಾಗಿತ್ವದೊಂದಿಗೆ ಅಭಿಯಾನ ನಡೆಸಲಾಗುತ್ತದೆ. ಸ್ವಚ್ಛತೆ, ಪರಿಸರ ಸಂರಕ್ಷಣೆ ಹಾಗೂ ನಾಗರಿಕರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ವಿವಿಧ ಸ್ವಚ್ಛತಾ ಹಾಗೂ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ.

ಶಾಲಾ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರ ಭಾಗವಹಿಸುವಿಕೆಯನ್ನು ಉತ್ತೇಜಿಸುವ ನಿಟ್ಟಿನಲ್ಲಿ ರಂಗೋಲಿ ಸ್ಪರ್ಧೆ, ರಸಪ್ರಶ್ನೆ, ಚಿತ್ರಕಲೆ ಸ್ಪರ್ಧೆ ಆಯೋಜಿಸಲಾಗುತ್ತಿದೆ ಎಂದು ತಿಳಿಸಿದರು.

ಬಾಗಲಕೋಟೆ ಹೋಳಿ ಹಲಗೆ ಮೇಳ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉತ್ತರ ಕರ್ನಾಟಕದ ಸಂಸ್ಕೃತಿ ಪರಂಪರೆಯ ವೈಭವವನ್ನು ಸಾರುವ ಬಾಗಲಕೋಟೆ ಹೋಳಿ ಹಲಗೆ ಮೇಳ–2026 ಕಾರ್ಯಕ್ರಮವನ್ನು ಮಾರ್ಚ್ 1ರಂದು ಸಂಜೆ 5.30ಕ್ಕೆ ರಾಜಾಜಿನಗರ 2ನೇ ಬ್ಲಾಕ್‌ನಲ್ಲಿರುವ ಕೆ.ಎಲ್.ಇ. ಕಾಲೇಜ್ ಮೈದಾನದಲ್ಲಿ ಆಯೋಜನೆ ಮಾಡಲಾಗಿದೆ.

ಬೆಂಗಳೂರು ಚಾಲುಕ್ಯ ಸಾಂಸ್ಕೃತಿಕ ಸಂಘ ಆಯೋಜಿಸಿರುವ ಈ ಹಲಗೆ ಮೇಳದಲ್ಲಿ ಹಲಗೆ, ಶೆಹನಾಯಿ ಸೇರಿದಂತೆ ವಿವಿಧ ವಾದ್ಯಗಳ ಸಮ್ಮೇಳನ ಇರಲಿದೆ. ಬಾಗಲಕೋಟೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಿಂದ ನೂರಾರು ಕಲಾವಿದರು ಭಾಗವಹಿಸಲಿದ್ದಾರೆ.

ಎಲ್ಲ ಸಮುದಾಯಗಳ ಜನರನ್ನು ಒಂದೇ ವೇದಿಕೆಯಲ್ಲಿ ಸೇರಿಸಿ, ಬಣ್ಣಗಳ ಹಬ್ಬವನ್ನು ಸಂಸ್ಕೃತಿ, ಸಂಗೀತ ಮತ್ತು ಏಕತೆಯೊಂದಿಗೆ ಆಚರಿಸುವ ಉದ್ದೇಶ ಹೊಂದಿದೆ ಎಂದು ಸಂಘಟಕರು ತಿಳಿಸಿದ್ದಾರೆ.

ಪರಿಹಾರ ದರಕ್ಕೆ ರೈತರ ವಿರೋಧ

ಬಿಬಿಸಿ: 2013ರ ಭೂಸ್ವಾಧೀನ ಕಾಯ್ದೆ ಅಡಿ ಪರಿಹಾರ ನೀಡುವಂತೆ ರೈತರ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಬ್ಯುಸಿನೆಸ್ ಕಾರಿಡಾರ್ (ಬಿಬಿಸಿ) ಯೋಜನೆಯ ಭೂಸ್ವಾಧೀನ ಪ್ರಕ್ರಿಯೆಗೆ ಸಂಬಂಧಿಸಿದಂತೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ನಿಗದಿಪಡಿಸಿರುವ ಪರಿಹಾರ ದರಕ್ಕೆ ವಿರೋಧ ವ್ಯಕ್ತಪಡಿಸಿರುವ ರೈತರು, ಕೇಂದ್ರ ಸರ್ಕಾರದ 2013ರ ಭೂಸ್ವಾಧೀನ ಕಾಯ್ದೆ ಅಡಿ ಪರಿಹಾರ ನೀಡಬೇಕು ಎಂದು ಸರ್ಕಾರಕ್ಕೆ ಆಗ್ರಹಿಸಿದ್ದಾರೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪಿ.ಆರ್‌.ಆರ್. ರೈತ ಹಾಗೂ ನಿವೇಶನದಾರರ ಸಂಘದ ಅಧ್ಯಕ್ಷ ಮಾವಳ್ಳಿಪುರ ಶ್ರೀನಿವಾಸ್, ‘74 ಕಿ.ಮೀ. ಪೆರಿಫೆರಲ್ ವರ್ತುಲ ರಸ್ತೆ (ಪಿಆರ್‌ಆರ್) ನಿರ್ಮಿಸಲು ತುಮಕೂರು ರಸ್ತೆಯಿಂದ ಹೊಸೂರು ರಸ್ತೆವರೆಗೆ 2,580 ಎಕರೆ ಜಮೀನನ್ನು ಸ್ವಾಧೀನ ಮಾಡಲಾಗುತ್ತಿದೆ. ಜಮೀನು ಕಳೆದುಕೊಳ್ಳುವ ಭೂ ಮಾಲೀಕರಿಗೆ, ಸಚಿವ ಸಂಪುಟದ ತೀರ್ಮಾನದಂತೆ ಪ್ರಾಧಿಕಾರವು ಐದು ಪರಿಹಾರ ಆಯ್ಕೆಗಳನ್ನು ನೀಡಿದೆ. ಆದರೆ, ಈ ಪರಿಹಾರ ಆಯ್ಕೆಗಳು ರೈತ ವಿರೋಧಿಯಾಗಿವೆ’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

‘1894ರಲ್ಲಿ ಬ್ರಿಟಿಷರು ರೂಪಿಸಿದ ಕಾನೂನಿನಡಿ ನೀಡುವ ಪರಿಹಾರ ಬೇಡ. ಬದಲಾಗಿ, ಜಮೀನು ನೀಡುವವರಿಗೆ ಕೇಂದ್ರ ಸರ್ಕಾರದ 2013ರ ಭೂಸ್ವಾಧೀನ ಕಾಯ್ದೆ ಅಡಿ ಪರಿಹಾರ ನಿಗದಿ ಮಾಡಬೇಕು. ಈ ಕಾಯ್ದೆ ಪ್ರಕಾರ ಮಾರುಕಟ್ಟೆ ಬೆಲೆಗಿಂತ ಎರಡು ಪಟ್ಟು ಪರಿಹಾರ ನೀಡುವುದರ ಜತೆಗೆ ಪುನರ್ವಸತಿ ಕಲ್ಪಿಸಬೇಕಾಗುತ್ತದೆ. 1976ರ ಬಿಡಿಎ ಕಾಯ್ದೆಯ ಸೆಕ್ಷನ್ 27ರ ಪ್ರಕಾರ, ಯಾವುದೇ ಯೋಜನೆ ಕಾರ್ಯಗತಗೊಳ್ಳದಿದ್ದರೆ ಅದು ಸ್ವಯಂ ರದ್ದಾಗುತ್ತದೆ. ಈ ಯೋಜನೆ 2005–06ರಲ್ಲಿ ಘೋಷಣೆಯಾದರೂ ಜಾರಿಗೆ ಬಂದಿಲ್ಲ. ಆದ್ದರಿಂದ ಭೂಸ್ವಾಧೀನ ಅಥವಾ ಟೆಂಡರ್ ಆಹ್ವಾನ ಕಾನೂನು ಬದ್ಧವಲ್ಲ’ ಎಂದರು.

‘ಈ ಯೋಜನೆಯ ವಿರುದ್ಧ ನ್ಯಾಯಾಲಯದಲ್ಲಿ ಪ್ರಕರಣಗಳ ವಿಚಾರಣೆ ನಡೆಯುತ್ತಿದ್ದರೂ ನ್ಯಾಯಾಲಯಕ್ಕೆ ಗೌರವ ನೀಡದೆ, ಬಿಡಿಎ ಅಧಿಕಾರಿಗಳು ರೈತರಿಗೆ ನೋಟಿಸ್ ನೀಡುವ ಮೂಲಕ ಬಲವಂತವಾಗಿ ಸಂಧಾನ ಪ್ರಕ್ರಿಯೆ ಪ್ರಾರಂಭಿಸಿದ್ದಾರೆ. ಇದರಿಂದಾಗಿ ಸಂವಿಧಾನಬದ್ಧ ಹಕ್ಕುಗಳ ಉಲ್ಲಂಘನೆಯಾಗಿದೆ. ಜಮೀನಿನ ನೈಜ ಮೌಲ್ಯವನ್ನು ಕಡಿಮೆ ಮಾಡಿ, ರೈತರ ಮೇಲೆ ಒತ್ತಡ ಹೇರಲಾಗುತ್ತಿದೆ. ಶೇ 90ರಷ್ಟು ರೈತರು ಈ ಪರಿಹಾರ ಒಪ್ಪಿಕೊಳ್ಳುತ್ತಿಲ್ಲ’ ಎಂದು ಮಾವಳ್ಳಿಪುರ ಶ್ರೀನಿವಾಸ್ ಹೇಳಿದರು.

ಹೋಳಿ ಹಲಗೆ ಮೇಳ ನಾಳೆ

ಬೆಂಗಳೂರು: ಉತ್ತರ ಕರ್ನಾಟಕದ ಸಂಸ್ಕೃತಿ ಪರಂಪರೆಯ ವೈಭವವನ್ನು ಸಾರುವ ಬಾಗಲಕೋಟೆ ಹೋಳಿ ಹಲಗೆ ಮೇಳ–2026 ಕಾರ್ಯಕ್ರಮವನ್ನು ಮಾರ್ಚ್ 1ರಂದು ಸಂಜೆ 5.30ಕ್ಕೆ ರಾಜಾಜಿನಗರ 2ನೇ ಬ್ಲಾಕ್‌ನಲ್ಲಿರುವ ಕೆ.ಎಲ್.ಇ. ಕಾಲೇಜ್ ಮೈದಾನದಲ್ಲಿ ಆಯೋಜನೆ ಮಾಡಲಾಗಿದೆ.

ಬೆಂಗಳೂರು ಚಾಲುಕ್ಯ ಸಾಂಸ್ಕೃತಿಕ ಸಂಘ ಆಯೋಜಿಸಿರುವ ಈ ಹಲಗೆ ಮೇಳದಲ್ಲಿ ಹಲಗೆ, ಶೆಹನಾಯಿ ಸೇರಿದಂತೆ ವಿವಿಧ ವಾದ್ಯಗಳ ಸಮ್ಮೇಳನ ಇರಲಿದೆ. ಬಾಗಲಕೋಟೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಿಂದ ನೂರಾರು ಕಲಾವಿದರು ಭಾಗವಹಿಸಲಿದ್ದಾರೆ.

ಎಲ್ಲ ಸಮುದಾಯಗಳ ಜನರನ್ನು ಒಂದೇ ವೇದಿಕೆಯಲ್ಲಿ ಸೇರಿಸಿ, ಬಣ್ಣಗಳ ಹಬ್ಬವನ್ನು ಸಂಸ್ಕೃತಿ, ಸಂಗೀತ ಮತ್ತು ಏಕತೆಯೊಂದಿಗೆ ಆಚರಿಸುವ ಉದ್ದೇಶ ಹೊಂದಿದೆ ಎಂದು ಸಂಘಟಕರು ತಿಳಿಸಿದ್ದಾರೆ.

ರಾಮ್‌ರಾಜ್ ಕಾಟನ್‌ನಿಂದ ಯುಗಾದಿ ಸಂಭ್ರಮ

ವಿಶೇಷ ಸಂಗ್ರಹ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಮ್‌ರಾಜ್ ಕಾಟನ್ ಸಂಸ್ಥೆಯು ಯುಗಾದಿ ಹಬ್ಬದ ಪ್ರಯುಕ್ತ ಕುರ್ತಾ ಸೆಟ್ ಮತ್ತು ಧೋತಿ ಸೆಟ್‌ಗಳ ವಿಶೇಷ ಸಂಗ್ರಹವನ್ನು ಬಿಡುಗಡೆ ಮಾಡಿದೆ.

ಸಂಕಲ್ಪಂ ಪ್ರೈಮ್, ಹಳದಿ ಕುರ್ತಾ, ಮಿಸ್ಟಿಕ್ ಕುರ್ತಾ ಮತ್ತು ಲಿಟಲ್ ಸ್ಟಾರ್ ಫ್ಯೂಷನ್ ಸೆಟ್‌ಗಳು ಪ್ರಮುಖವಾಗಿದ್ದು, ಇವುಗಳಲ್ಲಿ ಪ್ರತಿಯೊಂದನ್ನು ಯುಗಾದಿಯ ಸಂಭ್ರಮವನ್ನು ಸಾರುವಂತೆ ಹಾಗೂ ಏಕರೂಪದ ಶೈಲಿ ಯನ್ನು ನೀಡುವಂತೆ ವಿನ್ಯಾಸಗೊಳಿಸಲಾಗಿದೆ.

ಈ ಸಂಗ್ರಹವು ರಾಮ್‌ರಾಜ್ ಕಾಟನ್ ಮಳಿಗೆಗಳು ಮತ್ತು ಪ್ರಮುಖ ಜವಳಿ ಅಂಗಡಿಗಳಲ್ಲಿ ಲಭ್ಯವಿದೆ. www.ramrajcotton.inಗೆ ಭೇಟಿ ನೀಡಿ, ಆನ್‌ಲೈನ್ ಮೂಲಕವೂ ಖರೀದಿಸಬಹುದಾಗಿದೆ ಎಂದು ಸಂಸ್ಥೆ ತಿಳಿಸಿದೆ.


ರಾಮ್‌ರಾಜ್ ಕಾಟನ್ ಯುಗಾದಿ ಹಬ್ಬದ ಪ್ರಯುಕ್ತ ವಿಶೇಷ ಕುರ್ತಾ ಸೆಟ್ ಮತ್ತು ಧೋತಿ ಸೆಟ್‌ಗಳ ದಿರಿಸುಗಳ ಸಂಗ್ರಹವನ್ನು ಬಿಡುಗಡೆ ಮಾಡಿದೆ

‘ಯುಗಾದಿಯು ಹೊಸ ಆರಂಭ, ಸಕಾರಾತ್ಮಕ ಮನೋಭಾವ ಮತ್ತು ಸಮೃದ್ಧಿಯನ್ನು ಸಾರುವ ಸಂಭ್ರಮದ ಹಬ್ಬವಾಗಿದೆ. ರಾಮ್‌ರಾಜ್ ಕಾಟನ್ ಈ ಹಬ್ಬದ ಸಂಭ್ರಮವನ್ನು ಹೆಚ್ಚಿಸುವ ಉದ್ದೇಶದಿಂದ ಹೊಸ ಸಂಗ್ರಹವನ್ನು ಬಿಡುಗಡೆ ಮಾಡಿದೆ’ ಎಂದು ರಾಮ್‌ರಾಜ್ ಕಾಟನ್‌ನ ಸಂಸ್ಥಾಪಕ ಮತ್ತು ಅಧ್ಯಕ್ಷ ಕೆ.ಆರ್. ನಾಗರಾಜನ್ ತಿಳಿಸಿದ್ದಾರೆ.


ಜೇನು ಕುರುಬರಿಗೆ ಜೇನು ಸಾಕಣೆ ಕುರಿತು ತರಬೇತಿ ನೀಡಲಾಯಿತು

ಗೀತಂ ವಿ.ವಿ: ಜೇನು ಸಾಕಣೆ ತರಬೇತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಲ್ಲಿನ ಗೀತಂ ಡೀಮ್ಡ್ ಟು ಬಿ ವಿಶ್ವವಿದ್ಯಾಲಯ ಮತ್ತು ಕೇಂದ್ರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಸಹಭಾಗಿತ್ವದಲ್ಲಿ ನಾಗರಹೊಳೆಯಲ್ಲಿ ಜೇನು ಕುರುಬರಿಗೆ ಜೇನು ಸಾಕಣೆ ತರಬೇತಿ ಕಾರ್ಯಕ್ರಮ ಹಮ್ಮಿಕೊಂಡಿತ್ತು. ಇದೇ ಸಂದರ್ಭದಲ್ಲಿ ಫಲಾನುಭವಿಗಳಿಗೆ ಜೇನು ಪೆಟ್ಟಿಗೆ ವಿತರಿಸಲಾಯಿತು.

ಸಮಾನತೆ, ಸಬಲೀಕರಣ ಮತ್ತು ಅಭಿವೃದ್ಧಿಗಾಗಿ ವಿಜ್ಞಾನ (ಸೀಡ್) ಯೋಜನೆಯಡಿ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಗೀತಂ ವಿಶ್ವವಿದ್ಯಾಲಯದ ಕಂಪ್ಯೂಟರ್ ಸೈನ್ಸ್ ವಿಭಾಗದ ಪ್ರಾಧ್ಯಾಪಕಿ ಐ.ಜೀನಾ ಜೇಕಬ್ ನೇತೃತ್ವದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು. ಸಹ ಸಂಶೋಧಕರಾದ ಕೆ.ಗೀತಾ, ಟಿ.ಪ್ರಸನ್ನ ವೆಂಕಟೇಶನ್, ಎ. ವಿಶ್ವಭಾರತಿ, ಸುಜಿತ್ ಬಸಕ್, ಡಿ.ನಿರ್ಮಲಾ ದೇವಿ, ಯೋಜನೆ ಮಾರ್ಗದರ್ಶಕರಾದ ವಂಶೀಧರ್ ಯಂಡಪಲ್ಲಿ, ಸಂಶೋಧನಾ ಸಮಿತಿ ಅಧ್ಯಕ್ಷ ಕೆ.ಜಿ. ಮೋಹನ್, ರಾಮಕೃಷ್ಣ ಉಪಸ್ಥಿತರಿದ್ದರು.

ಬೆಂಗಳೂರು ಕೃಷಿ ವಿಜ್ಞಾನ ವಿಶ್ವವಿದ್ಯಾಲಯದ ಜೇನುಕೃಷಿ ತಜ್ಞ ಕೆ.ಟಿ. ವಿಜಯಕುಮಾರ್ ಮತ್ತು ತಂಡದ ಸದಸ್ಯರು ಜೇನುಗೂಡು ನಿರ್ವಹಣೆ, ರೋಗ ನಿಯಂತ್ರಣ, ಜೇನು ಸಂಗ್ರಹಣೆ, ಸಂಸ್ಕರಣೆ ಹಾಗೂ ಮಾರುಕಟ್ಟೆ ಕುರಿತು ತರಬೇತಿ ನಡೆಸಿಕೊಟ್ಟರು.

ಆದಾಯ ಹೆಚ್ಚಳ, ತರಬೇತಿ ಮೂಲಕ ಫಲಾನುಭವಿಗಳಿಗೆ ಆಧುನಿಕ ಹಾಗೂ ಪ್ರಾಯೋಗಿಕ ತರಬೇತಿ ನೀಡುವುದು ಈ ಕಾರ್ಯಕ್ರಮದ ಉದ್ದೇಶವಾಗಿತ್ತು ಎಂದು ತಿಳಿಸಿದ್ದಾರೆ.

ಸಂಕಷ್ಟದಲ್ಲಿ ಪೀಣ್ಯದ ಕೈಗಾರಿಕೆಗಳು

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿ ಇಕೊ ಗ್ರೀನ್ ಸಲ್ಯೂಷನ್ಸ್ ಸಿಸ್ಟಮ್, ತ್ಯಾಜ್ಯ ನೀರು ಸಂಸ್ಕರಣೆ ಘಟಕವನ್ನು ಸ್ಥಗಿತಗೊಳಿಸುವುದರಿಂದ ಕೈಗಾರಿಕೆಗಳು ಸಂಕಷ್ಟಕ್ಕೆ ಸಿಲುಕಲಿವೆ ಎಂದು ಪೀಣ್ಯ ಕೈಗಾರಿಕಾ ಸಂಘದ ಅಧ್ಯಕ್ಷ ಡಿ.ಪಿ. ದಾನಪ್ಪ ಆತಂಕ ವ್ಯಕ್ತಪಡಿಸಿದ್ದಾರೆ.


ಡಿ.ಪಿ. ದಾನಪ್ಪ

ರಾಜ್ಯ ಸರ್ಕಾರ ಮತ್ತು ಸಂಬಂಧಿಸಿದ ಅಧಿಕಾರಿಗಳಿಗೆ ಈ ಬಗ್ಗೆ ಪತ್ರ ಬರೆದಿರುವ ಅವರು, ‘ಇಕೊ ಗ್ರೀನ್ ಸಲ್ಯೂಷನ್ ಸಿಸ್ಟಮ್ಸ್ ಪ್ರೈವೇಟ್ ಲಿಮಿಟೆಡ್‌ನ ‘ಸಾಮಾನ್ಯ ತ್ಯಾಜ್ಯ ಸಂಸ್ಕರಣೆ ಘಟಕ’ವನ್ನು (ಸಿಇಟಿಪಿ) ಮಾರ್ಚ್ 15ರಿಂದ ಸ್ಥಗಿತಗೊಳಿಸುವುದಾಗಿ ಹೇಳಿದೆ. ಇದರಿಂದ ಪೀಣ್ಯ ಕೈಗಾರಿಕಾ ಪ್ರದೇಶದ ಕೈಗಾರಿಕೆಗಳು ಎದುರಿಸುತ್ತಿರುವ ಸಂಕಷ್ಟ ಗಂಭೀರವಾಗಲಿದೆ’ ಎಂದು ಹೇಳಿದ್ದಾರೆ.

‘ಕಾರ್ಯಾಚರಣಾ ಹಾಗೂ ಆಡಳಿತಾತ್ಮಕ ಅಡಚಣೆಗಳ ಕಾರಣದಿಂದ ವಾಣಿಜ್ಯ ತ್ಯಾಜ್ಯ ನೀರನ್ನು ಸ್ವೀಕರಿಸುವುದಿಲ್ಲ, ಶುದ್ಧೀಕರಿಸುವುದಿಲ್ಲ’ ಎಂದು ಇಕೊ ಗ್ರೀನ್ ತನ್ನ ಸದಸ್ಯ ಕೈಗಾರಿಕೆಗಳಿಗೆ ತಿಳಿಸಿದೆ. ಈ ಘಟಕದ ಮುಚ್ಚುವುದರಿಂದ ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿರುವ ಕೈಗಾರಿಕೆಗಳಿಗೆ ತ್ಯಾಜ್ಯ ನೀರಿನ ವಿಲೇವಾರಿಯ ಸಂಕಷ್ಟ ಎದುರಾಗಲಿದೆ’ ಎಂದಿದ್ದಾರೆ.

‘ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿ ಪರ್ಯಾಯ ಸಿಇಟಿಪಿ ಇಲ್ಲ. ತ್ಯಾಜ್ಯ ನೀರನ್ನು ಬಿಡುಗಡೆ ಮಾಡಲು ಕೈಗಾರಿಕೆಗಳಿಗೆ ಯಾವುದೇ ಅಧಿಕೃತ ವ್ಯವಸ್ಥೆಯಿಲ್ಲ. ಕಾನೂನು ಹಾಗೂ ಪರಿಸರ ನಿಯಮಾವಳಿಗಳ ಕಾರಣದಿಂದ ತ್ಯಾಜ್ಯ ನೀರನ್ನು ಒಳಚರಂಡಿ ಅಥವಾ ರಾಜಕಾಲುವೆಗಳಿಗೆ ಬಿಡಲು ಸಾಧ್ಯವಿಲ್ಲ. ಹೀಗಾಗಿ ಸಮಸ್ಯೆಯಾಗಲಿದೆ. ಈ ಪರಿಸ್ಥಿತಿ ಅತ್ಯಂತ ಗಂಭೀರವಾಗಿದ್ದು, ತಕ್ಷಣ ಕ್ರಮ ಕೈಗೊಳ್ಳದಿದ್ದಲ್ಲಿ ‘ಸರ್ಫೇಸ್ ಟ್ರೀಟ್‌ಮೆಂಟ್’ ಕೈಗಾರಿಕೆಗಳು ಮುಚ್ಚುವ ಭೀತಿ ಎದುರಾಗಿದೆ. ಇದರಿಂದ ಆರ್ಥಿಕ ನಷ್ಟ ಹಾಗೂ ಸಾವಿರಾರು ಕಾರ್ಮಿಕರು ಉದ್ಯೋಗ ಕಳೆದುಕೊಳ್ಳುವ ಪರಿಸ್ಥಿತಿ ಉಂಟಾಗುವ ಸಾಧ್ಯತೆ ಇದೆ’ ಎಂದು ತಿಳಿಸಿದ್ದಾರೆ.

ಹೆಚ್ಚು ಮೊತ್ತ ಪಾವತಿ: ಆರೋಗ್ಯಾಧಿಕಾರಿ ಅಮಾನತು ವಾಪಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂದಿರಾ ಕ್ಯಾಂಟೀನ್‌ಗೆ ಊಟ ಸರಬರಾಜು ಮಾಡುವ ಸಂಸ್ಥೆಗೆ ₹7 ಕೋಟಿಗೂ ಹೆಚ್ಚು ಬಿಲ್ ಪಾವತಿ ಮಾಡಿ, ಅಮಾನತುಗೊಂಡಿದ್ದ ಉಪ ಆರೋಗ್ಯಾಧಿಕಾರಿ ಡಾ.ಪಿ.ಕಲ್ಪನಾ ಅವರನ್ನು ಜಿಬಿಎ ಆಡಳಿತದ ಉಪ ಆಯುಕ್ತರು ಕರ್ತವ್ಯಕ್ಕೆ ಮರು ನಿಯೋಜಿಸಿದ್ದಾರೆ.

ಬಿಬಿಎಂಪಿ ಇದ್ದಾಗ ದಕ್ಷಿಣ ವಲಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಡಾ. ಕಲ್ಪನಾ ಅವರಿಗೆ ಆರೋಗ್ಯಾಧಿಕಾರಿ ಹುದ್ದೆಯನ್ನು ಹೆಚ್ಚುವರಿಯಾಗಿ ನೀಡಲಾಗಿತ್ತು. ಆ ಸಂದರ್ಭದಲ್ಲಿ, ಚೆಫ್‌ಟಾಕ್ ಫುಡ್ ಆ್ಯಂಡ್ ಹಾಸ್ಪಿಟಾಲಿಟಿ ಸರ್ವಿಸ್ ಸಂಸ್ಥೆ ಬಾಕಿ ಬಿಲ್ ಮೊತ್ತ ಪಾವತಿಸಲು ಕೋರಿತ್ತು.

ಇಂದಿರಾ ಕ್ಯಾಂಟೀನ್‌ಗೆ ಊಟದ ವ್ಯವಸ್ಥೆ ನೀಡಿರುವುದಕ್ಕೆ ಮತ್ತು ಬಳಕೆಯಾಗಿರುವುದಕ್ಕೆ ತಯಾರಿಸಿರುವ ವರದಿ ಪ್ರಕಾರ ಚೆಫ್‌ಟಾಕ್ ಸಂಸ್ಥೆ ₹2,27,34,474 ಮೊತ್ತ ಪಡೆಯಲು ಅರ್ಹವಾಗಿದೆ. ಆದರೆ, ಆರೋಗ್ಯಾಧಿಕಾರಿ ಡಾ. ಕಲ್ಪನಾ ಅವರು ಪರಿಶೀಲನೆ ನಡೆಸದೆ, ₹9,72,21,787 ಪಾವತಿಸಿದ್ದಾರೆ. ಇದರಿಂದ, ಚೆಫ್‌ಟಾಕ್ ಸಂಸ್ಥೆಗೆ ₹7,00,12,396 ಅಧಿಕ ಹಣ ಪಾವತಿಯಾಗಿತ್ತು.

ದಕ್ಷಿಣ ವಲಯ ಆಯುಕ್ತರು ಹಾಗೂ ಆರೋಗ್ಯ ಮತ್ತು ನೈರ್ಮಲ್ಯ ವಿಭಾಗದ ವಿಶೇಷ ಆಯುಕ್ತರು 2025ರ ಮೇ 15ರಂದು ನಿರ್ಲಕ್ಷ್ಯದ ಬಗ್ಗೆ ವರದಿ ನೀಡಿದ್ದರು. ಇದಾದ ಮರು ದಿನವೇ ಕರ್ತವ್ಯಲೋಪದ ಆರೋಪದ ಮೇಲೆ ಆರೋಗ್ಯಾಧಿಕಾರಿ ಡಾ. ಕಲ್ಪನಾ ಅವರನ್ನು ಅಮಾನತು ಮಾಡಲಾಗಿತ್ತು.

ಈ ಅಮಾನತು ಆದೇಶವನ್ನು ತೆರವುಗೊಳಿಸಿ, ಇಲಾಖಾ ವಿಚಾರಣೆಯನ್ನು ನಿರೀಕ್ಷಿಸಿ, ಡಾ. ಕಲ್ಪನಾ ಅವರನ್ನು ಬೆಂಗಳೂರು ಪೂರ್ವ ನಗರ ಪಾಲಿಕೆಯ ಮಹದೇವಪುರ ವಲಯದಲ್ಲಿ ಉಪ ಆರೋಗ್ಯಾಧಿಕಾರಿ ಹುದ್ದೆಗೆ ನಿಯೋಜಿಸಿ ಜಿಬಿಎ ಆಡಳಿತ ವಿಭಾಗದ ಉಪ ಆಯುಕ್ತರು ಇದೇ ಫೆ.13ರಂದು ಆದೇಶಿಸಿದ್ದಾರೆ.

ಪ್ರತಿಕ್ರಿಯಿಸಲಿಲ್ಲ: ಚೆಫ್‌ಟಾಕ್ ಫುಡ್ ಆ್ಯಂಡ್ ಹಾಸ್ಪಿಟಾಲಿಟಿ ಸರ್ವಿಸ್ ಸಂಸ್ಥೆ ಪಡೆದಿರುವ ₹7 ಕೋಟಿಗೂ ಹೆಚ್ಚು ಹಣವನ್ನು ವಾಪಸ್ ಪಡೆಯಲಾಗಿದೆಯೇ? ಅವರ ವಿರುದ್ಧ ಕ್ರಮ ಕೈಗೊಳ್ಳಲಾಗಿದೆಯೇ ಎಂಬ ಪ್ರಶ್ನೆಗೆ ಉತ್ತರ ಪಡೆಯಲು ಜಿಬಿಎ ಆರೋಗ್ಯ ವಿಭಾಗದ ವಿಶೇಷ ಆಯುಕ್ತ ಹಾಗೂ ಆಡಳಿತದ ಉಪ ಆಯುಕ್ತರನ್ನು ಸಂಪರ್ಕಿಸಲು ಪ್ರಯತ್ನಿಸಿದಾಗ ಅವರು ಪ್ರತಿಕ್ರಿಯಿಸಲಿಲ್ಲ.

ಮುಂಡರಗಿ: ದಲಿತರಿಗೆ ಕ್ಷೌರ ನಿರಾಕರಿಸಿದ್ದಕ್ಕೆ ಸಮಾಜ ಕಲ್ಯಾಣ ಇಲಾಖೆ ಕ್ರಮ

ಸರ್ಕಾರದಿಂದಲೇ ಕ್ಷೌರದ ಅಂಗಡಿ

• ಕಾಶೀನಾಥ ಬಿಳಿಮಗ್ಗದ

ಮುಂಡರಗಿ (ಗದಗ ಜಿಲ್ಲೆ): ಮುಂಡರಗಿ ತಾಲ್ಲೂಕಿನ ಶಿಂಗಟಾಲೂರ ಗ್ರಾಮದಲ್ಲಿ ದಲಿತರಿಗೆ ಕ್ಷೌರ ಮಾಡಲು ಕ್ಷೌರಿಕರು ನಿರಾಕರಿಸಿದ ಬೆನ್ನಲ್ಲೇ, ಗ್ರಾಮ ಪಂಚಾಯಿತಿ, ಕಂದಾಯ ಇಲಾಖೆ, ತಾಲ್ಲೂಕು ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳು ಸರ್ಕಾರದ ವತಿಯಿಂದಲೇ ಗ್ರಾಮದಲ್ಲಿ ಕ್ಷೌರದ ಅಂಗಡಿ ತೆರೆದಿದ್ದಾರೆ.

ಗ್ರಾಮದ ಹಡಪದ ಕುಟುಂಬಗಳು ಊರಿನಲ್ಲಿರುವ ವೀರಭದ್ರೇಶ್ವರನ ಭಕ್ತರು. ಹಿಂದಿನಿಂದಲೂ ದಲಿತರಿಗೆ ಕ್ಷೌರ ಮಾಡುತ್ತಿರಲಿಲ್ಲ. ಅದಕ್ಕೆ ಹಿರಿಯ ತಲೆಮಾರಿನ ದಲಿತರು ಒಪ್ಪಿದ್ದರು.

ಹಡಪದ ಸಮಾಜದವರು ಈಚೆಗೆ ಗ್ರಾಮದಲ್ಲಿ ತೆರೆದಿದ್ದ ಕ್ಷೌರದ ಅಂಗಡಿಯಲ್ಲಿ ದಲಿತರಿಗೆ ಕ್ಷೌರ ಮಾಡಲು ನಿರಾಕರಿಸಿದ್ದರು.

‘ಗ್ರಾಮ ಪಂಚಾಯಿತಿ ಪರವಾನಗಿ ಪಡೆದು ಅಂಗಡಿ ತೆರೆದಿದ್ದೀರಿ. ಎಲ್ಲರಿಗೂ ಕ್ಷೌರ ಮಾಡಿ’ ಎಂದು ದಲಿತರು ಆಗ್ರಹಿಸಿದರು. ಅದಕ್ಕೆ ಹಡಪದ ಕುಟುಂಬದವರು ಅಂಗಡಿ ಬಂದ್ ಮಾಡಿದ್ದರು. ತಮಗೆ ಬೇಕಾದವರ ಮನೆಗಳಿಗೆ ತೆರಳಿ ಕ್ಷೌರ ಮಾಡುವುದನ್ನು ರೂಢಿಸಿಕೊಂಡಿದ್ದರು. ಅಧಿಕಾರಿಗಳು ಗ್ರಾಮಕ್ಕೆ ತೆರಳಿ ಮನವೊಲಿಸಿದರೂ, ಕ್ಷೌರ ಮಾಡಲು ಒಪ್ಪಲಿಲ್ಲ.


ಹಡಪದ ಅಪ್ಪಣ್ಣ ಸಮಾಜದ ರಾಜ್ಯ ಘಟಕದ ಅಧ್ಯಕ್ಷ ದೇವು ಹಡಪದ ಅವರು ನೂತನ ಕ್ಷೌರದ ಅಂಗಡಿಯಲ್ಲಿ ಕ್ಷೌರ ಮಾಡಿದರು

ತಾಲ್ಲೂಕು ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಉದಯಕುಮಾರ ಎಲಿವಾಳ ಅವರು ಗ್ರಾಮ ಪಂಚಾಯಿತಿ, ಶರಣ ಹಡಪದ ಅಪ್ಪಣ್ಣ ಸಮಾಜದ ಅಧ್ಯಕ್ಷ ದೇವು ಹಡಪದ ಅವರನ್ನು ಸಂಪರ್ಕಿಸಿ ಕ್ಷೌರದ ಅಂಗಡಿ ತೆರೆಯಲು ನಿರ್ಧರಿಸಿದರು. ಅದರಂತೆ, ಫೆ.26ರಂದು ತಹಶೀಲ್ದಾರ್ ಎರ್ರಿಸ್ವಾಮಿ ಪಿ.ಎಸ್. ಸೇರಿದಂತೆ ಜಿಲ್ಲೆ ಹಾಗೂ ತಾಲ್ಲೂಕಿನ ವಿವಿಧ ಇಲಾಖೆಗಳ ಅಧಿಕಾರಿಗಳ ಸಮ್ಮುಖದಲ್ಲಿ ಗ್ರಾಮದಲ್ಲಿ ಸರ್ಕಾರಿ ಕ್ಷೌರದ ಅಂಗಡಿಯನ್ನು ಆರಂಭಿಸಲಾಯಿತು.

ಹಡಪದ ಅಪ್ಪಣ್ಣ ಸೇರಿ ಬಸವಾದಿ ಶರಣರ ಆಶಯದಂತೆ ಶಿಂಗಟಾಲೂರ ಗ್ರಾಮದಲ್ಲಿ ಜಾತಿ ಭೇದಗಳಿಲ್ಲದೆ ಎಲ್ಲರಿಗೂ ಮುಕ್ತವಾಗಿ ಕ್ಷೌರ ಮಾಡಲಾಗುವುದು

ದೇವು ಹಡಪದ, ಅಧ್ಯಕ್ಷ, ಹಡಪದ ಅಪ್ಪಣ್ಣ ಸಮಾಜ ರಾಜ್ಯ ಘಟಕ

ದೇವು ಹಡಪದ ಅವರ ಸಹೋದರ ಬಸವರಾಜ ಹಡಪದ ಮುಂಡರಗಿಯಲ್ಲಿ ವಾಸವಿದ್ದಾರೆ. ಅವರು ನಿತ್ಯವೂ ಗ್ರಾಮಕ್ಕೆ ತೆರಳಿ ಕ್ಷೌರ ಮಾಡುವರು. ಕ್ಷೌರ, ಶೇವಿಂಗ್‌ಗೆ ₹100 ಮತ್ತು ಕ್ಷೌರಕ್ಕೆ ₹75 ದರ ಇದೆ.

prajavani.net prajavani
www.prajavani.net

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ

ನಬಿಗೆ ಪಂಚಗುಚ್ಛ
ಜಮ್ಮು-ಕಾಶ್ಮೀರದ ವೇಗಿ ಅಕೀಬ್ ನಬಿ ದಾರ್ ಅವರು ಹುಬ್ಬಳ್ಳಿಯಲ್ಲಿ ನಡೆಯುತ್ತಿರುವ ರಣಜಿ ಟ್ರೋಫಿ ಫೈನಲ್‌ನಲ್ಲಿ ಕರ್ನಾಟಕ ವಿರುದ್ಧ ಮೊದಲ ಇನಿಂಗ್ಸ್‌ನಲ್ಲಿ ಐದು ವಿಕೆಟ್ ಕಬಳಿಸಿದರು



ಸೆನ್ಸೆಕ್ಸ್ 81,287 | ನಿಫ್ಟಿ 25,178 | $/₹ 91.08 | ಚಿನ್ನ (Std. 10g) ₹1,66,400 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,84,400 (ಬೆಂಗಳೂರು)

ಶೇ 6ರಷ್ಟು ಹುದ್ದೆ ಕಾಯ್ದಿರಿಸಿ ನೇಮಕಾತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವಿಧ ಇಲಾಖೆಗಳಲ್ಲಿನ 56,432 ಹುದ್ದೆಗಳನ್ನು ಕಾಲಮಿತಿಯಲ್ಲಿ ಭರ್ತಿ ಮಾಡಲು ನಿರ್ಧರಿಸಿರುವ ಸರ್ಕಾರ, ಪರಿಶಿಷ್ಟ ಸಮುದಾಯಕ್ಕೆ ಶೇ 6ರಷ್ಟು ಹೆಚ್ಚಿಸಿರುವ ಮೀಸಲಾತಿಯ ಪ್ರಮಾಣದ ಹುದ್ದೆಗಳನ್ನು ಕಾಯ್ದಿರಿಸಿ ಪ್ರಕ್ರಿಯೆ ಆರಂಭಿಸಲಿದೆ.

ಖಾಲಿ ಹುದ್ದೆಗಳ ನೇಮಕಾತಿಯನ್ನು 30 ದಿನದೊಳಗೆ ಪೂರೈಸುವ ಬಗ್ಗೆ ಗುರುವಾರ ನಡೆದ ಸಚಿವ ಸಂಪುಟ ಸಭೆ ತೀರ್ಮಾನ ಕೈಗೊಂಡಿತ್ತು. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಮೀಸಲಾತಿಯನ್ನು 2022ರಲ್ಲಿ ಇದ್ದಂತೆ ಶೇ 18ಕ್ಕೆ ಸೀಮಿತಗೊಳಿಸಿ ನೇಮಕಾತಿ ಪ್ರಕ್ರಿಯೆ ಆರಂಭಿಸಲು ನಿರ್ಧರಿಸಿತ್ತು.

ಬಿಜೆಪಿ ಆಡಳಿತ ಅವಧಿಯಲ್ಲಿ ಪರಿಶಿಷ್ಟ ಜಾತಿಯ ಮೀಸಲಾತಿ ಪ್ರಮಾಣವನ್ನು ಶೇ 15ರಿಂದ ಶೇ 17ಕ್ಕೆ ಹಾಗೂ ಪರಿಶಿಷ್ಟ ಪಂಗಡದ ಮೀಸಲಾತಿಯನ್ನು ಶೇ 3ರಿಂದ ಶೇ 7ಕ್ಕೆ ಹೆಚ್ಚಿಸಿ ಆದೇಶ ಹೊರಡಿಸಲಾಗಿತ್ತು. ಇದರಿಂದಾಗಿ, ರಾಜ್ಯದ ಒಟ್ಟು ಮೀಸಲಾತಿ ಪ್ರಮಾಣ ಶೇ 56ಕ್ಕೆ ಏರಿಕೆಯಾಗಿತ್ತು.

9



1,24,10,629 ಗೃಹ ಲಕ್ಷ್ಮಿ ಯಜಮಾನಿಯರು | **₹52,000** ಪ್ರತಿ ಫಲಾನುಭವಿಗೆ ಸಿಕ್ಕ ಮೊತ್ತ (26 ಕಂತುಗಳಲ್ಲಿ) | **₹62,345.34** ಕೋಟಿ ಸರ್ಕಾರ ಮಾಡಿರುವ ವೆಚ್ಚ

ಸ್ವಾವಲಂಬನೆಗೆ ‘ಲಕ್ಷ್ಮಿ’ ಆಸರೆ

ಅಸ್ತಿತ್ವಕ್ಕೆ ಬರಲಿದೆ ವಿವಿಧೋದ್ದೇಶ ಸಹಕಾರ ಸಂಘ ನಿಯಮಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಗೃಹಲಕ್ಷ್ಮಿ’ ಯೋಜನೆಯ ಫಲಾನುಭವಿಗಳ ಸಹಕಾರ ಸಂಘವನ್ನು ಸ್ಥಾಪಿಸಲು ಮುಂದಾಗಿರುವ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಫಲಾನುಭವಿಗಳಿಂದ ₹1,250 ಸದಸ್ಯತ್ವ ಶುಲ್ಕ ಮತ್ತು ತಿಂಗಳಿಗೆ ₹200ರಂತೆ ಠೇವಣಿ ಸಂಗ್ರಹಿಸಲು ತೀರ್ಮಾನಿಸಿದೆ.

‘ಗೃಹಲಕ್ಷ್ಮಿ ವಿವಿಧೋದ್ದೇಶ ಸಹಕಾರ ಸಂಘ ನಿಯಮಿತ’ ಸ್ಥಾಪನೆ ಮಾಡಲು ಸರ್ಕಾರ ನಿರ್ಧರಿಸಿದೆ. ಇದಕ್ಕೆ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ. ‘ಗೃಹಲಕ್ಷ್ಮಿ’ ಗ್ಯಾರಂಟಿ ಯೋಜನೆಯಡಿ ಈವರೆಗೆ 1.24 ಕೋಟಿ ಫಲಾನುಭವಿಗಳಿಗೆ ತಿಂಗಳಿಗೆ ತಲಾ ₹2,000ರಂತೆ, ಈವರೆಗೆ 26 ಕಂತುಗಳನ್ನು ಪಾವತಿಸಿದೆ.

ಪ್ರತಿ ತಿಂಗಳು ನೀಡುವ ₹2,000ದಲ್ಲಿ ಸಹಕಾರ ಸಂಘ ಬಲಗೊಳಿಸಲು ಠೇವಣಿ ರೂಪದಲ್ಲಿ ₹200 ಅನ್ನು ಕಡಿತಗೊಳಿಸಲಾಗುತ್ತದೆ. ಸಹಕಾರ ಸಂಘ ಸ್ಥಾಪನೆ ಪ್ರಕ್ರಿಯೆ ಆರಂಭವಾದ ಬಳಿಕ ಆರು ತಿಂಗಳವರೆಗೆ ಮಹಿಳೆಯರ ಖಾತೆಗೆ ₹1,800 ಮಾತ್ರ ಜಮೆಯಾಗಲಿದೆ. ಉಳಿದ ಮೊತ್ತವು ಸದಸ್ಯರ ಖಾತೆಯಲ್ಲಿಯೇ ಇರಲಿದೆ.

ಫಲಾನುಭವಿಗಳನ್ನು ಸಂಘಟಿಸಿ ಕೌಶಲಾಭಿವೃದ್ಧಿ, ಉದ್ಯಮಶೀಲತೆ ಮತ್ತು ತರಬೇತಿ ನೀಡುವುದಕ್ಕಾಗಿ ಈ ಸಹಕಾರ ಸಂಘ ಹುಟ್ಟು ಹಾಕಲಾಗುತ್ತಿದೆ.

ಗೃಹಲಕ್ಷ್ಮಿ ಯೋಜನೆಯ ಎಲ್ಲ ಫಲಾನುಭವಿಗಳನ್ನು ಸದಸ್ಯರನ್ನಾಗಿಸುವ ಗುರಿ ಹೊಂದಲಾಗಿದೆ. ಸಂಘದ ಮೂಲಕ ಈ ಮಹಿಳೆಯರಿಗೆ ವಿವಿಧ ಉದ್ದೇಶಗಳಿಗೆ ಸಾಲ–ಸೌಲಭ್ಯ ಒದಗಿಸುವ ಮೂಲಕ ಮಹಿಳೆಯರನ್ನು ಉದ್ಯಮಿಗಳಾಗಿಸುವ ಮತ್ತು ಅವರನ್ನು ಸ್ವಾವಲಂಬಿಗಳನ್ನಾಗಿಸುವ ಉದ್ದೇಶ ಹೊಂದಲಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹೇಳಿದೆ.

ಮುಖ್ಯಾಂಶಗಳು

- ಸದಸ್ಯತ್ವ ಶುಲ್ಕ ₹1,250 ಮತ್ತು ತಿಂಗಳಿಗೆ ₹200 ಠೇವಣಿ ಸಂಗ್ರಹ
- ಸಂಪುಟ ಸಭೆ ನಿರ್ಧಾರ

₹30 ಸಾವಿರದಿಂದ ₹3 ಲಕ್ಷದವರೆಗೆ ಸಾಲ

ಸದಸ್ಯರಿಗೆ ಕಡಿಮೆ ಬಡ್ಡಿ ದರದಲ್ಲಿ ₹30 ಸಾವಿರದಿಂದ ₹3 ಲಕ್ಷದವರೆಗೆ ವೈಯಕ್ತಿಕ ಸಾಲ ಒದಗಿಸಲಾಗುವುದು. ರಾಷ್ಟ್ರೀಕೃತ ಬ್ಯಾಂಕ್‌ಗಳಿಗೆ ಸಮನಾಗಿ ವಾರ್ಷಿಕ ಶೇ 7ರಿಂದ ಶೇ 9 ಅಥವಾ ಅದಕ್ಕಿಂತ ಕಡಿಮೆ ಬಡ್ಡಿ ದರದಲ್ಲಿ ಸಾಲ ನೀಡಲು ಉದ್ದೇಶಿಸಲಾಗಿದೆ. ಸಾಲದ ಹಣವನ್ನು ಮಹಿಳೆಯರು ಸಣ್ಣಪುಟ್ಟ ವ್ಯಾಪಾರ, ಗುಡಿ ಕೈಗಾರಿಕೆ, ಕೃಷಿ, ಪಶುಸಂಗೋಪನೆ, ಮಕ್ಕಳ ಶಿಕ್ಷಣ, ವಾಹನ ಖರೀದಿಗೆ ಬಳಸಬಹುದು. ಇದರಿಂದ ಮಹಿಳೆಯರು ಆರ್ಥಿಕವಾಗಿ ಸ್ವಾವಲಂಬಿಗಳಾಗಲು ಸಹಾಯಕವಾಗುತ್ತದೆ ಎಂಬುದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹೇಳಿದೆ.

ಸದಸ್ಯತ್ವ ಪಡೆಯಲು ಒಂದು ಬಾರಿಗೆ ₹1,000 ಷೇರು ಹಣ ನೀಡಬೇಕು. ಇದು ₹1,250ರ ಸದಸ್ಯತ್ವದ ಶುಲ್ಕದಲ್ಲಿ ಸೇರಿದೆ. ಅಲ್ಲದೇ, ಪ್ರತಿ ತಿಂಗಳು ₹200 ರಂತೆ ಕನಿಷ್ಠ ಆರು ತಿಂಗಳವರೆಗೆ ಉಳಿತಾಯ ರೂಪದಲ್ಲಿ ಜಮೆ ಮಾಡಬೇಕು. ಈ ರೀತಿ ಉಳಿತಾಯ ಮಾಡಿದವರು ಸಾಲ ಪಡೆಯಲು ಅರ್ಹರಾಗುತ್ತಾರೆ. ಸಾಲ ಪಡೆಯುವುದಕ್ಕೆ ಜಾಮೀನು (ಶ್ಯೂರಿಟಿ) ಅಗತ್ಯವಿರುವುದಿಲ್ಲ. ಸಂಪೂರ್ಣ ನಗದುರಹಿತ ಡಿಜಿಟಲ್ ಪಾವತಿಯ ಮೂಲಕ ವಹಿವಾಟಿಗೆ ಆದ್ಯತೆ ನೀಡಲಾಗಿದೆ.

ಕೇರಳ ಸ್ಟೋರಿ–2: ಬಿಡುಗಡೆ ಗೆ ಅಸ್ತು

‘ದಿ ಕೇರಳ ಸ್ಟೋರಿ 2–ಗೋಸ್ ಬಿಯಾಂಡ್’ ಸಿನಿಮಾ ಬಿಡುಗಡೆಗೆ 15 ದಿನಗಳ ಕಾಲ ತಡೆ ನೀಡಿದ್ದ ಕೇರಳ ಹೈಕೋರ್ಟ್‌ನ ಏಕಸದಸ್ಯ ಪೀಠದ ಆದೇಶಕ್ಕೆ ವಿಭಾಗೀಯ ಪೀಠವು ತಡೆ ನೀಡುವ ಮೂಲಕ ಚಿತ್ರದ ಬಿಡುಗಡೆಯ ದಾರಿ ಸುಗಮಗೊಂಡಿದೆ. 11

ಚಿನಕುರುಳಿ ಪ್ರಕಾಶ್ ಶೆಟ್ಟಿ



ಕೇಜ್ರಿವಾಲ್, ಸಿಸೋಡಿಯಾ, ಕವಿತಾ ಖುಲಾಸೆ

ನವದೆಹಲಿ (ಪಿಟಿಐ): ದೆಹಲಿ ಅಬಕಾರಿ ನೀತಿ ಪ್ರಕರಣದಲ್ಲಿ ಎಎಪಿ ಮುಖ್ಯಸ್ಥ, ದೆಹಲಿ ಮಾಜಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್, ಮಾಜಿ ಉಪ ಮುಖ್ಯಮಂತ್ರಿ ಮನೀಶ್ ಸಿಸೋಡಿಯಾ ಮತ್ತು ಇತರ 21 ಜನರನ್ನು ಖುಲಾಸೆಗೊಳಿಸಿ ದೆಹಲಿ ನ್ಯಾಯಾಲಯ ಶುಕ್ರವಾರ ಆದೇಶ ಹೊರಡಿಸಿದೆ. ಈ ಆದೇಶವನ್ನು ಪ್ರಶ್ನಿಸಿ ಸಿಬಿಐ ದೆಹಲಿ ಹೈಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿದೆ.

ಈ ಆರೋಪಿಗಳು ಪಿತೂರಿ ನಡೆಸುವ ಅಥವಾ ಅಪರಾಧ ಎಸಗುವ ಉದ್ದೇಶ ಹೊಂದಿದ್ದರು ಎಂಬುದನ್ನು ಸಾಬೀತು ಪಡಿಸುವಲ್ಲಿ ಸಿಬಿಐ ವಿಫಲವಾಗಿದೆ ಎಂದು ಸಿಬಿಐ ವಿಶೇಷ ನ್ಯಾಯಾಲಯ ಹೇಳಿದೆ. ಈ ಪ್ರಕರಣದಲ್ಲಿ ನಿರ್ದೋಷಿಗಳೆನಿಸಿಕೊಂಡ ಇತರ 21 ಜನರಲ್ಲಿ ‘ತೆಲಂಗಾಣ ಜಾಗೃತಿ’ಯ ಅಧ್ಯಕ್ಷೆ ಕೆ. ಕವಿತಾ ಕೂಡ ಇದ್ದಾರೆ. 10

> **ನಕಲಿ ಅಬಕಾರಿ ನೀತಿ ಪ್ರಕರಣದ ಮೂಲಕ ನನ್ನ ಪ್ರಾಮಾಣಿಕತೆ ಮತ್ತು ಪ್ರತಿಷ್ಠೆಯ ಮೇಲೆ ದಾಳಿ ನಡೆಸಲಾಯಿತು**
> **ಅರವಿಂದ ಕೇಜ್ರಿವಾಲ್,** ಎಎಪಿ ಮುಖ್ಯಸ್ಥ

ಅಫ್ಗನ್ ವಿರುದ್ಧ ಪಾಕ್ ಯುದ್ಧ

ಇಸ್ಲಾಮಾಬಾದ್/ಕಾಬೂಲ್ (ಪಿಟಿಐ/ಎಎಫ್‌ಪಿ): ಪಾಕಿಸ್ತಾನ ಮತ್ತು ಅಫ್ಗಾನಿಸ್ತಾನ ಗಡಿಯಲ್ಲಿ ಕೆಲ ದಿನಗಳಿಂದ ಉದ್ಭವಿಸಿದ್ದ ಉದ್ವಿಗ್ನತೆ ತೀವ್ರಗೊಂಡಿದೆ. ಈ ಬೆಳವಣಿಗೆ ಬೆನ್ನಲ್ಲೇ, ‘ಅಫ್ಗಾನಿಸ್ತಾನ ವಿರುದ್ಧ ನಾವು ಯುದ್ಧ ಸಾರಿದ್ದೇವೆ’ ಎಂದು ಪಾಕಿಸ್ತಾನ ಶುಕ್ರವಾರ ಘೋಷಿಸಿದೆ.

‘ರಾಜಧಾನಿ ಕಾಬೂಲ್ ಹಾಗೂ ಕಂದಹಾರ್ ಮೇಲೆ ವೈಮಾನಿಕ ದಾಳಿ ನಡೆಸಲಾಗಿದೆ. ಈ ದಾಳಿಗಳಲ್ಲಿ ತಾಲಿಬಾನ್‌ನ 274 ಅಧಿಕಾರಿಗಳನ್ನು ಹತ್ಯೆ ಮಾಡಲಾಗಿದೆ. ಅಫ್ಗಾನಿಸ್ತಾನ ನಡೆಸಿದ ದಾಳಿಯಲ್ಲಿ ನಮ್ಮ 12 ಯೋಧರು ಮೃತಪಟ್ಟಿದ್ದಾರೆ’ ಎಂದು ಪಾಕಿಸ್ತಾನ ಸೇನೆ ವಕ್ತಾರ ಅಹ್ಮದ್ ಶರೀಫ್ ಚೌಧರಿ ಹೇಳಿದ್ದಾರೆ.

ಪಾಕಿಸ್ತಾನ ಹಾಗೂ ಅಫ್ಗಾನಿಸ್ತಾನ 2,611 ಕಿ.ಮೀ. ಉದ್ದದ ಗಡಿ ಹಂಚಿಕೊಂಡಿದ್ದು, ಇದನ್ನು ಡುರಾಂಡ್ ಲೇನ್ ಎಂದು ಕರೆಯಲಾಗುತ್ತದೆ. ಆದರೆ, ಈ ಗಡಿಯನ್ನು ಅಫ್ಗಾನಿಸ್ತಾನ ಮಾನ್ಯ ಮಾಡಿಲ್ಲ. ಕಳೆದ ಕೆಲ ದಿನಗಳಿಂದ ಗಡಿ ಉದ್ದಕ್ಕೂ ಪಾಕಿಸ್ತಾನ ನಿಯೋಜನೆ ಮಾಡಿದ್ದ ಯೋಧರನ್ನು ಗುರಿಯಾಗಿಸಿ ಅಫ್ಗಾನಿಸ್ತಾನ ದಾಳಿ ನಡೆಸಿತ್ತು. ಇದಕ್ಕೆ ಪ್ರತೀಕಾರವೆಂಬಂತೆ ಗುರುವಾರ ರಾತ್ರಿ ಪಾಕಿಸ್ತಾನ ಸೇನೆಯು ಅಫ್ಗಾನಿಸ್ತಾನ ವಿರುದ್ಧ ‘ಗಜಬ್ ಲಿಲ್ ಹಕ್’ ಕಾರ್ಯಾಚರಣೆ ಆರಂಭಿಸಿತ್ತು. ಈಗ, ಇದು ಉಭಯ ದೇಶಗಳ ನಡುವೆ ಯುದ್ಧದ ಸ್ವರೂಪ ಪಡೆದುಕೊಂಡಿದೆ.

‘ಸಹನೆಯ ಕಟ್ಟೆಯೊಡೆದಿದೆ. ನಿಮ್ಮ ಶಕ್ತಿ–ಸಾಮರ್ಥ್ಯದ ಬಗ್ಗೆ ನಮಗೆ ಅರಿವಿದೆ’ ಎಂದು ಪಾಕಿಸ್ತಾನ ರಕ್ಷಣಾ ಸಚಿವ ಖ್ವಾಜಾ ಆಸಿಫ್ ಅವರು ಹೇಳಿದ್ದಾರೆ.


ಹವಾಮಾನ ಮುನ್ಸೂಚನೆ: ನಗರದಲ್ಲಿ ಭಾಗಶಃ ಮೋಡ ಕವಿದ ವಾತಾವರಣ ಇರಲಿದೆ

ಏ.1ಕ್ಕೆ ಬೆಂಗಳೂರು ಕರಗ ಮಹೋತ್ಸವ

ಮಾರ್ಚ್ 24ರಂದು ಧ್ವಜಾರೋಹಣದೊಂದಿಗೆ ಚಾಲನೆ
16ನೇ ಬಾರಿಗೆ ಕರಗ ಹೊರಲಿರುವ ಅರ್ಚಕ ಎ.ಜ್ಞಾನೇಂದ್ರ ಸ್ವಾಮಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಕರಗ ಶಕ್ತ್ಯೋತ್ಸವ ಏಪ್ರಿಲ್ 1ರಂದು ನಡೆಯಲಿದ್ದು, ಅದಕ್ಕೆ ಬೇಕಾದ ತಯಾರಿಗಳನ್ನು ಮಾಡಿಕೊಳ್ಳಲು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಸೂಚಿಸಿದ್ದಾರೆ.



ಧರ್ಮರಾಯ ಸ್ವಾಮಿ ದೇವಾಲಯದ ನೂತನ ವ್ಯವಸ್ಥಾಪನಾ ಸಮಿತಿಯಿಂದ ವಿಶ್ವವಿಖ್ಯಾತ ಬೆಂಗಳೂರು ಕರಗ ಶಕ್ತ್ಯೋತ್ಸವಕ್ಕೆ ದಿನಾಂಕ ನಿಗದಿಪಡಿಸಲಾಗಿದೆ. ಮಾರ್ಚ್ 24ರಂದು ಧ್ವಜಾರೋಹಣದ ಮೂಲಕ ಉತ್ಸವಕ್ಕೆ ಚಾಲನೆ ಸಿಗಲಿದೆ.

ಮಾರ್ಚ್ 30ರಂದು ಬೆಳಿಗ್ಗೆ 4ರ ಸುಮಾರಿಗೆ ಹಸಿಕರಗ ಆರಂಭಗೊಳ್ಳಲಿದೆ. ಏಪ್ರಿಲ್ 1ರ ಮಧ್ಯರಾತ್ರಿ ಬೆಂಗಳೂರು ಕರಗ ಶಕ್ತ್ಯೋತ್ಸವ ನಡೆಯಲಿದೆ. ಒಟ್ಟು 11 ದಿನ ಬೆಂಗಳೂರು ಕರಗ ಶಕ್ತ್ಯೋತ್ಸವ ಕಾರ್ಯಕ್ರಮ ನಡೆಯಲಿವೆ ಎಂದು ಮುಜರಾಯಿ ಸಚಿವರು ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಅರ್ಚಕ ಎ.ಜ್ಞಾನೇಂದ್ರ ಸ್ವಾಮಿ ಅವರು 16ನೇ ಬಾರಿಗೆ ಕರಗ ಹೊರಲಿದ್ದಾರೆ. ಬೆಂಗಳೂರು ಕರಗ ದಕ್ಷಿಣ ಭಾರತದ ಅತ್ಯಂತ ಪುರಾತನ ಮತ್ತು ವೈಶಿಷ್ಟ್ಯಪೂರ್ಣ ಹಬ್ಬಗಳಲ್ಲಿ ಒಂದಾಗಿದೆ ಎಂದರು.

ಮಹೋತ್ಸವದ ಕೇಂದ್ರಬಿಂದು ಆಗಿರುವ ಧರ್ಮರಾಯಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಪೂಜೆಗಳು ಮತ್ತು ವಿಧಿವಿಧಾನಗಳು ನೆರವೇರುತ್ತವೆ. ತಿಗಳ ಸಮುದಾಯದವರು ಈ ಹಬ್ಬದ ಮುಖ್ಯ ಆಯೋಜಕರಾಗಿದ್ದಾರೆ. ಧರ್ಮರಾಯಸ್ವಾಮಿ ದೇವಸ್ಥಾನದ ಅಲಂಕಾರ, ಪೂಜೆಗಳು ಮುಜರಾಯಿ ಇಲಾಖೆಯಿಂದ ನಡೆಯಲಿವೆ. ಕರಗ ನಡೆಯುವ ಸಂಪಂಗಿ ಕೆರೆಗೆ ಬಣ್ಣ ಬಳಿಯವುದು, ಕುಡಿಯುವ ನೀರಿನ ವ್ಯವಸ್ಥೆ, ಇ-ಟಾಯ್ಲೆಟ್ ವ್ಯವಸ್ಥೆ, ಬಂದೋಬಸ್ತ್ ಸಹಿತ ವಿವಿಧ ವ್ಯವಸ್ಥೆಗಳು ಬೇರೆ ಬೇರೆ ಇಲಾಖೆಗಳಿಂದ ನಡೆಯಲಿವೆ ಎಂದು ಮಾಹಿತಿ ನೀಡಿದರು.

ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ನಾರಾಯಣಸ್ವಾಮಿ, ಪೊಲೀಸ್, ಲೋಕೋಪಯೋಗಿ, ಜಿಬಿಎ, ಜಿಲ್ಲಾಡಳಿತ ಸಹಿತ ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳು ಶುಕ್ರವಾರ ನಡೆದ ಕರಗದ ಪೂರ್ವಭಾವಿ ಸಭೆಯಲ್ಲಿ ಉಪಸ್ಥಿತರಿದ್ದರು.

ಪೂರ್ವಭಾವಿ ಸಭೆಯ ನಿರ್ಧಾರಗಳು

- ಜಿಬಿಎ ವತಿಯಿಂದ ಅಲ್ಪಾವಧಿ ಟೆಂಡರ್ ಕರೆದು ಕರಗಕ್ಕೆ ತಗಲುವ ವೆಚ್ಚವನ್ನು ಸಮರ್ಪಕವಾಗಿ ನಿರ್ವಹಿಸಬೇಕು.
- ವ್ಯವಸ್ಥಾಪನಾ ಸಮಿತಿಯ ಮಾರ್ಗದರ್ಶನದಲ್ಲಿ ಹೂವಿನ ಅಲಂಕಾರ, ದೀಪಾಲಂಕಾರ, ದೇವಸ್ಥಾನದ ಕಟ್ಟಡಕ್ಕೆ ಸುಣ್ಣ ಬಣ್ಣ, ಇತರ ಅಗತ್ಯ ಸೇವೆಗಳನ್ನು ಮಾಡಬೇಕು.
- ದೇವಾಲಯದ ರಥವನ್ನು ಲೋಕೋಪಯೋಗಿ ಇಲಾಖೆ ಪರಿಶೀಲಿಸಬೇಕು. ಅಗತ್ಯವಿದ್ದಲ್ಲಿ ದುರಸ್ತಿಪಡಿಸಿ ರಥ ಸುಸ್ಥಿತಿಯಲ್ಲಿರುವುದನ್ನು ಖಾತ್ರಿಪಡಿಸಿಕೊಳ್ಳಬೇಕು.
- ಹಡ್ಸನ್ ಸರ್ಕಲ್, ಟೌನ್‌ಹಾಲ್ ವೃತ್ತ, ಸಿಟಿ ಮಾರುಕಟ್ಟೆ ವೃತ್ತ, ಮೈಸೂರು ಬ್ಯಾಂಕ್ ವೃತ್ತ, ಜಿಬಿಎ ಮುಖ್ಯ ಕಚೇರಿ ಆವರಣ, ಕೆಂಪೇಗೌಡ ವೃತ್ತ, ಹಳೇಪೇಟೆ, ಇತರ ಮುಖ್ಯರಸ್ತೆಗಳಿಗೆ ವಿಶೇಷ ದೀಪಾಲಂಕಾರ ಮಾಡಬೇಕು.
- ದೇವಾಲಯದ ಸುತ್ತಮುತ್ತ ಅವಕಾಶ ಇರುವಲ್ಲೆಲ್ಲ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಬೇಕು.
- ಕಾನೂನು ಸುವ್ಯವಸ್ಥೆಗೆ ಅಡ್ಡಿಯಾಗದಂತೆ ನೋಡಿಕೊಳ್ಳಲು ಅಗತ್ಯ ಪೊಲೀಸ್ ಸಿಬ್ಬಂದಿ ನಿಯೋಜಿಸಬೇಕು. ವಾಹನ ನಿಲುಗಡೆಗೆ ವ್ಯವಸ್ಥೆ ಕಲ್ಪಿಸಬೇಕು. ಸುಗಮ ಸಂಚಾರಕ್ಕೆ ಕ್ರಮ ಕೈಗೊಳ್ಳಬೇಕು.
- ಅಗತ್ಯ ಇರುವ ಕಡೆಗಳಲ್ಲಿ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು.
- ಆಂಬುಲೆನ್ಸ್ ಸಹಿತ ವೈದ್ಯಕೀಯ ವ್ಯವಸ್ಥೆ ಇರಬೇಕು. ಅಗ್ನಿಶಾಮಕ ವಾಹನ ನಿಯೋಜಿಸಿರಬೇಕು.



ರಾಜ್ಯದ 5ನೇ ಹಣಕಾಸು ಆಯೋಗದ ಅಧ್ಯಕ್ಷ ಸಿ. ನಾರಾಯಣಸ್ವಾಮಿ ಮತ್ತು ಸದಸ್ಯರು ಆಯೋಗದ ವರದಿಯನ್ನು ಸಿದ್ದರಾಮಯ್ಯ ಅವರಿಗೆ ಗುರುವಾರ ಸಲ್ಲಿಸಿದರು. ಸಚಿವರಾದ ಕೆ.ಎಚ್. ಮುನಿಯಪ್ಪ, ಎಚ್.ಕೆ. ಪಾಟೀಲ ಉಪಸ್ಥಿತರಿದ್ದರು

ಹಣಕಾಸು ಆಯೋಗದ ವರದಿ ಸಲ್ಲಿಕೆ

ಬೆಂಗಳೂರು: ಗ್ರೇಟರ್ ಬೆಂಗಳೂರು ವ್ಯಾಪ್ತಿಯ ಐದು ನಗರ ಪಾಲಿಕೆಗಳ ವರದಿಯನ್ನು ರಾಜ್ಯದ 5ನೇ ಹಣಕಾಸು ಆಯೋಗ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಗುರುವಾರ ಸಲ್ಲಿಸಿತು.

ಆಯೋಗದ ಅಧ್ಯಕ್ಷ ಸಿ. ನಾರಾಯಣಸ್ವಾಮಿ ಅವರ ನೇತೃತ್ವದಲ್ಲಿ ಸದಸ್ಯರು ವರದಿ ಪುಸ್ತಕವನ್ನು ಮುಖ್ಯಮಂತ್ರಿಯವರಿಗೆ ನೀಡಿದರು.

ಐದು ನಗರ ಪಾಲಿಕೆಗಳ ಕಚೇರಿಯಲ್ಲಿ ಸಭೆಗಳನ್ನು ನಡೆಸಿದ್ದ ಆಯೋಗದ ಅಧ್ಯಕ್ಷರು ಹಾಗೂ ಸದಸ್ಯರು, ಪಾಲಿಕೆಗಳಿಂದ ಬೇಡಿಕೆಗಳನ್ನು ಸ್ವೀಕರಿಸಿದ್ದರು.

ಸುಮಾರು ₹9 ಸಾವಿರ ಕೋಟಿ ಅನುದಾನ ಒದಗಿಸುವಂತೆ ಕೋರಿವೆ.

ನಗರದಲ್ಲಿ ಇಂದು

'ವಿಕಸಿತ ಭಾರತ್ ಶಿಕ್ಷಾ ಅಧಿಷ್ಠಾನ್ (ವಿಬಿಎಸ್‌ಎ) ಮಸೂದೆ' ಕುರಿತ ದುಂಡು ಮೇಜಿನ ಸಭೆ: ಆಯೋಜನೆ: ಭಾರತೀಯ ಶಿಕ್ಷಣ ಮಂಡಲ, ಸ್ಥಳ: ದಿ ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಬೆಳಿಗ್ಗೆ 9

21ನೇ ವರ್ಷದ ವಾರ್ಷಿಕೋತ್ಸವ ಹಾಗೂ 20ನೇ ಬ್ರಹ್ಮರಥೋತ್ಸವ: ಬೆಳಿಗ್ಗೆ 8ರಿಂದ ಪಂಚಾಮೃತಾಭಿಷೇಕ ಪೂಜೆ, ಅಲಂಕಾರ, ರಥಾಲಂಕಾರ ಸೇವೆ, ಮಧ್ಯಾಹ್ನ 1.07ಕ್ಕೆ ಬ್ರಹ್ಮರಥೋತ್ಸವ, ಸಂಜೆ 7ಕ್ಕೆ ತರಂಗಿಣಿ ತಂಡದಿಂದ ಭರತನಾಟ್ಯ, ರಾತ್ರಿ 8ರಿಂದ 'ಮಹಿಷಾಸುರ ಮರ್ದಿನಿ' ಯಕ್ಷಗಾನ ಪ್ರಸಂಗ, ರಾತ್ರಿ 11.30ರಿಂದ ಪಲ್ಲಕ್ಕಿ ಉತ್ಸವ, ಆಯೋಜನೆ ಹಾಗೂ ಸ್ಥಳ: ಸ್ಫೂರ್ತಿ ವಿನಾಯಕ ಸಹಿತ ಸತ್ಯನಾರಾಯಣ ಸ್ವಾಮಿ ದೇವಾಲಯ, ಹುಳಿಮಾವು, ಬನ್ನೇರುಘಟ್ಟ

ಸ್ವಾಭಿಮಾನ ಚಳವಳಿಯ ಶತಮಾನೋತ್ಸವ: ಅಧ್ಯಕ್ಷತೆ: ಕೆ. ವೀರಮಣಿ, ಉದ್ಘಾಟನೆ: ಎಚ್.ಸಿ. ಮಹದೇವಪ್ಪ, ಪ್ರಾಸ್ತಾವಿಕ ನುಡಿ: ಬಿ.ಕೆ. ಹರಿಪ್ರಸಾದ್, ಭಾಷಣ: ಎಚ್.ಎನ್. ನಾಗಮೋಹನದಾಸ್, ರವಿವರ್ಮ ಕುಮಾರ್, ರಿಜ್ವಾನ್ ಅರ್ಷದ್, ಆಯೋಜನೆ: ಕರ್ನಾಟಕ ರಾಜ್ಯ ದ್ರಾವಿಡ ಕಳಗಂ, ಸ್ಥಳ: ದೇವರಾಜ ಅರಸು ಭವನ, ವಸಂತನಗರ, ಬೆಳಿಗ್ಗೆ 10

ನಾಲ್ಕು ಪುಸ್ತಕಗಳ ಬಿಡುಗಡೆ: ಎಚ್.ಎನ್. ಆನಂದ ಅವರ 'ರಿವರ್ಸ್ ಲಂಚ', ಮಧುರಾ ಕರ್ಣಮ್ ಅವರ 'ಕಣ್ಣಾಮುಚ್ಚೇ ಕಾಡೇ ಗೂಡೇ', ಶೋಭಾ ಪುರೋಹಿತ್ ಅವರ 'ಭಾವನೆಯ ಬಲೆಯಲ್ಲಿ', ಕೆ.ವಿ. ಶಶಿಧರ ಅವರ 'ಮೆಟ್ರೋ ಟ್ರೈನ್' ಪುಸ್ತಕಗಳ ಬಿಡುಗಡೆ, ಪುಸ್ತಕಗಳ ಪರಿಚಯ: ವೈ.ವಿ. ಗುಂಡೂರಾವ್, ನಾ. ದಾಮೋದರ ಶೆಟ್ಟಿ, ನಾಗೇಶ್ ಕುಮಾರ್, ರಾಸು ವೆಂಕಟೇಶ್, ಉಪಸ್ಥಿತಿ: ರಾಮನಾಥ್, ಆಯೋಜನೆ: ತೇಜು ಪಬ್ಲಿಕೇಷನ್ಸ್, ನ್ಯೂ ವೇವ್ ಬುಕ್ಸ್, ಸ್ಥಳ: ಆರ್ಯ ಸಮಾಜ, ಶ್ರದ್ಧಾನಂದ ಭವನ ಅಡ್ಡರಸ್ತೆ, ವಿಶ್ವೇಶ್ವರಪುರ, ಬೆಳಿಗ್ಗೆ 10

ಭೂಮಿ ರೈತ ಪ್ರಶಸ್ತಿ ವಿತರಣಾ ಸಮಾರಂಭ: ಅತಿಥಿಗಳು: ಜಿ.ಟಿ.ಪುತ್ರ, ಸಿ.ಎನ್. ಶಿವಪ್ರಕಾಶ್, ಆಯೋಜನೆ: ಸಹಜಾನಂದ ಕಂಪ್ಯೂಟರ್ ಆಧಾರಿತ ಗ್ರಾಮೀಣ ಶಿಕ್ಷಣ ಮತ್ತು ಅಭಿವೃದ್ಧಿ ಟ್ರಸ್ಟ್, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ.ರಸ್ತೆ, ಬೆಳಿಗ್ಗೆ 10

ರಾಷ್ಟ್ರೀಯ ವಿಜ್ಞಾನ ದಿನ ಹಾಗೂ 'ರಾಮನ್ ಪರಿಣಾಮ'ದ ಆವಿಷ್ಕಾರದ ಸ್ಮರಣಾರ್ಥ ಮುಕ್ತ ದಿನ (ಓಪನ್ ಡೇ): ವಿಜ್ಞಾನ ಪ್ರದರ್ಶನ ಹಾಗೂ ಕ್ಯಾಂಪಸ್ ದರ್ಶನ, ಆಯೋಜನೆ ಹಾಗೂ ಸ್ಥಳ: ರಾಮನ್ ರಿಸರ್ಚ್ ಇನ್‌ಸ್ಟಿಟ್ಯೂಟ್, ಸದಾಶಿವನಗರ, ಬೆಳಿಗ್ಗೆ 10ರಿಂದ ಸಂಜೆ 4

ನೃತ್ಯಾರ್ಪಣೆ: ವರ್ಷಾ ಎನ್.ಕುಮಾರ್, ಗುರು: ನಾಗಭೂಷಣ, ಅತಿಥಿಗಳು: ಕೃಷ್ಣ ಬೈರೇಗೌಡ, ಎನ್. ಶಿವಶಂಕರ್, ಎನ್.ಎಸ್. ಪಾಟೀಲ, ಥಾಮಸ್ ವಿ. ಥೇನಾದಿಯಾಲ್, ಜೋಸೆಫ್ ಎಸ್., ಆಯೋಜನೆ: ಆರಾಧನಾ ನೃತ್ಯ ಶಾಲೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ.ರಸ್ತೆ, ಸಂಜೆ 5

12ನೇ ಶತಮಾನದ ವಚನಕಾರ್ತಿಯರ ಕುರಿತು ಕಮ್ಮಟ: ಬೆಳಿಗ್ಗೆ 10ರಿಂದ ಗೋಷ್ಠಿಗಳು, ಆಶಯ ನುಡಿ: ಎಂ. ಉಷಾ, ಗೋಷ್ಠಿಯಲ್ಲಿ ಭಾಗವಹಿಸುವವರು: ಆರ್. ಸುನಂದಮ್ಮ, ಸುನಂದ ರು. ಬಸಪ್ಪ, ಇಂದಿರಾ ಶಿವಣ್ಣ, ಸಂಜೆ 4ಕ್ಕೆ ಸಮಾರೋಪ ಸಮಾರಂಭ: ಭಾಷಣ: ಸಿ. ಸೋಮಶೇಖರ್, ಅಧ್ಯಕ್ಷತೆ: ಆರ್. ಸುನಂದಮ್ಮ, ಅತಿಥಿ: ಆರ್. ಪೂರ್ಣಿಮಾ, ಆಯೋಜನೆ: ಮೈಸೂರಿನ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಕರ್ನಾಟಕ ಲೇಖಕಿಯರ ಸಂಘ, ಸ್ಥಳ: ಚಿಂತನ ಮಂಟಪ, ಜಗದ್ಗುರು ಶಿವರಾತ್ರೀಶ್ವರ ವೃತ್ತ, ಜಯನಗರ 8ನೇ ಬ್ಲಾಕ್

'ವಚನಾಸ್ ಆಫ್ ಅಲ್ಲಮಪ್ರಭು' ಪುಸ್ತಕ ಬಿಡುಗಡೆ: ಸಾನ್ನಿಧ್ಯ: ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಬಸವಲಿಂಗ ಸ್ವಾಮೀಜಿ, ಉದ್ಘಾಟನೆ: ಎಂ.ಬಿ. ಪಾಟೀಲ, ಅಧ್ಯಕ್ಷತೆ: ಬಸವರಾಜ ಬೊಮ್ಮಾಯಿ, ಪುಸ್ತಕ ಬಿಡುಗಡೆ: ಕೃಷ್ಣ ದೀಕ್ಷಿತ್, ಕೃತಿ ಪರಿಚಯ: ಮಲ್ಲೇಪುರಂ ಜಿ. ವೆಂಕಟೇಶ, ಅತಿಥಿಗಳು: ಗೊ.ರು. ಚನ್ನಬಸಪ್ಪ, ಡಿ.ಆರ್. ಪಾಟೀಲ, ಸಿ. ಸೋಮಶೇಖರ್, ಸಿ.ಎಸ್. ಷಡಾಕ್ಷರಿ, ಆಯೋಜನೆ: ಜೆಎಸ್‌ಎಸ್ ಮಹಾವಿದ್ಯಾಲಯ, ಸ್ಥಳ: ಶಿವರಾತ್ರೀಶ್ವರ ಕೇಂದ್ರ, ಜೆಎಸ್‌ಎಸ್ ವೃತ್ತ, ಜಯನಗರ 8ನೇ ಬ್ಲಾಕ್, ಬೆಳಿಗ್ಗೆ 10.30



ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ

ಫೋಟೊ ಹಬ್ಬ: ಛಾಯಾಚಿತ್ರಗಳ ಪ್ರದರ್ಶನ ಹಾಗೂ ಶ್ರೀನಿವಾಸ ಮೂರ್ತಿ ಎನ್.ಎಸ್. ಅವರ 'ರಮಣೀಯ ರಾಜಸ್ಥಾನ' ಪುಸ್ತಕ ಬಿಡುಗಡೆ: ಅತಿಥಿಗಳು: ಈಶಪ್ರಿಯ ತೀರ್ಥ ಸ್ವಾಮೀಜಿ, ಮುರಿಗೆಪ್ಪ, ವಿನಾಯಕ ಜೋಶಿ, ಆಯೋಜನೆ: ಎನ್‌ಟಿಎಂಎಲ್ ಗ್ರೂಪ್, ಸ್ಥಳ: ದೇವರಾಜ ಅರಸು ಗ್ಯಾಲರಿ, ಕರ್ನಾಟಕ ಚಿತ್ರಕಲಾ ಪರಿಷತ್ತು, ಬೆಳಿಗ್ಗೆ 10.30

6ನೇ ಅಖಿಲ ಭಾರತ ಸಮ್ಮೇಳನ: ಉದ್ಘಾಟನೆ: ಪಿ. ಸಾಯಿನಾಥ್, ಅತಿಥಿಗಳು: ಎಸ್.ಕೆ. ಕಾಂತಾ, ಕರೇಹಳ್ಳಿ ಶ್ರೀನಿವಾಸ್, ಎಸ್. ರೇವಣ್ಣ, ಅಧ್ಯಕ್ಷತೆ: ಬಿ. ನಾಗರಾಜು, ಆಯೋಜನೆ: ಕೆನರಾ ಬ್ಯಾಂಕ್ ಸ್ಟಾಫ್ ಫೌಂಡೇಷನ್, ಸ್ಥಳ: ಟೌನ್ ಹಾಲ್, ಜೆ.ಸಿ.ರಸ್ತೆ, ಬೆಳಿಗ್ಗೆ 10.30

ದತ್ತಿ ಪ್ರಶಸ್ತಿಗಳ ಪ್ರದಾನ: ಕೆ.ಆರ್. ಸಂಧ್ಯಾ ರೆಡ್ಡಿ, ಅತಿಥಿ: ಆರ್. ಲಕ್ಷ್ಮೀನಾರಾಯಣ, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, 'ಪ್ರೊ.ಎಲ್.ಎಸ್. ಶೇಷಗಿರಿರಾವ್ ವಿಮರ್ಶಾ ಪ್ರಶಸ್ತಿ' ಪುರಸ್ಕೃತರು: ಟಿ.ಪಿ. ಅಶೋಕ, 'ವಿ. ನಾಗರಾಜರಾವ್ ಸಮೂಹ ಮಾಧ್ಯಮ ಪ್ರಶಸ್ತಿ' ಪುರಸ್ಕೃತರು: ನಾಗಮಣಿ ಎಸ್. ರಾವ್, ಆಯೋಜನೆ: ಬಿ.ಎಂ.ಶ್ರೀ. ಪ್ರತಿಷ್ಠಾನ, ಸ್ಥಳ: ಎಂ.ವಿ.ಸೀ. ಸಭಾಂಗಣ, ಬಿ.ಎಂ.ಶ್ರೀ. ಕಲಾಭವನ, ಎನ್.ಆರ್. ಕಾಲೊನಿ, ಬೆಳಿಗ್ಗೆ 10.30

ಅ.ನ. ಯಲ್ಲಪ್ಪ ರೆಡ್ಡಿ ಅವರಿಗೆ ಗೌರವಾಭಿನಂದನೆ ಹಾಗೂ 'ಸಮೃದ್ಧವಾಗಲಿ ಭೂತಾಯ ಒಡಲು' ಪುಸ್ತಕ ಬಿಡುಗಡೆ: ಅಧ್ಯಕ್ಷತೆ: ಜಯೇಂದ್ರಪುರಿ ಸ್ವಾಮೀಜಿ, ಪುಸ್ತಕ ಬಿಡುಗಡೆ: ಬಿ. ದಯಾನಂದ, ಅತಿಥಿ: ಲಕ್ಷ್ಮೀಶ ತೋಳ್ಪಾಡಿ, ಆಯೋಜನೆ: ಕೃಷಿ ಭಾರತ ಫೌಂಡೇಷನ್, ಸ್ಥಳ: ಡಾ.ಎಚ್.ಎನ್. ಮಲ್ಟಿಮೀಡಿಯಾ ಹಾಲ್, ನ್ಯಾಷನಲ್ ಕಾಲೇಜು, ಬಸವನಗುಡಿ, ಬೆಳಿಗ್ಗೆ 10.30



ಯಲ್ಲಪ್ಪ ರೆಡ್ಡಿ

ಮತದಾರರ ಪಟ್ಟಿಯ 'ವಿಶೇಷ ಸಮಗ್ರ ಪರಿಷ್ಕರಣೆ' ಪ್ರಕ್ರಿಯೆ ಮಹಿಳೆಯರ ಮೇಲೆ ಬೀರುವ ಪರಿಣಾಮದ ಬಗ್ಗೆ ಸಭೆ: ಆಯೋಜನೆ: ನನ್ನ ಮತ ನನ್ನ ಹಕ್ಕು, ಸ್ಥಳ: ಎಐಟಿಯುಸಿ ರಾಜ್ಯ ಸಮಿತಿ ಕಚೇರಿ, ಶಿರೂರು ಪಾರ್ಕ್ ರಸ್ತೆ, ಶೇಷಾದ್ರಿಪುರ, ಬೆಳಿಗ್ಗೆ 11

ಮೊರಾರ್ಜಿ ದೇಸಾಯಿ ಅವರ ಜನ್ಮದಿನಾಚರಣೆ ಹಾಗೂ ಚಿಂತನ-ಮಂಥನ ಸಭೆ: ಅಧ್ಯಕ್ಷತೆ: ಎಂ.ಪಿ. ನಾಡಗೌಡ, ಪುಷ್ಪನಮನ: ವಾಣಿ ಎನ್. ಶೆಟ್ಟಿ, ಉಪಸ್ಥಿತಿ: ಶ್ರೀನಿವಾಸ್ ಎಸ್., ಆಯೋಜನೆ: ಜನತಾ ಪಕ್ಷ, ಸ್ಥಳ: ವಿಧಾನ ಪರಿಷತ್ ಸಭಾಂಗಣ, ಶಾಸಕರ ಭವನ-1, ಬೆಳಿಗ್ಗೆ 11.30

8ನೇ ವಾರ್ಷಿಕೋತ್ಸವದ ಪ್ರಯುಕ್ತ ಗಾಯನ-ನಾಟಕ: ಉದ್ಘಾಟನೆ: ದೊಡ್ಡಮನೆ ವೆಂಕಟೇಶ್, ಅತಿಥಿಗಳು: ರಾಮಚಂದ್ರರಾವ್, ಎಂ.ವಿ. ಶಂಕರ್, ಕೆ.ಮುನಿರಾಜು, ಆರ್. ಮುನಿಸ್ವಾಮಿ, ಆರ್. ಕೇಶವಮೂರ್ತಿ, ಗೀತ ಗಾಯನ: ಪಿ.ರುದ್ರಪ್ಪ ಮತ್ತು ತಂಡ, ನಾಟಕ: 'ಪಶ್ಚಾತಾಪ', ಆಯೋಜನೆ: ಸಂಧ್ಯಾ ಜನ ಸಂಸ್ಕೃತಿ ಟ್ರಸ್ಟ್, ಸ್ಥಳ: ಅಕ್ಕಮಹಾದೇವಿ ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಮಧ್ಯಾಹ್ನ 3

ಗಾನ ಕುಸುಮಾಂಜಲಿ: ಮಹಿಳೆಯರ ರಾಜ್ಯಮಟ್ಟದ ಗಾಯನ ಸ್ಪರ್ಧೆ ಮತ್ತು ಬಹುಮಾನ ವಿತರಣಾ ಸಮಾರಂಭ: ಉಪಸ್ಥಿತಿ: ರಾಮಲಿಂಗಾರೆಡ್ಡಿ, ಅತಿಥಿಗಳು: ಎಂ.ಮುನಿರಾಜು, ಆರ್. ವಿ. ರಾಘವೇಂದ್ರ, ಡಿ. ಶ್ರೀನಾಥ್, ಎಸ್. ಮಂಜುನಾಥ್ ರಾಮಸಾಗರ, ಆಯೋಜನೆ: ಪರಂಪರಾ ಕಲ್ಚರಲ್ ಫೌಂಡೇಷನ್, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 4

54ನೇ ವಾರ್ಷಿಕೋತ್ಸವ: ಸಾನ್ನಿಧ್ಯ: ಯದುಗಿರಿ ಯತಿರಾಜ ನಾರಾಯಣ ರಾಮಾನುಜ ಜೀಯರ್ ಸ್ವಾಮೀಜಿ, ಅತಿಥಿಗಳು: ಅಶೋಕ್ ಡಿ.ಆರ್., ಎಂ.ಆರ್. ಚಂದ್ರಶೇಖರ್, ಅಧ್ಯಕ್ಷತೆ: ಪ್ರಕಾಶ್ ವಾಸು, ಆಯೋಜನೆ ಹಾಗೂ ಸ್ಥಳ: ಬಾಲ ಮನೋ ವಿಕಾಸ ಕೇಂದ್ರ, ಮಲ್ಲೇಶ್ವರ, ಸಂಜೆ 4

'ಕಲಾ ಸ್ಪಂದನ' ಶಾಸ್ತ್ರೀಯ ಸಂಗೀತ-ನೃತ್ಯ ತಿಂಗಳ ಕಾರ್ಯಕ್ರಮ: ಅತಿಥಿ: ಸತ್ಯನಾರಾಯಣ ರಾಜು, ಉಪಸ್ಥಿತಿ: ಸತೀಶ್ ಹಂಪಿಹೊಳಿ, ಕಥಕ್ ನೃತ್ಯ ಪ್ರದರ್ಶನ: ಸುದೀಪ್ತ ಜಿ., ಪ್ರೀತಿ ಚೌಧರಿ, ಹಿಂದೂಸ್ತಾನಿ ಶಾಸ್ತ್ರೀಯ ಗಾಯನ: ಪೂರ್ಣಾ ಹೆಬ್ಬಾರ್, ಪ್ರಜ್ಞಾ ಹೆಬ್ಬಾರ್, ತಬಲಾ: ರೋಹನ್ ಕುಮಾರ್, ಆಯೋಜನೆ: ಸತೀಶ್ ಹಂಪಿಹೊಳಿ ಮ್ಯೂಸಿಕ್ ಫೌಂಡೇಷನ್ ಟ್ರಸ್ಟ್, ಅಲಂಕೃತ ಸೆಂಟರ್ ಫಾರ್ ಪರ್ಫಾರ್ಮಿಂಗ್ ಆರ್ಟ್ಸ್, ಸ್ಥಳ: ಸನಾತನ ಕಲಾಕ್ಷೇತ್ರ, ಜಯನಗರದ 5ನೇ ಬ್ಲಾಕ್, ಸಂಜೆ 5

ಭಾಗವತ ಚಿಂತನ ಕಾರ್ಯಕ್ರಮ: ಉಪನ್ಯಾಸ: ಗಣೇಶ ಭಟ್ಟ, ಆಶೀರ್ವಚನ: ಶಿವಕಾಂತಾನಂದ ಸ್ವಾಮೀಜಿ, ಅಧ್ಯಕ್ಷತೆ: ಎಸ್.ಕೆ. ಗೋಪಾಲಕೃಷ್ಣ, ಅತಿಥಿ: ಎಚ್. ಸುಂದರಮೂರ್ತಿ, ಆಯೋಜನೆ: ಶ್ರೀನಿವಾಸ ಸಹೋದರರ ಸಂಘ, ಸ್ಥಳ: ಜಯರಾಮ ಸೇವಾ ಮಂಡಳಿ, ಜಿ.ವಿ. ಜನ್ಮಶತಾಬ್ದಿ ಕಲಾಕೇಂದ್ರ, ಜಯನಗರ 8ನೇ ಬಡಾವಣೆ, ಸಂಜೆ 5.30

ಚಲನಚಿತ್ರ ಗೀತೆಗಳ ಗಾಯನ: ಆಯೋಜನೆ: ಎಟಿಎಂ ತಂಡ, ಕಲಾಭೂಮಿ, ಸ್ಥಳ: ಬೆಂಗಳೂರು ದಕ್ಷಿಣ ಪಾಲಿಕೆ ಕಚೇರಿ ಆವರಣ, ಆರ್‌ಬಿಐ ಲೇಔಟ್, ಜೆ.ಪಿ.ನಗರ 7ನೇ ಹಂತ, ಸಂಜೆ 5.30

'ಶ್ರೀಕೃಷ್ಣ ಸಂಧಾನ' ಯಕ್ಷಗಾನ ತಾಳಮದ್ದಳೆ: ಹಿಮ್ಮೇಳ: ರಕ್ಷಿತ್ ಭಟ್ಟ ಮೂರೂರು, ಆಗ್ನೇಯ ಭಟ್ ಕ್ಯಾಸನೂರು, ನಾರಾಯಣ ಮೂರ್ತಿ ಹೊಸಬಾಳೆ, ಶ್ರೀರಮಣ ಭಟ್ಟ ಮೂರೂರು, ಮುಮ್ಮೇಳ: ಶಿವಕುಮಾರ್ ಬೇಗಾರ್, ರವಿ ಐತುಮನೆ, ಚಂದನ್ ಕಲಾಹಂಸ, ಆಯೋಜನೆ: ನಿರ್ಮಾಣ್ ಯಕ್ಷ ಬಳಗ, ಸ್ಥಳ: ಮಹಾಲಕ್ಷ್ಮೀ ದೇವಸ್ಥಾನ, ವಲ್ಲಭ ನಗರ, ಕೋಣನಕುಂಟೆ ಕ್ರಾಸ್ ಬಳಿ, ಸಂಜೆ 5.30

ರೇಣುಕಾ ಯಲ್ಲಮ್ಮ ದೇವಿಯ 15ನೇ ವಾರ್ಷಿಕೋತ್ಸವ ಸಮಾರಂಭ: ರೇಣುಕಾ ಯಲ್ಲಮ್ಮ ದೇವಿಗೆ ವಾಸ್ತುಹೋಮ, ವಾಸ್ತುಪೂಜೆ, ಸಾಂಸ್ಕೃತಿಕ ಕಾರ್ಯಕ್ರಮಗಳು, ಆಯೋಜನೆ: ಮಹಿಷಿ ವರ್ಧಿನಿ ಮತ್ತು ರೇಣುಕಾ ಯಲ್ಲಮ್ಮದೇವಿ ಚಾರಿಟಬಲ್ ಟ್ರಸ್ಟ್, ಸ್ಥಳ: ರೇಣುಕಾ ಯಲ್ಲಮ್ಮ ದೇವಿ ದೇವಸ್ಥಾನ, ಮಂಚನಹಳ್ಳಿ ಗ್ರಾಮ, ಅತ್ತಿಬೆಲೆ ಕೈಗಾರಿಕಾ ಪ್ರದೇಶ, ಹೊಸೂರು ರಸ್ತೆ, ಸಂಜೆ 6

ಕರ್ನಾಟಕ ಶಾಸ್ತ್ರೀಯ ವಾದ್ಯ ಸಂಗೀತ ಕಾರ್ಯಕ್ರಮ: ಆರ್. ಅರ್ಜುನ್ ಸಾಂಬಸಿವನ್, ಆರ್. ನಾರಾಯಣನ್, ಹೃಷಿತ ಕೇದಗೆ, ಲೋಕಪ್ರಿಯ, ಎನ್. ಗುರುಮೂರ್ತಿ, ಆಯೋಜನೆ: ಮಲ್ಲೇಶ್ವರ ಸಂಗೀತ ಸಭಾ ಟ್ರಸ್ಟ್, ಸ್ಥಳ: ಶ್ರೀರಾಮಮಂದಿರ, ಮಲ್ಲೇಶ್ವರ, ಸಂಜೆ 6.30

ಕಾಮಣ್ಣನ ಹಬ್ಬದ ಆಚರಣೆ: ರತಿ-ಮನ್ಮಥರ ಉಯ್ಯಾಲೋತ್ಸವ, ಆಯೋಜನೆ ಹಾಗೂ ಸ್ಥಳ: ರಾಮಣ್ಣನ ಗುಡಿ ಸೇವಾ ಸಮಿತಿ ಟ್ರಸ್ಟ್, ತೋಟದ ದೇವರ ಗಲ್ಲಿ, ಅರಳೇಪೇಟೆ, ಸಂಜೆ 6.30

'ಸಡನ್ನಾಗ್ ಸಾಯ್ದೇ ಹೋದ್ರೆ?!' ನಾಟಕ ಪ್ರದರ್ಶನ: ತಂಡ: ಸೈಡ್ ವಿಂಗ್, ಸ್ಥಳ: ಬಿ.ಪಿ. ವಾಡಿಯಾ ಸಭಾಂಗಣ, ಬಸವನಗುಡಿ, ಸಂಜೆ 7.30

ಅಹೋರಾತ್ರಿ ಸಂಗೀತ ಕಛೇರಿ: ಯೋಗೇಶ್ ಸಂಸಿ, ವಿನಾಯಕ ತೊರವಿ, ರುಚಿರ ಕೇದಾರ್, ಇಂದ್ರಯುದ್ಧ್ ಮಜುಂದಾರ್, ದತ್ತಾತ್ರೇಯ ವೇಲಂಕರ್, ಆಯೋಜನೆ: ಗುರುರಾವ್ ದೇಶಪಾಂಡೆ ಸಂಗೀತ ಸಭಾ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ.ರಸ್ತೆ, ರಾತ್ರಿ 9

ಸುದ್ದಿ 2 ನಿಮಿಷ

'ಕನ್ನಡ ಭಾಷಾ ವಸ್ತು ಸಂಗ್ರಹಾಲಯ ಸ್ಥಾಪಿಸಿ'

ಬೆಂಗಳೂರು: 'ರಾಜ್ಯದಲ್ಲಿ ಕನ್ನಡ ಭಾಷಾ ವಸ್ತುಸಂಗ್ರಹಾಲಯ ಸ್ಥಾಪಿಸಬೇಕು. ಮುಂಬರುವ ಬಜೆಟ್‌ನಲ್ಲಿ ಈ ಬಗ್ಗೆ ಘೋಷಿಸಬೇಕು' ಎಂದು ಕನ್ನಡ ಗೆಳೆಯರ ಬಳಗ ಹಾಗೂ ಕರ್ನಾಟಕ ವಿಕಾಸ ರಂಗ ಆಗ್ರಹಿಸಿದೆ.

ಈ ಬಗ್ಗೆ ಜಂಟಿ ಪ್ರಕಟಣೆ ನೀಡಿದ್ದು, 'ವಿಜ್ಞಾನ-ತಂತ್ರಜ್ಞಾನಗಳು ಮೇಲುಗೈ ಸಾಧಿಸಿದ ಪರಿಣಾಮ ಇಡೀ ಸಮಾಜ ಅದರ ಆಕರ್ಷಣೆಯಲ್ಲಿ ಸಿಲುಕಿದೆ. ಇದರಿಂದಾಗಿ ಭಾಷಾ ಅಧ್ಯಯನ ಯಾರಿಗೂ ಬೇಡವಾಗಿದೆ. ಮನುಷ್ಯನ ಅಸ್ಮಿತೆಯಾದ ಭಾಷೆಯ ಮಹತ್ವವನ್ನು ಯುವಜನರು ಅರಿತಿಲ್ಲ. ಈ ಸನ್ನಿವೇಶದಲ್ಲಿ ಭಾಷಾ ವಸ್ತುಸಂಗ್ರಹಾಲಯಗಳ ಅಗತ್ಯವಿದೆ. ಭಾಷೆಯ ಮಹತ್ವವನ್ನು ಜನರಿಗೆ ತಿಳಿಸುವ ಪ್ರಯತ್ನವಾಗಿ ಭಾಷಾ ವಸ್ತುಸಂಗ್ರಹಾಲಯಗಳು ಹಲವು ದೇಶಗಳಲ್ಲಿ ಸ್ಥಾಪನೆಯಾಗುತ್ತಿವೆ' ಎಂದು ಬಳಗದ ಸಂಚಾಲಕ ರಾ.ನಂ. ಚಂದ್ರಶೇಖರ ಹಾಗೂ ವಿಕಾಸ ರಂಗದ ಅಧ್ಯಕ್ಷ ವ.ಚ. ಚನ್ನೇಗೌಡ ಹೇಳಿದ್ದಾರೆ.

'ಭಾಷೆಯ ಅವನತಿ ತಡೆಯಲು ಗುಜರಾತ್, ಉತ್ತರ ಪ್ರದೇಶ, ತಮಿಳುನಾಡು ಮತ್ತು ಒಡಿಶಾ ರಾಜ್ಯಗಳು ಭಾಷಾ ವಸ್ತುಸಂಗ್ರಹಾಲಯ ಸ್ಥಾಪಿಸಲು ಕ್ರಿಯಾಶೀಲವಾಗಿವೆ. ಕೇರಳ ಸರ್ಕಾರ ಕೊಟ್ಟಾಯಂನಲ್ಲಿ ಸ್ಥಾಪಿಸಿರುವ 'ಅಕ್ಷರಂ' ದೇಶದ ಮೊದಲ ಭಾಷಾ ವಸ್ತುಸಂಗ್ರಹಾಲಯವಾಗಿ ಗಮನ ಸೆಳೆದಿದೆ. ಕರ್ನಾಟಕದಲ್ಲಿಯೂ ಕನ್ನಡ ವಸ್ತು ಸಂಗ್ರಹಾಲಯ ಸ್ಥಾಪನೆಯಾಗುವ ಅಗತ್ಯವಿದ್ದು, ಬಜೆಟ್‌ನಲ್ಲಿ ಘೋಷಿಸಬೇಕು' ಎಂದು ಆಗ್ರಹಿಸಿದ್ದಾರೆ.

ಸುರಂಗ ಮಾರ್ಗ: ಪರಿಶೀಲನೆ




ಬೆಂಗಳೂರು: ನಮ್ಮ ಮೆಟ್ರೊ ಗುಲಾಬಿ ಮಾರ್ಗದ ಸುರಂಗ ಕಾರಿಡಾರ್‌ನಲ್ಲಿ ನಡೆಯುತ್ತಿರುವ ಕಾಮಗಾರಿಯನ್ನು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಜೆ. ರವಿಶಂಕರ್ ಶುಕ್ರವಾರ ಪರಿಶೀಲಿಸಿದರು.

ನಿಲ್ದಾಣ ನಿರ್ಮಾಣ, ಸುರಂಗ ಸಂಬಂಧಿತ ಕಾಮಗಾರಿಗಳು, ಹಳಿ ಅಳವಡಿಕೆ, ವಿವಿಧ ವ್ಯವಸ್ಥೆಗಳ ಸ್ಥಾಪನೆ ಹಾಗೂ ಇತರೆ ಕಾಮಗಾರಿಗಳ ಪ್ರಗತಿ ಪರಿಶೀಲನೆ ನಡೆಸಿದರು.

ಈ ಮಾರ್ಗವು ಬೆಂಗಳೂರಿನ ಉತ್ತರ-ದಕ್ಷಿಣ ಸಂಪರ್ಕವನ್ನು ಬಲಪಡಿಸಲಿದೆ. ಜೊತೆಗೆ ಪ್ರಮುಖ ಮುಖ್ಯ ರಸ್ತೆಗಳ ಮೇಲಿನ ಸಂಚಾರ ದಟ್ಟಣೆಯನ್ನು ತಗ್ಗಿಸುವಲ್ಲಿ ಮಹತ್ವದ ಪಾತ್ರವಹಿಸಲಿದೆ. ಬಾಕಿ ಉಳಿದಿರುವ ಕಾಮಗಾರಿಗಳನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಬೇಕು. ಅದಕ್ಕೆ ವಿವಿಧ ವಿಭಾಗಗಳ ನಡುವೆ ಸಮನ್ವಯವನ್ನು ಹೆಚ್ಚಿಸಬೇಕು ಎಂದು ಅಧಿಕಾರಿಗಳಿಗೆ, ಗುತ್ತಿಗೆದಾರರಿಗೆ ಹಾಗೂ ಸ್ಥಳೀಯ ಎಂಜಿನಿಯರ್‌ಗಳಿಗೆ ನಿರ್ದೇಶನ ನೀಡಿದರು.

ಚಿತ್ರಾವಳಿ



ಸಂಸದ ಬಿ.ವೈ. ರಾಘವೇಂದ್ರ, ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಜಿ. ಮರಿಸ್ವಾಮಿ ಅವರು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಹೂಗುಚ್ಛ ನೀಡಿ ಹುಟ್ಟುಹಬ್ಬದ ಶುಭಾಶಯ ಕೋರಿದರು



ಹಸಿರು ರಸಾಯನವಿಜ್ಞಾನ ಕುರಿತು ಪ್ರಯೋಗ ಶೈಕ್ಷಣಿಕ ಸಂಶೋಧನೆ ಸಂಸ್ಥೆಯಡಿ ನಡೆಸಿದ ಸಂಶೋಧನೆಗೆ ಜೆ.ವಿ.ರೇಷ್ಮಾ (ಹೊಸಹಳ್ಳಿ, ಎಚ್.ಡಿ.ಕೋಟೆ), ಜೆ.ಲಕ್ಷ್ಮಿ (ಕಗ್ಗಲಿಪುರ), ಕೀರತ್ ಕೌರ್ (ಬೀದರ್), ಯಾಮಿನಿ (ಹೊಸದೊಡ್ಡಿ ಗ್ರಾಮ) ಅವರನ್ನು ಬೆಂಗಳೂರಿನಲ್ಲಿ ನಡೆದ ರಾಷ್ಟ್ರೀಯ ವಿಜ್ಞಾನ ದಿನಾಚರಣೆಯಲ್ಲಿ ಸನ್ಮಾನಿಸಲಾಯಿತು



ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಕಾರ್ಯಕ್ರಮದಲ್ಲಿ ಐಟಿ ತಂತ್ರಜ್ಞಾನ ಆಧರಿತ ಸಂಶೋಧನಾ ಕಾರ್ಯಕ್ಕಾಗಿ ಕಿರಿಯ ವಿಜ್ಞಾನಿಗಳಿಗೆ ನೀಡುವ ಎಸ್. ಕೆ. ಶಿವಕುಮಾರ್ ಪ್ರಶಸ್ತಿಯನ್ನು ಮಹಾಲಕ್ಷ್ಮಿಪುರದ ಬಿಜಿಎಸ್ ಎಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಕಾಲೇಜಿನ ಕಂಪ್ಯೂಟರ್ ಸೈನ್ಸ್ ವಿಭಾಗದ ವಿದ್ಯಾರ್ಥಿ ಅಭಿಷೇಕ್ ಗೌಡ ಹಾಗೂ ಅವರ ತಂಡ ಸ್ವೀಕರಿಸಿತು. ಸಚಿವರಾದ ಡಾ. ಕೆ. ಸುಧಾಕರ್, ಇಸ್ರೊ ಮಾಜಿ ಅಧ್ಯಕ್ಷ ಎ.ಎಸ್. ಕಿರಣ್ ಕುಮಾರ್ ಹಾಗೂ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡಮಿ ಅಧ್ಯಕ್ಷ ರಾಜಾಸಾಬ್, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಕಾರ್ಯದರ್ಶಿ ಡಾ.ಎನ್. ಮಂಜುಳಾ, ನಿರ್ದೇಶಕ ಸದಾಶಿವ ಪ್ರಭು ಉಪಸ್ಥಿತರಿದ್ದರು



ನೆಲಮಂಗಲದ ಬಸವೇಶ್ವರ ಯುವಕ ಸಮಿತಿ ಹಮ್ಮಿಕೊಂಡಿದ್ದ ರೇಣುಕಾಚಾರ್ಯರ ಜಯಂತಿ ಹಾಗೂ ಪಂಚಾಚಾರ್ಯರ ಯುಗಮಾನೋತ್ಸವ ಕಾರ್ಯಕ್ರಮದ ಅಂಗವಾಗಿ ಉಜ್ಜಯನಿ ಸಿದ್ದಲಿಂಗ ರಾಜದೇಶೀಕೇಂದ್ರ ಶಿವಾಚಾರ್ಯರ ಅಡ್ಡಪಲ್ಲಕ್ಕಿ ಮಹೋತ್ಸವ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಮಹಂತಿ ಮಠದವರೆಗೆ ನಡೆಯಿತು

₹91 ಲಕ್ಷ ಕಳ್ಳತನ ಕ್ಯಾಷಿಯರ್ ಸೆರೆ

ಪ್ರಜಾವಾಣಿ ವಾರ್ತೆ



ಧನಂಜಯ್



ಪ್ರವೀಣ್

ಬೆಂಗಳೂರು: ಕೆಲಸ ಮಾಡುತ್ತಿದ್ದ ಕಂಪನಿಯಲ್ಲಿ ಸ್ನೇಹಿತರ ಜತೆ ಸೇರಿಕೊಂಡು ₹91.76 ಲಕ್ಷ ನಗದು ಕಳವು ಮಾಡಿದ್ದ ನಾಲ್ವರ ಪೈಕಿ ಇಬ್ಬರು ಆರೋಪಿಗಳನ್ನು ಸದಾಶಿವನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕಂಪನಿಯ ಕ್ಯಾಷಿಯರ್ ಧನಂಜಯ್ (23) ಹಾಗೂ ಆತನ ಸ್ನೇಹಿತ ಪ್ರವೀಣ್ ನಾಯ್ಕ್ ಬಂಧಿತರು. ಇನ್ನೂ ಇಬ್ಬರು ಆರೋಪಿಗಳು ಪರಾರಿ ಆಗಿದ್ದಾರೆ. ಆರೋಪಿಗಳಿಂದ ₹ 81.66 ಲಕ್ಷ ನಗದು ಹಾಗೂ ಕೃತ್ಯಕ್ಕೆ ಬಳಸಿದ್ದ ಕಾರು ವಶಪಡಿಸಿಕೊಳ್ಳಲಾಗಿದೆ ಎಂದು ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್ ತಿಳಿಸಿದ್ದಾರೆ.

ನಗರದ ಬಿಇಎಲ್ ರಸ್ತೆಯಲ್ಲಿರುವ ಬಿಲ್ಡರ್ಸ್ ಆ್ಯಂಡ್ ಮೈನಿಂಗ್ ಬಿಸಿನೆಸ್ ಕಂಪನಿಯ ಮುಖ್ಯ ದ್ವಾರದ ಬೀಗ ಮುರಿದು ಫೆಬ್ರುವರಿ 19ರಂದು ಹಣ ದೋಚಿಕೊಂಡು ಆರೋಪಿಗಳು ಪರಾರಿಯಾಗಿದ್ದರು. ಮರುದಿನ ಬೆಳಿಗ್ಗೆ ಕಚೇರಿ ಗಾಜು ಒಡೆದಿರುವುದನ್ನು ಗಮನಿಸಿದ ಪಕ್ಕದ ಅಂಗಡಿಯ ಸಿಬ್ಬಂದಿ, ಕಂಪನಿ ಸಿಬ್ಬಂದಿಗೆ ಮಾಹಿತಿ ನೀಡಿದರು. ಬಂದು ನೋಡಿದಾಗ ಕಚೇರಿಯಲ್ಲಿನ ಹಣ ಕಳ್ಳತನವಾಗಿರುವುದು ತಿಳಿದಿದೆ.

ಪ್ರಕರಣ ದಾಖಲಿಸಿಕೊಂಡು ವಿವಿಧ ಆಯಾಮಗಳಲ್ಲಿ ತನಿಖೆ ನಡೆಸಿದ ಪೊಲೀಸರು, ಇಬ್ಬರು ಆರೋಪಿಗಳನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದರು. ಕ್ಯಾಷಿಯರ್ ಆಗಿ ಕೆಲಸ ಮಾಡಿಕೊಂಡಿದ್ದ ಧನಂಜಯ್‌ಗೆ ಹಣದ ಬಗ್ಗೆ ಮಾಹಿತಿ ಇತ್ತು. ಹೆಚ್ಚಿನ ಹಣ ಗಳಿಸುವ ಉದ್ದೇಶದಿಂದ ಸ್ನೇಹಿತರ ಜತೆ ಸೇರಿ ಕಚೇರಿಯಲ್ಲಿದ್ದ ₹1.76 ಕೋಟಿ ನಗದು ಪೈಕಿ ₹91.76 ಲಕ್ಷ ಕಳ್ಳತನ ಮಾಡಲಾಗಿದೆ. ಈ ಪ್ರಕರಣದಲ್ಲಿ ಭಾಗಿಯಾಗಿ ತಲೆಮರೆಸಿಕೊಂಡಿರುವ ಆರೋಪಿಯ ತಂದೆಯ ಬಳಿ ಇದ್ದ ನಗದನ್ನು ಆರೋಪಿ ನೀಡಿದ ಮಾಹಿತಿ ಆಧರಿಸಿ ವಶಪಡಿಸಿಕೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು.

₹5.24 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ

ಇಬ್ಬರು ಮಹಿಳೆಯರು ಸೇರಿ 16 ಪೆಡ್ಲರ್‌ಗಳ ಬಂಧಿಸಿದ ಸಿಸಿಬಿ ಮಾದಕ ದ್ರವ್ಯ ನಿಗ್ರಹ ದಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವಿಧ ಪೊಲೀಸ್ ಠಾಣೆ ವ್ಯಾಪ್ತಿಗಳಲ್ಲಿ ಮಾದಕ ವಸ್ತುಗಳನ್ನು ಮಾರಾಟ ಮಾಡುತ್ತಿದ್ದ ಜಾಲವನ್ನು ಭೇದಿಸಿರುವ ಸಿಸಿಬಿಯ ಮಾದಕ ದ್ರವ್ಯ ನಿಗ್ರಹ ದಳ ಹಾಗೂ ನಗರ ಪೊಲೀಸರು, ಇಬ್ಬರು ಮಹಿಳೆಯರು ಸೇರಿ ಒಟ್ಟು 16 ಆರೋಪಿಗಳನ್ನು ಬಂಧಿಸಿದ್ದಾರೆ.

ಮಾರತ್‌ಹಳ್ಳಿ, ವಿದ್ಯಾರಣ್ಯಪುರ, ಮಹದೇವಪುರ, ಗೋವಿಂದಪುರ, ಚಾಮರಾಜಪೇಟೆ, ಎಸ್‌.ಆರ್‌.ನಗರ ಮತ್ತು ನಂದಿನಿ ಲೇಔಟ್ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಖಚಿತ ಮಾಹಿತಿ ಆಧರಿಸಿ, ಬಾತ್ಮೀದಾರರು ತಿಳಿಸಿದ ಸ್ಥಳಗಳ ಮೇಲೆ ದಾಳಿ ನಡೆಸಿ ಆರೋಪಿಗಳನ್ನು ಬಂಧಿಸಲಾಗಿದೆ.

ಆರೋಪಿಗಳಿಂದ 3,000 ಎಂಡಿಎಂಎ ಎಕ್ಸ್‌ಟೆಸಿ ಪಿಲ್ಸ್, 230 ಗ್ರಾಂ ಎಂಡಿಎಂಎ ಕ್ರಿಸ್ಟೆಲ್, 48 ಕೆ.ಜಿ 750 ಗ್ರಾಂ ಗಾಂಜಾ, 306 ಗ್ರಾಂ ಹೈಡ್ರೊ ಗಾಂಜಾ ವಶಪಡಿಸಿಕೊಳ್ಳಲಾಗಿದೆ. ಇವುಗಳ ಮಾರುಕಟ್ಟೆ ಮೌಲ್ಯ ₹5.24 ಕೋಟಿ ಎಂದು ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಡ್ರಗ್ಸ್ ಪೂರೈಕೆ ಮಾಡುತ್ತಿದ್ದ ವಿದೇಶಿ ಮತ್ತು ಹೊರ ರಾಜ್ಯದ ವ್ಯಕ್ತಿಗಳ ಪತ್ತೆ ಕಾರ್ಯ ಮುಂದುವರಿದಿದ್ದು, ತನಿಖೆ ಪ್ರಗತಿಯಲ್ಲಿದೆ ಎಂದರು.

ಮಾರತ್‌ಹಳ್ಳಿ ಠಾಣಾ ವ್ಯಾಪ್ತಿಯಲ್ಲಿ ₹15 ಲಕ್ಷ ಮೌಲ್ಯದ 13 ಕೆ.ಜಿ ಗಾಂಜಾ, ವಿದ್ಯಾರಣ್ಯಪುರದಲ್ಲಿ ₹12 ಲಕ್ಷ ಮೌಲ್ಯದ 12.8 ಕೆ.ಜಿ. ಗಾಂಜಾ, ಮಹದೇವಪುರದಲ್ಲಿ ₹31 ಲಕ್ಷ ಮೌಲ್ಯದ 306 ಗ್ರಾಂ ಹೈಡ್ರೊ ಗಾಂಜಾ, 10.9 ಕೆ.ಜಿ ಗಾಂಜಾ, ಗೋವಿಂದಪುರದಲ್ಲಿ ಅಂದಾಜು 6 ಕೆ.ಜಿ ಗಾಂಜಾ, ಚಾಮರಾಜಪೇಟೆಯಲ್ಲಿ 100 ಗ್ರಾಂ ಎಂಡಿಎಂಎ ಕ್ರಿಸ್ಟಲ್, ಎಸ್‌ಆರ್ ನಗರದಲ್ಲಿ 4.5 ಕೆ.ಜಿ. ಗಾಂಜಾ, ನಂದಿನಿ ಬಡಾವಣೆಯಲ್ಲಿ 950 ಗ್ರಾಂ ಗಾಂಜಾ ಜಪ್ತಿ ಮಾಡಲಾಗಿದೆ ಎಂದು ವಿವರಿಸಿದರು.

ಆರೋಪಿಗಳನ್ನು ವಿಚಾರಣೆಗೆ ಒಳಪಡಿಸಿದಾಗ, ಹೆಚ್ಚಿನ ಹಣ ಗಳಿಸುವ ಉದ್ದೇಶದಿಂದ ವಿದೇಶ, ಹೊರ ರಾಜ್ಯ ಹಾಗೂ ಸ್ಥಳೀಯ ಅಪರಿಚಿತ ವ್ಯಕ್ತಿಗಳಿಂದ ಎಂಡಿಎಂಎ ಎಕ್ಸ್‌ಟೆಸಿ ಪಿಲ್ಸ್, ಎಂಡಿಎಂಎ ಕ್ರಿಸ್ಟೆಲ್, ಗಾಂಜಾ ಮತ್ತು ಹೈಡ್ರೊ ಗಾಂಜಾವನ್ನು ಕಡಿಮೆ ಬೆಲೆಗೆ ಖರೀದಿಸಿ, ಸಾರ್ವಜನಿಕರು, ಕಾಲೇಜು ವಿದ್ಯಾರ್ಥಿಗಳಿಗೆ ಮಾರಾಟ ಮಾಡುತ್ತಿರುವುದಾಗಿ ತಪ್ಪೊಪ್ಪಿಕೊಂಡಿದ್ದಾರೆ ಎಂದು ಹೇಳಿದರು.

ನಾಲ್ವರು ಗಡಿಪಾರು

ಸಿಸಿಬಿ ಮಾದಕ ದ್ರವ್ಯ ನಿಗ್ರಹ ದಳದ ಅಧಿಕಾರಿ ಮತ್ತು ಸಿಬ್ಬಂದಿ ಬಾಗಲೂರು, ವೈಟ್‌ಫೀಲ್ಡ್, ಪರಪ್ಪನ ಅಗ್ರಹಾರ ಹಾಗೂ ಮಾದನಾಯಕನಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ವೀಸಾ ಅವಧಿ ಮುಗಿದಿದ್ದರೂ ವಾಸವಾಗಿದ್ದುಕೊಂಡು ಡ್ರಗ್ ಪೆಡ್ಲಿಂಗ್‌ನಲ್ಲಿ ತೊಡಗಿದ್ದವರ ವಿರುದ್ಧ ಕಾರ್ಯಾಚರಣೆ ನಡೆಸಿದ್ದಾರೆ.

9 ವಿದೇಶಿ ಪ್ರಜೆಗಳನ್ನು ವಶಕ್ಕೆ ಪಡೆದು, ವಿದೇಶಿಯರ ಪ್ರಾದೇಶಿಕ ನೋಂದಣಿ ಪ್ರಾಧಿಕಾರದ (ಎಫ್‌ಆರ್‌ಆರ್‌ಒ) ಆದೇಶದಂತೆ ವಿದೇಶಿಯರ ಬಂಧನ ಕೇಂದ್ರಕ್ಕೆ ಬಿಡಲಾಗಿದೆ. ಈ ಪೈಕಿ ನೈಜೀರಿಯಾದ ಕೊಫಿ ವಿಕ್ಟರ್, ಫಾತಿಮಾ ಅನ್ವಿತಾ, ಟಿಮೋತಿ, ಕಿಲ್ವಾನ್ ಅವರನ್ನು ಆ ದೇಶಕ್ಕೆ ಗಡಿಪಾರು ಮಾಡಲಾಗುವುದು ಎಂದು ಮಾಹಿತಿ ನೀಡಿದರು.



ಸಿಸಿಬಿ ಪೊಲೀಸರು ವಶಪಡಿಸಿಕೊಂಡಿರುವ ಮಾದಕ ವಸ್ತುಗಳನ್ನು ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್ ವೀಕ್ಷಿಸಿದರು

ಪೊಲೀಸ್ ಓಟ: ಸಂಚಾರ ಮಾರ್ಪಾಡು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಮಾರ್ಚ್ 1ರಂದು ಆಯೋಜಿಸಿರುವ ಮೂರನೇ ಆವೃತ್ತಿಯ ‘ಪೊಲೀಸ್ ಓಟ’ದಲ್ಲಿ-(ಕೆಎಸ್‌ಪಿ ರನ್) ಭಾಗವಹಿಸಲು 12 ಸಾವಿರ ಮಂದಿ ಹೆಸರು ನೋಂದಣಿ ಮಾಡಿಕೊಂಡಿದ್ದಾರೆ. ಓಟದ ಅಂಗವಾಗಿ ಸಂಚಾರ ವ್ಯವಸ್ಥೆಯಲ್ಲಿ ಬದಲಾವಣೆ ಮಾಡಲಾಗಿದೆ. ಅಂದು ಬೆಳಿಗ್ಗೆ 6.30ಕ್ಕೆ ವಿಧಾನಸೌಧದ ಮೆಟ್ಟಿಲುಗಳ ಮುಂಭಾಗ ಗೃಹ ಸಚಿವ ಜಿ. ಪರಮೇಶ್ವರ ಓಟಕ್ಕೆ ಚಾಲನೆ ನೀಡುವರು.

ಕೆ.ಆರ್.ವೃತ್ತ, ನೃಪತುಂಗ ರಸ್ತೆ, ಕಸ್ತೂರಬಾ ರಸ್ತೆ, ಸಿದ್ದಲಿಂಗಯ್ಯ ವೃತ್ತ, ಕಬ್ಬನ್ ಪಾರ್ಕ್ ಒಳಭಾಗ, ಕ್ವೀನ್ಸ್ ಪ್ರತಿಮೆ ವೃತ್ತ, ಸಿಟಿಒ ಜಂಕ್ಷನ್, ಕಬ್ಬನ್ ರಸ್ತೆ, ಬಿ.ಆರ್.ವಿ. ಜಂಕ್ಷನ್ ಮಾರ್ಗವಾಗಿ ಸಾಗಿ ಮಣಿಪಾಲ್ ಸೆಂಟರ್ ಹತ್ತಿರ ಯೂಟರ್ನ್ ಪಡೆದು ಸಿಟಿಒ ಜಂಕ್ಷನ್‌ಗೆ ಬಂದು ಪೊಲೀಸ್ ತಿಮ್ಮಯ್ಯ ವೃತ್ತದ ಮೂಲಕ ವಿಧಾನಸೌಧ ತಲುಪಲಿದೆ.

ಓಟದಲ್ಲಿ ಭಾಗವಹಿಸುವವರು ಗೇಟ್ ನಂ.2ರ ಮೂಲಕ ಪ್ರವೇಶಿಸಬೇಕು. ಬೆಳಿಗ್ಗೆ 6 ರಿಂದ 11.30ರವರೆಗೆ ವಾಹನ ಸಂಚಾರ ನಿರ್ಬಂಧಿಸಲಾಗಿದೆ.

ವಿಧಾನಸೌಧದ ಕಡೆಗೆ ಸಂಚರಿಸುವ ವಾಹನಗಳು ಕೆ.ಆರ್.ಸರ್ಕಲ್‌ನಲ್ಲಿ ಮಾರ್ಗ ಬದಲಾಯಿಸಿ ಪೊಲೀಸ್ ಕಾರ್ನರ್ ಕಡೆಗೆ ಹೋಗಲು ಅವಕಾಶ ಕಲ್ಪಿಸಲಾಗಿದೆ. ಬಾಳೇಕುಂದ್ರಿ ವೃತ್ತದಿಂದ ಕೆ.ಆರ್.ಸರ್ಕಲ್ ಕಡೆಗೆ ಹೋಗುವ ವಾಹನಗಳು ಕನ್ನಿಂಗ್ ಹ್ಯಾಮ್ ರಸ್ತೆ ಕಡೆಗೆ ಸಂಚರಿಸಿ ಚಂದ್ರಿಕಾ ಜಂಕ್ಷನ್ ಮೂಲಕ ಸಂಚರಿಸಬೇಕು. ಹಡ್ಸನ್ ಜಂಕ್ಷನ್‌ನಿಂದ ಹಳೆ ಮದ್ರಾಸ್ ರಸ್ತೆ ಮತ್ತು ಹಳೆ ವಿಮಾನ ನಿಲ್ದಾಣ ರಸ್ತೆಯ ಕಡೆಗೆ ಹೋಗುವ ವಾಹನಗಳನ್ನು ದೇವಾಂಗ ರಸ್ತೆ, ಶಾಂತಿನಗರ ಮತ್ತು ರಿಚ್ಮಂಡ್ ವೃತ್ತಕ್ಕೆ ಕಳುಹಿಸಲಾಗುವುದು.

ಮಣಿಪಾಲ್ ವೃತ್ತದಿಂದ ಸಿಟಿಒ ಕಡೆಗೆ ವಾಹನ ಸಂಚಾರ ನಿರ್ಬಂಧಿಸಿ, ಸಿಟಿಒದಿಂದ ಮಣಿಪಾಲ್ ಕಡೆಗೆ ಸಂಚರಿಸುವ ಮಾರ್ಗದಲ್ಲಿ ದ್ವಿಮುಖ ಸಂಚಾರಕ್ಕೆ ಅವಕಾಶ ಕಲ್ಪಿಸಲಾಗಿದೆ. ಹೆಡ್ ಕ್ವಾರ್ಟರ್ ಜಂಕ್ಷನ್‌ನಿಂದ ಬರುವ ವಾಹನಗಳು ಇನ್‌ಫೆಂಟ್ರಿ ರಸ್ತೆ ಮೂಲಕ ಸಾಗಿ ಡಿಕನ್‌ಸನ್ ಜಂಕ್ಷನ್‌ನಲ್ಲಿ ಬಲ ತಿರುವು ಪಡೆದು ಕಾಮರಾಜ ರಸ್ತೆ ಮೂಲಕ ಕಬ್ಬನ್ ರಸ್ತೆ ಪ್ರವೇಶಿಸಬಹುದಾಗಿದೆ.

‘ನಮ್ಮ ಪೊಲೀಸ್ ನಮ್ಮ ಹೆಮ್ಮೆ’ ಎಂಬ ಘೋಷವಾಕ್ಯದಡಿ ಈ ಸ್ಪರ್ಧೆ ಹಮ್ಮಿಕೊಳ್ಳಲಾಗಿದೆ. ‘ಹಸಿರು ಬೆಂಗಳೂರು’, ‘ಡ್ರಗ್ಸ್ ಮುಕ್ತ ಕರ್ನಾಟಕ’, ‘ಸೈಬರ್ ಅಪರಾಧ’ ಕುರಿತು ಜಾಗೃತಿ ಮೂಡಿಸಲಾಗುತ್ತದೆ. 10 ಕಿ.ಮೀ. ಓಟದ ಸ್ಪರ್ಧೆ ಅನುಭವಿ ಓಟಗಾರರಿಗೆ ಹಾಗೂ 5 ಕಿ.ಮೀ. ಸ್ಪರ್ಧೆಯಲ್ಲಿ ಎಲ್ಲರೂ ಭಾಗವಹಿಸಬಹುದು. ಎರಡು ವಿಭಾಗಗಳಿಂದ ವಿಜೇತರಿಗೆ ₹18 ಲಕ್ಷ ನಗದು ಬಹುಮಾನ ನೀಡಲಾಗುವುದು ಎಂದು ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್ ತಿಳಿಸಿದ್ದಾರೆ.

‘ಮಾತುಕತೆ ತೃಪ್ತಿ ಇಲ್ಲ’

ಟೆಲ್ ಅವೀವ್ (ಎಪಿ): ‘ಇರಾನ್ ಜತೆಗಿನ ಮಾತುಕತೆಯಲ್ಲಿ ನನಗೆ ತೃಪ್ತಿ ಇಲ್ಲ’ ಎಂದಿರುವ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ‘ಮುಂದೆ ಏನಾಗುತ್ತದೆಯೋ ನೋಡೋಣ’ ಎಂದಿದ್ದಾರೆ.

ಇರಾನ್‌ನ ಅಣ್ವಸ್ತ್ರ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಅಮೆರಿಕದ ಅಧಿಕಾರಿಗಳು ಮತ್ತೊಂದು ಸುತ್ತಿನ ಮಾತುಕತೆಗೆ ಸಿದ್ಧವಾಗಿರುವ ಹೊತ್ತಿನಲ್ಲೇ ಟ್ರಂಪ್ ಈ ಹೇಳಿಕೆ ನೀಡಿದ್ದಾರೆ.

ನಾಳೆ ಮೆಟ್ರೊ ಸಂಚಾರ 5ಕ್ಕೆ ಶುರು

ಬೆಂಗಳೂರು: ನಗರದಲ್ಲಿ ಮಾರ್ಚ್ 1ರಂದು ನಡೆಯಲಿರುವ ರಾಜ್ಯಮಟ್ಟದ ಪೊಲೀಸ್ ರನ್ ಕಾರ್ಯಕ್ರಮದಲ್ಲಿ ಭಾಗವಹಿಸುವವರಿಗೆ ಅನುಕೂಲ ಮಾಡಿಕೊಡಲು ಮೆಟ್ರೊ ರೈಲು ಸಂಚಾರವನ್ನು ಬೆಳಿಗ್ಗೆ 5 ಗಂಟೆಗೆ ಆರಂಭಿಸಲು ಬಿಎಂಆರ್‌ಸಿಎಲ್ ನಿರ್ಧರಿಸಿದೆ.

ನೇರಳೆ ಮಾರ್ಗದ ವೈಟ್‌ಫೀಲ್ಡ್ ಮತ್ತು ಚಲ್ಲಘಟ್ಟ, ಹಸಿರು ಮಾರ್ಗದ ಮಾದಾವರ ಮತ್ತು ರೇಷ್ಮೆ ಸಂಸ್ಥೆ, ಹಳದಿ ಮಾರ್ಗದ ಬೊಮ್ಮಸಂದ್ರ ಮತ್ತು ಆರ್.ವಿ. ರಸ್ತೆ ಟರ್ಮಿನಲ್‌ಗಳಿಂದ ಸಾಮಾನ್ಯವಾಗಿ ಪ್ರತಿ ಭಾನುವಾರ ಬೆಳಿಗ್ಗೆ 7ಕ್ಕೆ ಮೆಟ್ರೊ ಸಂಚಾರ ಶುರುವಾಗುತ್ತಿತ್ತು. ಈ ಭಾನುವಾರ ಮಾತ್ರ ಎರಡು ತಾಸು ಮುಂಚಿತವಾಗಿ ಸಂಚಾರ ಆರಂಭಗೊಳ್ಳಲಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಕಂಟ್ರಿಮೇಡ್ ಪಿಸ್ತೂಲ್ ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಕ್ರಮ ಶಸ್ತ್ರಾಸ್ತ್ರ ಸರಬರಾಜು ಜಾಲ ಪತ್ತೆ ಹಚ್ಚಿರುವ ಸಿಸಿಬಿ ಪೊಲೀಸರು, ಹೊರ ರಾಜ್ಯದ ವ್ಯಕ್ತಿ ಸೇರಿ ಇಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ.


ಬೆಂಗಳೂರಿನ ಸೈಯದ್ ಮಸೂದ್ (26), ಭೋಪಾಲ್‌ನ ಜಾವೇದ್ ಆಲಂ (19) ಅವರನ್ನು ಬಂಧಿಸಿ, ಒಂದು ಕಂಟ್ರಿಮೇಡ್ ಪಿಸ್ತೂಲ್, 50 ಜೀವಂತ ಗುಂಡುಗಳನ್ನು ವಶಪಡಿಸಿಕೊಳ್ಳಲಾಗಿದೆ.

ಹೊರ ರಾಜ್ಯದಿಂದ ಅಕ್ರಮವಾಗಿ ಶಸ್ತ್ರಾಸ್ತ್ರಗಳನ್ನು ನಗರದ ವ್ಯಕ್ತಿಯೊಬ್ಬರು ತರಿಸಿಕೊಳ್ಳುತ್ತಿದ್ದಾರೆ ಎಂಬ ಮಾಹಿತಿ ಆಧರಿಸಿ, ಕಾರ್ಯಾಚರಣೆ ನಡೆಸಿ ಇಬ್ಬರನ್ನು ಬಂಧಿಸಲಾಗಿದೆ. ಯಾವುದೇ ಪರವಾನಗಿ ಇಲ್ಲದೆ ಶಸ್ತ್ರಾಸ್ತ್ರ ತರಿಸಿಕೊಳ್ಳಲಾಗಿತ್ತು ಎಂಬುದು ತನಿಖೆಯಿಂದ ತಿಳಿದು ಬಂದಿದೆ.

‘ಕುರಿ ವ್ಯಾಪಾರ ಮಾಡಿಕೊಂಡಿರುವ ಸೈಯದ್ ಮಸೂದ್ ಸ್ವಯಂ ರಕ್ಷಣೆಗಾಗಿ ಪಿಸ್ತೂಲ್ ತರಿಸಿಕೊಂಡಿದ್ದಾಗಿ ವಿಚಾರಣೆ ವೇಳೆ ತಿಳಿಸಿದ್ದಾನೆ. ಆದರೆ, ಆತ ನೀಡಿರುವ ಉತ್ತರ ಸಮಾಧಾನವಾಗಿಲ್ಲ. ಯಾವ ಕಾರಣಕ್ಕೆ ತರಿಸಿಕೊಂಡಿದ್ದಾನೆ ಎಂಬುದರ ಬಗ್ಗೆ ತನಿಖೆ ನಡೆಯುತ್ತಿದೆ. ಇಬ್ಬರ ವಿರುದ್ಧ ಈ ಹಿಂದೆ ಯಾವುದೇ ಪ್ರಕರಣ ದಾಖಲಾಗಿಲ್ಲ. ಜಾವೇದ್‌ಗೆ ಪಿಸ್ತೂಲ್ ನೀಡಿದವರು ಯಾರು ಎಂಬ ಬಗ್ಗೆ ಮಾಹಿತಿ ಕಲೆ ಹಾಕಲಾಗುತ್ತಿದೆ’ ಎಂದು ಪೊಲೀಸರು ತಿಳಿಸಿದರು.

ನಿಧನ ವಾರ್ತೆ

ಕೆ.ಆರ್. ಕೃಷ್ಣಮೂರ್ತಿ



ಬೆಂಗಳೂರು: ಡಾ. ಬಿ.ಆರ್. ಅಂಬೇಡ್ಕರ್ ತಾಂತ್ರಿಕ ಮಹಾ ವಿದ್ಯಾಲಯದಲ್ಲಿ ಸಹಾಯಕ ಆಡಳಿತ ಅಧಿಕಾರಿಯಾಗಿ ಕಾರ್ಯನಿರ್ವಹಿಸಿ ನಿವೃತ್ತರಾಗಿದ್ದ ಬಸವೇಶ್ವರನಗರ ನಿವಾಸಿ ಕೆ.ಆರ್. ಕೃಷ್ಣಮೂರ್ತಿ (73) ಗುರುವಾರ ಹೃದಯಾಘಾತದಿಂದ ನಿಧನರಾದರು.

ಅವರು ಕಾಶ್ಮೀರ ಪ್ರವಾಸಕ್ಕೆ ಹೋಗಿದ್ದ ಸಂದರ್ಭದಲ್ಲಿ ಹೃದಯಾಘಾತ ಆಗಿತ್ತು. ಮೃತರಿಗೆ ಪತ್ನಿ, ಮೂವರು ಪುತ್ರರು, ಪುತ್ರಿ ಇದ್ದಾರೆ. ಮಾಗಡಿ ತಾಲ್ಲೂಕಿನ ಕಲ್ಯಾ ಗ್ರಾಮದಲ್ಲಿ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬ ಮೂಲಗಳು ತಿಳಿಸಿವೆ.

‘ಅತ್ತೆ–ಸೊಸೆ ಸಂಬಂಧ ಹಾವು–ಮುಂಗುಸಿಯಂತೆ’ ಎಂಬ ರೂಢಿಗತ ಭಾವನೆಯನ್ನೇ ನಮ್ಮ ಚಲನಚಿತ್ರಗಳು ಹಾಗೂ ಕಿರುತೆರೆ ಧಾರಾವಾಹಿಗಳು ಸಹ ಚಿತ್ರಿಸುತ್ತಾ ಬಂದಿವೆ. ಆದರೆ, ಇದೀಗ ಕನ್ನಡದ ಕೆಲವು ಪ್ರಮುಖ ಧಾರಾವಾಹಿಗಳು ಅಂಥದ್ದೊಂದು ಭಾವನೆಯನ್ನು ಬುಡಮೇಲು ಮಾಡಲು ಹೊರಟಿವೆ. ಅತ್ತೆ–ಸೊಸೆ ನಡುವೆ ಅನನ್ಯ ಬಾಂಧವ್ಯ, ಅನ್ಯೋನ್ಯತೆ, ಅನುಪಮ ಸಂಬಂಧ ಸೃಷ್ಟಿಸಿ ವೀಕ್ಷಕರಲ್ಲಿ ಸಂಚಲನ ಮೂಡಿಸುತ್ತಿವೆ. ಸಂಬಂಧಗಳಿಗೆ ಸೌಹಾರ್ದದ ಭಾಷ್ಯ ಬರೆಯುತ್ತಿರುವ ಈ ಹೊಸ ಟ್ರೆಂಡ್ ಕುರಿತು, ಮನೆಮಾತಾಗಿರುವ ಕೆಲವು ಧಾರಾವಾಹಿಗಳ ಅತ್ತೆ–ಸೊಸೆ ಪಾತ್ರಧಾರಿಗಳನ್ನು ಮಾತನಾಡಿಸಿದ್ದಾರೆ **ಮಂಜುಶ್ರೀ ಎಂ. ಕಡಕೋಳ, ರಾಘವೇಂದ್ರ ಕೆ. ತೊಗರ್ಸಿ**



ಅತ್ತೆ–ಸೊಸೆ ಕುಚಿಕು ಕುಚಿಕು!



ಲಕ್ಷ್ಮಿ ನಿವಾಸ

ತೋರಿಕೆ ಅಗತ್ಯವಿಲ್ಲ

ಅತ್ತೆ–ಸೊಸೆ ನಡುವಿನ ಸಣ್ಣಪುಟ್ಟ ಅಸಮಾಧಾನಗಳನ್ನು ಮನೆಯವರು ತಳ್ಳಿಹಾಕುವುದೋ ನಿರ್ಲಕ್ಷ್ಯ ಮಾಡುವುದೋ ಹೆಚ್ಚು. ಇಂತಹ ಅಸಮಾಧಾನಗಳೇ ಬೆಳೆದು ಮುಂದೆ ಮನೆ ಮುರಿಯುವಷ್ಟು ದೊಡ್ಡವಾಗಬಹುದೇನೊ. ಆದರೆ, ನಮ್ಮ ಧಾರಾವಾಹಿಯಲ್ಲಿನ ಅತ್ತೆ ಹಾಗಲ್ಲ. ಸೊಸೆಗೆ ಮಾರ್ಗದರ್ಶನ ಮಾಡಿ ಕಲಿಸುತ್ತಾರೆ. ವಿಶೇಷವೆಂದರೆ, ಈ ಧಾರಾವಾಹಿಯಲ್ಲಿ ಅತ್ತೆ, ಮಾವ ಒಳ್ಳೆಯವರು, ಗಂಡನೇ ಕೆಟ್ಟವನು. ಹೆತ್ತವರನ್ನು ಸರಿಯಾಗಿ ನೋಡಿಕೊಳ್ಳದೆ ಮನೆಯಿಂದ ಹೊರಹಾಕುವವನು. ಅವನನ್ನು ವಿರೋಧಿಸುವ ನಾನು ಒಂದು ಹಂತದಲ್ಲಿ ಮನೆಯನ್ನೇ ಬಿಟ್ಟುಹೋಗಿ ಅತ್ತೆ–ಮಾವನ ಜತೆಗೆ ಇರುತ್ತೇನೆ.

ನಿಜಜೀವನದಲ್ಲೂ ಇಂಥ ಒಳ್ಳೆಯ ಅತ್ತೆಯಂದಿರು ಇರುತ್ತಾರೆ. ಅದರಲ್ಲಿ ಅನುಮಾನವಿಲ್ಲ. ಇದಕ್ಕೆ ನನ್ನ ಸ್ವಂತ ಅತ್ತೆಯೇ ಉದಾಹರಣೆ. ಅಭಿಪ್ರಾಯ ಭೇದ ಎಲ್ಲ ಕುಟುಂಬಗಳಲ್ಲೂ ಇರುತ್ತದೆ. ‘ಓ ನಮ್ಮತ್ತೆ... ನಮ್ಮಮ್ಮನೇ’ ಅಂತ ಹೇಳುತ್ತಾ ಹಗ್ ಮಾಡಿಕೊಂಡು ಇನ್‌ಸ್ಟಾಗ್ರಾಂನಲ್ಲಿ ಹಾಕುವ ರೀತಿಯ ತೋರಿಕೆಯ ಅತ್ತೆ ನನ್ನವರಲ್ಲ. ನಮ್ಮಿಬ್ಬರಲ್ಲಿ ಪರಸ್ಪರ ಅರ್ಥೈಸಿಕೊಳ್ಳುವ ಗುಣ ಇದೆ. ಸಹಜವಾಗಿಯೇ ನನಗಿಂತ ಹಿರಿಯರಾದ ನಮ್ಮತ್ತೆ ಕಂಡಷ್ಟು ಬದುಕನ್ನು ನಾನು ಕಂಡಿಲ್ಲ. ಅವರಿಗೆ ಮಾಡಲು ಬರುವಷ್ಟು ಅಡುಗೆ, ಅವರಿಗೆ ಗೊತ್ತಿರುವಷ್ಟು ವಿಚಾರಗಳು ನನಗೆ ಗೊತ್ತಿಲ್ಲ. ಅತ್ತೆಗಿಂತ ನನಗೇ ಚೆನ್ನಾಗಿ ಗೊತ್ತಿದೆ ಅನ್ನುವಂಥ ಸ್ಪರ್ಧಾತ್ಮಕ ಮನೋಭಾವ ನನ್ನದಲ್ಲ. ಅವರಿಗೂ ಅಂಥ ಭಾವನೆ ಇಲ್ಲ.

ಲಕ್ಷ್ಮಿ ಹೆಗಡೆ, ಸೊಸೆ ‘ವೀಣಾ’ ಪಾತ್ರಧಾರಿ

ನಾನು ಪಾಸಿಟಿವ್ ಅತ್ತೆ!

ಅತ್ತೆ–ಸೊಸೆ ಓಬಿರಾಯನ ಕಾಲದಲ್ಲಿ ಪರಸ್ಪರ ಡಾಮಿನೇಟ್ ಆಗಿರಬಹುದು. ಆದರೆ, ಈಗ ಕಾಲ ಬದಲಾಗಿದೆ. ಅತ್ತೆಯರು ಈ ಹಿಂದೆ ಸೀರೆ ಉಡುತ್ತಿದ್ದರು. ಆದರೆ, ಕೆಲವರು ಈಗ ಚೂಡಿದಾರ್, ಸ್ಕರ್ಟ್‌ಗೆ ಬಂದಿದ್ದಾರೆ. ಊಟ, ಉಡುಗೆಯಲ್ಲಿ ಆಧುನಿಕತೆ ರೂಢಿಸಿಕೊಂಡಂತೆ ಯೋಚನಾ ಧಾಟಿಯೂ ಆಧುನಿಕವಾಗಿ ಇರಬೇಕಲ್ಲವೇ?

ಧಾರಾವಾಹಿಯಲ್ಲಿ ಅತ್ತೆಯಾಗಿ ನಾನು ಸೊಸೆಯರ ಮೇಲೆ ಅಧಿಕಾರ ಚಲಾಯಿಸುವುದಿಲ್ಲ, ಅಹಂ ಮೆರೆಯುವುದಿಲ್ಲ. ನನ್ನ ಪಾತ್ರದಂತೆ ನಿಜಜೀವನದಲ್ಲೂ ಎಲ್ಲ ಅತ್ತೆಯಂದಿರೂ ಇರಬೇಕು, ನಮ್ಮನ್ನು ನೋಡಿ ಜನ ಸಹ ಒಳ್ಳೆಯದನ್ನು ಅಳವಡಿಸಿಕೊಳ್ಳಬೇಕು ಎಂಬುದು ನನ್ನಾಸೆ. ಸೀರಿಯಲ್ ನೋಡಿ ಹೆಣ್ಣುಮಕ್ಕಳು ಹಾಳಾಗುತ್ತಾರೆ ಎಂದು ಈಚೆಗೆ ಅಧಿಕಾರಿಯೊಬ್ಬರು ಹೇಳಿದ್ದನ್ನು ಕೇಳಿಸಿಕೊಂಡೆ. ಬಹುಶಃ ಅವರು ನಮ್ಮ ಧಾರಾವಾಹಿಯ ಲಕ್ಷ್ಮಿ–ವೀಣಾಳ ಪಾತ್ರ ನೋಡಿದ್ದರೆ ಹಾಗೆ ಹೇಳುತ್ತಿರಲಿಲ್ಲ.

ನಿಜಜೀವನದಲ್ಲಿ ನನಗೆ ಸಿಕ್ಕ ಅತ್ತೆ ಒಳ್ಳೆಯವರು. ನನ್ನ ಮದುವೆಯಾಗಿ 30 ವರ್ಷ ಅವರು ನಮ್ಮೊಂದಿಗಿದ್ದರು. ನಾನು ಸಿನಿಮಾ ಕ್ಷೇತ್ರದಲ್ಲಿದ್ದರೂ ನನ್ನತ್ತೆ ಒಂದು ದಿನವೂ ‘ಎಲ್ಲಿಗೆ ಹೋಗ್ತೀಯಾ, ಶೂಟಿಂಗ್ ಎಲ್ಲಿ, ಯಾವ ಪಾತ್ರ, ಯಾವ ರೀತಿಯ ಬಟ್ಟೆ ಹಾಕ್ತೀಯಾ’ ಅಂತೆಲ್ಲ ಕೇಳಲೇ ಇಲ್ಲ. ನನ್ನ ಮಗ ಚಿಕ್ಕವನಿದ್ದಾಗ ನಾನು ಅವಿವಾಹಿತೆ, ನಾಯಕಿಯ ಪಾತ್ರ ಮಾಡುತ್ತಿದ್ದೆ. ಆಗೆಲ್ಲ ತಾಳಿ, ಕಾಲುಂಗುರ ಬಿಚ್ಚಿಟ್ಟು ಶೂಟಿಂಗ್‌ಗೆ ಹೋಗುತ್ತಿದ್ದೆ. ಆಗಲೂ ಅವರು ‘ಯಾಕೆ ಇದನ್ನೆಲ್ಲ ತೆಗೆದೆ?’ ಅಂತ ಕೇಳಲಿಲ್ಲ. ಹಳ್ಳಿಯ ಹೆಣ್ಣುಮಗಳಾದರೂ ಅವರಲ್ಲಿ ವಿಶಾಲ ಮನೋಭಾವ, ಪ್ರಬುದ್ಧತೆ ಇತ್ತು. ನನ್ನ ವೃತ್ತಿಪರತೆ ಬಗ್ಗೆ ಅರಿವಿತ್ತು. ಅರ್ಥ ಮಾಡಿಕೊಳ್ಳುವ ಗುಣ, ತಾಳ್ಮೆ ಇದ್ದಲ್ಲಿ ಎಲ್ಲ ಅತ್ತೆ–ಸೊಸೆಯಂದಿರೂ ಗೆಳತಿಯರಂತೆ ಇರಬಹುದು.

ಮಾಧುರಿ, ಅತ್ತೆ ‘ಲಕ್ಷ್ಮಿ’ ಪಾತ್ರಧಾರಿ

ಭಾಗ್ಯಲಕ್ಷ್ಮಿ

ಪ್ರಭಾವ ಬೀರಿದ ಸಂಬಂಧ

ನಮ್ಮ ಧಾರಾವಾಹಿಯಲ್ಲಿ ಸೊಸೆ ಭಾಗ್ಯಾಗೆ ಅತ್ತೆ ಎಷ್ಟೇ ಬೈದರೂ ಅವಳಿಗೆ ಸ್ವಾವಲಂಬಿ ಜೀವನ ಕಲ್ಪಿಸುವ ಮಹದಾಸೆ ಅವರಿಗೆ ಇದೆ. ಮಗ ನಿರ್ಲಕ್ಷಿಸಿದ ಸೊಸೆಯ ಬಗ್ಗೆ ಅಪಾರವಾದ ಪ್ರೀತಿ ಇದೆ. ಸೊಸೆಯನ್ನು ಓದಿಸಲೇಬೇಕು ಎಂದು ಹಟ ತೊಟ್ಟು ಅವಳಿಗೆ ಶಿಕ್ಷಣ ಕೊಡಿಸುತ್ತಾರೆ. ಅವಳ ಜೀವನವನ್ನು ಸರಿ ಮಾಡಬೇಕು ಎಂದು ಕೊಳ್ಳುತ್ತಾರೆ. ಅತ್ತೆ ಇಷ್ಟು ಪ್ರೀತಿಯಿಂದ ಸೊಸೆಯ ಪರವಾಗಿ ನಿಲ್ಲುವುದು ತೀರಾ ಅಪರೂಪ. ಮಗನನ್ನು ಬಿಟ್ಟುಬಿಡು, ಬೇರೆ ಮದುವೆ ಆಗು ಎಂಬ ಸಲಹೆಯನ್ನು ಯಾವ ಅತ್ತೆಯೂ ನೀಡುವುದಿಲ್ಲ. ಮಗ ಎಷ್ಟೇ ಕೆಟ್ಟವನಾಗಿದ್ದರೂ ಸೊಸೆ ಅವನ ಜೊತೆ ಹೊಂದಾಣಿಕೆ ಮಾಡಿಕೊಂಡು ಹೋಗಲಿ ಎನ್ನುವ ಸ್ವಾರ್ಥವೇ ಹೆಚ್ಚಿನವರಲ್ಲಿ ತುಂಬಿರುತ್ತದೆ. ಆದರೆ ‘ನನ್ನ ಮಗನ ಜೊತೆ ನಿನ್ನ ಜೀವನ ಸರಿಹೋಗಲಿಲ್ಲ. ಅದಕ್ಕಾಗಿ ನಿನ್ನ ಬದುಕು ಹಾಳಾಗುವುದು ಬೇಡ. ನೀನು ಹೊಸ ಜೀವನ ಕಟ್ಟಿಕೊ’ ಎನ್ನುವ ವಿಶಾಲ ಮನೋಭಾವದ ಅತ್ತೆ ಇಲ್ಲಿದ್ದಾರೆ. ಇಂತಹ ಅತ್ತೆ ಸಮಾಜದಲ್ಲಿ ನಿಜವಾಗಿಯೂ ಇದ್ದಾರೋ ಇಲ್ಲವೋ ಗೊತ್ತಿಲ್ಲ.

ಒಟ್ಟಿನಲ್ಲಿ ಭಾಗ್ಯಾ-ಕುಸುಮಾ ಸಂಬಂಧ ಸಮಾಜದಲ್ಲಿ ತುಂಬಾ ಪ್ರಭಾವ ಬೀರಿದೆ. ಭಾಗ್ಯಾ ಓದಲು ಶುರುಮಾಡಿದ ಮೇಲೆ ಅನೇಕರು ಮದುವೆಯ ನಂತರವೂ ತಮ್ಮ ಶಿಕ್ಷಣವನ್ನು ಮುಂದುವರಿಸಿದ್ದಾರೆ. ವೀಕ್ಷಕರಿಂದ ಸ್ವತಃ ಈ ಮಾತನ್ನು ಕೇಳಿದ್ದೇನೆ. ಮಕ್ಕಳು ತಮ್ಮ ಅಮ್ಮಂದಿರಿಗೆ ಓದಿಸುತ್ತಿದ್ದೇವೆ ಎಂದೂ ಹೇಳಿದ್ದಾರೆ. ನಮ್ಮ ಧಾರಾವಾಹಿ ಮನರಂಜನೆಗೆ ಮಾತ್ರ ಅಲ್ಲದೆ, ಸಕಾರಾತ್ಮಕ ಪ್ರಭಾವವನ್ನೂ ಬೀರುತ್ತಿರುವುದು ನಿಜಕ್ಕೂ ಹೆಗ್ಗಳಿಕೆಯ ಸಂಗತಿ. ಒಳ್ಳೆಯ ಸಂದೇಶ ಕೊಡುವುದೇ ಇಲ್ಲಿನ ಉದ್ದೇಶ.

ಸುಷ್ಮಾ ರಾವ್, ಸೊಸೆ ‘ಭಾಗ್ಯಾ’ ಪಾತ್ರಧಾರಿ

ನ್ಯಾಯದ ಪರ ಈ ಅತ್ತೆ

ಅತ್ತೆ–ಸೊಸೆ ಗೆಳತಿಯರಂತೆಯೂ ಇರಬಹುದು ಎನ್ನುವುದನ್ನು ತೋರಿಸಿರುವುದು ನಮ್ಮ ಧಾರಾವಾಹಿಯ ಹೆಗ್ಗಳಿಕೆ. ಮಕ್ಕಳ ತಾಯಿ ಕೂಡ ಓದು ಮುಂದುವರಿಸಬಹುದು ಎನ್ನುವುದನ್ನು ಎತ್ತಿ ಹಿಡಿದಿರುವುದು ಈ ಕಥೆಯ ದೊಡ್ಡ ಮೈಲುಗಲ್ಲು ಎನ್ನುವುದನ್ನು ಮರೆಯುವಂತಿಲ್ಲ. ಬೇರೆ ಹೆಣ್ಣುಮಗಳನ್ನು ನಮ್ಮ ಮನೆಗೆ ಸೊಸೆಯನ್ನಾಗಿ ಕರೆತಂದಿರುವಾಗ ಆಕೆಯನ್ನೂ ನಮ್ಮ ಮಕ್ಕಳಂತೆಯೇ ನೋಡಬೇಕಲ್ಲವೇ? ಮನೆಯ ಯಜಮಾನಿಗೆ ತನ್ನ ಹೆಣ್ಣುಮಕ್ಕಳು ಜೀನ್ಸ್, ಸ್ಕರ್ಟ್ ಧರಿಸುವುದು ಸಹ್ಯವಾಗುತ್ತದೆ. ಆದರೆ ಅದನ್ನೇ ಸೊಸೆ ಹಾಕಿಕೊಂಡರೆ ಮಾತ್ರ ಮನೆಯ ಮರ್ಯಾದೆ ಏನಾಗುತ್ತದೋ ಎನ್ನುವ ಪ್ರಶ್ನೆ ಕಾಡುತ್ತದೆ. ನಮ್ಮ ಮನೆಯ ಹೆಣ್ಣುಮಕ್ಕಳೂ ನಾಳೆ ಮತ್ತೊಂದು ಮನೆಗೆ ಸೊಸೆಯರಾಗಿ ಹೋಗುತ್ತಾರೆ ಎಂದು ಯೋಚಿಸಿದರೆ ಸಂಬಂಧದ ಮಹತ್ವ ಗೊತ್ತಾಗುತ್ತದೆ. ಅತ್ತೆಯು ಸೊಸೆ ಮತ್ತು ತನ್ನ ಹೆಣ್ಣುಮಕ್ಕಳ ನಡುವೆ ತಾರತಮ್ಯ ತೋರಬಾರದು.

ಅತ್ತೆ–ಸೊಸೆ ಸಂಬಂಧ ಕೌಟುಂಬಿಕ ಬಾಂಧವ್ಯಕ್ಕಿಂತ ನ್ಯಾಯ, ಅನ್ಯಾಯವನ್ನು ವಿವೇಚಿಸುತ್ತದೆ. ಇಲ್ಲಿ ಅತ್ತೆ ನ್ಯಾಯದ ಪರ ಹೋರಾಟಕ್ಕೆ ನಿಲ್ಲುತ್ತಾಳೆ. ಅದು ನ್ಯಾಯೋಚಿತ ಸಹ. ಸಂಬಂಧದಲ್ಲಿ ಮಗನೇ ಇರಬಹುದು. ಆದರೆ ಆತ ಸೊಸೆಗೆ ನಿಷ್ಠನಾಗಿ ಬದುಕುತ್ತಿಲ್ಲ. ಹೀಗಿರುವಾಗ ಸೊಸೆಗೆ ನ್ಯಾಯವನ್ನು ಕಲ್ಪಿಸಬೇಕಾದುದು ಅತ್ತೆಯ ಧರ್ಮ. ‘ಭಾಗ್ಯಲಕ್ಷ್ಮಿ’ ಜಾಗೃತಿ ಮೂಡಿಸುವ ಕಾರ್ಯಕ್ರಮ ಅಲ್ಲ. ಆದರೆ ಅದರ ಸೌಂದರ್ಯ ಇರುವುದು ಮನರಂಜನೆಯ ಜೊತೆಗೆ ಸಮಾಜಕ್ಕೆ ಸ್ಫೂರ್ತಿಯನ್ನು ತುಂಬುತ್ತಿರುವ ನೆಲೆಯಲ್ಲಿ.

ಪದ್ಮಜಾ ರಾವ್, ಅತ್ತೆ ‘ಕುಸುಮಾ’ ಪಾತ್ರಧಾರಿ



ನಂದಗೋಕುಲ

ಇಬ್ಬರೂ ಅಹಂ ಬಿಡಬೇಕು

ನಮ್ಮ ಧಾರಾವಾಹಿಯಲ್ಲಿ ಅತ್ತೆ–ಸೊಸೆಯರದು ಹಿತವಾದ ಸಂಬಂಧ. ಅತ್ತೆ ಗಿರಿಜಾ ಪಾತ್ರಕ್ಕೆ ಜನ ತುಂಬಾ ಪ್ರೀತಿ ತೋರುತ್ತಿದ್ದಾರೆ. ಮನೆ ಮುರಿಯುವ ಪಾತ್ರಗಳು ಜನರಿಗೂ ಇಷ್ಟವಿಲ್ಲ ಎಂಬುದು ಇದರಿಂದ ತಿಳಿಯುತ್ತದೆ.

ಮದುವೆಯಾಗಿ ಗಂಡನ ಮನೆಗೆ ಬರುವ ಹೆಣ್ಣು ಕೆಟ್ಟವಳಾಗೇನೂ ಇರುವುದಿಲ್ಲ. ಅವಳಿಗೆ ಅವಳದ್ದೇ ಆದ ಜವಾಬ್ದಾರಿ ಇರುತ್ತದೆ. ಆದರೆ ಅತ್ತೆ ಮನೆಯ ವಾತಾವರಣ, ಅಲ್ಲಿನವರು ನಡೆಸಿಕೊಳ್ಳುವ ರೀತಿಯಿಂದ ಅವಳ ಜೀವನದೃಷ್ಟಿ ಬದಲಾಗುತ್ತದೆ. ಅತ್ತೆ–ಮಾವ ಸಹ ಕೆಟ್ಟವರಾಗಿ ಇರುವುದಿಲ್ಲ. ಸೊಸೆ ಜೊತೆಗಿನ ವಯಸ್ಸಿನ ಅಂತರ, ಜೀವನಶೈಲಿಯ ಬದಲಾವಣೆ, ಯೋಚನೆ ಎಲ್ಲವೂ ಸೊಸೆಯ ಮೇಲೆ ಪರಿಣಾಮ ಬೀರಿ ಪರಸ್ಪರ ಭಿನ್ನಾಭಿಪ್ರಾಯ ಮೂಡಬಹುದು. ಆದರೆ, ಪ್ರೀತಿ, ತಾಳ್ಮೆ, ತ್ಯಾಗ ಅನ್ನುವ ತಳಪಾಯ ಇದ್ದರೆ ಎಲ್ಲವೂ ಸುಗಮವಾಗುತ್ತದೆ ಅನ್ನುವುದನ್ನು ಈ ಧಾರಾವಾಹಿಯಲ್ಲಿ ತೋರಿಸಲಾಗಿದೆ. ಮುಖ್ಯವಾಗಿ ಅತ್ತೆ–ಸೊಸೆ ‘ನಾನು’ ಅನ್ನುವ ಅಹಂ ಬಿಟ್ಟರೆ ಎಲ್ಲವೂ ಸರಿಯಾಗುತ್ತದೆ.

ಅಮೃತಾ ನಾಯ್ಡು, ಅತ್ತೆ ‘ಗಿರಿಜಾ’ ಪಾತ್ರಧಾರಿ

ಹೌದಲ್ಲ, ಹೀಗಿರಬೇಕಲ್ಲವೇ?

ವೈಯಕ್ತಿಕವಾಗಿ ಹೇಳುವುದಾದರೆ, ನನಗೆ ಅತ್ತೆ ಇಲ್ಲ. ಹಾಗಾಗಿ, ಅತ್ತೆ–ಸೊಸೆಯ ಸಂಬಂಧ ಹೇಗಿರುತ್ತದೆ ಅನ್ನುವುದು ನನ್ನ ಅನುಭವಕ್ಕೆ ಬಂದಿಲ್ಲ. ಅತ್ತೆಯಂದಿರು ಹೀಗೆ ಇರುತ್ತಾರೆ ಎಂದು ಹೇಳುವುದನ್ನು ಕೇಳಿದ್ದೇನೆ. ನಾವು ಅತ್ತೆಯನ್ನು ಅಮ್ಮನ ಥರ ಎಂದು ಎಷ್ಟೇ ಅಂದುಕೊಂಡರೂ, ಅತ್ತೆಯಂದಿರಿಗೆ ಸ್ವಲ್ಪವಾದರೂ ಪೊಸೆಸಿವ್‌ನೆಸ್ ಇದ್ದೇ ಇರುತ್ತದೆ. ಇವಳು ಬಂದಳು, ಮಗ ಹೆಂಡತಿ ಕಡೆಗೆ ವಾಲಿಕೊಂಡ, ನನ್ನನ್ನು ನಿರ್ಲಕ್ಷ್ಯ ಮಾಡುತ್ತಿದ್ದಾನೆ ಎಂದು ಅನ್ನಿಸಬಹುದು. ಆದರೆ, ನಮ್ಮ ಧಾರಾವಾಹಿಯಲ್ಲಿ ಸೊಸೆಗೆ ಮಗ ಸಹಾಯ ಮಾಡುತ್ತಿದ್ದರೆ ಅತ್ತೆ ಅಸೂಯೆ ಪಡುವುದಿಲ್ಲ. ಸೊಸೆಯನ್ನು ಮಗಳ ರೀತಿಯೇ ನಡೆಸಿಕೊಳ್ಳುತ್ತಾರೆ. ನಿಜಜೀವನದಲ್ಲಿ ಅತ್ತೆ ಹೀಗೆ ಇರುತ್ತಾರೋ ಇಲ್ಲವೋ ಗೊತ್ತಿಲ್ಲ. ಆದರೆ, ನಾವಂತೂ ಪಾತ್ರ ಮಾಡುವಾಗ ತುಂಬಾ ಎಂಜಾಯ್ ಮಾಡುತ್ತೇವೆ. ಹೌದಲ್ಲ, ಅತ್ತೆ–ಸೊಸೆ ಅಂದರೆ ಹೀಗಿರಬೇಕಲ್ಲವೇ ಅನ್ನಿಸುತ್ತದೆ.

ನನಗಂತೂ ಸ್ನೇಹಿತೆಯರಂತೆ ಇರುವುದು ಇಷ್ಟ. ಅತ್ತೆಯ ಸ್ಕಿನ್ ಕೇರ್‌ನಿಂದ ಹಿಡಿದು ಮನೆಯವರ ಹೆಲ್ತ್ ಕೇರ್ ತನಕ ಕಾಳಜಿ ವಹಿಸುವ ಪಾತ್ರ ಮೀನಾಳದ್ದು. ತುಂಬಾ ಜನ ‘ನಿಮ್ಮ ಥರ ಸೊಸೆ ಇರಬೇಕು’ ಅಂತ ಹೇಳುತ್ತಾರೆ. ಆದರೆ, ಸೊಸೆಯಷ್ಟೇ ಅಲ್ಲ ಅತ್ತೆ ಕೂಡ ಹಾಗೇ ಇರಬೇಕು. ಹಾಗಿದ್ದರೆ ಮಾತ್ರ ಅವರಿಬ್ಬರ ನಡುವೆ ಸ್ನೇಹ ಇರಲು ಸಾಧ್ಯ.

ಮೇಘಶ್ರೀ ಎಸ್.ವಿ., ಸೊಸೆ ‘ಮೀನಾ’ ಪಾತ್ರಧಾರಿ

ಇಗೋ ಮಾಡಿ ಸೊಪ್ಪಿನ ಸಲಾಡ್

ರಸಾಸ್ವಾದ

• ಶಕುಂತಲಾ ಜಾಲವಾದಿ

ಮನೆಯ ದೇಖರೇಖಿ ನೋಡಿಕೊಳ್ಳುವ ಹೆಣ್ಣುಮಕ್ಕಳು ತಮ್ಮ ಆರೋಗ್ಯದ ಕಡೆಗೂ ಕಾಳಜಿ ವಹಿಸಲೇಬೇಕು. ಆಗಾಗ್ಗೆ ಆರೋಗ್ಯಕರ ಸಲಾಡ್ ಅಥವಾ ಪಚಡಿಗಳ ಸೇವನೆಯಿಂದ ದೇಹಕ್ಕೆ ಕಬ್ಬಿಣಾಂಶ ಸಮರ್ಪಕವಾಗಿ ದೊರೆಯುತ್ತದೆ. ಕ್ರಮೇಣ ಕಾಣಿಸಿಕೊಳ್ಳುವ ಬೆನ್ನುನೋವು, ಮೂಳೆಗಳ ಆರೋಗ್ಯಕ್ಕೂ ಇವು ಉತ್ತಮ ಮದ್ದಾಗಬಲ್ಲವು. ಇಲ್ಲಿವೆ ಅಂಥ ಎರಡು ರೆಸಿಪಿಗಳು.

ಹತ್ತರಕಿ ಸೊಪ್ಪಿನ ಸಲಾಡ್



ಹತ್ತರಕಿ ಸೊಪ್ಪು ಬಹೂಪಯೋಗಿ. ಇದರಲ್ಲಿ ಕಬ್ಬಿಣಾಂಶ ಹೇರಳವಾಗಿರುತ್ತದೆ. ಅಲ್ಲದೆ ಹೊಟ್ಟೆಯ ಹರಳುಗಳನ್ನು ಕರಗಿಸುವ ಸಾಮರ್ಥ್ಯವೂ ಇದೆ.

ಬೇಕಾಗುವ ಸಾಮಗ್ರಿ: ಎರಡು ಹಿಡಿ ಹತ್ತರಕಿ ಸೊಪ್ಪು, ಖಾರದಪುಡಿ, ಹುರಿದ ಗುರೆಳ್ಳು (ಹುಚ್ಚೆಳ್ಳು ಅಥವಾ ಕಾರೆಳ್ಳು) ಪುಡಿ, ರುಚಿಗೆ ತಕ್ಕಷ್ಟು ಉಪ್ಪು.

ಮಾಡುವ ವಿಧಾನ: ಸ್ವಚ್ಛವಾಗಿ ತೊಳೆದು ಕತ್ತರಿಸಿದ ಹತ್ತರಕಿ ಸೊಪ್ಪನ್ನು ಒಂದು ಪಾತ್ರೆಗೆ ಹಾಕಿ. ಅದಕ್ಕೆ ಖಾರದ ಪುಡಿ, ಗುರೆಳ್ಳು ಪುಡಿ, ರುಚಿಗೆ ಬೇಕಾಗುವಷ್ಟು ಉಪ್ಪನ್ನು ಸೇರಿಸಿ ಚೆನ್ನಾಗಿ ಕಲೆಸಿ. ಅದಕ್ಕೆ ಇಂಗು, ಕರಿಬೇವಿನ ಒಗ್ಗರಣೆ ಕೊಟ್ಟರೆ ರುಚಿ ರುಚಿಯಾದ ಆರೋಗ್ಯವರ್ಧಕ ಹತ್ತರಕಿ ಸೊಪ್ಪಿನ ಕೋಸಂಬರಿ ಅಥವಾ ಸಲಾಡ್ ತಿನ್ನಲು ಸಿದ್ಧ. ಈ ಸೊಪ್ಪನ್ನು ಉತ್ತರ ಕರ್ನಾಟಕದಲ್ಲಿ ಜೋಳದ ಹೊಲದಲ್ಲಿ ಬೆಳೆಯುತ್ತಾರೆ.



ಮೆಂತ್ಯಸೊಪ್ಪಿನ ಸಲಾಡ್

ಬೇಕಾಗುವ ಸಾಮಗ್ರಿ: 2 ಕಟ್ಟು ಮೆಂತ್ಯ ಸೊಪ್ಪು, ಒಂದು ಎಳೆಸೌತೆಕಾಯಿ, ಹುರಿದು ಪುಡಿಮಾಡಿದ ಶೇಂಗಾಪುಡಿ, ಖಾರದಪುಡಿ, ರುಚಿಗೆ ತಕ್ಕಷ್ಟು ಉಪ್ಪು, ಒಗ್ಗರಣೆಗೆ ಸಾಸಿವೆ, ಜೀರಿಗೆ, ಇಂಗು, ಕರಿಬೇವು, ಒಣಮೆಣಸಿನ ಕಾಯಿ.

ಮಾಡುವ ವಿಧಾನ: ಮೆಂತ್ಯ ಸೊಪ್ಪನ್ನು ಚೆನ್ನಾಗಿ ತೊಳೆದು ಸಣ್ಣದಾಗಿ ಕತ್ತರಿಸಿಕೊಳ್ಳಬೇಕು. ಎಳೆಸೌತೆಕಾಯಿಯನ್ನು ಸಣ್ಣದಾಗಿ ಕತ್ತರಿಸಿಕೊಂಡು ಎರಡನ್ನೂ ಚೆನ್ನಾಗಿ ಕಲೆಸಿಕೊಳ್ಳಬೇಕು. ಅದಕ್ಕೆ ರುಚಿಗೆ ತಕ್ಕಷ್ಟು ಖಾರದಪುಡಿ, ಶೇಂಗಾಪುಡಿ ಹಾಗೂ ಉಪ್ಪನ್ನು ಹಾಕಿ, ಕರಿಬೇವು, ಒಣಮೆಣಸಿನಕಾಯಿಯ ಒಗ್ಗರಣೆ ಕೊಟ್ಟರೆ ರುಚಿಕರ ಹಾಗೂ ಅತ್ಯಂತ ಆರೋಗ್ಯಕರವಾದ ಮೆಂತ್ಯ ಸೊಪ್ಪಿನ ಸಲಾಡ್ ಸವಿಯಲು ಸಿದ್ಧ. ಇದನ್ನು ಅನ್ನ ಅಥವಾ ಚಪಾತಿಯ ಜೊತೆ ಸೇರಿಸಿ ತಿನ್ನಬಹುದು. ಒಂದು ಗಜ್ಜರಿ ಅಥವಾ ಕ್ಯಾರೆಟ್ ಅನ್ನು ಸಣ್ಣದಾಗಿ ಕತ್ತರಿಸಿ ಹಾಕಿದರೆ ಇನ್ನೂ ರುಚಿಕರ. ಬರಿ ಸಲಾಡನ್ನೇ ಬಾಯಿ ಚಪ್ಪರಿಸಿಕೊಂಡು ಸವಿಯಬಹುದು. ತುಂಬಾ ಕಡಿಮೆ ಅವಧಿಯಲ್ಲಿ ದಿಢೀರ್ ಎಂದು ತಯಾರಿಸಬಹುದು.

ಒಳ್ಳೆಯವಳಾಗಿ ಇರುವುದೇ ತಪ್ಪೇ?



ಅಂತರಂಗ

ಅಕ್ಷರ ದಾಮ್ಲೆ, ಮನಃಶಾಸ್ತ್ರಜ್ಞ

• ನಾನೊಬ್ಬ ಸಾಮಾನ್ಯ ಗೃಹಿಣಿ. ತವರುಮನೆ ಹಾಗೂ ಗಂಡನ ಮನೆಯಲ್ಲಿ ನಾನಾ ತರಹದ ಕೌಟುಂಬಿಕ ಸಮಸ್ಯೆಗಳಿವೆ. ಆದರೆ, ಒಳ್ಳೆಯದು ಮಾಡಿದರೆ ಒಳ್ಳೆಯದೇ ಆಗುತ್ತದೆ ಎನ್ನುವುದರಲ್ಲಿ ನನಗೆ ನಂಬಿಕೆಯಿತ್ತು. ಬಾಲ್ಯದಿಂದಲೂ ಇದೇ ನೈತಿಕ ಮೌಲ್ಯವನ್ನು ಹೇಳಲಾಗಿತ್ತು. ಈಗೀಗ ನನ್ನ ಸುತ್ತಲಿನ ವಿದ್ಯಮಾನಗಳನ್ನು ಗಮನಿಸಿದರೆ, ಹಾಗೇನೂ ಅನಿಸುತ್ತಿಲ್ಲ. ನಾನು ಒಳ್ಳೆಯ ಮನಸ್ಸಿನಿಂದ ಇದ್ದರೂ ಎಲ್ಲವೂ ನನಗೆ ಒಳ್ಳೆಯದೇ ಆಗಬೇಕಿತ್ತಲ್ಲ. ಯಾಕೆ ಇಷ್ಟೊಂದು ಸಂಕಟಗಳು ಒಂದರಮೇಲೊಂದು ಎದುರಾಗುತ್ತವೆ? ಒಳ್ಳೆಯವಳಾಗಿ ಇರುವುದೇ ತಪ್ಪೇ?

ಸುಮಾ, ಸಾಗರ

ಕೆಲವು ಬಾರಿ ಜೀವನದಲ್ಲಿ ಈ ರೀತಿಯ ಜಿಜ್ಞಾಸೆ ಬರುವುದು ಸಹಜ. ಯಾಕೆಂದರೆ, ಹೊರ ಪ್ರಪಂಚ ನಾವು ಅಂದುಕೊಂಡಿರುವಷ್ಟು ಸುಂದರವಾಗಿಲ್ಲ. ಸಾಮಾನ್ಯವಾಗಿ ಇತರರು ನಮಗೆ ಒಳ್ಳೆಯದನ್ನೇ ಮಾಡಬೇಕು ಎಂದು ಬಯಸುವುದು ತಪ್ಪಲ್ಲ. ಆದರೆ ನಿಜ ಪ್ರಪಂಚದಲ್ಲಿ ಮೋಸಗಾರರು, ಕಿರುಕುಳ ಕೊಡುವವರು, ಹಿಂಸಿಸುವವರು ಹೀಗೆ ಅನೇಕ ರೀತಿಯ ಕೆಟ್ಟ ಮನಃಸ್ಥಿತಿಯ ವ್ಯಕ್ತಿಗಳಿರುತ್ತಾರೆ.

ಈಗ ಇಲ್ಲಿ ಎರಡು ಅಂಶಗಳನ್ನು ಗಮನಿಸಬೇಕು. ಅವೆಂದರೆ, ನಾವು ಒಳ್ಳೆಯದನ್ನು ಮಾಡುವುದರ ಜೊತೆಗೆ, ಪ್ರಪಂಚದ ವಾಸ್ತವಗಳ ಕುರಿತು ಕುರುಡಾಗಬಾರದು. ವಾಸ್ತವ ಪ್ರಪಂಚದಲ್ಲಿ ಒಳ್ಳೆಯವರೂ ಇದ್ದಾರೆ, ಕೆಟ್ಟವರೂ ಇದ್ದಾರೆ. ನೀವು ಒಳ್ಳೆಯದನ್ನು ಮಾಡುವುದರಿಂದ ಅವರನ್ನೂ ಒಳ್ಳೆಯವರನ್ನಾಗಿಸಲು ಸಾಧ್ಯವಿದೆ. ಆ ದಿಸೆಯಲ್ಲಿ ಪ್ರಯತ್ನ ಪಡಬಹುದು. ಆ ಕಾರಣದಿಂದಲೇ, ನಾವು ಇತರರಿಗೆ ಒಳ್ಳೆಯದನ್ನೇ ಮಾಡಬೇಕು. ಆದರೆ, ಅವರು ಎಂಥವರು ಅನ್ನುವುದನ್ನೂ ಸ್ವಲ್ಪ ಗಮನದಲ್ಲಿ ಇಟ್ಟುಕೊಳ್ಳಬೇಕು. ನೀವು ಅವರಿಗೆ ಮಾಡಿದ ಸಹಾಯ ಇರಬಹುದು ಅಥವಾ ಕೊಡುಗೆ ಆಗಿರಬಹುದು, ಅದನ್ನು ಮುಂದೆ ಅವರು ಯಾವುದಕ್ಕೆ ಬಳಸಿಕೊಳ್ಳುತ್ತಾರೆ ಎಂಬುದನ್ನು ನೋಡುವುದು ಕೂಡ ಅಷ್ಟೇ ಮುಖ್ಯ. ಮಾತ್ರವಲ್ಲ, ಅವರಿಂದ ನಿಮಗೆ ಹಾನಿಯಾಗದಂತೆಯೂ ಗಮನಿಸಿಕೊಳ್ಳಬೇಕು.

ಹಾಗಿದ್ದರೆ, ಹಿಂದಿನಿಂದಲೂ ಹೇಳಿಕೊಂಡು ಬಂದ ಮಾತನ್ನು ಹೇಗೆ ಅರ್ಥೈಸಿಕೊಳ್ಳುವುದು? ಮೊದಲನೆಯದ್ದು, ಆ ಮಾತುಗಳು ನೈಜ ಜಗತ್ತಿನಲ್ಲಿ ನಿಜವಲ್ಲದೇ ಹೋದರೂ, ಒಂದು ವೇಳೆ ಎಲ್ಲರೂ ಪಾಲಿಸಿದರೆ, ಅವು ನಿಜವಾಗಬಹುದು, ಅಲ್ಲವೇ? ಆ ಆಶಾಭಾವನೆಯೊಂದಿಗೇ ಹಿರಿಯರು ಬಹುಶಃ ಹಾಗೆ ಹೇಳಿರಬೇಕು. ಒಂದು ವೇಳೆ ಎಲ್ಲರೂ ತಮ್ಮ ಸ್ವಾರ್ಥಕ್ಕೋಸ್ಕರವಾದರೂ ಇತರರಿಗೆ ಒಳ್ಳೆಯದನ್ನು ಮಾಡಲು ಆರಂಭಿಸಿದರೆ, ಎಲ್ಲರಿಗೂ ಒಳಿತಾಗುತ್ತದೆ. ಆಗ ಸಂಪೂರ್ಣ ಸಮಾಜವೇ ಸುಂದರವಾಗುತ್ತದೆ. ಈಗಿರುವ ಸಮಸ್ಯೆ ಏನೆಂದರೆ, ಈ ಮಾತುಗಳನ್ನು ಕೆಲವರಷ್ಟೇ ಪಾಲಿಸುತ್ತಿರುವುದು. ಹಾಗಾದಾಗ ನಾವು ವಾಸ್ತವಾಂಶವನ್ನು ಗಮನಿಸಿಕೊಂಡು ವ್ಯವಹರಿಸಬೇಕು.

ನಾವು ಗಮನಿಸಬೇಕಾದ ಇನ್ನೊಂದು ಅಂಶವೆಂದರೆ, ನಮಗೆ ಕೆಡುಕಾಗಲು ಅನುವು ಮಾಡಿಕೊಡುವುದು ಯಾರು? ನಾವೇ! ಒಂದು ವೇಳೆ ನಾವು ಆಸ್ಪದ ಕೊಡದಿದ್ದರೆ, ಅವು ಘಟಿಸಲು ಸಾಧ್ಯವೇ ಇಲ್ಲ. ಹಾಗಿದ್ದ ಮೇಲೆ, ನಮ್ಮ ಜೀವನದಲ್ಲಿ ಏನೆಲ್ಲ ನಡೆಯುತ್ತಿದೆಯೋ ಅದೆಲ್ಲವೂ ನಮ್ಮ ಕಾರಣದಿಂದಲೇ ನಡೆಯುತ್ತಿರುತ್ತದೆ. ಹಾಗಾಗಿ, ಬಲಿಪಶುತ್ವವನ್ನು ಬೆಳೆಸಿಕೊಳ್ಳುವ ಬದಲು, ನಿಮ್ಮ ತಪ್ಪುಗಳನ್ನು ಸರಿಪಡಿಸಿಕೊಳ್ಳಿ. ಆಗ ನಿಮ್ಮ ಜೀವನದಲ್ಲಿ ಹೊಸ ಮಜಲುಗಳನ್ನು ಹತ್ತಲು ಸಾಧ್ಯವಾಗುತ್ತದೆ.

ಸ್ತ್ರೀಶಕ್ತಿಯ ರಾಗ–ಲಯ

ಮಹಿಳಾ ಕಲಾವಿದರು ಮಾತ್ರ ಇದ್ದ ‘ಸ್ತ್ರೀ’ ಎಂಬ ಹೆಸರಿನ ಸಂಗೀತ ಕಛೇರಿಯಲ್ಲಿ ‘ಅವಳದೇ ವೇದಿಕೆ, ಅವಳದೇ ಧ್ವನಿ, ಅವಳದೇ ತಂತಿ’ಯಾಗಿತ್ತು. ಗಾಯನ ಜುಗಲ್‌ಬಂದಿ ಮತ್ತು ಅಮ್ಮ–ಮಕ್ಕಳ ವಯಲಿನ್ ಟ್ರಯೊ, ಶ್ರೋತೃಗಳ ಮನತಣಿಸುವುದರೊಂದಿಗೆ ಸ್ತ್ರೀಶಕ್ತಿಯ ಅನಾವರಣವನ್ನೂ ಮಾಡಿತು.

• ವಿಕ್ರಂ ಕಾಂತಿಕೆರೆ

‘ಸ್ತ್ರೀ’ ಪರಿಕಲ್ಪನೆಯಡಿ ಮಂಗಳೂರಿನ ಸಂಗೀತ ಭಾರತಿ ಪ್ರತಿಷ್ಠಾನ ಇತ್ತೀಚೆಗೆ ಆಯೋಜಿಸಿದ್ದ ಸಂಗೀತ ಕಛೇರಿಯಲ್ಲಿ ‘ಅವಳದೇ ವೇದಿಕೆ, ಅವಳದೇ ಧ್ವನಿ, ಅವಳದೇ ತಂತಿ’ಯ ಸೊಬಗು. ಗಾಯನ ಮಹಿಳೆಯರದು, ವಾದನವೂ ಅವರದೇ. ತಬಲಾ–ಹಾರ್ಮೋನಿಯಂ ಸಾಥ್ ಕೊಟ್ಟದ್ದೂ ಸ್ತ್ರೀಯೆ.

ಹೆಣ್ಣಿಗೆ ಗೌರವ ಸೂಚಿಸುವುದಕ್ಕಾಗಿ ಶ್ರೋತೃಗಳೂ ಕೆಂಬಣ್ಣದ ಪೋಷಾಕು ತೊಟ್ಟುಕೊಂಡು ಬಂದಿದ್ದ ಕಾರ್ಯಕ್ರಮದಲ್ಲಿ, ದ್ವಂದ್ವ ಗಾಯನ ಪ್ರಸ್ತುತಪಡಿಸಿದವರು ಬೆಂಗಳೂರಿನ ಶಿವಾನಿ ಮಿರಜ್ಕರ್ ಮತ್ತು ವಿಭಾ ಹೆಗ್ಡೆ. ಅವರಿಗೆ ತಬಲಾ ಸಾಥ್ ನೀಡಿದವರು ವಿಜೇತಾ ಹೆಗ್ಡೆ. ಹಾರ್ಮೋನಿಯಂನಲ್ಲಿ ಲೆಹ್ರಾ ಸೃಷ್ಟಿಸಿದವರು ಪಿಯುಸಿ ವಿದ್ಯಾರ್ಥಿನಿ ಮೇಧಾ ಭಟ್.

ಖ್ಯಾತ ವಯಲಿನ್ ಕಲಾವಿದೆ ರಾಜಂ ಅವರ ಪುತ್ರಿ ಸಂಗೀತಾ ಶಂಕರ್ ತಮ್ಮಿಬ್ಬರು ಮಕ್ಕಳಾದ ನಂದಿನಿ ಮತ್ತು ರಾಗಿಣಿ ಅವರ ಜೊತೆ ಪ್ರಸ್ತುತಪಡಿಸಿದ ‘ವಯಲಿನ್ ಟ್ರಯೊ’ಗೆ ತಬಲಾ ನುಡಿಸಿದವರು ಉಸ್ತಾದ್ ಅಲ್ಲಾ ರಖಾ ಖಾನ್ ಮತ್ತು ಉಸ್ತಾದ್ ಝಾಕಿರ್ ಹುಸೇನ್ ಅವರ ಶಿಷ್ಯೆ, ಮಹಿಳೆಯರದೇ ಸ್ತ್ರೀಶಕ್ತಿ ಸಂಗೀತ ತಂಡ ಕಟ್ಟಿಕೊಂಡಿರುವ ಅನುರಾಧಾ ಪಾಲ್.



ವಿಜೇತಾ ಹೆಗ್ಡೆ

ಲಯವಾದ್ಯ ಕ್ಷೇತ್ರದಲ್ಲಿ ಪುರುಷ ಪಾರಮ್ಯದ ಗೋಡೆಯನ್ನು ಕೆಡವಿದ ಅನುರಾಧಾ ಅವರು ಜಗತ್ತಿನ ಮೊತ್ತಮೊದಲ ವೃತ್ತಿಪರ ತಬಲಾ ವಾದಕಿ ಎಂದೇ ಹೆಸರು ಗಳಿಸಿದ್ದಾರೆ.

ಕಿರಾಣಾ ಮತ್ತು ಗ್ವಾಲಿಯರ್ ಘರಾಣಗಳ ಯುವ ಕಲಾವಿದೆಯರಾದ ಶಿವಾನಿ ಮತ್ತು ವಿಭಾ ಅವರು ಶ್ರೀ ಮತ್ತು ಶ್ಯಾಮ್ ಕಲ್ಯಾಣ್ ರಾಗಗಳನ್ನು ಮಧುರ ಆಲಾಪದ ಮೂಲಕ ಮೋಹಕವಾಗಿಸಿದರು. ‘ಸಾಂಜ ಬೈ ಅಜಹು ನ ಆಯೆ’ಯನ್ನೇ ಜೋಡ್ ಬಂದಿಶ್‌ಗೆ ಬಳಸಿಕೊಂಡ ಈ ಜೋಡಿ, ಏಕ್‌ತಾಳ್‌ನಲ್ಲಿ ಎರಡೂ ಖ್ಯಾಲ್‌ಗಳನ್ನು ಮುಂದಿಟ್ಟಿತು. ಭಿನ್ನ ಘರಾಣದವರಾದರೂ ಸವಾಲ್–ಜವಾಬ್ ಮಾದರಿಯ ಸ್ಪರ್ಧೆಗೆ ಇಳಿಯದೆ ಸಂವಾದದ ರೂಪದಲ್ಲಿ ಕಛೇರಿಯನ್ನು ಯುಗಳ ಗಾಯನವನ್ನಾಗಿ ಪರಿವರ್ತಿಸಿ, ಹೆಣ್ಣಿನ ಹೃದಯ ಮಾರ್ದವತೆಯನ್ನು ಇಬ್ಬರೂ ತೆರೆದಿಟ್ಟರು.

ಕೃಷ್ಣನ ಹುಡುಗಾಟದ ಛಾಯೆ ಇರುವ ‘ಮ್ಹಾರ ರಸಿಯಾ...’ ಮತ್ತು ‘ಯೆಸೊ ತುಮಿ ಕೌನ್ ಜಾನತಹು...’ ಬಂದಿಶ್‌ಗಳನ್ನು ಬಡಾ ಖ್ಯಾಲ್ ಮತ್ತು ಛೋಟಾ ಖ್ಯಾಲ್‌ನಲ್ಲಿ ಪ್ರಸ್ತುತಪಡಿಸಿದ ಇವರು, ಅಲ್ಲೂ ಆಲಾಪದ ರಂಗು ಮೂಡಿಸಿ ಮಹಿಳೆಯ ಪ್ರಯೋಗಶೀಲ ನಡೆಗೆ ಕನ್ನಡಿ ಹಿಡಿದರು.

ಸಂಗೀತಾ, ನಂದಿನಿ ಮತ್ತು ರಾಗಿಣಿ ವಯಲಿನ್‌ನಲ್ಲಿ ಮೊದಲು ನುಡಿಸಿದ್ದು ಗೋರಖ್ ಕಲ್ಯಾಣ್. ಮೋಹಕ ಆಲಾಪದ ಮೂಲಕ ಆರಂಭಿಸಿದ ಸಂಗೀತಾ ಅವರಿಗೆ ಕ್ಷಣಮಾತ್ರದಲ್ಲಿ ಭಾವಲೋಕ ಸೃಷ್ಟಿಸಲು ಸಾಧ್ಯವಾಯಿತು. ನಂದಿನಿ ಮತ್ತು ರಾಗಿಣಿ ಸ್ವಲ್ಪದರಲ್ಲೇ ಆ ಭಾವಸಾಗರದಲ್ಲಿ ಸೇರಿಕೊಂಡರು.



ಅನುರಾಧಾ ಪಾಲ್, ರಾಗಿಣಿ, ಸಂಗೀತಾ ಮತ್ತು ನಂದಿನಿ ಚಿತ್ರ: ಫಕ್ರುದ್ದೀನ್ ಎಚ್.

ವಾತ್ಸಲ್ಯಮಯಿ ಕಣ್ಸನ್ನೆಯಲ್ಲಿ ಅಮ್ಮ ನೀಡುತ್ತಿದ್ದ ಸೂಚನೆಗಳನ್ನು ಮಕ್ಕಳಿಬ್ಬರೂ ನಗುಮುಖದೊಂದಿಗೆ ಪಾಲಿಸಿದರು. ಲಘು ಆಲಾಪದ ನಂತರ ನೇರವಾಗಿ ಖ್ಯಾಲ್ ಅಂಗಕ್ಕೆ ಪ್ರವೇಶಿಸಿದ ಮೂವರೂ ವಿಳಂಬಿತ್ ಏಕ್‌ತಾಳ್‌ನಲ್ಲಿ ಅಚ್ಚುಕಟ್ಟಾಗಿ ಬಂದಿಶ್ ಪ್ರಸ್ತುತಪಡಿಸಿದರು. ವಯಲಿನ್‌ನ ಸಾಮರ್ಥ್ಯವನ್ನು ಅನಾವರಣಗೊಳಿಸುತ್ತಲೇ ರಾಗವಿಸ್ತಾರ ಮಾಡಿದರು.

ಧ್ರುತ್ ಗತ್‌ನ ಜಾಲಾವನ್ನು ಕ್ಷಿಪ್ರ ನಡೆಗಳ ಮೂಲಕ ಪ್ರದರ್ಶಿಸಿ ಶ್ರೋತೃಗಳನ್ನು ಕುಳಿತಲ್ಲೇ ಕುಣಿದಾಡಿಸಿದರು. ದೇಶ್ ನಂತರ ಖಮಾಜ್‌ನಲ್ಲಿ ನುಡಿಸಿದ ‘ಹೋರಿ’ ಜಾನಪದ ಸ್ಪರ್ಶದೊಂದಿಗೆ ಹೋಳಿಯ ಬಣ್ಣದಲ್ಲಿ ಮಿಂದೆದ್ದ ಅನುಭವ ನೀಡಿತು.



ಮೇಧಾ ಭಟ್

> ಶಿವಾನಿ ಮತ್ತು ವಿಭಾ ಅವರ ಧ್ವನಿಯ ಮಾಧುರ್ಯ ಭಿನ್ನವಾಗಿತ್ತು. ಇದರಿಂದ ಶ್ರೋತೃಗಳ ಪಾಲಿಗೆ ಅನುಕೂಲವೇ ಆಯಿತು. ಜುಗಲ್‌ಬಂದಿಯಲ್ಲಿ ಭಿನ್ನತೆ ಇದ್ದಷ್ಟೂ ಆಸ್ವಾದನೆಯ ರಸ ಹೆಚ್ಚುತ್ತದೆ.
>
> **ಉಸ್ತಾದ್ ರಫೀಕ್ ಖಾನ್**
> ಸಿತಾರ್ ಕಲಾವಿದ

‘ಸುಪ್ರೀಂ’ನಿಂದ ಇಬ್ಬರು ಶಾಸಕರು ನಿರಾಳ

ಬಾಗೇಪಲ್ಲಿಯ ಸುಬ್ಬಾರೆಡ್ಡಿ ಅನರ್ಹತೆಗೆ ತಡೆ ನೀಡಿದ ಸಿಜೆಐ ನೇತೃತ್ವದ ಪೀಠ

ಪ್ರಜಾವಾಣಿ ವಾರ್ತೆ

ನವದೆಹಲಿ: ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿ (ಭಾಗ್ಯನಗರ) ವಿಧಾನಸಭಾ ಕ್ಷೇತ್ರದ ಶಾಸಕ ಸ್ಥಾನದಿಂದ ಕಾಂಗ್ರೆಸ್‌ನ ಎಸ್.ಎನ್. ಸುಬ್ಬಾರೆಡ್ಡಿ ಅವರನ್ನು ಅನರ್ಹಗೊಳಿಸಿದ ಹೈಕೋರ್ಟ್ ಆದೇಶಕ್ಕೆ ಸುಪ್ರೀಂ ಕೋರ್ಟ್ ಶುಕ್ರವಾರ ತಡೆಯಾಜ್ಞೆ ನೀಡಿದೆ.

ಹೈಕೋರ್ಟ್ ಆದೇಶ ಪ್ರಶ್ನಿಸಿ ಸುಬ್ಬಾರೆಡ್ಡಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಭಾರತದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಮತ್ತು ನ್ಯಾಯಮೂರ್ತಿ ಜಾಯ್‌ಮಾಲ್ಯ ಬಾಗ್ಚಿ ಅವರನ್ನೊಳಗೊಂಡ ಪೀಠವು, ಪ್ರತಿವಾದಿ ಸಿ.ಮುನಿರಾಜು ಅವರಿಗೆ ನೋಟಿಸ್ ಜಾರಿ ಮಾಡಿ ಮಧ್ಯಂತರ ಆದೇಶ ಹೊರಡಿಸಿತು. ಸುಬ್ಬಾ ರೆಡ್ಡಿ ಪರವಾಗಿ ಹಿರಿಯ ವಕೀಲರಾದ ಕಪಿಲ್ ಸಿಬಲ್ ಮತ್ತು ದೇವದತ್ ಕಾಮತ್ ವಾದ ಮಂಡಿಸಿದರು.

ಎಲ್ಲ ಪ್ರಾಯೋಗಿಕ ಉದ್ದೇಶಗಳಿಗೆ ಅರ್ಜಿದಾರರು ಶಾಸಕರಾಗಿ ಮುಂದುವರಿಯುತ್ತಾರೆ ಎಂದು ಪೀಠ ಘೋಷಿಸಿತು. ಪ್ರತಿ ಪ್ರಮಾಣಪತ್ರ ಸಲ್ಲಿಸುವಂತೆ ಮುನಿರಾಜು ಅವರಿಗೆ ಸೂಚಿಸಿದ ಪೀಠವು, ವಿಚಾರಣೆಯನ್ನು ಸೆಪ್ಟೆಂಬರ್ 7ಕ್ಕೆ ಮುಂದೂಡಿತು.

‘ಯಾವುದನ್ನೂ ಮುಚ್ಚಿಟ್ಟಿಲ್ಲ’



ಚುನಾವಣಾ ಅಫಿಡವಿಟ್‌ನಲ್ಲಿ ನಾನು ಯಾವುದನ್ನೂ ಮುಚ್ಚಿಟ್ಟಿಲ್ಲ. ಅಬಕಾರಿ ವ್ಯವಹಾರದ ಮಾಹಿತಿಯನ್ನೂ ನೀಡಿದ್ದೇನೆ. ಅಂಕಿ ಅಂಶಗಳನ್ನು ಬರೆಯುವಾಗ ಸಣ್ಣ ತಪ್ಪಾಗಿತ್ತು. ಆದರೆ, ಒಟ್ಟಾರೆ ಲೆಕ್ಕ ಸರಿಯಾಗಿತ್ತು. ಸೋತವರು ಈ ರೀತಿ ಬರುವುದು ಸರಿ ಅಲ್ಲ ಎಂದು ನ್ಯಾಯಾಲಯ ಹೇಳಿದೆ ಎಂದು ಕಾಂಗ್ರೆಸ್ ಶಾಸಕ ಎನ್.ಎಸ್. ಸುಬ್ಬಾರೆಡ್ಡಿ ಹೇಳಿದ್ದಾರೆ.

ಸುಬ್ಬಾರೆಡ್ಡಿ

‘ಸುಬ್ಬಾರೆಡ್ಡಿ ಆಯ್ಕೆಯನ್ನು ಅಸಿಂಧುಗೊಳಿಸಬೇಕು ಮತ್ತು ನನ್ನನ್ನೇ ವಿಜೇತ ಅಭ್ಯರ್ಥಿ ಎಂದು ಘೋಷಿಸಬೇಕು’ ಎಂದು ಕೋರಿ ಸಿ.ಮುನಿರಾಜು ಸಲ್ಲಿಸಿದ್ದ ಚುನಾವಣಾ ತಕರಾರು ಅರ್ಜಿಯನ್ನು ಹೈಕೋರ್ಟ್ ಏಕಸದಸ್ಯ ನ್ಯಾಯಪೀಠ ಭಾಗಶಃ ಪುರಸ್ಕರಿಸಿ ಫೆಬ್ರುವರಿ 16ರಂದು ಆದೇಶ ಹೊರಡಿಸಿತ್ತು.

ಮೇಲ್ಮನವಿಯನ್ನು ಬಲವಾಗಿ ವಿರೋಧಿಸಿದ ಮುನಿರಾಜು ಪರ ವಕೀಲರು, ‘ಸುಬ್ಬಾ ರೆಡ್ಡಿ ತಮ್ಮ ಅಬಕಾರಿ ವ್ಯವಹಾರವನ್ನು ಚುನಾವಣಾ ಅಫಿಡವಿಟ್‌ನಲ್ಲಿ ಬಹಿರಂಗಪಡಿಸಿಲ್ಲ’ ಎಂದು ಆಕ್ಷೇಪಿಸಿದರು. ಆಗ ಸಿಜೆಐ, ‘ಅರ್ಜಿದಾರರು 19 ಸಾವಿರ ಮತಗಳ ಅಂತರದಿಂದ ಗೆದ್ದಿದ್ದಾರೆ. ನೀವು ಚುನಾವಣೆಯಲ್ಲಿ ಗೆಲ್ಲದಿದ್ದಾಗ, ಇಂತಹ ವಿಷಯಗಳನ್ನು ಅಗೆದು ತರುತ್ತೀರಿ’ ಎಂದರು.

‘ಅವರು ತಮ್ಮ ಆತಿಥ್ಯ ವ್ಯವಹಾರವನ್ನು ಬಹಿರಂಗಪಡಿಸಿದ್ದಾರೆ. ಆದರೆ, ಮದ್ಯದ ವ್ಯವಹಾರ ಬಹಿರಂಗಪಡಿಸಲು ಹಿಂಜರಿದಿದ್ದಾರೆ’ ಎಂದು ಪ್ರತಿವಾದಿಯ ವಕೀಲರು ವಾದಿಸಿದರು. ‘ಆದಾಯವನ್ನು ಬಹಿರಂಗಪಡಿಸುವುದು ಅಗತ್ಯವಾಗಿರುತ್ತದೆಯೇ ಹೊರತು ವ್ಯವಹಾರದ ಸ್ವರೂಪವಲ್ಲ’ ಎಂದು ನ್ಯಾಯಮೂರ್ತಿ ಬಾಗ್ಚಿ ಪ್ರತಿಕ್ರಿಯಿಸಿದರು. ‘ನ್ಯಾಯಾಲಯಗಳು ಲೆಕ್ಕ ಪರಿಶೋಧಕರ (ಸಿಎ) ಪಾತ್ರ ನಿರ್ವಹಿಸಲು ಸಾಧ್ಯವಿಲ್ಲ’ ಎಂದು ಸಿಜೆಐ ಒತ್ತಿ ಹೇಳಿದರು.

‘ಹೂಡಿಕೆಯ ಸ್ವರೂಪ ಬಹಿರಂಗಪಡಿಸಬೇಕು’ ಎಂದು ಪ್ರತಿವಾದಿಯ ವಕೀಲರು ವಾದ ಮಂಡಿಸಿದರು. ಆಗ ನ್ಯಾಯಮೂರ್ತಿ ಬಾಗ್ಚಿ, ‘ಹೂಡಿಕೆ ಬೇರೆ ಹಾಗೂ ವ್ಯವಹಾರ ಬೇರೆ’ ಎಂದು ಸ್ಪಷ್ಟಪಡಿಸಿದರು.

‘ಅರ್ಜಿದಾರರು 2018ರಿಂದ ಆಸ್ತಿ ತೆರಿಗೆ ಪಾವತಿಸಿರಲಿಲ್ಲ. 2023ರ ಚುನಾವಣೆಗೆ ನಾಮಪತ್ರ ಸಲ್ಲಿಸಿದ ಬಳಿಕವೇ ₹1.09 ಕೋಟಿ ಬಾಕಿ ತೆರಿಗೆ ಪಾವತಿಸಿದ್ದಾರೆ’ ಎಂದು ಪ್ರತಿವಾದಿ ವಕೀಲರು ಗಮನ ಸೆಳೆದರು. ಈ ವಾದವನ್ನು ಪೀಠ ಮಾನ್ಯ ಮಾಡಲಿಲ್ಲ.

ವಿನಯ ಕುಲಕರ್ಣಿಗೆ ಜಾಮೀನು

ಧಾರವಾಡ ಜಿಲ್ಲಾ ಪಂಚಾಯಿತಿ ಸದಸ್ಯರಾಗಿದ್ದ ಯೋಗೀಶ್‌ಗೌಡ ಗೌಡರ್ ಕೊಲೆ ಪ್ರಕರಣದಲ್ಲಿ ಕಾಂಗ್ರೆಸ್ ಶಾಸಕ ವಿನಯ ಕುಲಕರ್ಣಿ ಅವರಿಗೆ ಸುಪ್ರೀಂ ಕೋರ್ಟ್ ಜಾಮೀನು ನೀಡಿದೆ.

ಜಾಮೀನು ನಿರಾಕರಿಸಿರುವ ಹೈಕೋರ್ಟ್ ಆದೇಶ ಪ್ರಶ್ನಿಸಿ ವಿನಯ ಕುಲಕರ್ಣಿ ಮೇಲ್ಮನವಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಸಂಜಯ್ ಕರೋಲ್ ಹಾಗೂ ಅಗಸ್ಟಿನ್ ಮಸೀಹ್ ಜಾರ್ಜ್ ಅವರ ಪೀಠವು ಈ ಆದೇಶ ಹೊರಡಿಸಿತು. ಎರಡು ತಿಂಗಳಲ್ಲಿ ವಿಚಾರಣೆ ಪೂರ್ಣಗೊಳಿಸಬೇಕು ಎಂದು ವಿಚಾರಣಾ ನ್ಯಾಯಾಲಯಕ್ಕೆ ನಿರ್ದೇಶನ ನೀಡಿತು.

ಅರ್ಜಿದಾರರ ಪರ ವಾದ ಮಂಡಿಸಿದ ಹಿರಿಯ ವಕೀಲ ಸಿದ್ಧಾರ್ಥ ಲೂತ್ರಾ, ‘ಕೊಲೆ ಪ್ರಕರಣದಲ್ಲಿ ಸಾಕ್ಷಿಗಳ ವಿಚಾರಣೆ ಮುಗಿದಿದೆ. ಜತೆಗೆ, ಉಳಿದ ಎಲ್ಲ ಆರೋಪಿಗಳು ಜಾಮೀನಿನ ಮೇಲೆ ಹೊರಗಿದ್ದಾರೆ. ಕುಲಕರ್ಣಿ ಅವರಿಗೂ ಜಾಮೀನು ನೀಡಬೇಕು’ ಎಂದು ಕೋರಿದರು.



ವಿನಯ ಕುಲಕರ್ಣಿ

ನ್ಯಾಯಮೂರ್ತಿ ಸಂಜಯ್ ಕರೋಲ್, ‘ಕುಲಕರ್ಣಿ ಅವರು ಕೊಲೆ ಪ್ರಕರಣದ ಕಿಂಗ್ ಪಿನ್ ಇರಬಹುದು. ಆದರೆ, ವಿಚಾರಣೆ ಬಹುತೇಕ ಮುಗಿದಿರುವುದರಿಂದ ಈಗ ಸಾಕ್ಷ್ಯ ನಾಶ ಅಥವಾ ಸಾಕ್ಷಿಗಳ ಮೇಲೆ ಪ್ರಭಾವ ಬೀರುವ ಸಾಧ್ಯತೆ ಕಡಿಮೆ. ಹೀಗಾಗಿ, ಜಾಮೀನು ನೀಡಲಾಗುತ್ತಿದೆ’ ಎಂದರು.

ಪ್ರಕರಣವೇನು?: ಧಾರವಾಡ ಉಪನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ 2016ರ ಜೂನ್ 15ರಂದು ಯೋಗೀಶ್‌ಗೌಡ ಗೌಡರ್ ಕೊಲೆ ನಡೆದಿತ್ತು. ಈ ಪ್ರಕರಣವನ್ನು ಸಿಬಿಐ ತನಿಖೆ ನಡೆಸಿದ್ದು, ವಿಶೇಷ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದೆ. ವಿನಯ ಕುಲಕರ್ಣಿ ಅವರು 2025ರ ಜೂನ್ 13ರಿಂದ ನ್ಯಾಯಾಂಗ ಬಂಧನದಲ್ಲಿದ್ದು ವಿಚಾರಣೆ ಎದುರಿಸುತ್ತಿದ್ದಾರೆ. ಜನಪ್ರತಿನಿಧಿಗಳ ಸೆಷನ್ಸ್ ನ್ಯಾಯಾಲಯ 2025ರ ಡಿಸೆಂಬರ್ 8ರಂದು ಕುಲಕರ್ಣಿ ಅವರ ಜಾಮೀನು ಅರ್ಜಿಯನ್ನು ವಜಾಗೊಳಿಸಿತ್ತು. 2026ರ ಜನವರಿ 27ರಂದು ಹೈಕೋರ್ಟ್ ಜಾಮೀನು ಅರ್ಜಿ ವಜಾಗೊಳಿಸಿತ್ತು.



ಕರ್ನಾಟಕ ಜಾನಪದ ಅಕಾಡೆಮಿ ಬೆಂಗಳೂರಿನಲ್ಲಿ ಶುಕ್ರವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಜಾನಪದ ಕಲಾವಿದರಿಗೆ 2025ನೇ ಸಾಲಿನ ಗೌರವ ಪ್ರಶಸ್ತಿ ಮತ್ತು ತಜ್ಞ ಪ್ರಶಸ್ತಿ ಪ್ರದಾನ ಮಾಡಲಾಯಿತು ಪ್ರಜಾವಾಣಿ ಚಿತ್ರ

ಮಹಿಳಾ ಜಾನಪದ ಉತ್ಸವಕ್ಕೆ ಸಮ್ಮತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಜಾನಪದ ಅಕಾಡೆಮಿಯ ಬೇಡಿಕೆಯಂತೆ, ಅಖಿಲ ಭಾರತ ಮಹಿಳಾ ಜಾನಪದ ಉತ್ಸವವನ್ನು ರಾಜ್ಯದಲ್ಲಿ ಆಯೋಜಿಸಲಾಗುವುದು ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ಭರವಸೆ ನೀಡಿದರು.

ಕರ್ನಾಟಕ ಜಾನಪದ ಅಕಾಡೆಮಿ ಶುಕ್ರವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಜಾನಪದ ಕಲಾವಿದರಿಗೆ 2025ನೇ ಸಾಲಿನ ಗೌರವ ಪ್ರಶಸ್ತಿ ಮತ್ತು ತಜ್ಞ ಪ್ರಶಸ್ತಿ ಪ್ರದಾನ ಮಾಡಿ ಅವರು ಮಾತನಾಡಿದರು.

‘ಗ್ರಾಮೀಣ ಭಾಗದಲ್ಲಿ ಜೀವಂತವಾಗಿರುವ ಜಾನಪದ ಪರಂಪರೆಯನ್ನು ಮುಂದಿನ ಪೀಳಿಗೆಗೆ ತಲುಪಿಸಬೇಕು. ಯುವ ಸಮುದಾಯ ಜಾನಪದ ಸಂಸ್ಕೃತಿಯನ್ನು ಮರೆಯುತ್ತಿದೆ. ಬೀಸುಕಲ್ಲಿನ ಹಾಡು, ಸೋಬಾನೆ ಪದ, ಮದುವೆ ಸಮಾರಂಭದ ವೇಳೆ ಅರಿಷಿಣ ಹಚ್ಚುವ ಹಾಡು ಎಲವನ್ನೂ ನಾವು ಮರೆತಿದ್ದೇವೆ. ನಾಡಿನ ಕಲೆ, ಸಂಸ್ಕೃತಿ ಉಳಿಸಲು ಸರ್ಕಾರ ಬದ್ಧವಾಗಿದೆ’ ಎಂದರು.

ಕರ್ನಾಟಕ ಜಾನಪದ ಅಕಾಡೆಮಿ ಅಧ್ಯಕ್ಷ ಗೊಲ್ಲಹಳ್ಳಿ ಶಿವಪ್ರಸಾದ್ ಮಾತನಾಡಿ, ‘ನಮ್ಮ ಮೂಲವನ್ನು ಮರೆತು ನಾವು ಮಾಯಾಲೋಕದಲ್ಲಿ ವಿಹರಿಸುತ್ತಿದ್ದೇವೆ. ಈ ನೆಲದ ಪದ ಜಾನಪದವಾಗಿದೆ. ಜಾನಪದದಲ್ಲಿ ವಿವೇಕ, ನಮ್ರತೆ, ಸಮಸಂಸ್ಕೃತಿ ಎಲ್ಲವೂ ಮೇಳೈಸಿದೆ. ಆದರೆ ನಾವೀಗ ಮಂಟೇ ಸ್ವಾಮಿ ಪದ, ಬಸವಣ್ಣ ಮತ್ತು ಅಂಬೇಡ್ಕರ್ ಅವರನ್ನ ನಾವು ಗಾಜಿನ ಮನೆಯಲ್ಲಿಟ್ಟಿದ್ದೇವೆ’ ಎಂದು ಬೇಸರ ವ್ಯಕ್ತಪಡಿಸಿದರು. ಯುವ ಸಮುದಾಯವನ್ನು ಜಾನಪದಕ್ಕೆ ಮರಳಿತರುವ ನಿಟ್ಟಿನಲ್ಲಿ ಅಕಾಡೆಮಿ ಯೋಜನೆ ರೂಪಿಸಿದೆ. ಕಾಲೇಜಿನ ಕಡೆಗೆ ಜಾನಪದ ಅಕಾಡೆಮಿ ಎಂಬ ಕಾರ್ಯಕ್ರಮ ರೂಪಿಸಿದೆ. ಹಟ್ಟಿಗಳಿಗೆ ದನಿಯಾಗಲು ಹಟ್ಟಿ ಅರಿವು ಕಾರ್ಯಕ್ರಮ ರೂಪಿಸಲಾಗಿದ್ದು ಚಿತ್ರಸಂತೆ ರೀತಿಯಲ್ಲಿ ಜನಪದ ಸಂತೆ ಮಾಡಲು ಯೋಜನೆ ರೂಪಿಸಲಾಗಿದೆ ಎಂದು ಹೇಳಿದರು.

ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಆರ್. ಸುನಂದಮ್ಮ, ಮಂಡ್ಯ ಜಿಲ್ಲೆಯ ಪಟಕುಣಿತ ಕಲಾವಿದ ಕದಲಗೆರೆ ಶಿವಣ್ಣಗೌಡ, ಬಿಬಿಎಂಪಿ ಮಾಜಿ ಸದಸ್ಯ ಎಂ. ಶಿವರಾಜ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಬಿ.ಎಸ್. ಮಂಜುನಾಥ ಸ್ವಾಮಿ, ಅಕಾಡೆಮಿ ರಿಜಿಸ್ಟ್ರಾರ್ ನಮ್ರತ ಉಪಸ್ಥಿತರಿದ್ದರು.

ಸಂಚಾರ ನಿಯಮ ಉಲ್ಲಂಘನೆ ಚಾಳಿ 6 ತಿಂಗಳು ಪರವಾನಗಿ ರದ್ದತಿಗೆ ಚಿಂತನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಪದೇ ಪದೇ ಸಂಚಾರ ನಿಯಮ ಉಲ್ಲಂಘಿಸುವ ವಾಹನ ಸವಾರರ ಚಾಲನಾ ಪರವಾನಗಿಯನ್ನು ಆರು ತಿಂಗಳ ಅವಧಿಗೆ ತಾತ್ಕಾಲಿಕವಾಗಿ ರದ್ದುಗೊಳಿಸಲು ಕೇಂದ್ರ ರಸ್ತೆ ಸಾರಿಗೆ ಸಚಿವಾಲಯ ಚಿಂತಿಸುತ್ತಿದೆ ಎಂದು ಸಾರಿಗೆ ಸಚಿವ ನಿತಿನ ಗಡ್ಕರಿ ತಿಳಿಸಿದ್ದಾರೆ.

ಪ್ರತಿ ಸಂಚಾರ ನಿಯಮ ಉಲ್ಲಂಘನೆಗೆ ಒಂದು ಪಾಯಿಂಟ್ ಎಂದು ನೀಡಲಾಗುವುದು. ಇಂತಹ 12 ಪಾಯಿಂಟ್‌ಗಳು ಸೇರಿಕೊಂಡಲ್ಲಿ ಆರು ತಿಂಗಳ ಕಾಲ ವಾಹನ ಸಂಚಾರಕ್ಕೆ ಅವಕಾಶವಿರುವುದಿಲ್ಲ ಎಂದು ಅವರು ಮಾಹಿತಿ ನೀಡಿದ್ದಾರೆ. ಸಣ್ಣಪುಟ್ಟ ಸಂಚಾರ ನಿಯಮ ಉಲ್ಲಂಘನೆಗಳಿಗೆ ಹೊರತಾದ ಮದ್ಯಪಾನ ಮಾಡಿ ವಾಹನ ಚಾಲನೆ ಮಾಡುವುದು ಸೇರಿದಂತೆ ಗಂಭೀರ ಸ್ವರೂಪದ ತಪ್ಪು ಎಸಗುವವರ ಪರವಾನಗಿಯನ್ನು ಶಾಶ್ವತವಾಗಿ ರದ್ದುಗೊಳಿಸಲಾಗುವುದು ಎಂದೂ ಎಚ್ಚರಿಕೆ ನೀಡಿದ್ದಾರೆ. ದೇಶದಲ್ಲಿ ಅತಿ ಹೆಚ್ಚು ಸಂಚಾರ ನಿಯಮ ಉಲ್ಲಂಘನೆಯಾಗುತ್ತಿರುವ 100 ಜಿಲ್ಲೆಗಳನ್ನು ಗುರುತಿಸಲಾಗಿದೆ ಎಂದು ಹೇಳಿದ್ದಾರೆ.

ತಂಬಾಕಿಗೆ ಸಿಗದ ಬೆಲೆ: ರೈತ ಆತ್ಮಹತ್ಯೆ

ಪಿರಿಯಾಪಟ್ಟಣ (ಮೈಸೂರು ಜಿಲ್ಲೆ): ತಾಲ್ಲೂಕಿನ ರಾಮನಾಥ ತುಂಗ ಎ.ಜಿ. ಕೊಪ್ಪಲು ಗ್ರಾಮದ ರೈತ ಸಿದ್ದೇಗೌಡ (45) ಕ್ರಿಮಿನಾಶಕ ಮಾತ್ರೆ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದು, ತಂಬಾಕಿಗೆ ಸೂಕ್ತ ಬೆಲೆ ಸಿಗದಿರುವುದೇ ಕಾರಣ ಎನ್ನಲಾಗಿದೆ. ಮೃತರು ತಮ್ಮ ಸಹೋದರ ಸಿದ್ದರಾಮೇಗೌಡ ಮತ್ತು ತಾಯಿ ನಾಗಮ್ಮ ಅವರ ಜಂಟಿ ಖಾತೆಯಲ್ಲಿರುವ ಸರ್ವೆ ನಂ 62/2 ರಲ್ಲಿ 1.3ಎಕರೆ ಜಮೀನಿನಲ್ಲಿ ಹೊಗೆಸೊಪ್ಪು, ಶುಂಠಿ ಬೆಳೆಯುತ್ತಿದ್ದರು. ವಿವಿಧೆಡೆ ಸಾಲ ಪಡೆದಿದ್ದರು ಎಂದು ದೂರಿನಲ್ಲಿ ತಿಳಿಸಲಾಗಿದೆ.

ಗೌರವಧನ ₹15 ಸಾವಿರ ಹೆಚ್ಚಳ ಸೇರಿ ವಿವಿಧ ಬೇಡಿಕೆ ಈಡೇರಿಸಲು ಆಗ್ರಹ

ಆಶಾ ಕಾರ್ಯಕರ್ತೆಯರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸರ್ಕಾರದ ಪ್ರೋತ್ಸಾಹಧನ ಹಾಗೂ ರಾಜ್ಯದ ಗೌರವಧನ ಸೇರಿಸಿ ತಿಂಗಳಿಗೆ ಒಟ್ಟು ₹15 ಸಾವಿರ ಗೌರವಧನ ನೀಡುವುದು, ಕೆಲಸದಿಂದ ವಜಾಗೊಳಿಸುವ ನಿರ್ಧಾರವನ್ನು ಕೈಬಿಡುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘವು ಶುಕ್ರವಾರ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿತು.

ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದಿದ್ದ ನೂರಾರು ಕಾರ್ಯಕರ್ತೆಯರು ಭಿತ್ತಿಪತ್ರಗಳನ್ನು ಪ್ರದರ್ಶಿಸಿ, ಬೇಡಿಕೆ ಈಡೇರಿಸುವಂತೆ ಸರ್ಕಾರವನ್ನು ಒತ್ತಾಯಿಸಿದರು.



ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಆಶಾ ಕಾರ್ಯಕರ್ತೆಯರು ಪ್ರತಿಭಟನೆ ನಡೆಸಿದರು. ಪ್ರಜಾವಾಣಿ ಚಿತ್ರ

ಕಾಂಗ್ರೆಸ್ ಪಕ್ಷವು ಚುನಾವಣಾ ಪ್ರಣಾಳಿಕೆಯಲ್ಲಿ ಘೋಷಿಸಿರುವಂತೆ ಆಶಾ ಕಾರ್ಯಕರ್ತೆಯರ ಗೌರವಧನವನ್ನು ಹೆಚ್ಚಿಸುವುದಾಗಿ ಬಜೆಟ್‌ನಲ್ಲಿ ಪ್ರಕಟಿಸಬೇಕು. ನಿವೃತ್ತ ಕಾರ್ಯಕರ್ತೆಯರಿಗೆ ಪಶ್ಚಿಮ ಬಂಗಾಳ ಮಾದರಿಯಲ್ಲಿ ಇಡುಗಂಟು ನೀಡಬೇಕು. ಅಂಗನವಾಡಿ ಮಾದರಿಯಲ್ಲಿ ಚಿಕಿತ್ಸಾ ವೆಚ್ಚ ಮರುಪಾವತಿಗೆ ವ್ಯವಸ್ಥೆ ಮಾಡಬೇಕು. ಗಂಭೀರ ಕಾಯಿಲೆಗಳಿಂದ ಬಳಲುತ್ತಿರುವ ಕಾರ್ಯಕರ್ತೆಯರಿಗೆ ಮೂರು ತಿಂಗಳ ನಿಶ್ಚಿತ ಗೌರವಧನ ಪಾವತಿಸಬೇಕು ಎಂದು ಪ್ರತಿಭಟನಕಾರರು ಆಗ್ರಹಿಸಿದರು.

ಸಂಘದ ಪ್ರಧಾನ ಕಾರ್ಯದರ್ಶಿ ಡಿ.ನಾಗಲಕ್ಷ್ಮಿ ಮಾತನಾಡಿ, ಚುನಾವಣಾ ಪ್ರಣಾಳಿಕೆಯಲ್ಲಿ ತಿಂಗಳ ಗೌರವ ಧನವನ್ನು ₹8 ಸಾವಿರಕ್ಕೆ ಹೆಚ್ಚಳ ಮಾಡುವುದಾಗಿ ನೀಡಿದ್ದ ಭರವಸೆ ಈಡೇರಿಲ್ಲ. ಸಚಿವರು, ಅಧಿಕಾರಿಗಳು ಹಲವು ಬಾರಿ ಸಭೆ ನಡೆಸಿದರೂ ಪ್ರಯೋಜನವಾಗಿಲ್ಲ. ಹಾಗಾಗಿ ಕಾರ್ಯಕರ್ತೆಯರು ಪ್ರತಿಭಟನೆಗೆ ಮುಂದಾಗಿದ್ದಾರೆ ಎಂದರು.

ಎಐಯುಟಿಯುಸಿ ರಾಜ್ಯ ಅಧ್ಯಕ್ಷ ಕೆ.ಸೋಮಶೇಖರ್, ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದ ರಾಜ್ಯ ಅಧ್ಯಕ್ಷ ಕೆ.ಸೋಮಶೇಖರ್ ಯಾದಗಿರಿ ಮಾತನಾಡಿದರು. ರಾಜ್ಯ ಉಪಾಧ್ಯಕ್ಷರಾದ ಎಂ. ಉಮಾದೇವಿ, ರಮಾ ಟಿ.ಸಿ, ಹನುಮೇಶ್, ಶ್ರೀಕಾಂತ್, ಮಂಜುಳಾ, ನಾಗಲಕ್ಷ್ಮಿ, ಫರಾನಾ, ಲಕ್ಷ್ಮಿ ದೇವಮ್ಮ, ವೀಣಾ, ಶಾರದಾ ಶಶಿಕಲಾ, ಶಾಂತಮ್ಮ, ಸರಸ್ವತಿ, ರೇಖಾ, ನಿರ್ಮಲಾ, ವಸಂತಾ, ರೇಷ್ಮಾ, ವಾಣಿ ಭಾಗವಹಿಸಿದ್ದರು.

ಹುಟ್ಟುಹಬ್ಬದ ನೆಪ: ಒಂದೆಡೆ ಸೇರಿದ ಡಿಕೆಶಿ ಬಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಯಕತ್ವ ಬದಲಾವಣೆ ಇನ್ನೂ ಚರ್ಚೆಯಲ್ಲಿರುವ ಹೊತ್ತಿನಲ್ಲಿಯೇ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಆಪ್ತವಲಯದಲ್ಲಿ ಗುರುತಿಸಿಕೊಂಡಿರುವ 23 ಶಾಸಕರು ಒಂದೆಡೆ ಸೇರಿ ಔತಣಕೂಟ ನಡೆಸಿರುವುದು ರಾಜಕೀಯ ವಲಯದಲ್ಲಿ ಚರ್ಚೆ ಹುಟ್ಟುಹಾಕಿದೆ.

ಮಾಗಡಿ ಶಾಸಕ ಎಚ್.ಸಿ.ಬಾಲಕೃಷ್ಣ ಅವರ ಹುಟ್ಟುಹಬ್ಬದ ಅಂಗವಾಗಿ ಗುರುವಾರ ಔತಣಕೂಟ ಏರ್ಪಡಿಸಲಾಗಿತ್ತು. ಸಚಿವರಾದ ಡಿ.ಸುಧಾಕರ್, ಮಂಕಾಳ ವೈದ್ಯ, ಶಾಸಕರಾದ ಶಿವಗಂಗಾ ಬಸವರಾಜು, ಎಚ್.ಡಿ. ರಂಗನಾಥ್, ಸಿ.ಪಿ.ಯೋಗೇಶ್ವರ, ನಯನಾ ಮೋಟಮ್ಮ, ಆನೇಕಲ್ ಶಿವಣ್ಣ ಮತ್ತಿತರರು ಭಾಗಿಯಾಗಿದ್ದರು. ವಿಧಾನ ಪರಿಷತ್ ಸದಸ್ಯ ಎಸ್.ರವಿ ಜತೆ ಇದ್ದರು.

ಅವರ ವೈಯಕ್ತಿಕ ವಿಚಾರ: ಈ ಕುರಿತು ಶುಕ್ರವಾರ ಪ್ರತಿಕ್ರಿಯೆ ನೀಡಿದ ಡಿ.ಕೆ. ಶಿವಕುಮಾರ್, ‘ಬಾಲಕೃಷ್ಣ ಅವರ ಜನ್ಮದಿನಕ್ಕೆ ಹೋಗಿದ್ದಾರೆ. ಯಾವ ಶಕ್ತಿ ಪ್ರದರ್ಶನವೂ ಇಲ್ಲ. ಕೆಲವರು ವಿಶ್ರಾಂತಿ, ಅಧ್ಯಯನಕ್ಕೆ ವಿದೇಶಕ್ಕೆ ಹೋಗುತ್ತಾರೆ. ಕೆಲವರು ದೆಹಲಿಗೆ ಹೋದರೆ, ಮತ್ತೆ ಕೆಲವರು ಭೋಜನ ಕೂಟ ಸೇರುತ್ತಾರೆ. ಪಕ್ಷಕ್ಕೂ ಇದಕ್ಕೂ ಸಂಬಂಧವಿಲ್ಲ’ ಎಂದರು.

‘ಶಾಸಕರು ದೆಹಲಿಗೆ ಹೋಗಿ ನಿಮ್ಮ ಪರವಾಗಿ ಮನವಿ ಮಾಡುತ್ತಾರಂತಲ್ಲ’ ಎನ್ನುವ ಪ್ರಶ್ನೆಗೆ ಉತ್ತರಿಸಿದ ಅವರು, ‘ದಯವಿಟ್ಟು ಬೇಡ ಎಂದು ಮನವಿ ಮಾಡುತ್ತೇನೆ. ನಿಮ್ಮ ಸಮಸ್ಯೆ ಇದ್ದರೆ, ಮಂತ್ರಿಸ್ಥಾನದ ಆಕಾಂಕ್ಷಿಯಾಗಿದ್ದರೆ, ಅಧಿಕಾರ, ಹುದ್ದೆ ಬೇಕು ಎಂದರೆ ಹೋಗಿ ಮನವಿ ಮಾಡಿ. ನನ್ನ ವಿಚಾರಕ್ಕೆ ಹೋಗುವುದು ಬೇಡ’ ಎಂದು ಮನವಿ ಮಾಡಿದರು. ‘ಸಿದ್ದರಾಮಯ್ಯ, ಜಿ. ಪರಮೇಶ್ವರ, ಎಚ್.ಕೆ.ಪಾಟೀಲ, ಮಹದೇವಪ್ಪ, ನಾನು ಹಳಬರಾಗಿದ್ದೇವೆ, ಹೊಸಬರು ಸಚಿವರಾಗುವ ಆಸೆ ಹೊಂದಿದ್ದಾರೆ. ಇದನ್ನು ದೆಹಲಿ ನಾಯಕರ ಗಮನಕ್ಕೆ ತರುವೆ’ ಎಂದರು.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ಕರ್ತವ್ಯವನ್ನು ಕುರಿತು ಮೊದಲು ಯೋಚನೆ ಮಾಡಿ; ಹಕ್ಕುಗಳು ಆಮೇಲೆ ಬರಲಿ.

–ಡಿ.ವಿ. ಗುಂಡಪ್ಪ

ಸಂಪಾದಕೀಯ

ಮದುವೆಗಳಿಗೆ ಸರ್ಕಾರದ ಕಣ್ಗಾವಲು ಪ್ರತಿಗಾಮಿ–ಕೋಮುವಾದಿ ಚಿಂತನೆ

ವಿವಾಹಗಳ ನೋಂದಣಿಗೆ ಪೋಷಕರ ಸಮ್ಮತಿಯನ್ನು ಕಡ್ಡಾಯಗೊಳಿಸುವ ಪ್ರಸ್ತಾವ ಗುಜರಾತ್ ಸರ್ಕಾರದ ಮುಂದಿದೆ. ಇದು, ಸಂಕುಚಿತ ಮನಃಸ್ಥಿತಿಯ ಹಾಗೂ ಸಾಂವಿಧಾನಿಕ ನಿಲುವುಗಳೊಂದಿಗೆ ಸಂಘರ್ಷಕ್ಕೆ ಕಾರಣವಾಗುವಂತಹ ಪ್ರತಿಗಾಮಿ ಚಿಂತನೆಯಾಗಿದೆ. ಈ ಪ್ರಸ್ತಾವ, ಸ್ವಾಯತ್ತತೆ ಹಾಗೂ ಗೋಪ್ಯತೆಯ ಹಕ್ಕುಗಳನ್ನು ಉಲ್ಲಂಘಿಸುವಂತಹದ್ದೂ ಆಗಿದೆ. ರಾಜ್ಯದ ಅಮಾಯಕ ಹೆಣ್ಣುಮಕ್ಕಳನ್ನು ಸಮಾಜ ವಿರೋಧಿ ಶಕ್ತಿಗಳು ತಮ್ಮ ಬಲೆಗೆ ಬೀಳಿಸಿಕೊಂಡು ವಂಚಿಸುವುದನ್ನು ತಪ್ಪಿಸುವ ಉದ್ದೇಶದಿಂದ ‘ಗುಜರಾತ್ ವಿವಾಹ ನೋಂದಣಿಗಳ ಕಾಯ್ದೆ–2006’ಕ್ಕೆ ತಿದ್ದುಪಡಿ ತರಲು ಉದ್ದೇಶಿಸಿರುವುದಾಗಿ ಆ ರಾಜ್ಯದ ಉಪ ಮುಖ್ಯಮಂತ್ರಿ ಹರ್ಷ್ ಸಂಘವಿ ಹೇಳಿದ್ದಾರೆ. ಪ್ರೇಮ ವಿವಾಹಗಳಿಗೆ ಸರ್ಕಾರ ವಿರೋಧವಾಗಿಲ್ಲ ಎನ್ನುವುದನ್ನು ಸ್ಪಷ್ಟಪಡಿಸಿರುವ ಅವರು, ಹೆಣ್ಣುಮಕ್ಕಳ ಘನತೆ ಹಾಗೂ ಸನಾತನ ಧರ್ಮದ ರಕ್ಷಣೆಯಷ್ಟೇ ಸರ್ಕಾರದ ಉದ್ದೇಶವಾಗಿದೆ ಎಂದು ಹೇಳಿದ್ದಾರೆ. ಆದರೆ, ಅವರ ಹೇಳಿಕೆಯ ಹಿಂದೆ ಬಲಪಂಥೀಯ ಸಂಘಟನೆಗಳು ಬಿಂಬಿಸುತ್ತಿರುವ ‘ಲವ್ ಜಿಹಾದ್’ಗೆ ಪ್ರತಿರೋಧ ಇರುವುದನ್ನು ಗಮನಿಸಬಹುದು. ಕಾಯ್ದೆ ತಿದ್ದುಪಡಿಗೊಂಡಲ್ಲಿ, ವಧು–ವರರು ತಾವು ಮದುವೆಯಾಗುತ್ತಿರುವ ವಿಷಯವನ್ನು ಪೋಷಕರಿಗೆ ತಿಳಿಸಿದ್ದೇವೆ ಎಂದು ಘೋಷಿಸಬೇಕಾಗಿದೆ ಹಾಗೂ ಪೋಷಕರ ಗುರುತಿನ ವಿವರಗಳನ್ನು ಒದಗಿಸಬೇಕಾಗಿದೆ. ಈ ಕ್ರಮವು ಮಹಿಳೆಯರ ಸ್ವಂತಿಕೆ ಹಾಗೂ ಯೋಚನಾಕ್ರಮವನ್ನು ಅನುಮಾನಿಸುವಂತಹದ್ದಾಗಿದೆ; ರಕ್ಷಣೆ ಕೋರುವವರು ಎಂದು ಭಾವಿಸುವ ಮೂಲಕ ಅವರನ್ನು ದುರ್ಬಲಗೊಳಿಸುವಂತಿದೆ.



> ಮದುವೆಗಳ ನೋಂದಣಿಗೆ ಪೋಷಕರ ಸಮ್ಮತಿಯನ್ನು ಕಡ್ಡಾಯಗೊಳಿಸಲು ಗುಜರಾತ್ ಸರ್ಕಾರ ಪ್ರಯತ್ನಿಸುತ್ತಿದೆ. ಇದು ಸಾಂವಿಧಾನಿಕ ತತ್ತ್ವಗಳಿಗೆ ವಿರುದ್ಧವಾಗಿದೆ ಹಾಗೂ ಪ್ರತಿಗಾಮಿ ಚಿಂತನೆಯಾಗಿದೆ.

ವಿವಾಹ ನೋಂದಣಿ ಕಾಯ್ದೆಯ ತಿದ್ದುಪಡಿ ಪ್ರಸ್ತಾವವು ಸಾಂವಿಧಾನಿಕ ನಿಲುವುಗಳಿಗೂ ವಿರುದ್ಧವಾದುದು. ನ್ಯಾಯಾಲಯದ ಅನೇಕ ತೀರ್ಪುಗಳು, ಯಾರ ಒಪ್ಪಿಗೆಯ ಅಗತ್ಯವೂ ಇಲ್ಲದೆ ಇಬ್ಬರು ವಯಸ್ಕರು ಮದುವೆಯಾಗುವ ಹಕ್ಕು ಹೊಂದಿರುವುದನ್ನು ದೃಢಪಡಿಸಿವೆ. ಈ ಹಕ್ಕನ್ನು 21ನೇ ವಿಧಿ ಕಲ್ಪಿಸಿದೆ. ಲತಾ ಸಿಂಗ್ ವರ್ಸಸ್ ಉತ್ತರ ಪ್ರದೇಶ (2002), ಶಫಿನ್ ಜಹಾನ್ ವರ್ಸಸ್ ಅಶೋಕನ್ ಕೆ.ಎಂ. (2018) ಹಾಗೂ ಲಕ್ಷ್ಮೀಬಾಯಿ ಚಂದರಗಿ ಬಿ. ವರ್ಸಸ್ ಕರ್ನಾಟಕ (2021) ಪ್ರಕರಣಗಳಲ್ಲಿ, ‘ಬಾಹ್ಯ ಹಸ್ತಕ್ಷೇಪವಿಲ್ಲದೆ ಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯವನ್ನು ಜೀವಿಸುವ ಹಕ್ಕು ನೀಡುತ್ತದೆ’ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಹೈಕೋರ್ಟ್‌ಗಳು ಕೂಡ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿವೆ. ವಿಶೇಷ ವಿವಾಹ ಕಾಯ್ದೆಯಡಿ ಮೂವತ್ತು ದಿನಗಳ ನೋಟಿಸ್‌ನ ಅಗತ್ಯವನ್ನೂ ನ್ಯಾಯಾಲಯಗಳು ರದ್ದುಗೊಳಿಸಿದ್ದು, ಅದು ಗೋಪ್ಯತೆಯ ಮೇಲಿನ ಆಕ್ರಮಣ ಎಂದು ವಿಶ್ಲೇಷಿಸಿವೆ. ಮದುವೆಯಾಗುವ ನಿರ್ಧಾರಕ್ಕೂ ಜಾತಿ, ಧರ್ಮ ಅಥವಾ ಪೋಷಕರ ಸಮ್ಮತಿಗೂ ಸಂಬಂಧವನ್ನು ಕಲ್ಪಿಸುವುದು ಸರಿಯಲ್ಲ. ಬಾಹ್ಯ ವಿರೋಧದ ಸಂದರ್ಭದಲ್ಲಿ ವಯಸ್ಕ ಜೋಡಿಯ ಮದುವೆಯಾಗುವ ಹಕ್ಕನ್ನು ರಕ್ಷಿಸುವುದು ರಾಜ್ಯ ಸರ್ಕಾರದ ಕರ್ತವ್ಯವಾಗಿದೆ. ಈ ಹೊಣೆಗಾರಿಕೆಯನ್ನು ನಿರ್ವಹಿಸುವ ಬದಲಾಗಿ, ಉದ್ದೇಶಿತ ತಿದ್ದುಪಡಿಯು ಮದುವೆಗೆ ಸಾಮಾಜಿಕ ಕಣ್ಗಾವಲು ವಿಧಿಸುವ ಹಾಗೂ ಹೆಣ್ಣು–ಗಂಡಿನ ಮದುವೆಯ ನಿರ್ಧಾರದ ಮೇಲೆ ಕುಟುಂಬ ಹಾಗೂ ಸರ್ಕಾರದ ನಿಯಂತ್ರಣವನ್ನು ಹೆಚ್ಚಿಸುವ ಪ್ರಯತ್ನವಾಗಿದೆ.

ಯಾವುದೇ ಪುರಾವೆಗಳಿಲ್ಲದೆ ಹರಡಲಾಗುತ್ತಿರುವ ‘ಲವ್ ಜಿಹಾದ್’ ಪರಿಕಲ್ಪನೆಯು, ಆಳವಾದ ಕೋಮುವಾದಿ ಅಜೆಂಡಾವನ್ನು ಹೊಂದಿದೆ. ಮುಸ್ಲಿಮರನ್ನು ರಾಕ್ಷಸರಂತೆ ಚಿತ್ರಿಸುವ ಮೂಲಕ ಕೋಮು ಧ್ರುವೀಕರಣದ ಉದ್ದೇಶವನ್ನು ಈ ಪರಿಕಲ್ಪನೆ ಹೊಂದಿದೆ. ಉತ್ತರ ಪ್ರದೇಶ, ಮಧ್ಯಪ್ರದೇಶ ಮತ್ತು ಉತ್ತರಾಖಂಡ ರಾಜ್ಯಗಳಲ್ಲೂ ಇದೇ ರೂಪದ ನಿರ್ಬಂಧಗಳನ್ನು ಕೈಗೊಳ್ಳಲಾಗಿದೆ ಹಾಗೂ ಯುವಜನರು ತಮ್ಮಿಷ್ಟದ ಜೀವನಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳುವುದನ್ನು ನಿರ್ಬಂಧಿಸಲಾಗಿದೆ. ಗುಜರಾತ್ ಸರ್ಕಾರದ ಪ್ರತಿಗಾಮಿ ಕ್ರಮವನ್ನು ಇತರ ಪಕ್ಷಗಳು ವಿರೋಧಿಸುತ್ತಿಲ್ಲ ಎನ್ನುವುದು ಆ ರಾಜ್ಯದ ರಾಜಕೀಯ ಮಿತಿಯನ್ನು ಸಂಕೇತಿಸುವಂತಿದೆ. ಕಾಂಗ್ರೆಸ್ ಸಂಸದ ಗೆನಿಬೆನ್ ಠಾಕೂರ್ ಹಾಗೂ ಎಎಪಿ ಶಾಸಕ ಹೇಮಂತ್ ಖಾವಾ ಅವರು ಸರ್ಕಾರದ ಪ್ರಸ್ತಾವವನ್ನು ಬೆಂಬಲಿಸಿದ್ದಾರೆಂದು ವರದಿಯಾಗಿದೆ. ಈ ಹಿನ್ನೆಲೆಯಲ್ಲಿ, ಕಾಂಗ್ರೆಸ್ ಹಾಗೂ ಎಎಪಿ ರಾಷ್ಟ್ರೀಯ ನಾಯಕತ್ವವು ಗುಜರಾತ್ ಸರ್ಕಾರದ ಪ್ರತಿಗಾಮಿ ನಿಲುವಿನ ಬಗ್ಗೆ ತಮ್ಮ ನಿಲುವುಗಳನ್ನು ಸ್ಪಷ್ಟಪಡಿಸಬೇಕಾಗಿದೆ.

ಚಾಟಿ



ಪಾಪಕೃತ್ಯಕ್ಕೆ ಬೆಂಬಲ ಬೇಡ

ಅಪಾತ್ರದಾನ ತಪ್ಪು ಎಂದು ಶಾಸ್ತ್ರಗಳು ಹೇಳುತ್ತವೆ. ಅನರ್ಹರಿಗೆ, ಭ್ರಷ್ಟರಿಗೆ, ಪಾಪಕೃತ್ಯಗಳಿಗೆ ಬೆಂಬಲ ಕೊಟ್ಟು ದಾನ ನೀಡುವವರಿಗೆ ಸ್ವತಃ ಪಾಪ ಅಂಟುತ್ತದೆಯೇ ಹೊರತು ಪುಣ್ಯ ಬರುವುದಿಲ್ಲ.

ರವಿ ಕೃಷ್ಣಾರೆಡ್ಡಿ, ಗೌರವಾಧ್ಯಕ್ಷ, ಕೆಆರ್‌ಎಸ್ ರಾಜ್ಯ ಘಟಕ

ಕಿಡಿನುಡಿ



ಮೋದಿಗೆ ನೀಡಿರುವ ‘ವಿಶ್ವಗುರು’ ಪದವಿಗೆ ತಕ್ಕಂತೆ ದೇಶದ ಆರ್ಥಿಕತೆ, ಸಾಮಾಜಿಕ ಸೌಹಾರ್ದ, ಸಂವಿಧಾನದ ಮೌಲ್ಯಗಳು ಬಲವಾಗಿವೆಯೆ? ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾರತದ ಮಾನ್ಯತೆ ಹೆಚ್ಚಿದೆಯೆ? ಜನರ ಜೀವನಮಟ್ಟ ಸುಧಾರಿಸಿದೆಯೆ?

ಬಿ.ಕೆ. ಹರಿಪ್ರಸಾದ್, ವಿಧಾನ ಪರಿಷತ್ ಸದಸ್ಯ

25 ವರ್ಷಗಳ ಹಿಂದೆ

ಬುಧವಾರ, 28-2-2001

• ಮೃಗಾಲಯ ಹುಲಿಗಳ ಹತ್ಯೆ ಸಂಚು: ಮೊಕದ್ದಮೆ ದಾಖಲು

ಮೈಸೂರು, ಫೆ. 27– ಪ್ರತ್ಯೇಕ ಬೋನುಗಳಲ್ಲಿದ್ದ ಎರಡು ಬಿಳಿ ಹುಲಿಗಳನ್ನು ಒಂದೇ ಬೋನಿಗೆ ಸೇರುವಂತೆ ಮಾಡಿ ಅವುಗಳ ಮಧ್ಯೆ ಘರ್ಷಣೆಗೆ ಎಡೆಮಾಡಿಕೊಟ್ಟು ಅವುಗಳನ್ನು ಸಾವಿನ ಅಂಚಿಗೆ ಒಯ್ಯುವ ಸಂಚೊಂದು ನಗರದ ಮೃಗಾಲಯದಲ್ಲಿ ಕಳೆದ ರಾತ್ರಿ ನಡೆದಿದೆ.

ಇಲ್ಲಿನ ನಜರ್‌ಬಾದ್ ಪೊಲೀಸ್ ಠಾಣೆಯಲ್ಲಿ ಶ್ರೀಚಾಮರಾಜೇಂದ್ರ ಮೃಗಾಲಯದ ವ್ಯವಸ್ಥಾಪಕ ನಿರ್ದೇಶಕ ಎನ್. ರಾಜಶೇಖರ್ ಅವರು ದೂರು ದಾಖಲು ಮಾಡಿದ್ದು, ಈ ಘಟನೆ ಬಗ್ಗೆ ತನಿಖೆ ನಡೆಸಿ ದುಷ್ಕರ್ಮಿಗಳನ್ನು ಪತ್ತೆ ಮಾಡುವಂತೆ ಕೋರಿದ್ದಾರೆ.

ಕಳೆದ ರಾತ್ರಿ ದುಷ್ಕರ್ಮಿಗಳು ಎರಡು ಬಿಳಿ ಹುಲಿಗಳಿದ್ದ ಪ್ರತ್ಯೇಕ ಬೋನುಗಳ ಬಾಗಿಲಿಗೆ ಹಾಕಿದ್ದ ಕಬ್ಬಿಣದ ಕೊಂಡಿಗಳನ್ನು ಸರಳಿನಿಂದ ಮೀಟಿ ಬೋನುಗಳ ಬಾಗಿಲು ತೆರೆದುಕೊಳ್ಳುವಂತೆ ಮಾಡುವ ಮೂಲಕ ಹುಲಿಗಳು ಒಂದೇ ಕಡೆ ಸೇರುವಂತೆ ಮಾಡಿದ್ದಾರೆ.

• ಔಷಧ ಸಸ್ಯ ಅಭಿವೃದ್ಧಿ: ಯೋಜನಾ ಆಯೋಗ ಸಲಹೆ

ಬೆಂಗಳೂರು, ಫೆ. 27– ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿರುವ ರಾಜ್ಯವನ್ನು ಜೈವಿಕ ತಂತ್ರಜ್ಞಾನ ಕ್ಷೇತ್ರದಲ್ಲಿಯೂ ಶೀಘ್ರ ಅಭಿವೃದ್ಧಿಪಡಿಸಲು ಯೋಜನಾ ಆಯೋಗ ಕೆಲವು ಸಲಹೆಗಳನ್ನು ಮಾಡಿದೆ.

ಈ ಸಲಹೆಗಳಲ್ಲಿ ಮುಖ್ಯವಾಗಿ ಅತ್ಯಮೂಲ್ಯ ಔಷಧ ಸಸ್ಯಗಳನ್ನು ಬೆಳೆಸುವುದು, ಜಂಟಿ ಕ್ಷೇತ್ರದಲ್ಲಿ ಅರಣ್ಯ ಅಭಿವೃದ್ಧಿ, ಚರ್ಮೋದ್ಯೋಗ, ಸಿದ್ಧಉಡುಪು ಕ್ಷೇತ್ರವನ್ನು ಅಭಿವೃದ್ಧಿಪಡಿಸುವುದು ಮುಖ್ಯವಾಗಿದೆ ಎಂದು ಹನ್ನೊಂದನೇ ಯೋಜನಾ ಆಯೋಗದ ಸದಸ್ಯರಾದ ಡಾ. ಡಿ.ಎನ್. ತಿವಾರಿ ತಿಳಿಸಿದರು.

75 ವರ್ಷಗಳ ಹಿಂದೆ

ಬುಧವಾರ, 28-2-1951

• ಪಾಕಿಸ್ತಾನ್ ರೂಪಾಯಿಯ ಸಮ ಮೌಲ್ಯಕ್ಕೆ ಒಪ್ಪಿಗೆ

ನವದೆಹಲಿ, ಫೆ. 27– ಪಾಕಿಸ್ತಾನ ಸರಕಾರ ಸಾರಿರುವ ಪಾಕಿಸ್ತಾನ್ ರೂಪಾಯಿಯ ಸಮಮೌಲ್ಯವನ್ನು ಅಧರಿಸಿ ಭಾರತ–ಪಾಕಿಸ್ತಾನದ ಮಧ್ಯೆ ವಿನಿಮಯ ವ್ಯವಹಾರ ನಡೆಸಲು ಭಾರತ ಸರ್ಕಾರ ಒಪ್ಪಿದೆ ಎಂಬುದಾಗಿ ಅರ್ಥ ಸಚಿವ ಸಿ.ಡಿ. ದೇಶಮುಖ್ ಅವರು ಈ ಸಂಜೆ ಪಾರ್ಲಿಮೆಂಟಿನಲ್ಲಿ ಪ್ರಕಟಿಸಿದರು.

ಈ ಒಪ್ಪಂದದ ರೀತ್ಯ 1951ರಲ್ಲಿ ಭಾರತ 2 ಲಕ್ಷ ಟನ್ ಆಹಾರ ಧಾನ್ಯಗಳನ್ನು (ಬಹುಪಾಲು ಅಕ್ಕಿ ಸ್ವಲ್ಪ ಭಾಗ ಗೋಧಿ) ಪಡೆಯುವ ಸಂಭವವಿದೆ. ಬೆಳೆ ಚೆನ್ನಾಗಿದ್ದರೆ ಬರುವ ವರ್ಷ 1 ಲಕ್ಷ ಟನ್ ಅಕ್ಕಿ, 2 ಲಕ್ಷ ಟನ್ ಗೋಧಿ ಒದಗಿಸಲು ಪಾಕಿಸ್ತಾನ ಸಮ್ಮತಿಸಿದೆ.

ಶೈಕ್ಷಣಿಕ ಪದವಿಗಳ ಅಂತ್ಯಕಾಲ



ಅನುರಣನ

ನಾರಾಯಣ ಎ.

ಉನ್ನತ ಶಿಕ್ಷಣ ರಂಗದಲ್ಲಿ ಅರ್ಥಾತ್ ಕಾಲೇಜು ಮತ್ತು ವಿಶ್ವವಿದ್ಯಾಲಯಗಳಲ್ಲಿ ಪೂರ್ಣಕಾಲಿಕ– ಕಾಯಂ ಶಿಕ್ಷಕರಿರಬೇಕೆ, ಅತಿಥಿ ಶಿಕ್ಷಕರಿರಬೇಕೆ ಅಥವಾ ಸಂದರ್ಶಕ ಪ್ರಾಧ್ಯಾಪಕರು ಇದ್ದರೆ ಸಾಕೆ ಎಂಬ ಜಿಜ್ಞಾಸೆ ಒಂದೆಡೆ ನಡೆಯುತ್ತಿರುವಾಗಲೇ, ಇನ್ನೊಂದೆಡೆ ಇಡೀ ಉನ್ನತ ಶಿಕ್ಷಣ ರಂಗವೇ ತಣ್ಣನೆ ಕಂಪಿಸುತ್ತಿದೆ. ಕಾರಣ ಇಷ್ಟೇ. ಈ ಉನ್ನತ ಶಿಕ್ಷಣ ಸಂಸ್ಥೆಗಳು ನೀಡುತ್ತಿರುವ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳು ವಿದ್ಯಾರ್ಥಿಗಳ ಭವಿಷ್ಯವನ್ನು ರೂಪಿಸಲು ಅಗತ್ಯವೇ ಇಲ್ಲ ಎನ್ನುವ ಸ್ಥಿತಿಯೊಂದು ನಿಧಾನವಾಗಿ ಅನಾವರಣಗೊಳ್ಳುತ್ತಿದೆ. ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳಲ್ಲಿ ದೊರೆಯುವ ಶಿಕ್ಷಣಕ್ಕೂ ಉದ್ಯೋಗ ಕ್ಷೇತ್ರಕ್ಕೂ ಸಂಬಂಧವಿಲ್ಲ ಎಂದು ಇಷ್ಟು ಕಾಲ ಎಲ್ಲರೂ ಹೇಳುತ್ತಿದ್ದರು. ಅದಕ್ಕಾಗಿ ಪದವಿ ಶಿಕ್ಷಣವನ್ನು ಪ್ರಸ್ತುತಗೊಳಿಸುವ ಬಗ್ಗೆ ವರದಿಗಳ ಮೇಲೆ ವರದಿಗಳು ಬಂದದ್ದಾಯಿತು. ನೀತಿಗಳ ಮೇಲೆ ನೀತಿಗಳನ್ನು ರೂಪಿಸಿದ್ದಾಯಿತು. ಈಗ ಪರಿಸ್ಥಿತಿ ಹೇಗೆ ಬದಲಾಗುತ್ತಿದೆ ಎಂದರೆ, ಪದವಿಯಲ್ಲಿ ಏನನ್ನು ಕಲಿಸುತ್ತೀರಿ ಬಿಡುತ್ತೀರಿ ಎನ್ನುವ ಪ್ರಶ್ನೆಯೇ ಉದ್ಭವಿಸುತ್ತಿಲ್ಲ. ಉದ್ಯೋಗ ಮಾರುಕಟ್ಟೆಯನ್ನು ಪ್ರವೇಶಿಸಲು ಪದವಿಯ ಅಗತ್ಯವೇ ಇಲ್ಲ ಎನ್ನುವ ಪರಿಸ್ಥಿತಿಯೊಂದು ನಿಧಾನವಾಗಿ ನಿರ್ಮಾಣವಾಗುತ್ತಿದೆ. ವಿಶ್ವವಿದ್ಯಾಲಯಗಳ ಅಸ್ತಿತ್ವ ಉಳಿಯಬೇಕೆಂದಿದ್ದರೆ ಪದವಿ ಅಧ್ಯಯನದ ಪರಿಕಲ್ಪನೆಯನ್ನೇ ಮರುಸೃಷ್ಟಿಸಬೇಕಾದ ಕಾಲ ಬಂದಂತಿದೆ.

ವಿಶ್ವದೆಲ್ಲೆಡೆಯಿಂದ ವಿದ್ಯಾರ್ಥಿಗಳನ್ನು ಆಕರ್ಷಿಸುತ್ತಿದ್ದ ಯುರೋಪ್ ಮತ್ತು ಅಮೆರಿಕದ ವಿಶ್ವವಿದ್ಯಾಲಯಗಳನ್ನು ಈ ಸಮಸ್ಯೆ ಎಷ್ಟರ ಮಟ್ಟಿಗೆ ಕಾಡುತ್ತಿದೆ ಎಂದರೆ, ಇಂಗ್ಲೆಂಡ್‌ನ ವಿಶ್ವವಿದ್ಯಾಲಯಗಳು ತೀವ್ರ ಆರ್ಥಿಕ ಸಂಕಷ್ಟ ಎದುರಿಸುತ್ತಿವೆ. ವಿದ್ಯಾರ್ಥಿಗಳ ಸಂಖ್ಯೆ ಕ್ಷೀಣಿಸುತ್ತಿರುವ ಕಾರಣ ಇತ್ತೀಚೆಗೆ ಇಂಗ್ಲೆಂಡ್‌ನ ಕೆಂಟ್ ಮತ್ತು ಗ್ರೀನ್ವಿಚ್ ವಿಶ್ವವಿದ್ಯಾಲಯಗಳು ಪರಸ್ಪರ ವಿಲೀನಗೊಳ್ಳುತ್ತಿವೆ. ಬಿಬಿಸಿ ವರದಿಯ ಪ್ರಕಾರ ಇದು ಕೇವಲ ಆರಂಭ ಮಾತ್ರ. ಇನ್ನೂ ಹಲವಾರು ಸಣ್ಣ ಮತ್ತು ಮಧ್ಯಮ ಪ್ರಮಾಣದ ವಿಶ್ವವಿದ್ಯಾಲಯಗಳು ಒಂದೋ ಶಾಶ್ವತವಾಗಿ ಬಾಗಿಲು ಮುಚ್ಚಬೇಕು ಇಲ್ಲವೇ ವಿಲೀನಗೊಳ್ಳುವ ಮೂಲಕ ಅಸ್ತಿತ್ವ ಉಳಿಸಿಕೊಳ್ಳಲು ಹೆಣಗಾಡಬೇಕು. ಜಗತ್ ಪ್ರಸಿದ್ಧ ಹಾರ್ವರ್ಡ್ ವಿಶ್ವವಿದ್ಯಾಲಯ ನಡೆಸಿದ ಅಧ್ಯಯನವೊಂದರ ಪ್ರಕಾರ– ಎಂಬಿಎ, ಕಂಪ್ಯೂಟರ್ ವಿಜ್ಞಾನ ಮತ್ತು ಅರ್ಥಶಾಸ್ತ್ರ ಸೇರಿದಂತೆ ಈ ತನಕ ಅತ್ಯಂತ ಪ್ರತಿಷ್ಠಿತ ಎಂದು ಪರಿಗಣಿಸಲಾಗುವ 10 ಶೈಕ್ಷಣಿಕ ಪದವಿಗಳು ಉದ್ಯೋಗ ಮಾರುಕಟ್ಟೆಯಲ್ಲಿ ತಮ್ಮ ಮೌಲ್ಯಗಳನ್ನು ಕಳೆದುಕೊಳ್ಳುತ್ತಿವೆ.

ಈ ತನಕ ಪರಿಸ್ಥಿತಿ ಹೇಗಿತ್ತು ಎಂದರೆ, ಕೆಲವೊಂದು ವಿಶ್ವವಿದ್ಯಾಲಯಗಳಿಂದ ಕೆಲವೊಂದು ವಿಷಯಗಳಲ್ಲಿ ಪದವಿಗಳನ್ನು ಸಂಪಾದಿಸಿದರೆ ಸಾಕು, ದೊಡ್ಡ ಮೊತ್ತದ ಸಂಬಳ ತರುವ ಉದ್ಯೋಗಗಳು ಹುಡುಕಿಕೊಂಡು ಬರುತ್ತವೆ, ಭವಿಷ್ಯ ಸುಭದ್ರವಾಗುತ್ತದೆ ಎನ್ನುವ ಸ್ಥಿತಿ ಇತ್ತು. ಅದು ಬದಲಾಗುತ್ತಿದೆ. ಯಾವ ಸಂಸ್ಥೆ, ಯಾವ ಪದವಿ, ಯಾವ ಪ್ರಮಾಣ ಪತ್ರ ಎಂದು ಯಾರೂ ಈಗ ಕೇಳುವುದಿಲ್ಲ. ಸಂಬಂಧಪಟ್ಟ ಉದ್ಯೋಗ ನಿರ್ವಹಿಸಲು ಅಭ್ಯರ್ಥಿಗೆ ಸಾಮರ್ಥ್ಯ ಇದೆಯೇ ಇಲ್ಲವೇ ಎನ್ನುವುದಷ್ಟೇ ಮುಖ್ಯ. ಇಲ್ಲಿ ಒಂದು ಪ್ರಶ್ನೆ ಮೂಡುತ್ತದೆ. ಹಾಗಾದರೆ ಈ ಉದ್ಯೋಗಗಳನ್ನು ನಿರ್ವಹಿಸಲು ಬೇಕಾದ ಸಾಮರ್ಥ್ಯವನ್ನು ಅಭ್ಯರ್ಥಿಗಳು ಎಲ್ಲಿಂದ ಪಡೆದಿರುತ್ತಾರೆ? ಇಷ್ಟರ ತನಕ ಅಭ್ಯರ್ಥಿಗಳಲ್ಲಿ ಸೂಕ್ತ ಸಾಮರ್ಥ್ಯ ಇದೆಯೋ ಇಲ್ಲವೋ ಎನ್ನುವುದನ್ನು ಪರಿಶೀಲಿಸಲು ಸಂಬಂಧಪಟ್ಟ ಪದವಿ ಪ್ರಮಾಣ ಪತ್ರ ಕಡ್ಡಾಯವಾಗಿತ್ತು. ಪರಿಸ್ಥಿತಿ ಬದಲಾಗುತ್ತಿದೆ. ಶಾಲೆ– ಕಾಲೇಜುಗಳ ಮುಖವನ್ನು ನೋಡದೇ ಇದ್ದರೂ ಪರವಾಗಿಲ್ಲ, ಸಂಬಂಧಪಟ್ಟ ಸಾಮರ್ಥ್ಯ ಇದ್ದರೆ ಸಾಕು. ಇಂತಹ ಸಾಮರ್ಥ್ಯಗಳನ್ನು ರೂಢಿಸಿಕೊಳ್ಳಲು ದೊಡ್ಡ ಮೊತ್ತದ ಫೀಸು ತೆತ್ತು, ದೊಡ್ಡ ದೊಡ್ಡ ಕಾಲೇಜು–ವಿಶ್ವವಿದ್ಯಾಲಯಗಳನ್ನು ಸೇರಿಕೊಳ್ಳಬೇಕೆಂಬ ದುರ್ದು ಈಗ ಇಲ್ಲ. ಉದ್ಯೋಗ ಮಾರುಕಟ್ಟೆಯು ಅಪೇಕ್ಷಿಸುವ ಸಾಮರ್ಥ್ಯ ಮತ್ತು ಕೌಶಲಗಳನ್ನು ಪಡೆಯಲು ನೂರಾರು ದಾರಿಗಳಿವೆ. ‘ಇಂಡೀಡ್’ ಎಂಬ ಉದ್ಯೋಗ ಮಾಹಿತಿ ಒದಗಿಸುವ ಸಂಸ್ಥೆ ನಡೆಸಿದ ಅಧ್ಯಯನದ ಪ್ರಕಾರ, ಈ ಸಂಸ್ಥೆಯ ಮೂಲಕ ಬರುವ ಅಮೆರಿಕನ್ ಉದ್ಯೋಗ ಜಾಹೀರಾತುಗಳ ಪೈಕಿ ಶೇ 52ರಷ್ಟು ಜಾಹೀರಾತುಗಳು ಅಭ್ಯರ್ಥಿಗಳಿಗೆ ಕನಿಷ್ಠ ಪದವಿ ಇರಬೇಕು ಎಂಬ ಅರ್ಹತೆಯನ್ನೇ ಕಿತ್ತುಹಾಕಿವೆ.

> ವಿಶ್ವವಿದ್ಯಾಲಯಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ತುಂಬುವ ಮೊದಲು– ಬದಲಾದ, ಬದಲಾಗುತ್ತಿರುವ ಪರಿಸ್ಥಿತಿಯಲ್ಲಿ ನಮಗೆಂತಹ ಪದವಿ ಶಿಕ್ಷಣ ವ್ಯವಸ್ಥೆ ಬೇಕಿದೆ ಮತ್ತು ಬೇಕಿರುವ ಪದವಿ ಶಿಕ್ಷಣ ನೀಡಲು ಯಾವ ಹಿನ್ನೆಲೆಯ, ಯಾವ ಸಾಮರ್ಥ್ಯ ಹೊಂದಿದ ಶಿಕ್ಷಕರು ಬೇಕು ಎನ್ನುವುದರ ಬಗ್ಗೆ ಸ್ಪಷ್ಟತೆ ಅಗತ್ಯ. ಇಲ್ಲದೆ ಹೋದಲ್ಲಿ ಹೊಸ ಹುದ್ದೆಗಳೇ ಸಮಸ್ಯೆಗಳಾಗಬಹುದು.

ಸಮಸ್ಯೆ ಎದುರಿಸುತ್ತಿರುವುದು ಸಮಾಜ ವಿಜ್ಞಾನ ಮತ್ತು ಮಾನವಿಕ ವಿಷಯಗಳ ಪದವಿಗಳಷ್ಟೇ ಅಲ್ಲ. ಈಗ್ಗೆ ನಾಲ್ಕೈದು ದಶಕಗಳಿಂದ ಮಧ್ಯಮ ವರ್ಗಗಳ ಕನಸಾಗಿದ್ದ ಎಂಜಿನಿಯರಿಂಗ್ ಮತ್ತು ತಾಂತ್ರಿಕ ವಿಷಯಗಳಲ್ಲಿ ಪಡೆಯುವ ಪದವಿಗಳು ಕೂಡ ಅರ್ಥ ಕಳೆದುಕೊಳ್ಳುತ್ತಿವೆ. ತಂತ್ರಜ್ಞಾನ ಬದಲಾಗುತ್ತಿರುವ ವೇಗ ಹೇಗಿದೆ ಎಂದರೆ, ಮೂರೋ ನಾಲ್ಕು ವರ್ಷಗಳ ಪದವಿ ಮುಗಿಸಿ ಹೊರಬರುವುದರೊಳಗೆ ಕಲಿತ ವಿಚಾರಗಳೆಲ್ಲ ಹಳೆಯದಾಗಿಬಿಡುತ್ತಿವೆ. ಮತ್ತೆ ಮತ್ತೆ ಕಲಿಯುವುದು, ಮತ್ತೆ ಮತ್ತೆ ಕಲಿತದ್ದು ಅಪ್ರಸ್ತುತವಾಗುವುದು ಎನ್ನುವ ಸ್ಥಿತಿಗೆ ಹೊಂದಿಕೊಳ್ಳಲು ಎಲ್ಲ ರಂಗಗಳೂ ಹೆಣಗುತ್ತಿವೆ.

ನಿರಂತರ ಕಲಿಕೆ ಎನ್ನುವುದು ಹೊಸತೇನಲ್ಲ. ಆದರೆ, ಈತನಕದ ಪರಿಸ್ಥಿತಿಯಲ್ಲಿ ಮೊದಲಿಗೆ ಪದವಿ ತರಗತಿಗಳಲ್ಲಿ ಕುಳಿತು ಮೂಲಭೂತ ವಿಚಾರಗಳನ್ನು ತಿಳಿದುಕೊಳ್ಳುವುದು, ಅನಂತರ ಜೀವನಪರ್ಯಂತ ಕಲಿಯುವುದು ಎಂದಿತ್ತು. ಈಗ ವಿಷಯಗಳ ಕಲಿಕೆ ಎನ್ನುವುದು ತರಗತಿಗಳಲ್ಲಿ ಪ್ರಾರಂಭ ಆಗುವುದೂ ಇಲ್ಲ, ಮುಗಿಯುವುದೂ ಇಲ್ಲ. ಕಲಿಕೆಗೆ ಕೊನೆಯಿಲ್ಲ ಎಂಬುದನ್ನು ಇಷ್ಟುಕಾಲ ಒಂದು ಆದರ್ಶದ ಮಾತನ್ನಾಗಿ, ಒಂದು ತಾತ್ತ್ವಿಕ ಚಿಂತನೆ ಎಂಬಂತೆ ಹೇಳಲಾಗುತ್ತಿತ್ತು. ಈಗ ಹಾಗಲ್ಲ. ಇದು ಪ್ರಾಯೋಗಿಕವಾಗಿ ಅನುಸರಿಸಬೇಕಿರುವ ಅನಿವಾರ್ಯ ಮಾರ್ಗವಾಗುತ್ತಿದೆ. ಒಟ್ಟಿನಲ್ಲಿ ಪದವಿ ಎನ್ನುವುದು ಶೈಕ್ಷಣಿಕ ಪಯಣದಲ್ಲಿ ಕ್ರಮಿಸಬೇಕಿರುವ ಒಂದು ಮೈಲಿಗಲ್ಲೇ ಅಲ್ಲ ಎನ್ನುವ ಸ್ಥಿತಿ ತಲೆದೋರುತ್ತಿದೆ. ಕೃತಕ ಬುದ್ಧಿಮತ್ತೆಯ ಸಾಮಾಜಿಕ ಪರಿಣಾಮಗಳ ಬಗ್ಗೆ ನಿರಂತರವಾಗಿ ಚಿಂತನ ಮಂಥನ ನಡೆಸುತ್ತಿರುವ ಪ್ರಸಿದ್ಧ ಲೇಖಕ ಮತ್ತು ಚರಿತ್ರಕಾರ ಯೋವಾಲ್ ನೋವ ಹರಾರಿ ಅವರು ಹೇಳುವ ಹಾಗೆ, ಹಿಂದೆ ಯಾವುದಾದರೂ ಒಂದು ವೃತ್ತಿಪರ ಪದವಿಯಲ್ಲಿ ಕಲಿಯುವವರಿಗೆ ಮತ್ತು ಕಲಿಸುವವರಿಗೆ ತಾವು ಇಂತಹ ಉದ್ಯೋಗಗಳಿಗೋಸ್ಕರ ಕಲಿಯುತ್ತೇವೆ ಮತ್ತು ಕಲಿಸುತ್ತೇವೆ ಎನ್ನುವ ಸ್ಪಷ್ಟತೆ ಇರುತ್ತಿತ್ತು. ಈಗ ಈ ಮೂಲಭೂತ ಸ್ಪಷ್ಟತೆಯೇ ಇಲ್ಲದೆ ಉನ್ನತ ಶಿಕ್ಷಣದಲ್ಲಿ ಕಲಿಸುವ ಮತ್ತು ಕಲಿಯುವ ಪ್ರಕ್ರಿಯೆಗಳನ್ನು ನಡೆಸಲಾಗುತ್ತಿದೆ ಮತ್ತು ಪದವಿಗಳನ್ನು ನೀಡಲಾಗುತ್ತಿದೆ. ಈ ಸಮಸ್ಯೆಗೆ ಹೊರತಾದ ಕಲಿಕಾ ವಿಷಯಗಳು ಬಹಳ ಕಡಿಮೆ. ಸದ್ಯಕ್ಕೆ ವೃತ್ತಿಪರ ನಿಯಂತ್ರಣಾ ಸಂಸ್ಥೆಗಳಿಂದ ಅಂಗೀಕಾರ ಪಡೆದು ನಡೆಸಬೇಕಿರುವ ವೃತ್ತಿಗಳಿಗೆ (ಉದಾ: ವೈದ್ಯರಿಗೆ, ವಕೀಲಿ ವೃತ್ತಿ ನಡೆಸುವವರಿಗೆ) ಮಾತ್ರ ಪದವಿ ಎನ್ನುವುದು ಔಪಚಾರಿಕವಾಗಿ ಬೇಕಿರುವುದು. ಉಳಿದ ಹಾಗೆ ವೃತ್ತಿಪರ ನೈಪುಣ್ಯ ಇದ್ದರೆ ಆಯಿತು. ಅದಕ್ಕೆ ಪದವಿ ಪ್ರಮಾಣ ಪತ್ರದ ಅಂಗೀಕಾರ ಮುದ್ರೆಯೇನೂ ಬೇಕಿಲ್ಲ.

ಕರ್ನಾಟಕದ ಕಾಲೇಜು ಮತ್ತು ವಿಶ್ವವಿದ್ಯಾಲಯಗಳಲ್ಲಿ ಶೇ 50ರಷ್ಟು ವಿವಿಧ ಹಂತಗಳ ಪ್ರಾಧ್ಯಾಪಕರ ಹುದ್ದೆಗಳು ಖಾಲಿ ಇವೆ ಎನ್ನುವ ವಸ್ತುಸ್ಥಿತಿಯನ್ನು ಈ ಹಿನ್ನೆಲೆಯಲ್ಲಿ ನೋಡುವ ಅಗತ್ಯವಿದೆ. ಇಷ್ಟೊಂದು ಪ್ರಮಾಣದಲ್ಲಿ ಖಾಲಿ ಹುದ್ದೆಗಳನ್ನು ಇರಿಸಿಕೊಂಡು ಪರಿಸ್ಥಿತಿ ನಿಭಾಯಿಸಲು ಅತಿಥಿ ಪ್ರಾಧ್ಯಾಪಕರನ್ನು ನೇಮಿಸಿಕೊಳ್ಳುವುದು ಮೇಲ್ನೋಟಕ್ಕೆ ಸಮಸ್ಯೆ ಎಂದು ಕಾಣಬಹುದು. ಕೆಲವೊಮ್ಮೆ ಅವಕಾಶಗಳು ಸಮಸ್ಯೆಯ ರೂಪದಲ್ಲಿ ಬರುತ್ತವೆ. ಇದೂ ಹಾಗೆ. ಪದವಿ ಶಿಕ್ಷಣ ಎನ್ನುವ ಹಂತವೇ ಒಂದು ಸಂಕ್ರಮಣ ಸ್ಥಿತಿಯನ್ನು ಹಾದುಹೋಗುತ್ತಿರುವ ಈ ಹೊತ್ತಿನಲ್ಲಿ, ಈ ಎಲ್ಲಾ ಹುದ್ದೆಗಳನ್ನು ಅವುಗಳು ಇರುವ ಸ್ವರೂಪದಲ್ಲೇ ತುಂಬುವುದರಿಂದ ಬೊಕ್ಕಸಕ್ಕೆ ಶಾಶ್ವತ ನಷ್ಟವಾಗುತ್ತದೆಯೇ ಹೊರತು ಉನ್ನತ ಶಿಕ್ಷಣದ ವ್ಯಾಪಕತೆಯೂ ಹೆಚ್ಚುವುದಿಲ್ಲ, ಗುಣಮಟ್ಟವೂ ವೃದ್ಧಿಸುವುದಿಲ್ಲ. ಇದರರ್ಥ ಹುದ್ದೆಗಳನ್ನು ಖಾಲಿ ಬಿಡಬೇಕೆಂದಲ್ಲ. ಹುದ್ದೆಗಳನ್ನು ತುಂಬುವ ಮೊದಲು ಬದಲಾದ ಪರಿಸ್ಥಿತಿಯಲ್ಲಿ, ಬದಲಾಗುತ್ತಿರುವ ಪರಿಸ್ಥಿತಿಯಲ್ಲಿ ನಮಗೆಂತಹ ಪದವಿ ಶಿಕ್ಷಣ ವ್ಯವಸ್ಥೆ ಬೇಕಿದೆ ಮತ್ತು ಬೇಕಿರುವ ಪದವಿ ಶಿಕ್ಷಣ ನೀಡಲು ಯಾವ ಹಿನ್ನೆಲೆಯ, ಯಾವ ಸಾಮರ್ಥ್ಯ ಹೊಂದಿದ ಶಿಕ್ಷಕರ ಅವಶ್ಯಕತೆ ಎನ್ನುವುದರ ಬಗ್ಗೆ ಸ್ಪಷ್ಟತೆ ಇಲ್ಲದೆ ಹೋದರೆ ಹುದ್ದೆಗಳನ್ನು ತುಂಬಿದ ನಂತರ ಹೊಸ ಸಮಸ್ಯೆಗಳು ತಲೆದೋರಲಿವೆ.

ರಾಜ್ಯದಲ್ಲೂ ಕೆಲವು ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿಗಳಿಲ್ಲದೆ ಕೆಲವಾರು ವಿಭಾಗಗಳೇ ಮುಚ್ಚಿಹೋಗುತ್ತಿರುವ ವಾಸ್ತವ ನಮ್ಮ ಕಣ್ಣ ಮುಂದಿದೆ. ಪದವಿಗಳು ಅಪ್ರಸ್ತುತಗೊಳ್ಳುತ್ತಿವೆ ಎನ್ನುವ ಕಾರಣಕ್ಕೆ ಬೇಕಾಬಿಟ್ಟಿಯಾಗಿ ಕೌಶಲ ತರಬೇತಿ ಕೋರ್ಸುಗಳನ್ನು ಕೆಲವು ವಿಶ್ವವಿದ್ಯಾಲಯಗಳು ಪ್ರಾರಂಭಿಸುತ್ತಿವೆ. ಇದು ವಿಶ್ವವಿದ್ಯಾಲಯಗಳ ಪ್ರಸ್ತುತತೆಯನ್ನು ಉಳಿಸುವ ವಿಧಾನವಲ್ಲ. ಯಾಕೆಂದರೆ, ಅಲ್ಪಕಾಲೀನ ಕೌಶಲ ತರಬೇತಿ ಒದಗಿಸುವ ಕೋರ್ಸುಗಳನ್ನು ನಡೆಸಲು ವಿಶ್ವವಿದ್ಯಾಲಯ ಬೇಕಿಲ್ಲ. ಅದು ಪಾಲಿಟೆಕ್ನಿಕ್‌ಗಳು ಮತ್ತು ಕೈಗಾರಿಕಾ ತರಬೇತಿ ಕೇಂದ್ರಗಳು ಮಾಡಬೇಕಿರುವ ಕೆಲಸ. ಹಾಗೆಂದು ವಿಶ್ವವಿದ್ಯಾಲಯದಲ್ಲಿ ದೊರೆಯುವ ಶಿಕ್ಷಣ ಮೇಲ್ಮಟ್ಟದ್ದು, ಪಾಲಿಟೆಕ್ನಿಕ್‌ಗಳಲ್ಲಿ ಸಿಗುವ ತರಬೇತಿ ಕೆಳಮಟ್ಟದ್ದು ಅಂತ ಅಲ್ಲ. ಈ ಎರಡೂ ಹಂತದ ಶಿಕ್ಷಣದ ಸ್ವರೂಪ ಮತ್ತು ಉದ್ದೇಶಗಳು ಬೇರೆ ಬೇರೆ. ಪಾಲಿಟೆಕ್ನಿಕ್ ಕೇಂದ್ರಗಳು ಮಾಡುವ ಕೆಲಸವನ್ನು ವಿಶ್ವವಿದ್ಯಾಲಯಗಳು ಮಾಡತೊಡಗಿದರೆ, ಅದರಿಂದ ವಿಶ್ವವಿದ್ಯಾಲಯಗಳು ಉಳಿಯುವುದಿಲ್ಲ. ಬದಲಿಗೆ ಅವುಗಳ ಪತನ ಇನ್ನಷ್ಟು ಶೀಘ್ರವಾಗಿ ಆಗಲಿದೆ.



ವಾಚಕರ ವಾಣಿ

ಜನತಂತ್ರ: ಯಾವುದೂ ಪ್ರಶ್ನಾತೀತವಲ್ಲ

ಎನ್‌ಸಿಇಆರ್‌ಟಿ ಎಂಟನೇ ತರಗತಿ ಪಠ್ಯದಲ್ಲಿ ‘ನ್ಯಾಯಾಂಗದಲ್ಲಿ ಭ್ರಷ್ಟಾಚಾರ’ ಎಂಬ ಅಧ್ಯಾಯಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ವ್ಯಕ್ತಪಡಿಸಿರುವ ಆತಂಕ ಸಕಾಲಿಕವಾಗಿದೆ. ಇದು ನ್ಯಾಯಾಂಗದ ಬಗ್ಗೆ ಜನರಲ್ಲಿರುವ ನಂಬಿಕೆ ಹಾಗೂ ವಿಶ್ವಾಸಾರ್ಹತೆಗೆ ಧಕ್ಕೆ ತರಲಿದೆ ಎಂಬ ನ್ಯಾಯಾಲಯದ ಅಭಿಪ್ರಾಯವೂ ಒಪ್ಪುವಂತಹದ್ದೇ. ಅದರಲ್ಲೂ ವಾಸ್ತವತೆಯ ಅರಿವಿಲ್ಲದ ಮುಗ್ಧ ಮಕ್ಕಳಲ್ಲಿ ವ್ಯವಸ್ಥೆಯ ಬಗ್ಗೆ ಅಪನಂಬಿಕೆ ಬಿತ್ತುವುದು ಸಮಾಜದಲ್ಲಿ ಗಂಭೀರ ಪರಿಣಾಮಗಳಿಗೆ ದಾರಿಯಾಗುತ್ತದೆ. ಮಕ್ಕಳಲ್ಲಿ ವ್ಯವಸ್ಥೆಯ ಕುರಿತು ನಂಬಿಕೆ, ವಿಶ್ವಾಸ ಸೃಜಿಸುವ ಪಠ್ಯಪುಸ್ತಕಗಳಲ್ಲಿ ಭಾರತೀಯ ನ್ಯಾಯಾಂಗವು ಸಾಮಾಜಿಕ ಸುಧಾರಣೆಗೆ ನೀಡಿದ ಅನೇಕ ಐತಿಹಾಸಿಕ ತೀರ್ಪುಗಳ ಬಗ್ಗೆ ಮಕ್ಕಳಿಗೆ ತಿಳಿಸುವ ಬದಲು, ಇಂತಹ ನಕಾರಾತ್ಮಕ ಅಂಶಗಳನ್ನು ಪ್ರಸ್ತಾಪಿಸಿರುವುದು ಒಳ್ಳೆಯ ಬೆಳವಣಿಗೆಯಲ್ಲ. ಆದರೂ, ಪ್ರಜಾಪ್ರಭುತ್ವದಲ್ಲಿ ಯಾವ ಅಂಗವೂ ಪ್ರಶ್ನಾತೀತವಲ್ಲ. ಸುಧಾರಣೆಗಳು ಎಲ್ಲಾ ಅಂಗಗಳಲ್ಲೂ ಆಗಬೇಕಿದೆ.

ಧನ್ಯಶ್ರೀ, ಅಜ್ಜಂಪುರ

ಪಾರದರ್ಶಕ ನೇಮಕಾತಿಗೆ ಗ್ಯಾರಂಟಿ ಬೇಕು

ರಾಜ್ಯ ಸರ್ಕಾರ ಒಳಮೀಸಲಾತಿಯ ನೆಪವನ್ನು ಮುಂದಿಟ್ಟುಕೊಂಡು ನೇಮಕಾತಿಗೆ ವಿಳಂಬ ಧೋರಣೆ ಅನುಸರಿಸಿತ್ತು. ಸದ್ಯ ಒಳಮೀಸಲಾತಿ ಮಸೂದೆಗೆ ರಾಜ್ಯಪಾಲರು ಅಂಕಿತ ಹಾಕಿದ್ದಾರೆ. ಮತ್ತೊಂದೆಡೆ ರಾಜ್ಯ ಸಚಿವ ಸಂಪುಟವು 56,432 ಹುದ್ದೆಗಳ ನೇಮಕಾತಿಗೆ ಒಪ್ಪಿಗೆ ನೀಡಿದೆ. ಸರ್ಕಾರದ ಈ ನಿರ್ಧಾರ ಸ್ವಾಗತಾರ್ಹ. ಆದರೆ, ಅಧಿಸೂಚನೆ ಪ್ರಕಟಿಸಿದರೆ ಸಾಲದು. ಕಾಲಮಿತಿಯಲ್ಲಿ ನೇಮಕಾತಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಬೇಕಿದೆ. ಅಧಿಸೂಚನೆಯಲ್ಲಿ ತಾಂತ್ರಿಕ ದೋಷಗಳಿಗೆ ಎಡೆಮಾಡಿ ಕೊಟ್ಟು ಅಭ್ಯರ್ಥಿಗಳು ನ್ಯಾಯಾಲಯದ ಮೆಟ್ಟಿಲೇರದಂತೆ ಎಚ್ಚರವಹಿಸಬೇಕಿದೆ. ಹಲವು ವರ್ಷಗಳಿಂದ ಯುವಜನರು ಸ್ಪರ್ಧಾತ್ಮಕ ಪರೀಕ್ಷೆಗೆ ಸಿದ್ಧತೆ ನಡೆಸಿದ್ದಾರೆ. ಹಾಗಾಗಿ, ಪ್ರಶ್ನೆಪತ್ರಿಕೆಗಳು ಸೋರಿಕೆಯಾಗದಂತೆ ಪಾರದರ್ಶಕವಾಗಿ ನೇಮಕಾತಿ ನಡೆಸಬೇಕಿದೆ.

ಸಂತೋಷ್, ಸವಳಂಗ

ಅರ್ಹರ ಸ್ವಾವಲಂಬನೆ: ದಕ್ಕದ ‘ಸಾರಥಿ’

ಸರ್ಕಾರವು ಬಡ ಮತ್ತು ಹಿಂದುಳಿದ ವರ್ಗದ ಜನರು ಸ್ವಾವಲಂಬಿಯಾಗಿ ಬದುಕಲು ‘ಸ್ವಾವಲಂಬಿ ಸಾರಥಿ’ ಯೋಜನೆಯನ್ನು ಜಾರಿಗೊಳಿಸಿದೆ. ಆದರೆ, ಈ ಯೋಜನೆ ಅರ್ಹ ಫಲಾನುಭವಿಗಳಿಗೆ ತಲಪುತ್ತಿಲ್ಲ. ಕೆಲವೆಡೆ ಕಾರು ಮಂಜೂರಿಗೆ ಅಧಿಕಾರಿಗಳು ಮಧ್ಯವರ್ತಿಗಳ ಮೂಲಕ ಹಣಕ್ಕೆ ಬೇಡಿಕೆ ಇಡುತ್ತಿದ್ದಾರೆ ಎಂಬ ಆರೋಪಗಳಿವೆ. ಇದು ಬಡವರ ಹಕ್ಕುಗಳ ಸ್ಪಷ್ಟ ಉಲ್ಲಂಘನೆ. ಸರ್ಕಾರ ಈ ಬಗ್ಗೆ ತನಿಖೆ ನಡೆಸಬೇಕಿದೆ. ಅಕ್ರಮಗಳಿಗೆ ಕಡಿವಾಣ ಹಾಕಿ ಅರ್ಹ ಫಲಾನುಭವಿಗಳಿಗೆ ಸೌಲಭ್ಯ ತಲಪಿಸಲು ಕ್ರಮವಹಿಸಬೇಕಿದೆ. ಇಲ್ಲವಾದರೆ ಯೋಜನೆಯ ಉದ್ದೇಶವು ನಿರರ್ಥಕವಾಗಲಿದೆ.

ಹನುಮಂತ ಆರ್., ಹುನಗುಂದ

ಮೋದಿ ಪ್ರವಾಸ ಮತ್ತು ಯಾಂತ್ರಿಕ ಮಾತು

ಇಸ್ರೇಲ್ ಭೇಟಿ ಸಮಯದಲ್ಲಿ ಪ್ರಧಾನಿ ನರೇಂದ್ರ ಮೋದಿಯವರು ‘ಜಗತ್ತಿನಲ್ಲಿ ಭಯೋತ್ಪಾದನೆಗೆ ಯಾವುದೇ ಸ್ಥಳವಿಲ್ಲ’ ಎಂದು ಹೇಳಿದ್ದಾರೆ. ಈ ಮಾತು ಸಾಮಾನ್ಯವಾಗಿ ವಿದೇಶಿ ಪ್ರವಾಸಗಳಲ್ಲಿ ಹೇಳುವ ಮೊದಲೇ ಸಿದ್ಧಪಡಿಸಿದ ಯಾಂತ್ರಿಕ ಹೇಳಿಕೆಯಾಗಿದೆ. ‘ಗಾಜಾಪಟ್ಟಿಯಲ್ಲಿ ಶಾಂತಿ ಸ್ಥಾಪನೆಯಾಗಬೇಕು’ ಎಂದು ಪ್ರತಿಪಾದಿಸಿರುವುದು ಕೋಟೆಯೆಲ್ಲ ಕೊಳ್ಳೆ ಹೊಡೆದ ಮೇಲೆ ದಿಡ್ಡಿಬಾಗಿಲು ಹಾಕಿದಂತಿದೆ. ಅಲ್ಲಿ 20 ಸಾವಿರಕ್ಕೂ ಹೆಚ್ಚು ಮಕ್ಕಳ ಹತ್ಯೆ ಆಗಿದೆ. 60 ಸಾವಿರಕ್ಕೂ ಹೆಚ್ಚು ಜನರ ಕೊಲೆಯಾಗಿದೆ. ಲಕ್ಷಾಂತರ ಮಂದಿ ನಿರಾಶ್ರಿತರಾಗಿದ್ದಾರೆ. ಸಾವಿರಾರು ಕೋಟಿ ಮೌಲ್ಯದ ಆಸ್ತಿ ನಷ್ಟವಾಗಿದೆ. ಹಮಾಸ್ ದಾಳಿಗೆ ಪ್ರತೀಕಾರವೆಂಬಂತೆ ಇಸ್ರೇಲ್ ಸೇನೆಯು ಪ್ಯಾಲೆಸ್ಟೀನಿಯರ ಮೇಲೆ ಎಸಗಿದ ಭಯಂಕರ ನರಮೇಧ ಇದಾಗಿದೆ. ಇಂಥದೊಂದು ಮೈತ್ರಿ ಶಾಂತಿಪ್ರಿಯ ಭಾರತಕ್ಕೆ ಬೇಕಿತ್ತೆ?

ಪು.ಸೂ. ಲಕ್ಷ್ಮೀನಾರಾಯಣ ರಾವ್, ಬೆಂಗಳೂರು

ಕವಲು ಹಾದಿಯಲ್ಲಿ ಕನ್ನಡ ಸಿನಿಮಾ ರಂಗ

ಕನ್ನಡ ಚಿತ್ರರಂಗ ಕವಲು ದಾರಿಯಲ್ಲಿದೆ. ಪ್ರತಿ ವಾರ ಏಳೆಂಟು ಚಿತ್ರಗಳು ತೆರೆ ಕಾಣುತ್ತವೆ. ಇವುಗಳಲ್ಲಿ ಬೆರಳೆಣಿಕೆಯಷ್ಟು ಯಶಸ್ವಿಯಾಗುತ್ತವೆ. ಡಿಜಿಟಲ್ ಮತ್ತು ಒಟಿಟಿ ಯುಗದಲ್ಲಿ ಚಿತ್ರಮಂದಿರಗಳಿಗೆ ಹೋಗಿ ಸಿನಿಮಾ ವೀಕ್ಷಿಸುವವರ ಸಂಖ್ಯೆ ಕಡಿಮೆ. 70ರ ದಶಕದಲ್ಲಿ ವಾರಕ್ಕೆ ಖ್ಯಾತ ನಟ, ನಟಿಯರ, ನಿರ್ದೇಶಕರ ಎರಡು ಚಿತ್ರಗಳು ಬಿಡುಗಡೆಯಾಗುತ್ತಿದ್ದವು. 100 ದಿನ ಪ್ರದರ್ಶನ ಕಾಣುತ್ತಿದ್ದವು. ಆಗ ಸಿನಿಮಾದ ಯಶಸ್ಸಿನ ಪ್ರಮಾಣ ಶೇ 20ರಷ್ಟಿತ್ತು. ಪ್ರತಿವಾರ ಹೆಚ್ಚಿನ ಆಯ್ಕೆಗಳಿದ್ದರೆ ಪ್ರೇಕ್ಷಕರಿಗೆ ಗೊಂದಲಗಳೇ ಜಾಸ್ತಿ. ಪ್ರಸ್ತುತ ಚಂದನವನಕ್ಕಿಂತ ಹೆಚ್ಚಿನ ಜನಕ್ಕೆ ಅತ್ತೆ–ಸೊಸೆ ಕಲಹದ ಧಾರಾವಾಹಿಗಳೇ ಹೆಚ್ಚು ಪ್ರಿಯವಾಗಿವೆ.

ಎಚ್.ವಿ. ಶ್ರೀಧರ್, ಬೆಂಗಳೂರು

ಸರ್ಕಾರಿ ಆಸ್ಪತ್ರೆ ಎಡವಟ್ಟು ಕೊನೆಯಾಗಲಿ

ಹಾಸನದ ಹಿಮ್ಸ್ ಆಸ್ಪತ್ರೆಯಲ್ಲಿ ಒಂದಲ್ಲ ಒಂದು ಎಡವಟ್ಟುಗಳು ನಡೆಯುತ್ತಿರುವುದು ಬೇಸರದ ಸಂಗತಿ. ಇತ್ತೀಚೆಗೆ ವೈದ್ಯರ ನಿರ್ಲಕ್ಷದಿಂದ ಬಾಣಂತಿ ಮೃತಪಟ್ಟಿರುವುದು ವರದಿಯಾಗಿದೆ. ಮತ್ತೊಂದು ಪ್ರಕರಣದಲ್ಲಿ ಬಾಲಕನನ್ನು ಚಿಕಿತ್ಸೆಗೆ ಕರೆತಂದು ಸುಮಾರು ನಾಲ್ಕು ಗಂಟೆ ಕಾದರೂ ಚಿಕಿತ್ಸೆ ನೀಡಿಲ್ಲವೆಂದು ಆತನ ಕುಟುಂಬದವರು ಆಕ್ರೋಶ ಹೊರಹಾಕಿದ್ದಾರೆ. ಬಡವರ ಪಾಲಿನ ಏಕೈಕ ಆಶಾಕಿರಣವೆಂದರೆ ಸರ್ಕಾರಿ ಆಸ್ಪತ್ರೆ. ಇಲ್ಲಿಯೇ ಈ ರೀತಿ ಘಟನೆಗಳು ನಡೆದರೆ ಬಡವರ ಗತಿ ಏನು? ಜಿಲ್ಲಾಡಳಿತ ಈ ಕುರಿತು ಗಂಭೀರವಾಗಿ ಚಿಂತನೆ ನಡೆಸಬೇಕು. ಆಸ್ಪತ್ರೆಯಲ್ಲಿ ವೈದ್ಯರು ಉತ್ತಮವಾದ ಚಿಕಿತ್ಸೆ ನೀಡುವಂತೆ ಸೂಚನೆ ನೀಡಬೇಕು. ಹಿಮ್ಸ್ ಸೇರಿದಂತೆ ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ ಸಂಭವಿಸುವ ಎಡವಟ್ಟುಗಳು ಇನ್ನಾದರೂ ಕೊನೆಗೊಳ್ಳಲಿ.

ಅಂಬಿಕಾ ಬಿ.ಟಿ., ಹಾಸನ

ಚುರುಮುರಿ



ಲಾವ್ ಲಾವ್ ಲೆಟರ್!

• ತುರುವೇಕೆರೆ ಪ್ರಸಾದ್

‘ಏನ್ರಪಾ? ಈ ಎಐ ಕಾಲದಲ್ಲಿ ಇ-ಮೇಲ್ ಬಿಟ್ಟು ಎಲ್ಲಾ ಮತ್ತೆ ಪತ್ರ ಬರೆಯಕ್ಕೆ ಶುರು ಹಚ್ಕಂಡ್ ಬುಟ್ಟವ್ರೆ’ ಮಾತೆಗೆಳೆದ ಗುದ್ಲಿಂಗ.

‘ಇ–ಮೇಲ್ ಅಂದ್ರೆ ಆಮೇಲ್ ಅಂತಾರೆ ಅಂತ ನೇರವಾಗಿ ಪತ್ರ ಬರೀತಾವ್ರೆ. ಲವ್ ಲೆಟ್ರು ಬರುದ್ರೇ ಮಜಾ ಇರೋದು!’ ಎಂದ ಮಾಲಿಂಗ.

‘ಅಂಗಾರೆ ಹೈಕಮಾಂಡ್ ಮೇಲೆ ಶಾಸಕರಿಗೆ ಶಾನೆ ಲವ್ವು ಅಂತೀಯಾ?’

‘ಅಧಿಕಾರದ ಮೇಲೆ ಲವ್ವು, ಅಧಿಕಾರ ಹೈಕಮಾಂಡ್ ಕೈಲಿರೋ ಡವ್ವು... ಅದ್ಕೇ ಹೈಕಮಾಂಡ್ ಮೇಲೆ ಲವ್ವು!’

‘ಏಯ್ ಇದು ಲವ್ ಲೆಟರ್ ಅಲ್ಲಲೇ, ಲಾವ್ ಲಾವ್ ಲೆಟರ್! ಅಂದ್ರೆ ನಮ್ಗೂ ಅಧಿಕಾರ ಕೊಡಿ ಅಂತ ಡಿಮ್ಯಾಂಡ್ ಮಾಡೋದು. ಹೊಸಬ್ರು ನಮ್ಗೂ ಮಂತ್ರಿಗಿರಿ ಕೊಡಿ ಅಂತ ಕೇಳಾದ್ರಾಗೆ ತಪ್ಪೇನೈತೆ’.

‘ಅದೇನೋ ಸರಿ, ಇಲ್ಲಿರೋದು ಸುಮ್ಮನೆ, ಬಿಮ್ಮನೆ, ಕೈ ಅನ್ನದು ಜುಮ್ಮನೆ ಅಂತ ಗ್ಯಾನೋದಯ ಆಗಿ ಮೇಲ್ಮನೆಯೋರು ನಮ್ಮನ್ನೂ ಮಂತ್ರಿ ಮಾಡಿ ಅಂತ ಬರ್ದವ್ರಲ್ಲ’.

‘ಅದೆಂಗ್ಲಾ ಮಾಡಕ್ಕಾಯ್ತದೆ? ಅವರೇನು ಸಮಾವೇಶ ಮಾಡಿ ಚಿತ್ರಾನ್ನ ಕೊಟ್ಟವ್ರ, ಮನೆ ಮನೆಗೆ ಓಗಿ ಎಣ್ಣೆ ಬುಟ್ಟವ್ರ?’ ಎಂದು ಪಾಯಿಂಟ್ ಹಾಕಿದ ಮಾಲಿಂಗ.

‘ಕೆಳಮನೆಯೋರು ಅದೂ ಇದೂ ಕಿತಾಪತಿ ಮಾಡ್ಕಂಡು ಡೆಲ್ಲಿ, ಫಾರಿನ್ನು ಅಂತ ಸುತ್ತುತಿರ್ತಾರೆ, ಜನಗಳ ಕೈಗೆ ಸಸ್ತಾ ನಾವೇ ಸಿಗಾದು. ಅದ್ಕೇ ನಮ್ಮನ್ನೂ ಮಂತ್ರಿ ಮಾಡಿ ಅಂತ ಪಾಯಿಂಟ್ ಹಾಕವ್ರೆ’.

‘ಅಲ್ಲ ಕಣ್ರಲಾ, ಇಂಗ್ ಎಲ್ಲಾ ಲೆಟರ್ ಬರುದ್ರೆ ಎಂಗೆ? ರಾಜಕೀಯ ಏನ್ ಧರ್ಮಛತ್ರವಾ? ಪತ್ರ ಬರ್ದೋರಿಗೆಲ್ಲಾ ಮಂತ್ರಿಗಿರಿ ಕೊಟ್ರೆ ನಮ್ ನಮ್ ಪುತ್ರರು ಏನ್ ಮಾಡ್ಬೇಕು ಅಂತ ನಾಯಕರು ಸಿಡಿಮಿಡಿ ಮಾಡ್ತಾವ್ರಂತೆ’.

‘ದಿಟನೆಯ! ಇಂಗೇ ಲಾವ್ ಲಾವ್ ಅಂತಿದ್ರೆ ಡೆಲ್ಲಿಗೆ ಬುಲಾವ್ ಮಾಡಿ ಪಲಾವ್ ಮಾಡಾಕ್ತಾರೆ’ ಎಂದ ಪರ್ಮೇಶಿ. ಎಲ್ಲಾ ಗೊಳ್ಳನೆ ನಕ್ಕರು.

ಸಂಗತ

ವಿಜ್ಞಾನ–ದೇಶಪ್ರೇಮದ ಅಪೂರ್ವ ಮಾದರಿ

‘ರಾಮನ್ ಎಫೆಕ್ಟ್’ಗೆ ನೂರು ತುಂಬಲು ಎರಡು ವರ್ಷವಷ್ಟೇ ಬಾಕಿ. ವೈಜ್ಞಾನಿಕ ಸಾಧನೆಯ ಜೊತೆಗೆ ದೇಶಪ್ರೇಮದ ಕಾರಣದಿಂದಲೂ ರಾಮನ್ ಸ್ಮರಣೀಯರು.

• ಗುರುರಾಜ್ ಎಸ್. ದಾವಣಗೆರೆ

ಡಿಸೆಂಬರ್ 10, 1930. ಸ್ವೀಡನ್ ದೇಶದ ಸ್ಟಾಕ್‌ಹೋಮ್‌ನ ಆ ಭವ್ಯ ಸಭಾಂಗಣದಲ್ಲಿ ಭಾರತದ ವಿಜ್ಞಾನಿಯೊಬ್ಬರಿಗೆ ನೊಬೆಲ್ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಇಡೀ ಸಭೆ ಎದ್ದು ನಿಂತುಚಪ್ಪಾಳೆ ತಟ್ಟಿತು. ಆ ಕ್ಷಣದಲ್ಲಿ ವಿಜ್ಞಾನಿಯ ಕಣ್ಣುಗಳು ತೇವವಾಗಿದ್ದವು. ನೊಬೆಲ್ ಬಹುಮಾನ ಗಳಿಸಿದ ಆ ಭಾರತೀಯ ವಿಜ್ಞಾನಿಯೇ, ಸಿ.ವಿ. ರಾಮನ್ ಎಂದು ಖ್ಯಾತರಾದ ಚಂದ್ರಶೇಖರ ವೆಂಕಟ್ ರಾಮನ್. ಪ್ರಪಂಚದ ಅತಿದೊಡ್ಡ ಗೌರವ ಸಿಕ್ಕಾಗ ಅವರ ಕಣ್ಣುಗಳೇಕೆ ಒದ್ದೆಯಾಗಿದ್ದವು. ಅದಕ್ಕೆ ಅವರು ನೀಡಿರುವ ಕಾರಣ:

‘ನಾನು ಪ್ರಶಸ್ತಿ ಸ್ವೀಕರಿಸಿ ಸುತ್ತಲೂ ನೋಡಿದಾಗ, ಅಲ್ಲಿ ಹಾರಾಡುತ್ತಿದ್ದುದು ಬ್ರಿಟಿಷರ ಯೂನಿಯನ್ ಜಾಕ್ ಧ್ವಜ. ನನ್ನ ದೇಶಕ್ಕೆ ತನ್ನದೇ ಆದ ಧ್ವಜವಿಲ್ಲವಲ್ಲ, ನಾನಿನ್ನೂ ಸ್ವಾತಂತ್ರ್ಯ ಪಡೆಯದ ದೇಶದ ಪ್ರಜೆಯಾಗಿ ಇಲ್ಲಿ ನಿಂತಿದ್ದೇನಲ್ಲ ಎಂಬ ನೋವು ನನ್ನನ್ನು ಕಣ್ಣೀರು ಹಾಕುವಂತೆ ಮಾಡಿತು’. ರಾಮನ್ ಅವರ ಬಗ್ಗೆ ಹೆಮ್ಮೆ ಮೂಡಲು ಇನ್ನೇನು ಬೇಕು.

ಅಸಾಧಾರಣ ಪ್ರತಿಭೆ ಮತ್ತು ಅಪ್ಪಟ ದೇಶಭಕ್ತಿಯ ಸಾಕಾರದಂತಿದ್ದ ರಾಮನ್, ‘ವಿಜ್ಞಾನವೆಂದರೆ ಬರೀ ಅಂಕಿ–ಅಂಶಗಳಲ್ಲ, ಅದು ಹಗಲಿರುಳು ಕಾಣುವ ಒಂದು ಕನಸು’ ಎಂದು ನಂಬಿದ್ದರು. ರಾಮನ್ ಅವರಿಗೆ ತಮ್ಮ ಸಂಶೋಧನೆಯ ಮೇಲೆ ಎಂತಹ ಅಚಲ ನಂಬಿಕೆಯಿತ್ತೆಂದರೆ, ನೊಬೆಲ್ ಪ್ರಶಸ್ತಿ ಘೋಷಣೆಯಾಗುವುದಕ್ಕೂ ಐದು ತಿಂಗಳು ಮೊದಲೇ, ಸ್ಟಾಕ್‌ಹೋಮ್‌ಗೆ ಹೋಗಲು ಹಡಗಿನ ಟಿಕೆಟ್ ಕಾಯ್ದಿರಿಸಿದ್ದರು! ಪ್ರಶಸ್ತಿ ಬರುತ್ತದೆ ಎಂದು ಜಗತ್ತು ಹೇಳುವ ಮೊದಲೇ ಅವರ ಅಂತರಾತ್ಮ ಅದನ್ನು ಸಾರುತ್ತಿತ್ತು. ಅದು ಅಹಂಕಾರವಲ್ಲ, ಸತ್ಯವನ್ನು ಹುಡುಕಿದ ಒಬ್ಬ ಸಾಧಕನಿಗೆ ತನ್ನ ಶ್ರಮದ ಮೇಲಿದ್ದ ಅಪರಿಮಿತ ವಿಶ್ವಾಸ.



ಆ ದಿನಗಳಲ್ಲಿ ರಾಮನ್ ಅವರು ಅಕೌಂಟೆಂಟ್ ಜನರಲ್ ಆಗಿ ಕೆಲಸ ಮಾಡುತ್ತಿದ್ದರು. ಹೊಟ್ಟೆಪಾಡಿಗಾಗಿ ಹಗಲಿಡೀ ಲೆಕ್ಕಪತ್ರಗಳ ಕೆಲಸ. ರಾತ್ರಿ ಆಗುತ್ತಿದ್ದಂತೆ ಅವರ ಕಾಲುಗಳು ಪ್ರಯೋಗಾಲಯದ ಕಡೆಗೆ. ಸಣ್ಣ ದೀಪದ ಬೆಳಕಿನಲ್ಲಿ, ಸರಳ ಉಪಕರಣಗಳನ್ನು ಬಳಸಿ ಕೊಂಡು ಅವರು ಬ್ರಹ್ಮಾಂಡದ ರಹಸ್ಯಗಳನ್ನು ಭೇದಿಸಲು ಹವಣಿಸುತ್ತಿದ್ದರು. ಅವರಲ್ಲಿ ಮನುಷ್ಯರಿಗಿಂತ ಹೆಚ್ಚಾಗಿ ಬೆಳಕು ಮತ್ತು ಬಣ್ಣಗಳ ಬಗ್ಗೆ ವಿಚಿತ್ರವಾದ ಅನುರಾಗವಿತ್ತು.

ವಿಜ್ಞಾನದ ಸೆಳೆತದ ಜೊತೆಗೆ ದೇಶಪ್ರೇಮದ ಕಿಚ್ಚು ಅವರ ಎದೆಯಲ್ಲಿತ್ತು. ಭಾರತೀಯ ವಿಜ್ಞಾನಿಗಳು ಪಾಶ್ಚಿಮಾತ್ಯರ ಆಡಂಬರ ಅನುಕರಿಸಬಾರದು; ನಮ್ಮಲ್ಲಿರುವ ಸೀಮಿತ ಸಂಪನ್ಮೂಲಗಳಲ್ಲೇ ಜಗತ್ತನ್ನು ಗೆಲ್ಲಬೇಕು ಎಂಬುದು ಅವರ ಛಲವಾಗಿತ್ತು.

ಅದು 1921ರ ಸಮಯ. ರಾಮನ್ ಅವರು ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಸಮಾವೇಶ ಮುಗಿಸಿ ಹಡಗಿನಲ್ಲಿ ಲಂಡನ್‌ನಿಂದ ಭಾರತಕ್ಕೆ ಮರಳುತ್ತಿದ್ದರು. ಮೆಡಿಟರೇನಿಯನ್ ಸಮುದ್ರದ ಮೇಲೆ ಸೂರ್ಯ ಪ್ರಕಾಶಿಸುತ್ತಿದ್ದ, ನೀಲಿ ಸಮುದ್ರದ ಸೌಂದರ್ಯವನ್ನು ಕಂಡು ರಾಮನ್ ಮಂತ್ರಮುಗ್ಧರಾದರು. ಸಮುದ್ರದ ಬಣ್ಣವೇಕೆ ನೀಲಿ ಎಂಬ ಪ್ರಶ್ನೆ ಅವರ ಮನಸ್ಸಿನಲ್ಲಿ ಮೂಡಿತು. ಅಲ್ಲಿಯವರೆಗೆ ವಿಜ್ಞಾನಿಗಳು ‘ಸಮುದ್ರದ ನೀಲಿ ಬಣ್ಣವು ಆಕಾಶದ ಪ್ರತಿಬಿಂಬ’ ಎಂದು ನಂಬಿದ್ದರು. ರಾಮನ್ ಅವರು ತಕ್ಷಣ ತಮ್ಮ ಜೇಬಿನಲ್ಲಿದ್ದ ಒಂದು ಪುಟ್ಟ ಗಾಜಿನ ರೋಹಿತ (ಪ್ರಿಸಂ) ಹೊರತೆಗೆದು ಪರೀಕ್ಷಿಸಿದರು. ಸಮಾಧಾನದ ಉತ್ತರ ದೊರಕಲಿಲ್ಲ.

ಭಾರತಕ್ಕೆ ಮರಳಿದ ನಂತರ ಪ್ರಯೋಗಾಲಯದಲ್ಲಿ ರಾಮನ್‌ರ ಪ್ರಯೋಗ ಮುಂದುವರಿಯಿತು. ಅವರು ಬಳಸಿದ್ದು ಇಂದಿನ ಕೋಟ್ಯಂತರ ರೂಪಾಯಿಗಳ ಲ್ಯಾಬ್ ಉಪಕರಣಗಳನ್ನಲ್ಲ! ಅವರ ಪ್ರಯೋಗದ ಮೂಲವಸ್ತು ಬೆಳಕು. ಆ ಬೆಳಕಿನ ಮೂಲ ಸಾಕ್ಷಾತ್ ಸೂರ್ಯನೇ ಆಗಿದ್ದ. ಬೆಳಕನ್ನು ಪಡೆಯಲು ಯಾವ ಖರ್ಚೂ ಇರಲಿಲ್ಲ. ಆ ಬೆಳಕಿನ ತೀವ್ರತೆ ಸಾಲದು ಎನ್ನಿಸಿದಾಗ ಅವರು ಅಲ್ಪದರದ ಪಾದರಸ ದೀಪಗಳನ್ನು ಬಳಸಿದರು. ಅವರ ಪ್ರಯೋಗಗಳಿಗೆ ಬೇಕಾಗಿದ್ದ ಸ್ಪೆಕ್ಟ್ರೋಗ್ರಾಫ್ ಯಂತ್ರದ ಬೆಲೆ 500 ರೂಪಾಯಿ ಮೀರಿರಲಿಲ್ಲ. ರಾಮನ್ ಅವರು ಪ್ರಯೋಗ ಮಾಡುವಾಗ ಸೂರ್ಯನ ಬೆಳಕನ್ನು ಕೇಂದ್ರೀಕರಿಸಲು ಕೆಲವೊಮ್ಮೆ ತಮ್ಮ ವಿದ್ಯಾರ್ಥಿಗಳನ್ನು ಕನ್ನಡಿ ಹಿಡಿದು ನಿಲ್ಲುವಂತೆ ಹೇಳುತ್ತಿದ್ದರಂತೆ! ಅಷ್ಟು ಸರಳವಾಗಿತ್ತು ಅವರ ಸಂಶೋಧನಾ ವಿಧಾನ.

ರಾಮನ್‌ರ ಪ್ರಯೋಗದ ಪ್ರಕಾರ, ಬೆಳಕು ಯಾವುದಾದರೂ ಒಂದು ವಸ್ತುವಿನ ಮೇಲೆ ಬಿದ್ದಾಗ, ಅದು ಚದುರುತ್ತದೆ. ಈ ರೀತಿ ಚದುರಿದ ಬೆಳಕಿನ ಬಣ್ಣ (ತರಂಗಾಂತರ) ಸ್ವಲ್ಪ ಬದಲಾಗುತ್ತದೆ. ಇದನ್ನೇ ‘ರಾಮನ್ ಪರಿಣಾಮ’ ಎನ್ನಲಾಗುತ್ತದೆ. ಇದು ಅಣುಗಳ ‘ಬೆರಳಚ್ಚು’ ಇದ್ದಂತೆ. ಇಂದು ಈ ತಂತ್ರಜ್ಞಾನವನ್ನು ಬಳಸಿ ಕ್ಯಾನ್ಸರ್ ಪತ್ತೆಯಿಂದ ಹಿಡಿದು, ಮಂಗಳ ಗ್ರಹದ ಮೇಲಿರುವ ಖನಿಜಗಳವರೆಗೆ ಎಲ್ಲವನ್ನೂ ಪತ್ತೆಹಚ್ಚಲಾಗುತ್ತಿದೆ!

‘ವಿಜ್ಞಾನವು ದುಬಾರಿ ಉಪಕರಣಗಳಲ್ಲಿಲ್ಲ, ಅದನ್ನು ನೋಡುವ ಕಣ್ಣು ಮತ್ತು ಯೋಚಿಸುವ ಮೆದುಳಿನಲ್ಲಿದೆ’ ಎನ್ನುವುದು ರಾಮನ್‌ರ ನಂಬಿಕೆಯಾಗಿತ್ತು. ಆ ವಿವೇಕದಿಂದಲೇ ಅವರು ಅಪರೂಪದ ಸಂಶೋಧನೆ ಕೈಗೊಂಡು, ವಿಶ್ವ ವಿಜ್ಞಾನ ಭೂಪಟದಲ್ಲಿ ಭಾರತದ ಸ್ಥಾನವನ್ನು ಶಾಶ್ವತಗೊಳಿಸಿದರು. ಇನ್ನೆರಡು ವರ್ಷ ಕಳೆದರೆ ರಾಮನ್‌ರ ಸಂಶೋಧನೆಗೆ (1928) ನೂರು ವರ್ಷ! ವಿಜ್ಞಾನ ರಂಗದ ಸಾಧನೆಗೆ ಇನ್ನೊಂದು ನೊಬೆಲ್ ಬಹುಮಾನ ಗಳಿಸಲು ಈ ದೇಶ ಇನ್ನೆಷ್ಟು ವರ್ಷ ಕಾಯಬೇಕು?

‘ರಾಮನ್ ಪರಿಣಾಮ’ ಆವಿಷ್ಕಾರಗೊಂಡದ್ದು 1928ರ ಫೆಬ್ರುವರಿ 28ರಂದು. ಆ ಸವಿನೆನಪಿಗಾಗಿ ಭಾರತದಲ್ಲಿ ಪ್ರತಿ ವರ್ಷ ಫೆ. 28ನ್ನು ‘ರಾಷ್ಟ್ರೀಯ ವಿಜ್ಞಾನ ದಿನ’ವನ್ನಾಗಿ ಆಚರಿಸಲಾಗುತ್ತಿದೆ. ವಿಜ್ಞಾನ ಹಾಗೂ ದೇಶಪ್ರೇಮದ ನೈಜ ಸಂಕೇತದ ರೂಪದಲ್ಲಿ ರಾಮನ್ ನೆನಪಿನ ‘ವಿಜ್ಞಾನ ದಿನ’ ನಮಗೆ ಒದಗಬೇಕಾಗಿದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

16 ವರ್ಷದೊಳಗಿನವರ ಮೊಬೈಲ್ ಬಳಕೆ ನಿರ್ಬಂಧಿಸುವ ಪ್ರಸ್ತಾವದ ಬಗ್ಗೆ ಎರಡು ಅಭಿಪ್ರಾಯಗಳು

ಮಕ್ಕಳಿಗೆ ಮೊಬೈಲ್ ನಿರ್ಬಂಧ ಬೇಕಿದೆ ಪರ್ಯಾಯ ದಾರಿ

• ಡಾ.ಮನೋಜ್‌ಕುಮಾರ್ ಶರ್ಮಾ



ಸರ್ಕಾರಗಳು ಮೊಬೈಲ್ ಬಳಕೆಯ ಮೇಲೆ ವಿವಿಧ ರೀತಿಯ ನಿಯಂತ್ರಣ ಹೇರುವ ಪ್ರವೃತ್ತಿ ಜಗತ್ತಿನಾದ್ಯಂತ ಹೆಚ್ಚುತ್ತಿದೆ. ಸಾಮಾನ್ಯವಾಗಿ ವಯಸ್ಸಿನ ಆಧಾರದಲ್ಲಿ ಮೊಬೈಲ್ ಬಳಕೆಯನ್ನು ನಿರ್ಬಂಧಿಸಲಾಗುತ್ತಿದೆ. ಹೆಚ್ಚಿನ ಸಂದರ್ಭಗಳಲ್ಲಿ 16 ವರ್ಷದ ಒಳಗಿನವರಿಗೆ ಇದನ್ನು ಅನ್ವಯಿಸಲಾಗುತ್ತಿದೆ. ಸಾಮಾಜಿಕ ಜಾಲತಾಣಗಳು, ಗೇಮ್ಸ್‌ನಂತಹ ನಿರ್ದಿಷ್ಟ ಆ್ಯಪ್‌ಗಳನ್ನು ನಿರ್ಬಂಧಿಸುವುದರಿಂದ ಹಿಡಿದು ಶಿಕ್ಷಣ ಸಂಸ್ಥೆಗಳಲ್ಲಿ ಮೊಬೈಲ್ ಬಳಕೆಯನ್ನೇ ನಿಷೇಧಿಸುವವರೆಗೆ ವಿವಿಧ ರೀತಿಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಪ್ರವರ್ಧಮಾನಕ್ಕೆ ಬರುತ್ತಿರುವ ಈ ಪ್ರವೃತ್ತಿಯನ್ನು ಅರ್ಥ ಮಾಡಿಕೊಳ್ಳಬೇಕಾದರೆ, ಕೆಲವು ವಿಭಿನ್ನ ಪ್ರಶ್ನೆಗಳನ್ನು ಕೇಳುವುದು ಮುಖ್ಯವಾಗುತ್ತದೆ: ಈ ನಿರ್ಬಂಧದಿಂದ ನಿರೀಕ್ಷಿಸಬಹುದಾದ ಪ್ರಯೋಜನಗಳೇನು? ಇವು ಎಷ್ಟು ಪರಿಣಾಮಕಾರಿ? ನಿರ್ಬಂಧದಿಂದ ಯಾರಿಗೆ ಹೆಚ್ಚು ಪ್ರಯೋಜನ? ಸರ್ಕಾರಗಳು ನಿಯಂತ್ರಣ ಕ್ರಮಗಳಿಗೆ ಮುಂದಾಗಲು ಕಾರಣವೇನು?

16 ವರ್ಷ ವಯಸ್ಸಿನ ಒಳಗಿನ ಮಕ್ಕಳು ಮೊಬೈಲ್ ಬಳಸುವುದನ್ನು ನಿರ್ಬಂಧಿಸಬೇಕು ಎಂದು ಒತ್ತಡ ಹೇರುತ್ತಿರುವವರು ಎಚ್ಚೆತ್ತ ತಲೆಮಾರಿನ ಪೋಷಕರು. ಪೋಷಕರು ಮತ್ತು ಮಕ್ಕಳ ನಡುವೆ ಡಿಜಿಟಲ್ ಸಾಕ್ಷರತೆಯ ಹೆಚ್ಚುತ್ತಿರುವ ಅಂತರ ಎಂದರೆ, ಮಕ್ಕಳ ಮೊಬೈಲ್ ಬಳಕೆಯನ್ನು ಅರ್ಥಮಾಡಿಕೊಳ್ಳುವುದು ಮತ್ತು ಅದನ್ನು ಪರಿಣಾಮಕಾರಿಯಾಗಿ ಮೇಲ್ವಿಚಾರಣೆ ಮಾಡುವುದು ಹೆಚ್ಚು ಕಷ್ಟಕರವಾಗಿದೆ ಎಂದರ್ಥ. ತರಗತಿಯಲ್ಲಿನ ಏಕಾಗ್ರತೆ, ಶೈಕ್ಷಣಿಕ ಸಾಧನೆ ಸೇರಿದಂತೆ ಹೆಚ್ಚು ಮೊಬೈಲ್ ಬಳಕೆಯ ನಕಾರಾತ್ಮಕ ಪರಿಣಾಮಗಳ ಬಗ್ಗೆ ಹೆಚ್ಚಿನ ಪ್ರಮಾಣದಲ್ಲಿ ಲಭ್ಯವಾಗುತ್ತಿರುವ ಮಾಹಿತಿ; ಸೈಬರ್ ಕಿರುಕುಳ, ದೈಹಿಕ ಸ್ವರೂಪದ ಬಗ್ಗೆ ಅನಾರೋಗ್ಯಕಾರಿ, ಅವಾಸ್ತವಿಕ ನಿಲುವು ಗಟ್ಟಿಗೊಳ್ಳುವುದು, ಆನ್‌ಲೈನ್ ಕಿರುಕುಳ ಮತ್ತು ಲೈಂಗಿಕ ದೌರ್ಜನ್ಯಗಳ ಅಪಾಯ; ಹೆಚ್ಚುತ್ತಿರುವ ಸಾಮಾಜಿಕ ಪ್ರತ್ಯೇಕತೆ, ಗೇಮಿಂಗ್ ಮತ್ತು ಜೂಜಿನ ಆ್ಯಪ್‌ಗಳ ಚಟ ಹತ್ತಿಸಿಕೊಳ್ಳುವುದು, ಕುಟುಂಬದ ಸ್ವರೂಪ ಬದಲಾಗಿ, ಪೋಷಕರಿಬ್ಬರೂ ಉದ್ಯೋಗಿಗಳಾಗಿದ್ದು, ಮಕ್ಕಳೊಂದಿಗೆ ಅತಿ ಕಡಿಮೆ ಸಮಯ ಕಳೆಯುತ್ತಿರುವುದು– ಇಂಥ ಕ್ಷಿಪ್ರ ಬದಲಾವಣೆಯ ಕಾಲದಲ್ಲಿ ಪೋಷಕರು ಅಸಹಾಯಕರಾಗಿರುವುದು ಅಚ್ಚರಿಯ ವಿಷಯವೇನಲ್ಲ.

ವಿವಿಧ ದೇಶಗಳಲ್ಲಿ ಮೊಬೈಲ್ ಫೋನ್ ನಿರ್ಬಂಧವು ಮಿಶ್ರ ಫಲಿತಾಂಶವನ್ನು ನೀಡಿದೆ. ಅತಿ ಕಡಿಮೆ ಅಂಕಗಳನ್ನು ಪಡೆಯುತ್ತಿದ್ದ ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಯು ಉತ್ತಮಗೊಂಡಿರುವುದು ಸಾಬೀತಾಗಿದೆ. ಆದಾಗ್ಯೂ, ಇದು ತಾಂತ್ರಿಕತೆ ಅಳವಡಿಸಿಕೊಂಡ ಶಾಲಾ ವಾತಾವರಣದಿಂದ ಪ್ರಭಾವಿತವಾದಂತೆ ತೋರುತ್ತದೆ. (ಇನ್‌ಫರ್ಮೇಷನ್ ಆ್ಯಂಡ್ ಕಮ್ಯುನಿಕೇಷನ್ ಟೆಕ್ನಾಲಜಿ ಇರುವ ಶಾಲೆಗಳಲ್ಲಿ ಮೊಬೈಲ್ ನಿಷೇಧಕ್ಕೆ ಅರ್ಥವಿಲ್ಲ) ಮತ್ತು ಮೊಬೈಲ್ ಅನ್ನು ಯಾವುದಕ್ಕೆ ಬಳಸಲಾಗುತ್ತಿದೆ ಎನ್ನುವುದು ಕಾರಣ. ಶೈಕ್ಷಣಿಕ ಉದ್ದೇಶಕ್ಕಾಗಿ ಮೊಬೈಲ್‌ಗಳನ್ನು ಬಳಸುವುದು ಉಪಯುಕ್ತ ಎಂದು ಕಂಡುಬಂದಿದ್ದು, ಶಾಲೆಗಳಲ್ಲಿ ಸೂಕ್ತ ತಾಂತ್ರಿಕತೆ ಅಳವಡಿಸಿಕೊಳ್ಳುವುದಕ್ಕೆ ಇದು ಪೂರಕವಾಗಿದೆ.

ಮಾನಸಿಕ ಆರೋಗ್ಯ ವೃದ್ಧಿ ಮತ್ತು ಸೈಬರ್ ಕಿರುಕುಳದಿಂದ ರಕ್ಷಣೆಯಂಥ ಪ್ರಯೋಜನಗಳು ಸಿಗುವ ಬಗ್ಗೆ ಮಿಶ್ರ ಪ್ರತಿಕ್ರಿಯೆಗಳು ಬಂದಿದ್ದು, ಅದನ್ನು ಪುಷ್ಟೀಕರಿಸುವಂಥ ಪುರಾವೆಗಳು ಲಭ್ಯವಾಗಿರುವುದು ಕಡಿಮೆ.

ಸಾಮಾಜಿಕ ಜಾಲತಾಣಗಳಂಥ ನಿರ್ದಿಷ್ಟ ಆ್ಯಪ್‌ಗಳು ಅಥವಾ ಗೇಮ್‌ಗಳ ನಿಷೇಧದಿಂದ ಆಗುವ ಪ್ರಯೋಜನಗಳ ಬಗೆಗಿನ ಚಿತ್ರಣವೂ ಸೂಕ್ಷ್ಮ ವ್ಯತ್ಯಾಸಗಳಿಂದ ಕೂಡಿದೆ. ಸಾಮಾಜಿಕ ಜಾಲತಾಣಗಳು (ವಿಶೇಷವಾಗಿ ದುರ್ಬಲ ವರ್ಗಗಳ ಮಕ್ಕಳಿಗೆ ಮತ್ತು ಮಾನಸಿಕ ಆರೋಗ್ಯದ ಸಮಸ್ಯೆಗಳು ಇರುವವರಿಗೆ) ಒಳಗೊಳ್ಳುವ ಮತ್ತು ಬೆಂಬಲದ ಭಾವನೆಗಳನ್ನು ಮೂಡಿಸುತ್ತವೆ. ಗೇಮ್‌ಗಳು ಸ್ವಸಾಮರ್ಥ್ಯ, ಸಾಧನೆ ಮತ್ತು ಸಮುದಾಯದ ಭಾವನೆಗಳನ್ನು ಆನ್‌ಲೈನ್‌ನಲ್ಲಿ ಬೆಳೆಸಲು ನೆರವಾಗುತ್ತವೆ. ಮೊಬೈಲ್ ಬಳಕೆಯ ಮೇಲೆ ನಿಷೇಧ ಹೇರುವುದೇ ಆದರೆ, ಇಂಥ ಮಕ್ಕಳಿಗೆ ಯಾವ ಪರ್ಯಾಯಗಳಿವೆ ಎನ್ನುವುದನ್ನು ಪರಿಗಣಿಸಬೇಕಾಗುತ್ತದೆ.

ಮೌಲ್ಯಮಾಪನ ಕಷ್ಟ: ಇಂತಹ ನಿರ್ಬಂಧಗಳು ಎಷ್ಟು ಪರಿಣಾಮಕಾರಿ ಎಂಬುದನ್ನು ಮೌಲ್ಯಮಾಪನ ಮಾಡುವುದು ಕಷ್ಟ. ಬೇರೆಯವರೊಂದಿಗೆ ಸಂವಹನ, ಪ್ರಯಾಣ, ಬಿಲ್ ಪಾವತಿ ಸೇರಿದಂತೆ ವಿವಿಧ ಉದ್ದೇಶಗಳಿಗೆ ಮಕ್ಕಳು ಈಗ ಮೊಬೈಲ್ ಫೋನ್‌ಗಳನ್ನೇ ಅವಲಂಬಿಸಿರುವುದರಿಂದ ಮೊಬೈಲ್‌ಗಳನ್ನು ಸಂಪೂರ್ಣವಾಗಿ ನಿಷೇಧಿಸಲು ಅಥವಾ ನಿರ್ಬಂಧಿಸಲು ಸಾಧ್ಯವಿಲ್ಲ. ಒಂದು ವೇಳೆ ನಿರ್ಬಂಧ ಹೇರಿದರೆ ಮಕ್ಕಳು ಕಾನೂನುಬಾಹಿರವಾದ ಆ್ಯಪ್‌ಗಳು ಮತ್ತು ವಿಪಿಎನ್‌ಗಳ ಮೂಲಕ ನಿರ್ಬಂಧದ ನಿಯಮಗಳಿಂದ ತಪ್ಪಿಸಿಕೊಳ್ಳುವ ದಾರಿ ಹುಡುಕಬಹುದು. ಮಕ್ಕಳು ‘ಭೂಗತ’ರಾಗಿ ಮೊಬೈಲ್ ಬಳಸುವ ನಡವಳಿಕೆ ಬೆಳೆಸಿಕೊಳ್ಳಲು ಇದು ದಾರಿ ಮಾಡಬಹುದು. ಒಂದು ವೇಳೆ ಹಾಗಾದ ಪಕ್ಷದಲ್ಲಿ, ಮಕ್ಕಳು ಕದ್ದುಮುಚ್ಚಿ ಆನ್‌ಲೈನ್ ಬಳಸುವಾಗ ಕಹಿ ಅನುಭವ ಉಂಟಾದರೆ ಬೇರೆಯವರ ನೆರವು ಕೇಳುವುದಕ್ಕೂ ಅವರು ಹಿಂಜರಿಯಬಹುದು.

ಇಂತಹ ನಿಯಂತ್ರಣ ಕ್ರಮಗಳಿಂದ ಕೆಲವು ಕುಟುಂಬಗಳಿಗೆ ಮತ್ತು ಮಕ್ಕಳಿಗೆ ಅನುಕೂಲವಾಗಬಹುದು. ಆದರೆ, ಮೊಬೈಲ್ ಬಳಸುವ ಜನಸಂಖ್ಯೆಯ ಗಾತ್ರ ಎಷ್ಟು ದೊಡ್ಡದಾಗಿದೆ ಮತ್ತು ಕೈಗೊಂಡಿರುವ ಕ್ರಮಗಳು ಎಷ್ಟು ಪರಿಣಾಮಕಾರಿ ಎಂಬುದು ನಮಗೆ ಗೊತ್ತಿಲ್ಲ. ಕಠಿಣ ನಿರ್ಬಂಧದಿಂದಾಗಿ ಬೇರೆ ಮಕ್ಕಳು ಹೆಚ್ಚು ರಹಸ್ಯವಾಗಿ ಮತ್ತು ನಿಯಂತ್ರಣಕ್ಕೆ ಸಿಗದ ರೀತಿಯಲ್ಲಿ ಮೊಬೈಲ್ ಬಳಸಲು ಆರಂಭಿಸಬಹುದು. ಅಂತಹ ಪರಿಸ್ಥಿತಿ ನಿರ್ಮಾಣವಾದರೆ, ನಿರ್ಬಂಧದ ಉದ್ದೇಶ ಈಡೇರಿದಂತಾಯಿತೇ?

ನಿರ್ಬಂಧದ ನಿಯಮಗಳನ್ನು ಅನುಷ್ಠಾನಕ್ಕೆ ತರಲಾಯಿತು ಎಂದೇ ಇಟ್ಟುಕೊಳ್ಳಿ. ಮಕ್ಕಳಿಗೆ 16 ವರ್ಷ ವಯಸ್ಸು ಆದ ನಂತರ, ಅವರು ಆನ್‌ಲೈನ್ ವಾತಾವರಣದಲ್ಲಿ ತೊಡಗಿಕೊಳ್ಳಲು ಯಾವ್ಯಾವ ಕೌಶಲಗಳನ್ನು ಹೊಂದಿರಬೇಕು?

ಇತಿಹಾಸವನ್ನು ಗಮನಿಸಿದರೆ, ಮಾದಕ ವಸ್ತು, ಮದ್ಯ ಸೇವನೆ, ಅಸುರಕ್ಷಿತ ಲೈಂಗಿಕತೆ ಇತ್ಯಾದಿ ಸಾರ್ವಜನಿಕ ಆರೋಗ್ಯಕ್ಕೆ ಹಾನಿಕರವಾದ ಜನರ ನಡವಳಿಕೆಗಳ ಮೇಲೆ ನಿರ್ಬಂಧ ವಿಧಿಸಿದಾಗಲೆಲ್ಲ ಮಿಶ್ರ ಪರಿಣಾಮ ಕಂಡು ಬಂದಿದೆ. ಸಮಾಜ, ಜನರಿಗೆ ಆಗುವ ಹಾನಿಯನ್ನು ಕಡಿಮೆ ಮಾಡಲು ಕ್ರಮ ವಹಿಸಬೇಕು ಎಂಬ ಶಿಫಾರಸನ್ನು ತಜ್ಞರು ಪದೇ ಪದೇ ಮಾಡಿದ್ದಾರೆ. ಮಕ್ಕಳ ಮೊಬೈಲ್ ಬಳಕೆ ವಿಚಾರದಲ್ಲೂ ನಾವು ಅಂತಹದ್ದೇ ಮಾರ್ಗವನ್ನು ಅನುಸರಿಸಬೇಕು.

ಏನು ಮಾಡಬಹುದು?: ಮಕ್ಕಳು, ಪೋಷಕರಲ್ಲಿ ಡಿಜಿಟಲ್ ಸಾಕ್ಷರತೆಯನ್ನು ಹೆಚ್ಚಿಸಬೇಕು. ಅದಕ್ಕಾಗಿ ಮಕ್ಕಳು, ಪೋಷಕರು ಮತ್ತು ಶಾಲೆಗಳೊಂದಿಗೆ ಕೆಲಸ ಮಾಡಬೇಕು. ಅಂದರೆ, ಆನ್‌ಲೈನ್ ಜಗತ್ತಿನಲ್ಲಿ ಆರೋಗ್ಯಕರವಾಗಿ ಮತ್ತು ಸುರಕ್ಷಿತವಾಗಿ ತೊಡಗಲು ಮಾಹಿತಿ ಮತ್ತು ಪೂರಕ ಕೌಶಲಗಳ ಬಗ್ಗೆ ಅವರಲ್ಲಿ ಅರಿವು ಮೂಡಿಸಬೇಕು. ಮಕ್ಕಳ ಮೊಬೈಲ್ ಬಳಕೆಯನ್ನು ಸ್ವತಃ ಅವರೇ ನಿಯಂತ್ರಿಸಿಕೊಳ್ಳುವಂತಾಗಬೇಕು. ಅದಕ್ಕಾಗಿ ಮಕ್ಕಳ ವಯಸ್ಸಿಗೆ ಅನುಗುಣವಾಗಿ ಮಕ್ಕಳು ಮತ್ತು ಪೋಷಕರೊಂದಿಗೆ ನಿರಂತರವಾಗಿ ಸಂವಾದ ನಡೆಯುತ್ತಿರಬೇಕು. ಪೋಷಕರು–ಶಾಲೆಗಳ ನಡುವೆ ಸಂವಾದಕ್ಕೆ ಅವಕಾಶ ಕಲ್ಪಿಸುವ ಡಿಜಿಟಲ್ ಸಾಕ್ಷರತೆ ಅಭಿಯಾನ ಮತ್ತು ಜಾಗೃತಿ ಕಾರ್ಯಕ್ರಮಗಳು ಕೌಶಲಗಳ ಕಲಿಕೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರಲಿವೆ. ಭಾವನೆಗಳ ನಿಯಂತ್ರಣ, ಆರೋಗ್ಯಕರ ಸಂಹವನ, ಸಮಸ್ಯೆಗಳ ಬಗೆಹರಿಸುವಿಕೆ ಮತ್ತು ನೆರವನ್ನು ಕೇಳುವುದು ಮುಂತಾದ ಮನಸ್ಸಿನ ಆರೋಗ್ಯಕ್ಕೆ ಸಂಬಂಧಿಸಿದ ಮತ್ತು ಸ್ಥಿತಿಸ್ಥಾಪಕತ್ವ ಗುಣವನ್ನು ಬೆಳೆಸುವ ಕೌಶಲಗಳು ಕೂಡ ಬದಲಾವಣೆಗೆ ಭದ್ರ ಅಡಿಪಾಯವನ್ನು ಹಾಕುತ್ತವೆ.


ತಂತ್ರಜ್ಞಾನ ಬಳಕೆಗೆ ಸಂಬಂಧಿಸಿದಂತೆ ಪೋಷಕರು ಮತ್ತು ಮಕ್ಕಳು ಒಟ್ಟಾಗಿ ಕುಳಿತು ಚರ್ಚಿಸಿ ನಿಯಮಗಳನ್ನು ರೂಪಿಸಬೇಕು. ಮಗುವಿನ ವಯಸ್ಸಿಗೆ ಅನುಗುಣವಾಗಿ ಪೋಷಕರು ರೂಪಿಸಿದ ಮೊಬೈಲ್ ಬಳಕೆ ನಿಯಂತ್ರಣ ನಿಯಮಗಳು ಹೆಚ್ಚು ಸೂಕ್ತವಾಗಬಹುದು. ಉದಾಹರಣೆಗೆ, ಅಂಬೆಗಾಲು ಹಾಕುತ್ತಿರುವ ಮಗು ಮೊಬೈಲ್ ನೋಡುವುದನ್ನು ಸಂಪೂರ್ಣವಾಗಿ ನಿರ್ಬಂಧಿಸಬಹುದು. ಮಾಧ್ಯಮಿಕ ಶಾಲೆಯಲ್ಲಿ ಓದುತ್ತಿರುವ ಮಗುವಿಗೆ, ಮೊಬೈಲ್‌ನಲ್ಲಿ ಯಾವುದನ್ನು ನೋಡಬಹುದು, ಯಾವುದನ್ನು ನೋಡಬಾರದು ಎಂಬುದರ ಬಗ್ಗೆ ಆ ಮಗುವಿನೊಂದಿಗೆ ಮುಕ್ತವಾಗಿ ಚರ್ಚೆ ನಡೆಸಿ ರೂಪಿಸಿರುವ ನಿಯಮಗಳು ಹೆಚ್ಚು ಸರಿಹೊಂದಬಹುದು. ಮಕ್ಕಳು ಮೊಬೈಲ್ ಬಳಸುತ್ತಿರುವುದರ ಮೇಲೆ ಪೋಷಕರು ನಿಗಾ ಇಟ್ಟು, ಅವರಿಗೆ ಮಾರ್ಗದರ್ಶನ ಮಾಡಿದರೆ ಮಕ್ಕಳು ಆರೋಗ್ಯಕರ ಹವ್ಯಾಸ ಮತ್ತು ಆನ್‌ಲೈನ್ ವಿಷಯಗಳ ಬಗ್ಗೆ ಹೆಚ್ಚು ವಿಮರ್ಶಾತ್ಮಕವಾಗಿ ಯೋಚಿಸಲು ಸಾಧ್ಯವಾಗುತ್ತದೆ.

ಹದಿಹರೆಯದ ಮಕ್ಕಳ ವಿಷಯಕ್ಕೆ ಬಂದರೆ, ಪೋಷಕರು ಮತ್ತು ಮಕ್ಕಳು ಒಟ್ಟಾಗಿ ಮೊಬೈಲ್ ಬಳಸುವುದು ಹೆಚ್ಚು ಸೂಕ್ತ. ಇಬ್ಬರೂ ಜೊತೆಯಾಗಿ ಮೊಬೈಲ್ ಮೂಲಕ ಆನ್‌ಲೈನ್ ಜಗತ್ತಿಗೆ ಪ್ರವೇಶ ಪಡೆಯುವುದರಿಂದ ಪ್ರಾಮಾಣಿಕ ಸಂವಹನಕ್ಕೆ ಹೆಚ್ಚು ಅವಕಾಶ ಸಿಗುತ್ತದೆ. ವಯಸ್ಕ ಮಕ್ಕಳೊಂದಿಗೆ ಮುಕ್ತ ಮತ್ತು ನಂಬಿಕಾರ್ಹವಾದ ಸಂಬಂಧವನ್ನು ಇರಿಸಿಕೊಳ್ಳುವುದು ಕೂಡ ಅವರು ಅಪಾಯಕಾರಿಯಾದ ಆನ್‌ಲೈನ್ ಚಟುವಟಿಕೆಗಳಲ್ಲಿ ಸಿಲುಕಿಕೊಳ್ಳುವುದರಿಂದ ಮತ್ತು ಅನಾರೋಗ್ಯಕರವಾಗಿ ಮೊಬೈಲ್ ಬಳಕೆ ಮಾಡುವುದರಿಂದ ತಪ್ಪಿಸಬಹುದು.

ಇದರ ಸಾಕಾರಕ್ಕೆ ಸರ್ಕಾರದ ವಿವಿಧ ಇಲಾಖೆಗಳ ಗಮನಾರ್ಹವಾದ ಪ್ರಯತ್ನದ ಅಗತ್ಯವಿದೆ. ಅದಕ್ಕಾಗಿ ಹಲವು ಪಾಲುದಾರರು ಕೂಡ ಈ ಪ್ರಯತ್ನದಲ್ಲಿ ಭಾಗಿಗಳಾಗಬೇಕು. ದೀರ್ಘ ಅವಧಿಗೆ ದೊಡ್ಡ ಮೊತ್ತದ ಹಣಕಾಸು ಮತ್ತು ಮಾನವ ಸಂಪನ್ಮೂಲ ಬೇಕಾಗುತ್ತದೆ. ಮೂಲಸೌಕರ್ಯಗಳ ಅಭಿವೃದ್ಧಿ ಮತ್ತು ಮಕ್ಕಳಿಗೆ ಮೊಬೈಲ್‌ಯೇತರ, ಸುರಕ್ಷಿತ ಮತ್ತು ಆರೋಗ್ಯಕರವಾದ ಪರ್ಯಾಯ ಚಟುವಟಿಕೆಗಳೂ ಲಭ್ಯವಿರುವಂತೆ ನೋಡಿಕೊಳ್ಳಬೇಕಾಗುತ್ತದೆ.

ಲೇಖಕ: ನಿಮ್ಹಾನ್ಸ್‌ನ ಸರ್ವಿಸ್ ಫಾರ್ ಹೆಲ್ದಿ ಯೂಸ್ ಆಫ್ ಟೆಕ್ನಾಲಜಿ (ಶಟ್) ಕ್ಲಿನಿಕ್ ಮುಖ್ಯಸ್ಥ

> ನಿಯಂತ್ರಣ ಕ್ರಮಗಳಿಂದ ಕೆಲವು ಕುಟುಂಬಗಳಿಗೆ ಮತ್ತು ಮಕ್ಕಳಿಗೆ ಅನುಕೂಲವಾಗಬಹುದು. ಆದರೆ, ಮೊಬೈಲ್ ಬಳಸುವ ಜನಸಂಖ್ಯೆಯ ಗಾತ್ರ ಎಷ್ಟು ದೊಡ್ಡದಾಗಿದೆ ಮತ್ತು ಕೈಗೊಂಡಿರುವ ಕ್ರಮಗಳು ಎಷ್ಟು ಪರಿಣಾಮಕಾರಿ ಎಂಬುದು ನಮಗೆ ಗೊತ್ತಿಲ್ಲ. ಕಠಿಣ ನಿರ್ಬಂಧದಿಂದಾಗಿ ಬೇರೆ ಮಕ್ಕಳು ಹೆಚ್ಚು ರಹಸ್ಯವಾಗಿ ಮತ್ತು ನಿಯಂತ್ರಣಕ್ಕೆ ಸಿಗದ ರೀತಿಯಲ್ಲಿ ಮೊಬೈಲ್ ಬಳಸಲು ಆರಂಭಿಸಬಹುದು. ಅಂತಹ ಪರಿಸ್ಥಿತಿ ನಿರ್ಮಾಣವಾದರೆ, ನಿರ್ಬಂಧದ ಉದ್ದೇಶ ಈಡೇರಿದಂತಾಯಿತೇ?



ಕಲೆ: ಸಂತೋಷ್ ಸಸಿಹಿತ್ಲು

ಅಪಾಯಕಾರಿ ಸಾಮಾಜಿಕ ಜಾಲತಾಣಗಳ ನಿಷೇಧ ಸೂಕ್ತ

• ಡಾ.ಕೆ.ಸಂಧ್ಯಾ ಕಾವೇರಿ



ಜಗತ್ತು ಡಿಜಿಟಲೀಕರಣಗೊಂಡು ದಶಕಗಳು ಉರುಳಿವೆ. ವೈಯಕ್ತಿಕ ಗಣಕಯಂತ್ರ (personal computer) 1980ರಲ್ಲಿ ಮನೆ, ಶಾಲೆ, ವ್ಯವಹಾರಗಳನ್ನು ಪ್ರವೇಶಿಸಿತು. 2000ನೇ ಇಸವಿಯ ನಂತರದ್ದು ಮೊಬೈಲ್ ಫೋನ್‌ಗಳ ಕಾಲವಾಗಿ ಮಾರ್ಪಾಡಾಗಿದೆ. ಈಗ ನಾವೆಲ್ಲರೂ ಕೃತಕ ಬುದ್ಧಿಮತ್ತೆ (ಎ.ಐ) ಎಂಬ ಲೋಕವನ್ನು ಪ್ರವೇಶಿಸಿದ್ದೇವೆ. ಇಂತಹ ತಂತ್ರಜ್ಞಾನಗಳ ಉಪಯೋಗದ ಪರಮೋಚ್ಚ ಕಾಲದಲ್ಲಿ ಇಂದು ಜಗತ್ತಿನ ಆಗುಹೋಗುಗಳೇ ತಂತ್ರಜ್ಞಾನದಿಂದ ನಿಯಂತ್ರಿಸಲ್ಪಟ್ಟಿರುವಂತೆ ಭಾಸವಾಗುತ್ತಿದೆ. ಈ ಕಾಲಘಟ್ಟದಲ್ಲಿ ಮಕ್ಕಳ ಸ್ಮಾರ್ಟ್ ಫೋನ್ ಬಳಕೆಯನ್ನು ನಿರ್ಬಂಧಿಸಲು ಸಾಧ್ಯವೇ ಎನ್ನುವ ಪ್ರಶ್ನೆ ಆಶ್ಚರ್ಯ ತರಿಸುವುದು ಸಹಜ.

ಅತಿಯಾದ ಫೋನ್ ಬಳಕೆ ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ತೊಡಕಾಗುತ್ತಿದೆ ಎನ್ನುವುದನ್ನು ಹಲವಾರು ಸಂಶೋಧನೆಗಳು ತೋರಿಸಿಕೊಟ್ಟಿವೆ. ಮಕ್ಕಳ ಏಕಾಗ್ರತೆ, ಸಂವಹನ ಕೌಶಲ, ಮಾನಸಿಕ ನೆಮ್ಮದಿ ಹಾಗೂ ದೈಹಿಕ ಚಟುವಟಿಕೆಗಳನ್ನು ಮೊಬೈಲ್‌ನ ಅತಿಬಳಕೆ ಕುಂಠಿತಗೊಳಿಸುತ್ತಿದೆ. ಮಾತ್ರವಲ್ಲ, ಮಕ್ಕಳ ವರ್ತನೆಯಲ್ಲಿನ ಸಮಸ್ಯೆಗೆ ಸಾಮಾಜಿಕ ಜಾಲತಾಣಗಳಲ್ಲಿ ಸಿಗುವ ತಪ್ಪು ಮಾದರಿಗಳು ಹಾಗೂ ಮಾಹಿತಿಗಳೇ ಕಾರಣವಾಗುತ್ತಿವೆ. ಆದರೆ ಈಗಿನ ಸಾಮಾಜಿಕ ಹಾಗೂ ಶೈಕ್ಷಣಿಕ ಪರಿಸ್ಥಿತಿಯಲ್ಲಿ ಯಾವುದೇ ವಯೋಮಾನದವರು ಮೊಬೈಲ್ ಬಳಸುವುದನ್ನು ಸಂಪೂರ್ಣವಾಗಿ ನಿರ್ಬಂಧಿಸುವುದು ಕಷ್ಟಸಾಧ್ಯ.

ಮೊಬೈಲ್ ಹಾಗೂ ಇಂಟರ್‌ನೆಟ್ ಬಳಕೆ ಇಂದು ಕಲಿಕೆ ಮತ್ತು ಅನುಭವ ಗಳಿಕೆಯ ಮಾಧ್ಯಮ. ಡಿಜಿಟಲ್ ಕೌಶಲ ಕಲಿಕೆಯ ಮುಖ್ಯ ಅಂಶವೇ ಇಂಟರ್‌ನೆಟ್ ಬಳಕೆಯ ಕಲಿಕೆ. ಇಂದು ಡಿಜಿಟಲ್ ಕೌಶಲ ಕಲಿಕೆಯನ್ನು ನಾವು ಶಿಕ್ಷಣದ ಭಾಗವಾಗಿ ಒಪ್ಪಿಕೊಂಡಿರುವಾಗ ಶಾಲಾ ಮಕ್ಕಳನ್ನು ಆನ್‌ಲೈನ್ ಬಳಕೆಯಿಂದ ನಿರ್ಬಂಧಿಸುವುದು ಸಾಧ್ಯವಿಲ್ಲ.

ನಮ್ಮ ದೇಶದಲ್ಲಿ ಇಂಟರ್‌ನೆಟ್ ದೊರಕಿಸಿಕೊಳ್ಳುವ ಸುಲಭದ ಹಾಗೂ ನೇರ ಸಾಧ್ಯತೆ ಫೋನ್‌ಗಳ ಮೂಲಕವೇ ಆಗಿರುತ್ತದೆ. ಈ ಆಯಾಮದಲ್ಲಿ ನೋಡಿದಾಗ ಡಿಜಿಟಲ್ ಕೌಶಲ ಕಲಿಕೆಗೆ ಇಂಟರ್‌ನೆಟ್ ಬೇಕು. ಅದಕ್ಕಾಗಿ ಮೊಬೈಲ್ ಫೋನ್ ಬೇಕಾಗಿದೆ. ಇಂಟರ್‌ನೆಟ್ ಅನ್ನು ಸಮಾಜದ ಮುಖ್ಯ ವಾಹಿನಿಗೆ ತಂದ ಮೇಲೆ ಅದರ ಬಳಕೆಯನ್ನು ನಿರ್ಬಂಧಿಸಲು ಸಾಧ್ಯವಿಲ್ಲ.

ಮಕ್ಕಳು ಮೊಬೈಲ್ ಬಳಸುವುದನ್ನು ಪೂರ್ಣವಾಗಿ ನಿರ್ಬಂಧಿಸುವುದಕ್ಕಿಂತ ಅದರ ಅಪಾಯಕಾರಿ ಬಳಕೆಗಳನ್ನು ತಡೆಗಟ್ಟುವುದನ್ನು ಯೋಚಿಸಿ, ಯೋಜಿಸಬೇಕಾಗಿದೆ.

ಒಂದು ಅಂಕಿಅಂಶದ ಪ್ರಕಾರ, ಜಗತ್ತಿನ ಮೂರನೇ ಎರಡರಷ್ಟು ಶಾಲಾ ಮಕ್ಕಳಿಗೆ ಇಂಟರ್‌ನೆಟ್ ಲಭ್ಯತೆ ಇಲ್ಲ. ಸುಮಾರು 130 ಕೋಟಿ ಶಾಲಾ ಮಕ್ಕಳಿಗೆ ಮನೆಗಳಲ್ಲಿ ಇನ್ನೂ ಇಂಟರ್‌ನೆಟ್ ಸೌಲಭ್ಯವಿಲ್ಲ. ತಜ್ಞರು ಇಂತಹ ಮಕ್ಕಳು ಆಧುನಿಕ ಯುಗದಲ್ಲಿ ಅಭಿವೃದ್ಧಿಯ ಅವಕಾಶಗಳಿಂದ ವಂಚಿತರಾಗಬಹುದೆನ್ನುವ ಆತಂಕವನ್ನು ತೋರ್ಪಡಿಸುತ್ತಿದ್ದಾರೆ. ಇದಕ್ಕಾಗಿ ‘Bridge the digital devide’ ಅಂದರೆ ಡಿಜಿಟಲ್ ಸೇತುಬಂಧದ ಮೂಲಕ ಎಲ್ಲಾ ವಿದ್ಯಾರ್ಥಿಗಳಿಗೂ ತಂತ್ರಜ್ಞಾನಗಳ ಸಮಾನ ಅವಕಾಶವನ್ನು ಕಲ್ಪಿಸಬೇಕು ಎಂಬುದು ಈ ತಜ್ಞರ ಅಭಿಪ್ರಾಯ.

ಹಿರಿಯರಾದ ನಾವು ಫೋನ್ ದುರ್ಬಳಕೆಯ ಕುರಿತು ಮಾತನಾಡಿದಷ್ಟು ಮಕ್ಕಳಿಗೆ ಅದರ ಅನುಕೂಲದ ಬಗ್ಗೆ ಮಾತನಾಡುತ್ತಿಲ್ಲವೇನೋ ಎಂದೆನಿಸುತ್ತಿದೆ. ಮನೆಯಿಂದ ಹೊರಗೆ ದುಡಿಯುತ್ತಿರುವ, ಬೇಗನೆ ಮನೆ ಸೇರಲಾರದ ಪೋಷಕರಿಗೆ ತಮ್ಮ ಮಕ್ಕಳ ಕೈಯಲ್ಲಿ ಫೋನ್ ಇದೆ, ಎಲ್ಲಿದ್ದರೂ ಏನು ಬೇಕಿದ್ದರೂ ಫೋನ್ ಮಾಡಿ ತಿಳಿಸುತ್ತಾರೆ ಎನ್ನುವುದೇ ದೊಡ್ಡ ಧೈರ್ಯ. ಇಂದು ಪ್ರೌಢಶಾಲೆ ಪ್ರವೇಶಿಸಿದ ವಿದ್ಯಾರ್ಥಿಗಳಿಗೆ ಹಲವಾರು ಆನ್‌ಲೈನ್ ವೇದಿಕೆಗಳು ಕಲಿಕೆಗೆ ಅವಕಾಶ ಕಲ್ಪಿಸುತ್ತಿವೆ. ಶಾಲಾ ಶಿಕ್ಷಣದ ಜೊತೆಗೆ ಜಗತ್ತಿನ ಯಾವ ಭಾಷೆಯನ್ನು, ಯಾವ ವಿಷಯವನ್ನು ಬೇಕಾದರೂ ಶಾಸ್ತ್ರೀಯವಾಗಿ ಕಲಿಯಲು ವಿದ್ಯಾರ್ಥಿಗೆ ಅವಕಾಶವಿದೆ. ಇಂತಹ ಕಲಿಕೆಗೆ ವಿದ್ಯಾರ್ಥಿಯು ತನ್ನ ದಾಖಲಾತಿಯನ್ನು ಸ್ವತಃ ಮಾಡಿಕೊಳ್ಳಲು ಸ್ಮಾರ್ಟ್‌ಫೋನ್‌ಗಳು ನೆರವಾಗಿವೆ.

ನಾವು ನಮ್ಮ ಮಕ್ಕಳನ್ನು ಅಂಗಡಿಗೆ ಕಳುಹಿಸಿ ಅಗತ್ಯ ವಸ್ತುಗಳನ್ನು ಖರೀದಿಸಿ ಸ್ವತಂತ್ರವಾಗಿ ಬರಲು ತಿಳಿಸುವುದು ಒಂದು ಜೀವನ ಕೌಶಲ ತರಬೇತಿ. ಇಂದು ಎಲ್ಲವೂ ಆನ್‌ಲೈನ್ ಪಾವತಿ ಮೂಲಕವೇ ನಡೆಯುತ್ತಿರಬೇಕಾದರೆ ಮಕ್ಕಳ ಕೈಗೆ ಫೋನ್ ಕೊಡದೇ ಇರಲು ಸಾಧ್ಯವೇ? ವಿದ್ಯಾರ್ಥಿಯೊಬ್ಬ ತನ್ನ ಶಿಕ್ಷಣ ಹಂತದಲ್ಲಿ ಡಿಜಿಟಲ್ ಕೌಶಲ ಕಲಿಯುವುದು ಇಂದಿನ ಯುಗದಲ್ಲಿ ಭವಿಷ್ಯದ ಔದ್ಯೋಗಿಕ, ಸಾಂಸ್ಕೃತಿಕ ಹಾಗೂ ಸಾಮಾಜಿಕ ಜೀವನದ ಬುನಾದಿ ಎಂದು ತಜ್ಞರು ಗುರುತಿಸಿರುತ್ತಾರೆ.

ಇಂದು ಮಕ್ಕಳ ಶಿಕ್ಷಣವು ಮನೆ, ಶಾಲೆ ಮಾತ್ರವಲ್ಲದೆ ಫೋನ್ ಅಥವಾ ಅಂತರ್ಜಾಲದಿಂದಲೂ ನಡೆಯುತ್ತಿದೆ. ಇಂದು ಮಕ್ಕಳ ಕೈಯಲ್ಲಿ ಫೋನ್ ಎಂಬುದು ಒಂದು ‘ಸಾಧನ’ ಎಂದಷ್ಟೇ ಪರಿಗಣಿಸಿ ಬಳಕೆಯನ್ನು ನಿರ್ಬಂಧಿಸುವುದು ಪೋಷಕರಿಗೆ, ಶಿಕ್ಷಕರಿಗೆ, ಶಿಕ್ಷಣ ಸಂಸ್ಥೆಗಳಿಗೆ ತೊಂದರೆಯನ್ನು ಉಂಟುಮಾಡುತ್ತದೆ. ಮಾತ್ರವಲ್ಲ ಮಕ್ಕಳ ಕಲಿಕೆ, ಅಭಿವ್ಯಕ್ತಿ, ರಕ್ಷಣೆ ಮತ್ತು ಅಭಿವೃದ್ಧಿಯ ಅತ್ಯುತ್ತಮ ಹಾಗೂ ಸುಲಭದ ದಾರಿ ಒಂದನ್ನು ನಾವು ಮುಚ್ಚಿದಂತಾಗುತ್ತದೆ.

16 ವರ್ಷದೊಳಗಿನ ಮಕ್ಕಳು ಇಂಟರ್‌ನೆಟ್ ಹಾಗೂ ಫೋನ್ ಬಳಸಲೇಬಾರದೆಂದು ನಿರ್ಬಂಧ ಹೇರಿದಾಗ ಇವೆಲ್ಲದರ ಅತಿ ಹೆಚ್ಚು ಪರಿಚಯವಿರುವ ಈಗಿನ ಮಕ್ಕಳು ಇದರ ಬಳಕೆಗಾಗಿ ತಪ್ಪು ದಾರಿ, ತಪ್ಪು ಮಾಹಿತಿಗಳ ಮೊರೆ ಹೋಗಿ ಅಪಾಯವೇ ಹೆಚ್ಚಾಗಬಹುದೇನೋ?

ಫೋನ್ ಹಾಗೂ ಇಂಟರ್‌ನೆಟ್ ಬಳಕೆಯಲ್ಲಿ ನಾವು ಬಹಳ ಮುಂದಿದ್ದೇವೆ. ಸುಮಾರು 95.8 ಕೋಟಿ ಸಕ್ರಿಯ ಇಂಟರ್‌ನೆಟ್ ಬಳಕೆದಾರರಿರುವ ದೇಶ ನಮ್ಮದು. ಇಂಥದರಲ್ಲಿ ನಾವು ಇಂದು ಮಕ್ಕಳು ಮೊಬೈಲ್ ಫೋನ್ ಅನ್ನು ಸಮರ್ಥ ಹಾಗೂ ಸಮರ್ಪಕವಾಗಿ ಬಳಕೆ ಮಾಡುವಂತೆ, ಅವರ ಡಿಜಿಟಲ್ ಬಳಕೆ ಹಾಗೂ ಕಲಿಕೆ ಹೆಚ್ಚು ಸೃಜನಾತ್ಮಕವಾಗುವಂತೆ ನಿರ್ದೇಶಿಸಬೇಕಾಗಿದೆ. ಅವರ ಮೊಬೈಲ್ ಬಳಕೆ ಹಾಗೂ ದೈಹಿಕ ಚಟುವಟಿಕೆ, ಸಾಮಾಜಿಕ ಸಂಪರ್ಕ, ಮೌಲ್ಯ ಶಿಕ್ಷಣ ಎಲ್ಲವನ್ನೂ ಸಮತೋಲನಗೊಳಿಸಬಲ್ಲಂತಹ ಪಠ್ಯಕ್ರಮ ನಮ್ಮದಾಗಬೇಕಾಗಿದೆ. ಅಪಾಯಕಾರಿ ಸಾಮಾಜಿಕ ಜಾಲತಾಣಗಳ ಸಂಪೂರ್ಣ ನಿಷೇಧ ಸರ್ಕಾರದ ಒಂದು ಮುಖ್ಯ ಆದ್ಯತೆ ಆಗಬೇಕಾಗಿದೆ.

ಪ್ರತಿ ಶಾಲೆಯಲ್ಲೂ ಡಿಜಿಟಲ್ ಸಂರಕ್ಷಣೆಯ ನಿಯಮಾವಳಿಗಳು, ಡಿಜಿಟಲ್ ಹಾಗೂ ಸೈಬರ್ ನಿಯಮಗಳು ಹಾಗೂ ರಕ್ಷಣಾ ತಂತ್ರಗಳ ಅರಿವು ಮೂಡಿಸುವ ಕಾರ್ಯಕ್ರಮಗಳು ಕಡ್ಡಾಯವಾಗಿ ಜಾರಿಯಾಗಬೇಕು. ಸರ್ಕಾರ ಹಾಗೂ ಖಾಸಗಿ ಶಾಲೆಗಳಲ್ಲಿ ಆಪ್ತ ಸಮಾಲೋಚನಾ ಕೇಂದ್ರಗಳು ಇರಲೇಬೇಕು. ಎಲ್ಲಕ್ಕಿಂತ ಮುಖ್ಯವಾಗಿ ಹಿರಿಯರಾದ ನಾವು ನಮ್ಮ ಸಾಮಾಜಿಕ ಜಾಲತಾಣಗಳ ಮೂಲಕ ಆರೋಗ್ಯಪೂರ್ಣ ಮಾಹಿತಿ, ಸೃಜನಾತ್ಮಕ ವಿಚಾರ ವಿನಿಮಯ, ಸಂವಿಧಾನಬದ್ಧ ನಡವಳಿಕೆಯ ಮೂಲಕ ನಮ್ಮ ಮಕ್ಕಳಿಗೆ ಅವರ ಭವಿಷ್ಯಕ್ಕೆ ಬೇಕಾದ ಅನುಭವವನ್ನು ನೀಡಲು ಬದ್ಧರಾಗಬೇಕಾಗಿದೆ.

ಇಂದು ಫೋನ್ ಹಾಗೂ ಇಂಟರ್‌ನೆಟ್ ಬಳಕೆಯನ್ನು ಯಾವ ವಯೋಮಾನದವರಿಗೂ ನಿಷೇಧಿಸಲಾಗಲಿ, ನಿರ್ಬಂಧಿಸಲಾಗಲಿ ಸಾಧ್ಯವೇ ಇಲ್ಲ. ಬದಲಾಗಿ ಮಕ್ಕಳ ಬಳಕೆಗೆ ಸಂಬಂಧಿಸಿದಂತೆ ಸೂಕ್ತ ಪ್ರಮಾಣಿತ ಕಾರ್ಯಾಚರಣೆ ವಿಧಾನ (ಎಸ್‌ಒಪಿ), ಅಪಾಯಕಾರಿ ಜಾಲತಾಣಗಳ ನಿಷೇಧ, ಸೃಜನಾತ್ಮಕ ಹಾಗೂ ಶೈಕ್ಷಣಿಕ ಬಳಕೆಗೆ ಉತ್ತೇಜನ ನೀಡುವುದು ಮಕ್ಕಳ ಅಭಿವೃದ್ಧಿಯ ಒಂದು ಮುಖವಾದರೆ, ದೈಹಿಕ ಆಟೋಟಗಳು, ಸೂಕ್ತ ಮನರಂಜನೆ, ಉತ್ತಮ ಸಾಮಾಜಿಕ ಜೀವನಕ್ಕೆ ಅವಕಾಶ ಇವುಗಳು ಮಕ್ಕಳ ಅಭಿವೃದ್ಧಿಗೆ ಬೇಕಾದ ಇನ್ನೊಂದು ಮುಖ ಎನ್ನಬಹುದು.

ಲೇಖಕಿ: ಶಿವಮೊಗ್ಗದ ಕಟೀಲ್ ಅಶೋಕ್ ಪೈ ಸ್ಮಾರಕ ಕಾಲೇಜಿನ ಪ್ರಾಂಶುಪಾಲರು


> 95.8 ಕೋಟಿ ಇಂಟರ್‌ನೆಟ್ ಬಳಕೆದಾರರಿರುವ ದೇಶ ನಮ್ಮದು. ಮೊಬೈಲ್ ಅನ್ನು ಸಮರ್ಥವಾಗಿ ಮತ್ತು ಸಮರ್ಪಕವಾಗಿ ಬಳಕೆ ಮಾಡುವಂತೆ, ಡಿಜಿಟಲ್ ಬಳಕೆ ಹಾಗೂ ಕಲಿಕೆ ಹೆಚ್ಚು ಸೃಜನಾತ್ಮಕವಾಗುವಂತೆ ನಾವು ಮಕ್ಕಳನ್ನು ನಿರ್ದೇಶಿಸಬೇಕಾಗಿದೆ. ಅವರ ಮೊಬೈಲ್ ಬಳಕೆ, ದೈಹಿಕ ಚಟುವಟಿಕೆ, ಸಾಮಾಜಿಕ ಸಂಪರ್ಕ, ಮೌಲ್ಯ ಶಿಕ್ಷಣ ಎಲ್ಲವನ್ನೂ ಸಮತೋಲನಗೊಳಿ ಸಬಲ್ಲಂತಹ ಪಠ್ಯಕ್ರಮ ನಮ್ಮದಾಗಬೇಕಾಗಿದೆ

ಡಿಜಿಟಲ್ ತಂತ್ರಜ್ಞಾನದ ಕೊಡುಗೆ

ಭಾರತೀಯ ಎ.ಐ ಇಂಪ್ಯಾಕ್ಟ್ ಶೃಂಗಸಭೆಯಲ್ಲಿ (ಇಂಡಿಯನ್ ಎ.ಐ ಇಂಪ್ಯಾಕ್ಟ್ ಸಮಿಟ್ -2026) ರಣವೀರ್ ಸಚದೇವ್ ಎನ್ನುವ 8 ವರ್ಷದ ಪೋರನೊಬ್ಬ ‘ಭಾರತೀಯ ತತ್ವಶಾಸ್ತ್ರ ಹಾಗೂ ತಂತ್ರಜ್ಞಾನ’ ಎಂಬ ವಿಷಯದ ಮೇಲೆ ನಿರರ್ಗಳವಾಗಿ ಮಾತನಾಡಿದ್ದು ಸುದ್ದಿಯಾಗಿತ್ತು. ಅದೇ ರೀತಿ 16 ವರ್ಷದ ರಾಹುಲ್ ಜಾನ್ ಅಜು ಎಂಬ ಕೇರಳದ ಹುಡುಗ ತನ್ನದೇ ಎಐ ಕಂಪನಿಯನ್ನು ಪ್ರಾರಂಭಿಸಿದ್ದ, ಇದನ್ನು ನೋಡಿ ಎಐ ಲೋಕದ ತಂತ್ರಜ್ಞರೇ ಬೆರಗುಗೊಂಡಿದ್ದರು.

ಆತ್ಮೀಯರಾದ ತುಮಕೂರಿನ ಸರ್ಕಾರಿ ಪ್ರೌಢಶಾಲೆ ಶಿಕ್ಷಕಿ ವಾಣಿ ಅವರು ಹೇಳುವಂತೆ ಸ್ವಯಂ ಸೇವಾ ಸಂಸ್ಥೆಯೊಂದು ಅವರ ವಿದ್ಯಾರ್ಥಿಗಳಿಗೆ ಔದ್ಯೋಗಿಕ ಮಾಹಿತಿ ಕಾರ್ಯಾಗಾರವನ್ನು ನಡೆಸಿ ವಿದ್ಯಾರ್ಥಿಗಳಿಗೆ ಪ್ರಾತ್ಯಕ್ಷಿಕೆಗಳನ್ನು ಪ್ರಸ್ತುತಪಡಿಸುವ ಚಟುವಟಿಕೆಯನ್ನು ಏರ್ಪಡಿಸಿತ್ತು. ಹಾಗೂ ವಿದ್ಯಾರ್ಥಿಗಳು ಇಂಟರ್‌ನೆಟ್ ಬಳಸಿ ಅತ್ಯುತ್ತಮ ಪ್ರಾತ್ಯಕ್ಷಿಕೆಗಳನ್ನು ತಯಾರಿಸಿದ್ದರು. ವಿದ್ಯಾರ್ಥಿಗಳು ಜಾಲತಾಣಗಳನ್ನು ಜಾಲಾಡಿ ಹೋಟೆಲ್ ಮ್ಯಾನೇಜ್ಮೆಂಟ್, ವಿವಿಧ ಸ್ವಯಂ ಉದ್ಯೋಗಗಳು, ಮಾರ್ಕೆಟಿಂಗ್ ಕ್ಷೇತ್ರ ಇತ್ಯಾದಿಗಳ ಕುರಿತು ಮಾಹಿತಿ ಕಲೆ ಹಾಕಿದ್ದಲ್ಲದೆ, ಪಿಪಿಟಿ ತಯಾರಿಸಿ ಸಮರ್ಥವಾಗಿ ವಿಷಯ ಮಂಡಿಸಿದ್ದಾಗಿ ಹೇಳಿದ್ದು ನನಗೂ ಅಚ್ಚರಿಯ ವಿಷಯ. ಮಕ್ಕಳ ಸಾಧನೆಗಳಿಗೆ, ಚುರುಕುತನಕ್ಕೆ ಡಿಜಿಟಲ್ ಜ್ಞಾನ ಕೊಡುತ್ತಿರುವ ಕೊಡುಗೆ ನಾವು ಯಾರು ಅಲ್ಲಗಳೆಯುವಂತಿಲ್ಲ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

28 ಫೆಬ್ರುವರಿ 2026 ಶನಿವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಫಾಲ್ಗುಣ ಶುಕ್ಲ ದ್ವಾದಶಿ ಗಂ. 20-44 ನಕ್ಷತ್ರ: ಪುನರ್ವಸು ಗಂ. 9-35 ಯೋಗ: ಸೌಭಾಗ್ಯ ಗಂ. 17-02 ಕರಣ: ಬವ ಗಂ 9-37 ಕುಂಭ ಮಾಸದ 15 ನೇ ದಿನ. ಮಳೆ ನಕ್ಷತ್ರ : ಶತಭಿಷ 3 ನೇ ಪಾದ. ರಾಹುಕಾಲ : ಬೆಳಿಗ್ಗೆ 09-00 - 10-30 ,ಸೂರ್ಯೋದಯ : 06-50 ಸೂರ್ಯಾಸ್ತ : 06-36, ಮುಸ್ಲಿಂ ದಿನಾಂಕ : 10 ರಂಜಾನ್,ದಿನ ವಿಶೇಷ : ಗೋವಿಂದ ದ್ವಾದಶಿ,ಅದೃಷ್ಟ ಸಂಖ್ಯೆ : 8, 9

ಮೇಷ: ರಕ್ತ ಸಂಬಂಧಿ ಕಾಯಿಲೆ ಹೊಂದಿದವರು ರಕ್ತ ಪರೀಕ್ಷೆ ಮಾಡಿಸುವುದು ಒಳ್ಳೆಯದು. ಸತ್ಯ ಮಾರ್ಗದಿಂದ ಕಾರ್ಯ ಪ್ರವೃತ್ತರಾದಲ್ಲಿ ಅಭಿವೃದ್ಧಿ ಅನುಭವಕ್ಕೆ ಬರಲಿದೆ.

ವೃಷಭ: ವ್ಯವಹಾರದಲ್ಲಿ ಅನಗತ್ಯ ವಿಷಯಗಳತ್ತ ಗಮನಹರಿಸದೆ ಇರುವಂಥ ತೀರ್ಮಾನ ತೆಗೆದುಕೊಳ್ಳುವುದು ಉತ್ತಮ. ದಾಂಪತ್ಯದಲ್ಲಿ ಹೊಂದಾಣಿಕೆಯ ಮನೋಭಾವದಿಂದ ಸಾಮರಸ್ಯ ವೃದ್ಧಿ.

ಮಿಥುನ: ಆಲೋಚಿಸಿದಂತೆ ಕೆಲಸ ನಡೆಯದೇ ಸೋಲು, ಹಿನ್ನಡೆ ಎಂಬಂತೆ ಮನಸ್ಸಿಗೆ ಬರಬಹುದು. ದೇವರ ಆಶೀರ್ವಾದ ನಿಮ್ಮ ಮೇಲಿರುವುದರಿಂದ ಸರಿಯಾದ ಸಮಯಕ್ಕೆ ಕೆಲಸಗಳು ಪೂರ್ಣಗೊಳ್ಳುತ್ತವೆ.

ಕರ್ಕಾಟಕ: ವೃತ್ತಿ ಬದುಕಿನಲ್ಲಿ ಅಭಿಪ್ರಾಯಗಳಿಗೆ ವಿರೋಧ ಬರಲಿದೆ. ವಿಶ್ವಾಸದಲ್ಲಿ ಯಾವುದೇ ರೀತಿಯ ಸಲಹೆ ಸೂಚನೆ ನೀಡಬೇಡಿ. ಬರಬೇಕಾಗಿದ್ದ ಹಣ ವಸೂಲು ಮಾಡಿಕೊಳ್ಳಲು ನಿಷ್ಠುರವಾಗಿ ವರ್ತಿಸಬೇಕಾಗುವುದು.

ಸಿಂಹ: ಪ್ರಕೃತಿ ವಿಕೋಪದ ಕಾರಣದಿಂದ ಮನೆಯಲ್ಲಿ ಸಣ್ಣ-ಪುಟ್ಟ ರಿಪೇರಿ ಕೆಲಸ ಮಾಡಿಸಬೇಕಾದ ಅನಿವಾರ್ಯವಾಗುವುದು. ದೈವಾನುಗ್ರಹದಿಂದ ಸಾಹಸ ಕಾರ್ಯಗಳು ಕೈಗೂಡಲಿವೆ.

ಕನ್ಯಾ: ನಂಬಿರುವ ವ್ಯಕ್ತಿಗಳ ಬಗ್ಗೆ ನಿಲುವುಗಳನ್ನು ಬದಲಾಯಿಸಿಕೊಳ್ಳಬೇಕೆನಿಸಿದರೂ ಹಾಗೆ ಮಾಡದಿರಿ. ಜಾಣತನದಿಂದ ನಿಮ್ಮ ಕೆಲಸವನ್ನು ಪೂರ್ಣಗೊಳಿಸುವಲ್ಲಿ ಯಶಸ್ವಿಯಾಗುವಿರಿ.

ತುಲಾ: ಧಾರ್ಮಿಕ ನಾಯಕರಿಗೆ ಮರೆಯಲಾಗದ ಘಟನೆಯೊಂದು ಸುತ್ತ-ಮುತ್ತಲಿನಲ್ಲಿ ನಡೆಯುವುದು. ಅವಲಂಬಿಸಿರುವವರನ್ನು ನೋಡಿಕೊಳ್ಳುವ ಜವಾಬ್ದಾರಿ ಹೆಚ್ಚಲಿದೆ. ಸಂತಾನಾಪೇಕ್ಷಿಗಳು ಫಲವನ್ನು ಪಡೆಯುವಿರಿ.

ವೃಶ್ಚಿಕ: ಕಟ್ಟಡ ಕಾರ್ಮಿಕರಿಗೆ ಮತ್ತು ದಿನಕೂಲಿಗಾರರಿಗೆ ಅಭಿವೃದ್ಧಿಯ ಬದುಕಿಗೆ ಬೇಕಾದ ಅವಕಾಶಗಳು ಸಿಗಲಿವೆ. ಸಾಧು ಸಂತರ ಭೇಟಿಯಿಂದ ಮನಸ್ಸಿಗೆ ಸಮಾಧಾನವನ್ನು ಕಂಡುಕೊಳ್ಳಬಹುದು.

ಧನು: ನಿಮ್ಮಿಂದ ಉತ್ಪಾದಿತ ವಸ್ತುಗಳಿಗೆ ಮಾರುಕಟ್ಟೆಯಲ್ಲಿ ಭದ್ರ ನೆಲೆ ಸಿಕ್ಕಿ ಮನಸ್ಸಿಗೆ ನೆಮ್ಮದಿಯಾಗಲಿದೆ. ಪ್ರತಿ ಹೆಜ್ಜೆಯು ಆತ್ಮಸಾಕ್ಷಿಗೆ ಒಪ್ಪುವಂತೆ ಇರಲಿ. ಔಷಧಿ ವ್ಯಾಪಾರಿಗಳಿಗೆ ಲಾಭ ಹೆಚ್ಚುವುದು.

ಮಕರ: ವ್ಯವಹಾರದಲ್ಲಿ ಮಾತಿಗಿಂತ ಕೃತಿ ಮುಖ್ಯ ಎನ್ನುವ ರೀತಿಯಲ್ಲಿ ಸಾಮರ್ಥ್ಯ ತೋರಿಸುವ ಬಗ್ಗೆ ನಿಮ್ಮ ಶ್ರಮವಿರಲಿ. ಸಹಾಯ ಹಸ್ತಗಳ ಮುಖಾಂತರವಾಗಿ ಅಪೂರ್ಣ ಕೆಲಸ ಕಾರ್ಯಗಳು ಪೂರ್ಣಗೊಳ್ಳಲಿವೆ.

ಕುಂಭ: ವರಮಾನವನ್ನು ಪಡೆಯುವ ಮುಖ್ಯ ಆಕಾಂಕ್ಷೆಯಿಂದ ಸುಲಭದ ಮತ್ತು ಹತ್ತಿರದ ಕೆಲಸ ತಿರಸ್ಕರಿಸಬೇಡಿ. ವ್ಯಾಪಾರ ಮಾರುಕಟ್ಟೆ ವಿಸ್ತರಿಸಲು ಬೇಕಾದ ತಯಾರಿ ಮಾಡಿಕೊಳ್ಳಿರಿ. ರಿಪೇರಿಗಾಗಿ ಖರ್ಚು ಸಂಭವಿಸಲಿದೆ.

ಮೀನ: ವ್ಯವಹಾರಕ್ಕೆ ಸಂಬಂಧಿಸಿದ ಹಾಗೆ ಮಧ್ಯವರ್ತಿಗಳ ಮಾತನ್ನು ನಿರ್ಲಕ್ಷಿಸುವುದು ಸಮಂಜಸವೆಂಬುವುದು ಅನಿಸಿಕೆ. ಸ್ವಂತ ಸಮಸ್ಯೆಗಳನ್ನು ನೀವೇ ನಿವಾರಿಸಿಕೊಳ್ಳುವಂತೆ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಿ.

ಪದಬಂಧ 6329


ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಮೈನಾ ಹಕ್ಕಿಯನ್ನು ಹೀಗೂ ಕರೆವರು (4)
3.ಅದೇ ತಾನೆ ಮೂಡುತ್ತಿರುವ ಸೂರ್ಯ (4)
5.ಏನೇನೂ ಫಲವಿಲ್ಲದಿರುವಿಕೆ (3)
6.ಕೆಲವರು ಮಾಡುವ ಕಾರ್ಯ (3)
8.ಐಶ್ವರ್ಯ ಈ ರೀತಿ ಬಂದಿದೆ (3)
9.ಉತ್ತರದವರ ಸ್ನಾನ (3)
10.ಈತ ವಾದ್ಯವನ್ನು ನುಡಿಸುವವನು (3)
11.ಸೂರ್ಯನ ಸಾರಥಿ (3)
12.ಕನ್ನ ಕೊರೆದು ಕದ್ದಿರುವ ಚಿನ್ನ ಇಲ್ಲಿದೆ (3)
14.ಕೊತ್ತಂಬರಿ ಬೀಜವಿದು (3)
16.ಕವಳದ ನಂತರ ತಂದಿರುವ ವೀಳ್ಯದೆಲೆ ಕಟ್ಟು (4)
17.ಮರವನ್ನು ಕತ್ತರಿಸುವ ಸಾಧನ (4))

ಮೇಲಿಂದ ಕೆಳಕ್ಕೆ

1.ನಿದ್ರಿಸುವಾಗ ಉಸಿರಾಟದಿಂದಾಗುವ ಶಬ್ದ (3)
2.ಕವಿತೆಗಳನ್ನು ಬರೆಯುವವನು (2)
3.ಬಾಲಕ ತೋರಿಸಿದ ಲಾಂಗೂಲ (2)
4.ತೊಂದರೆ ಹೀಗೆ ಬಂದಿದೆ (3)
7.ಎರಡು ರಾಶಿಗಳು ಸಮವೆಂದು ದೃಢೀಕರಿಸುವುದು (5)
8.ಸಂಖ್ಯೆಯನ್ನು ಸೂಚಿಸುವ ಪದ (5)
11.ಎಂಟು ಭಾಗಗಳುಳ್ಳದ್ದು (3)
13.ಗುಡಿಯ ಮೇಲಿರುವ ಗೋಪುರದ ತುದಿ (3)
14.ಹಳೆಗೆಳೆಯನಲ್ಲಿ ವೈರ ಕಾಣುತ್ತಿದೆಯಲ್ಲಾ? (2)
15.ಜಗಲಿಯಲ್ಲೇ ಲೋಕ ಕಾಣುತ್ತಿದೆ (2)



6328ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಛಾಯಾಗ್ರಾಹಿ 3.ಪರಿತ್ಯಾಗ 5.ಷಿಕಾರಿ 6.ಪಾತಿ 7.ನೆನಪು 9.ವಿರಸ 11.ವಾರ 12.ಮಾತೃಕೆ 14.ಸುಶಿಕ್ಷಿತ 15.ರುಗ್ಣಾಲಯ

ಮೇಲಿಂದ ಕೆಳಕ್ಕೆ:
1.ಛಾಪಾಖಾನೆ 2.ಹಿತೈಷಿ 3.ಪರಾರಿ 4.ಗರತಿ 6.ಪಾಲುದಾರ 8.ನಕ್ತಂಚರ 10.ಸಮುದಾಯ 11.ವಾರಸು 12.ಮಾರುತ 13.ಕೆಸರು

ಸುಡೊಕು 6713

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

		6		4		3		5
	3		5		7			
	9	2		3		7		1
2	1		9		3	6		
				1				3
3	8			5			7	
9		8						7
	6			9			3	
4		3			1	2		6

6712 ಸುಡೊಕು

2	4	8	1	6	3	5	9	7
7	5	6	4	9	8	2	3	1
1	3	9	2	5	7	4	8	6
6	1	5	9	7	4	8	2	3
3	9	7	8	1	2	6	5	4
8	2	4	6	3	5	7	1	9
5	6	3	7	2	1	9	4	8
9	8	2	3	4	6	1	7	5
4	7	1	5	8	9	3	6	2

‘ತಂತ್ರಜ್ಞಾನವು ಸಾಮರ್ಥ್ಯ ಅಳಿಸಬಾರದು’

ಜಿಎಎಫ್‌ಎಕ್ಸ್–2026 ಸಮ್ಮೇಳನದ 7ನೇ ಆವೃತ್ತಿ ಉದ್ಘಾಟಿಸಿದ ಸಿದ್ದರಾಮಯ್ಯ


ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೃತಕ ಬುದ್ಧಿಮತ್ತೆ (ಎ.ಐ) ಸೇರಿದಂತೆ ಯಾವುದೇ ತಂತ್ರಜ್ಞಾನ ಮನುಷ್ಯನ ಸಾಮರ್ಥ್ಯವನ್ನು ಹೆಚ್ಚಿಸಬೇಕೇ ವಿನಾ ಅಳಿಸಿ ಹಾಕಬಾರದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

‘ಬೆಂಗಳೂರು ಜಿಎಎಫ್‌ಎಕ್ಸ್–2026 ಗೇಮ್ಸ್, ಅನಿಮೇಶನ್ ಮತ್ತು ವಿಶುವಲ್ ಎಫೆಕ್ಟ್ಸ್ ಸಮ್ಮೇಳನದ 7ನೇ ಆವೃತ್ತಿಯನ್ನು ಶುಕ್ರವಾರ ಉದ್ಘಾಟಿಸಿ ಅವರು ಮಾತನಾಡಿದರು.

‘ಎ.ಐ ಬಗ್ಗೆ ಮಾತನಾಡದೆ ಯಾವ ಚರ್ಚೆಯೂ ಮುಗಿಯುವುದಿಲ್ಲ. ಕಥೆ, ಸಿನಿಮಾ, ಗೇಮ್ ಎಲ್ಲವನ್ನೂ ಎ.ಐ ಬದಲಾಯಿಸುತ್ತಿದೆ. ಅನಿಮೇಷನ್‌ನಿಂದ ಹಿಡಿದು ಧ್ವನಿ ನಿರ್ಮಾಣದ ವರೆಗಿನ ಕೆಲಸವನ್ನು ಎ.ಐ ಸುಲಭ ಮಾಡಿದೆ. ವೆಚ್ಚವನ್ನೂ ಕಡಿಮೆ ಮಾಡುತ್ತದೆ. ಆದರೆ, ಎ.ಐ ಕೇವಲ ಒಂದು ಸಾಧನ. ಅದು ಮನುಷ್ಯನ ಕಲ್ಪನೆಗೆ ಮೀರಿದ್ದಲ್ಲ. ಮನುಷ್ಯನ ಭಾವನೆಗಳನ್ನು ಅನುಕರಿಸಲೂ ಕೂಡ ಆಗದು. ಕೃತಕಬುದ್ಧಿಮತ್ತೆ ಸರಿಯಾದ ರೀತಿಯಲ್ಲಿ ಬಳಕೆಯಾಗಬೇಕು’ ಎಂದು ವಿಶ್ಲೇಷಿಸಿದರು.

‘ಬೌದ್ಧಿಕ ಆಸ್ತಿಯ ಹಕ್ಕುಗಳು, ದತ್ತಾಂಶದ ಗೋಪ್ಯತೆ, ಕೆಲಸಕ್ಕೆ ನ್ಯಾಯಯುತ ಸಂಭಾವನೆ, ಹೊಸ ಕೌಶಲ ಕಲಿಯಲು ಅವಕಾಶಗಳ ಬಗ್ಗೆ ನಾವು ಯಾವಾಗಲೂ ಗಮನಹರಿಸಬೇಕು. ಅನಿಮೇಷನ್ ಮತ್ತು ಗೇಮಿಂಗ್‌ಗಳಲ್ಲಿ ಹೊಸ ಪ್ರಯೋಗಗಳನ್ನು ಬೆಂಬಲಿಸುತ್ತೇವೆ. ಆದರೆ, ಜವಾಬ್ದಾರಿಯನ್ನು ಮರೆತು ಹಿಂಸೆಯನ್ನು ತೋರಿಸುವುದು, ವೈಭವೀಕರಿಸುವುದು ಮಾಡಬಾರದು. ಮಕ್ಕಳ ಮನಸ್ಸಿಗೆ ಚಿಂತೆ ಹಚ್ಚಬಾರದು. ಸೃಜನಶೀಲ, ವಿಮರ್ಶಾತ್ಮಕ ಯೋಚನೆ, ಒಳ್ಳೆಯ ಸಾಮಾಜಿಕ ಮೌಲ್ಯಗಳನ್ನು ಕಲಿಸುವ ಆಟಗಳಿಗೆ ಪ್ರೋತ್ಸಾಹ ನೀಡಲಾಗುವುದು’ ಎಂದು ತಿಳಿಸಿದರು.


ಜಿಎಎಫ್‌ಎಕ್ಸ್–2026 ಸಮ್ಮೇಳನದ ಉದ್ಘಾಟನೆಗೆ ಆಗಮಿಸಿದ ಸಿದ್ದರಾಮಯ್ಯ ಅವರನ್ನು ಡಿ.ಕೆ. ಶಿವಕುಮಾರ್ ಸ್ವಾಗತಿಸಿದರು. ಪ್ರಿಯಾಂಕ್ ಖರ್ಗೆ, ಐಟಿ–ಬಿಟಿ ಇಲಾಖೆ ಕಾರ್ಯದರ್ಶಿ ಎನ್. ಮಂಜುಳಾ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

‘ನಾವು ಪ್ರಸ್ತುತ 2024–2029 ಅವಧಿಗೆ ಸಂಬಂಧಿಸಿದ ಮೂರನೇ ಎವಿಜಿಸಿ–ಎಕ್ಸ್‌ಆರ್ ನೀತಿಯನ್ನು ಜಾರಿಗೆ ತರುತ್ತಿದ್ದೇವೆ. ಗೇಮ್ಸ್, ಅನಿಮೇಶನ್ ಮತ್ತು ವಿಶುವಲ್ ಎಫೆಕ್ಟ್ಸ್ ಕ್ಷೇತ್ರವು ಸಮೃದ್ಧವಾದ ಸೃಜನಾತ್ಮಕ ಉದ್ಯಮವಾಗಿ ಉಳಿದಿಲ್ಲ. ಡಿಜಿಟಲ್ ಕ್ರಾಂತಿ, ‘ಇಮರ್ಸಿವ್ ಮೀಡಿಯಾ, ಸ್ಟ್ರೀಮಿಂಗ್ ವೇದಿಕೆಗಳು, ಇ–ಸ್ಪೋರ್ಟ್ಸ್ ಮತ್ತು ಎಕ್ಸ್‌ಟೆಂಡೆಡ್ ರಿಯಾಲಿಟಿ ಯುಗದಲ್ಲಿ, ಇಂದು ಮಾನವನ ಕಥೆ, ಸಂಸ್ಕೃತಿ, ಶಿಕ್ಷಣ ಮತ್ತು ಆಡಳಿತದ ಅನುಭವಗಳನ್ನು ಜಿಎಎಫ್‌ಎಕ್ಸ್ ರೂಪಿಸುತ್ತಿದೆ’ ಎಂದರು.

ಮಾಹಿತಿ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ಪಾಲ್ಗೊಂಡಿದ್ದರು.

ರಾಜ್ಯದಲ್ಲಿ 875 ಜಿಸಿಸಿ: ಡಿಕೆಶಿ

‘ಸಂಶೋಧನೆ, ನೂತನ ಆವಿಷ್ಕಾರಗಳಿಗೆ, ಉದ್ಯೋಗಗಳಿಗೆ ಹಾಗೂ ಪ್ರತಿಭಾವಂತರಿಗೆ ಕರ್ನಾಟಕವು ಕಾಯಕ ಭೂಮಿಯಾಗಿದೆ. ರಾಜ್ಯವು 875 ಜಾಗತಿಕ ಸಾಮರ್ಥ್ಯ ಕೇಂದ್ರಗಳನ್ನು (ಜಿಸಿಸಿ) ಹೊಂದಿದೆ’ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

‘ಡಿಜಿಟಲ್ ಮಾಧ್ಯಮ ಕಂಪನಿಗಳಿಗೆ ನೆಲೆಯಾಗಿ ರೂಪುಗೊಂಡಿದೆ. ರಾಜ್ಯದಲ್ಲಿ 6.50 ಲಕ್ಷಕ್ಕೂ ಅಧಿಕ ಉದ್ಯೋಗಿಗಳಿಗೆ ಎಐ ಕೌಶಲಗಳ ಕುರಿತು ತರಬೇತಿ ನೀಡಲಾಗುತ್ತಿದೆ’ ಎಂದರು.

‘ಅನಿಮೇಷನ್, ವಿಶುವಲ್ ಎಫೆಕ್ಟ್ಸ್, ಗೇಮಿಂಗ್, ಕಾಮಿಕ್ ಮತ್ತು ಎಕ್ಸ್‌ಟೆಂಡೆಡ್ ರಿಯಾಲಿಟಿ–ವಿಸ್ತಾರವಾದ ವಲಯವಾಗಿ ಬೆಳೆಯುತ್ತಿರುವ ಕ್ಷೇತ್ರಗಳಲ್ಲಿ ಒಂದಾಗಿದೆ. ಭಾರತದಲ್ಲಿ ಈ ವಲಯ ವಾರ್ಷಿಕವಾಗಿ ಶೇ 25ರಿಂದ ಶೇ 30ರಷ್ಟು ಬೆಳೆಯುತ್ತಿದೆ. ಮುಂಬರುವ ವರ್ಷಗಳಲ್ಲಿ 1.5 ಲಕ್ಷಕ್ಕೂ ಹೆಚ್ಚು ಹೊಸ ಉದ್ಯೋಗಗಳನ್ನು ಸೃಷ್ಟಿಸುವ ಸಾಮರ್ಥ್ಯವನ್ನು ಹೊಂದಿದೆ’ ಎಂದು ಮಾಹಿತಿ ನೀಡಿದರು.

ಸುದ್ದಿ 2 ನಿಮಿಷ

ಕಂದಾಯ ದಾಖಲೆ; ಬಜೆಟ್ ನಂತರ ಏಕೀಕೃತ ವ್ಯವಸ್ಥೆ

ಚಿಕ್ಕಬಳ್ಳಾಪುರ: ‘ಖಾತೆ ಬದಲಾವಣೆ ಪ್ರಮಾಣ ಪತ್ರ (ಮ್ಯುಟೇಷನ್), ಋಣಭಾರ ರಾಹಿತ್ಯ ಪ್ರಮಾಣಪತ್ರ (ಇ.ಸಿ), ಆಕಾರ್ ಬಂದ್ ಮತ್ತು ಭೂಮಾಪನ ನಕ್ಷೆ (ಸರ್ವೆ ಸ್ಕೆಚ್) ಈ 4 ದಾಖಲೆಗಳು ಇನ್ನು ಪಹಣಿಯ ಜತೆಗೆ ಸಿಗಲಿವೆ’ ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ತಿಳಿಸಿದ್ದಾರೆ.

ಶುಕ್ರವಾರ ಇಲ್ಲಿ ನಡೆದ ಕಂದಾಯ ಸೇವೆಗಳ ಸಮರ್ಪಣಾ ಸಮಾವೇಶದಲ್ಲಿ ಮಾತನಾಡಿದ ಅವರು, ‘ಪ್ರತ್ಯೇಕವಾಗಿ ಈ ದಾಖಲೆಗಳಿಗಾಗಿ ರೈತರು ಈಗ ಬೇರೆ, ಬೇರೆ ಕಚೇರಿಗಳಿಗೆ ಅಲೆಯಬೇಕಾಗುತ್ತಿದೆ. ಈ ಸಮಸ್ಯೆ ಮನಗಂಡು ಪಹಣಿಯಲ್ಲಿಯೇ ಈ ನಾಲ್ಕು ದಾಖಲೆಗಳನ್ನೂ ಸೇರಿಸುವ ಕೆಲಸ ನಡೆಯುತ್ತಿದೆ’ ಎಂದರು.

ಏಕೀಕೃತ ವ್ಯವಸ್ಥೆಯಡಿ ಆನ್‌ಲೈನ್ ಮೂಲಕ ದಾಖಲೆ ನೀಡಲಾಗುವುದು. ನಂತರದ ಹಂತದಲ್ಲಿ ಪಹಣಿಯಲ್ಲಿಯೇ ಜಮೀನಿನ ಡ್ರೋನ್ ಚಿತ್ರ, ಜಮೀನು ಮಾಲೀಕರ ಚಿತ್ರ ಸಹ ಸೇರಿಸಲಾಗುವುದು’ ಎಂದರು. ‘ಬಜೆಟ್ ಮಂಡನೆ ನಂತರದ ಒಂದೆರೆಡು ತಿಂಗಳಲ್ಲಿ ಪಹಣಿಯ ಜೊತೆಯಲ್ಲಿಯೇ ಮ್ಯುಟೇಷನ್, ಇ.ಸಿ, ಆಕಾರ್ ಬಂದ್ ಮತ್ತು ಸರ್ವೆ ಸ್ಕೆಚ್ ಸೇರಿಸಿ ಕೊಡುತ್ತೇವೆ ಎಂದು ಸಚಿವರು ಹೇಳಿದರು.

ತುಮಕೂರು – ದಾವಣಗೆರೆ ರೈಲ್ವೆ ಕಾಮಗಾರಿಗೆ ವೇಗ



ತುಮಕೂರು: ‘ತುಮಕೂರು –ದಾವಣಗೆರೆ ರೈಲ್ವೆ ಕಾಮಗಾರಿ 2 ಹಂತದಲ್ಲಿ ನಡೆಯುತ್ತಿದೆ. ಈಗ ಸುಮಾರು ನಾಲ್ಕು ಸಾವಿರ ಎಕರೆ ಜಾಗ ತೆಗೆದುಕೊಂಡು ಕಾಮಗಾರಿ ಪೂರ್ಣಗೊಳಿಸಿದ್ದೇವೆ’ ಎಂದು ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಹೇಳಿದರು.

ನಗರದ ಶೆಟ್ಟಿಹಳ್ಳಿ ಬಳಿ ರೈಲ್ವೆ ಕೆಳ ಸೇತುವೆಗೆ ಶುಕ್ರವಾರ ಚಾಲನೆ ನೀಡಿ ಮಾತನಾಡಿದ ಅವರು, ಮಲ್ಲಸಂದ್ರ ಕೆಳ ಸೇತುವೆ ಕಾಮಗಾರಿ ನವೆಂಬರ್‌ನಲ್ಲಿ ಮುಗಿಯಲಿದೆ ಎಂದು ತಿಳಿಸಿದರು.

ಹೆಗ್ಗೆರೆ ಬಳಿಯ ಮೇಲ್ಸೇತುವೆ, ಭೀಮಸಂದ್ರ ಬಳಿ ಪಾದಚಾರಿ ಕೆಳ ಸೇತುವೆ ನಿರ್ಮಾಣ ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಬಟವಾಡಿ, ಬಡ್ಡಿಹಳ್ಳಿ, ಮೈದಾಳ, ಪಂಡಿತನಹಳ್ಳಿ ಬಳಿ ನಿರ್ಮಿಸುತ್ತಿರುವ ಸೇತುವೆ ಕಾಮಗಾರಿ ಪರಿಶೀಲಿಸಿದರು.


ಹಿಂದುಳಿದ ವರ್ಗಗಳ ಇಲಾಖೆ ಅಧೀನದ ನಿಗಮಗಳ ಯೋಜನೆ

ಫಲಾನುಭವಿಗಳ ಆಯ್ಕೆ ಅಧಿಕಾರ ಸಚಿವರಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅಧೀನದ ನಿಗಮಗಳಿಂದ ಜಾರಿ ಆಗುತ್ತಿರುವ ವಿವಿಧ ಯೋಜನೆಗಳಿಗೆ ಶಾಸಕರ ಅಧ್ಯಕ್ಷತೆಯ ಆಯ್ಕೆ ಸಮಿತಿಗಳು ಫಲಾನುಭವಿಗಳನ್ನು ಆಯ್ಕೆ ಮಾಡದಿದ್ದರೆ ಇಲಾಖಾ ಸಚಿವರೇ ಫಲಾನುಭವಿಗಳನ್ನು ಆಯ್ಕೆ ಮಾಡಲಿದ್ದಾರೆ.

ಈ ಸಂಬಂಧ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವರಿಗೆ ಅಧಿಕಾರ ನೀಡಲು ಸರ್ಕಾರ ತೀರ್ಮಾನಿಸಿದೆ. ವಿವಿಧ ನಿಗಮಗಳ ಅಡಿಯಲ್ಲಿ ಸ್ವಯಂ ಉದ್ಯೋಗ ಯೋಜನೆ, ಸ್ವಾವಲಂಬಿ ಸಾರಥಿ ಯೋಜನೆ, ಗಂಗಾ ಕಲ್ಯಾಣ ನೀರಾವರಿ ಯೋಜನೆ, ಹೊಲಿಗೆ ಯಂತ್ರ ವಿತರಣೆ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.


ಎಚ್‌.ಕೆ. ಪಾಟೀಲ

ಈ ಯೋಜನೆಗಳ ಫಲಾನುಭವಿಗಳನ್ನು ಆಯ್ಕೆ ಮಾಡಲು ಪ್ರತಿಯೊಂದು ವಿಧಾನಸಭಾ ಕ್ಷೇತ್ರದ ಶಾಸಕರನ್ನು ಅಧ್ಯಕ್ಷರನ್ನಾಗಿ ನೇಮಿಸಿ ಸಮಿತಿ ರಚಿಸಲಾಗಿದೆ. ಈ ಸಮಿತಿಗಳು ಆಯಾ ವರ್ಷದ ಡಿಸೆಂಬರ್ ಕೊನೆಯೊಳಗೆ ಫಲಾನುಭವಿಗಳನ್ನು ಆಯ್ಕೆ ಮಾಡಬೇಕು.

ಆದರೆ, 2025–26 ನೇ ಸಾಲಿನಲ್ಲಿ 224 ವಿಧಾನಸಭಾ ಕ್ಷೇತ್ರಗಳ ಪೈಕಿ ಸಾಕಷ್ಟು ವಿಧಾನಸಭಾ ಕ್ಷೇತ್ರಗಳ ಆಯ್ಕೆ ಸಮಿತಿಗಳು ಫಲಾನುಭವಿಗಳನ್ನು ಆಯ್ಕೆ ಮಾಡಿಲ್ಲ. ‘ಇದರಿಂದ ಸರ್ಕಾರವು ಆಯವ್ಯಯದಲ್ಲಿ ನಿಗಮಗಳಿಗೆ ಒದಗಿಸಿರುವ ಅನುದಾನವನ್ನು ಆರ್ಥಿಕ ವರ್ಷದ ಅಂತ್ಯದೊಳಗೆ ವೆಚ್ಚ ಮಾಡುವುದು ಹಾಗೂ ನಿಗದಿತ ಅವಧಿಯಲ್ಲಿ ಗುರಿ ಸಾಧಿಸುವುದು ಕಷ್ಟವಾಗಿದೆ. ಆದ್ದರಿಂದ ಆಯ್ಕೆ ಮಾಡದೇ ಇರುವ ವಿಧಾನಸಭಾ ಕ್ಷೇತ್ರಗಳಲ್ಲಿ ಫಲಾನುಭವಿಗಳನ್ನು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರೇ ಆಯ್ಕೆ ಮಾಡುವುದು ಅನಿವಾರ್ಯವಾಗುತ್ತದೆ’ ಎಂದು ಕಾನೂನು ಸಚಿವ ಎಚ್‌.ಕೆ.ಪಾಟೀಲ ತಿಳಿಸಿದರು.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಆಯ್ಕೆ ಮಾಡಿದ ಫಲಾನುಭವಿಗಳ ಪಟ್ಟಿಯನ್ನು ಜನವರಿ ಕೊನೆಯೊಳಗೆ ಸಂಬಂಧಿಸಿದ ನಿಗಮಗಳಿಗೆ ಒದಗಿಸಬೇಕು. 2025–26ನೇ ಸಾಲಿಗೆ ಸಂಬಂಧಿಸಿದಂತೆ 15 ದಿನಗಳ ಒಳಗೆ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಬೇಕು ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಶಿವರಾಜ ತಂಗಡಗಿ ಅವರಿಗೆ ಸೂಚಿಸಲಾಗಿದೆ.

ಶಿಕ್ಷಕರ ಬಡ್ತಿ: 2:1 ಅನುಪಾತ

ಬೆಂಗಳೂರು: ಪ್ರಾಥಮಿಕ ಶಾಲಾ ಶಿಕ್ಷಕರು, ಪದವೀಧರ ಪ್ರಾಥಮಿಕ ಶಿಕ್ಷಕರ ಬಡ್ತಿಗೆ ಶಾಲಾ ಶಿಕ್ಷಣ ಇಲಾಖೆ ಮಾರ್ಗಸೂಚಿ ಪ್ರಕಟಿಸಿದ್ದು, 2:1ರ ಅನುಪಾತ ಅನುಸರಿಸಲು ನಿರ್ಧರಿಸಿದೆ.

ಹೊಸ ಮಾರ್ಗಸೂಚಿ ಪ್ರಕಾರ ಮೂರು ಹುದ್ದೆಗಳಿದ್ದರೆ ಎರಡು ಹುದ್ದೆಗಳು ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಮತ್ತು ಒಂದು ಹುದ್ದೆ ಪದವೀಧರ ಪ್ರಾಥಮಿಕ ಶಿಕ್ಷಕರಿಗೆ ಮೀಸಲಾಗಿರುತ್ತದೆ. ಪದೋನ್ನತಿಗೆ ಪರಿಗಣಿಸಲು ಎರಡೂ ವೃಂದದ ಶಿಕ್ಷಕರು ಕನಿಷ್ಠ 12 ವರ್ಷಗಳ ಸೇವಾವಧಿಯನ್ನು ಪೂರೈಸಿರಬೇಕು.

ನಿಯಮದಂತೆ 1ರಿಂದ 5ನೇ ತರಗತಿ ಬೋಧಿಸುವ ಶಿಕ್ಷಕರು ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಮಂಡಳಿ ನಿಗದಿಪಡಿಸಿದ ವಿದ್ಯಾರ್ಹತೆ ಹೊಂದಿರಬೇಕು. 6 ,7ನೇ ತರಗತಿಗಳಿಗೆ ಬೋಧಿಸಲು ಸಂಬಂಧಿಸಿದ ವಿಷಯದಲ್ಲಿ ಪದವಿ ಪಡೆದಿರುವುದು ಕಡ್ಡಾಯ. ಒಂದು ವೃಂದದಲ್ಲಿ ಅರ್ಹ ಶಿಕ್ಷಕರು ಲಭ್ಯವಿಲ್ಲದಿದ್ದರೆ, ನಿಯಮಾನುಸಾರ ಇತರ ವೃಂದದ ಅರ್ಹ ಶಿಕ್ಷಕರನ್ನು ಜ್ಯೇಷ್ಠತಾ ಪಟ್ಟಿ ಆಧಾರದಲ್ಲಿ ಪದೋನ್ನತಿಗೆ ಪರಿಗಣಿಸಬಹುದು ಎಂದು ವಿವರಿಸಲಾಗಿದೆ.

2017ರಲ್ಲಿ ತಂದ ವೃಂದ ಮತ್ತು ನೇಮಕಾತಿ ನಿಯಮದಂತೆ 1ರಿಂದ 8ನೇ ತರಗತಿಯ ಪ್ರಾಥಮಿಕ ಶಾಲೆಗಳಿಗೆ ನೇಮಕವಾದ ಶಿಕ್ಷಕರನ್ನು 1ರಿಂದ 5ನೇ ತರಗತಿಗೆ ಸೀಮಿತಗೊಳಿಸಿರುವ ಆದೇಶವನ್ನು ಹೊರಡಿಸಲಾಗಿತ್ತು. ಈ ಆದೇಶದ ವಿರುದ್ಧ ಶಿಕ್ಷಕರು ಹೋರಾಟ ನಡೆಸಿದ್ದರು. ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ 2016ಕ್ಕೂ ಮೊದಲು ನೇಮಕವಾದ ಶಿಕ್ಷಕರಿಗೆ ಪೂರ್ವಾನ್ವಯ ಮಾಡಬಾರದು. ಪದವಿ ವಿದ್ಯಾರ್ಹತೆ ಹೊಂದಿರುವ ಶಿಕ್ಷಕರನ್ನು ಪದವೀಧರ ಪ್ರಾಥಮಿಕ ಶಿಕ್ಷಕರು ಎಂದೇ ಪರಿಗಣಿಸಬೇಕು. ಅದಕ್ಕಾಗಿ ಬಡ್ತಿ, ವರ್ಗಾವಣೆಗೆ ಅಡ್ಡಿಯಾಗಿರುವ ವೃಂದ ಮತ್ತು ನೇಮಕಾತಿ ನಿಯಮ–2017ಕ್ಕೆ ತಿದ್ದುಪಡಿ ತಂದು ನ್ಯಾಯ ದೊರಕಿಸಿಕೊಡಬೇಕು ಎನ್ನುವುದು ಅವರ ಬೇಡಿಕೆಯಾಗಿತ್ತು.

ಅತ್ಯಾಚಾರ: ಶಿಕ್ಷಕನಿಗೆ ಜೀವಾವಧಿ ಶಿಕ್ಷೆ

ಗಂಗಾವತಿ (ಕೊಪ್ಪಳ ಜಿಲ್ಲೆ): ಮಹಿಳೆಯೊಬ್ಬರ ಅಂಗವಿಕಲ ಮಗಳಿಗೆ ಮನೆ ಪಾಠ ಮಾಡುವುದಾಗಿ ನಂಬಿಸಿ ಅತ್ಯಾಚಾರ ಎಸಗಿದ್ದ ಸರ್ಕಾರಿ ಶಾಲೆಯ ಶಿಕ್ಷಕ ಮೊಹಮ್ಮದ್ ಅಜುರುದ್ದೀನ್ ಎಂಬಾತನಿಗೆ ಇಲ್ಲಿನ ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸಷೆನ್ಸ್ ಕೋರ್ಟ್ ಜೀವಾವಧಿ ಶಿಕ್ಷೆ ನೀಡಿ ಆದೇಶಿಸಿದೆ.



2022ರ ಜೂನ್‌ನಲ್ಲಿ ಕೃತ್ಯ ನಡೆದಿತ್ತು. ಆಗ ಅಜುರುದ್ದೀನ್ ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕಿನ ಸಿಂಗಾಪುರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕನಾಗಿದ್ದ. ಜಿಲ್ಲೆಯ ಕಾರಟಗಿಯಲ್ಲಿ ವಾಸವಾಗಿದ್ದ. ನೊಂದ ಮಹಿಳೆಗೆ ಸರ್ಕಾರಿ ಸವಲತ್ತುಗಳನ್ನು ಕೊಡಿಸುತ್ತೇನೆ ಎಂದು ನಂಬಿಸಿ ಅತ್ಯಾಚಾರ ಎಸಗಿದ್ದಲ್ಲದೇ ಅದನ್ನು ತನ್ನ ಮೊಬೈಲ್‌ನಲ್ಲಿ ವಿಡಿಯೊ ಚಿತ್ರೀಕರಣ ಕೂಡ ಮಾಡಿಕೊಂಡಿದ್ದ.

ವಿಡಿಯೊವನ್ನು ನೊಂದ ಮಹಿಳೆಗೆ ತೋರಿಸಿ ಸಹಕರಿಸದಿದ್ದರೆ ಅದನ್ನು ಹರಿಬಿಡುವುದಾಗಿ ಬೆದರಿಕೆಯೊಡ್ಡಿದ್ದ. ಮಹಿಳೆಗೆ ಹಲ್ಲೆ ಮಾಡಿ, ನಿಂದಿಸಿದ್ದ. ವಿಡಿಯೊವನ್ನೂ ಸಾಮಾಜಿಕ ತಾಣದಲ್ಲಿ ಹರಿಬಿಟ್ಟಿದ್ದ. ಈ ಕುರಿತು ಕಾರಟಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಜೀವಾವಧಿ ಶಿಕ್ಷೆ ವಿಧಿಸಿರುವ ನ್ಯಾಯಾಧೀಶರಾದ ಸದಾನಂದ ನಾಗಪ್ಪ ನಾಯ್ಕ ಅವರು, ಅಪರಾಧಿಗೆ ₹6 ಲಕ್ಷ ದಂಡ ವಿಧಿಸಿದ್ದಾರೆ.

ಇಂದು ಶೈಕ್ಷಣಿಕ ಮಹಾಸಮ್ಮೇಳನ

ಬೆಂಗಳೂರು: ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಅರಮನೆ ಮೈದಾನದಲ್ಲಿ ಫೆ. 28ರಂದು ರಾಜ್ಯಮಟ್ಟದ ಶೈಕ್ಷಣಿಕ ಮಹಾಸಮ್ಮೇಳನ, ಅಭಿನಂದನಾ ಸಮಾರಂಭ ಹಮ್ಮಿಕೊಂಡಿದೆ.

ತ್ರಿಪುರವಾಸಿನಿಯಲ್ಲಿ ಬೆಳಿಗ್ಗೆ 10ರಿಂದ ಆರಂಭವಾಗುವ ಸಂಘದ ಸುವರ್ಣ ಸಂಭ್ರಮದ ನೆನಪಿಗಾಗಿ ಹಮ್ಮಿಕೊಂಡಿರುವ ಈ ಕಾರ್ಯಕ್ರಮವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಲಿದ್ದಾರೆ. ಡಿಸಿಎಂ ಡಿ.ಕೆ.ಶಿವಕುಮಾರ್, ಸಚಿವ ಮಧು ಬಂಗಾರಪ್ಪ ಮತ್ತಿತರು ಭಾಗವಹಿಸಲಿದ್ದಾರೆ. ಸಮಾವೇಶದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ಹಲವು ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಲಾಗುವುದು. ಶಿಕ್ಷಕರ 23 ಬೇಡಿಕೆಗಳನ್ನು ಕಾಲಮಿತಿಯ ಒಳಗೆ ಈಗಾಗಲೇ ಈಡೇರಿಸಿರುವ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ, ಶಿಕ್ಷಣ ಸಚಿವರು, ವಿಧಾನ ಪರಿಷತ್ ಸದಸ್ಯರು, ಇಲಾಖೆ ಅಧಿಕಾರಿಗಳನ್ನು ಸನ್ಮಾನಿಸಲಾಗುವುದು ಎಂದು ಸಂಘದ ಅಧ್ಯಕ್ಷ ಚಂದ್ರಶೇಖರ ನುಗ್ಗಲಿ ತಿಳಿಸಿದ್ದಾರೆ.

‘ಪರಿಶಿಷ್ಟರಿಗೆ ಸರ್ಕಾರದಿಂದಲೇ ವಿಶ್ವಾಸದ್ರೋಹ’

ಸರ್ವಪಕ್ಷಗಳ ಸಭೆ – ಎಸ್‌.ಸಿ. ಪಟ್ಟಿಯಲ್ಲಿರುವ 101 ಜಾತಿಗಳ ಮುಖಂಡರ ಸಭೆಗೆ ಸಂಸದ ಆಗ್ರಹ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ/ಶಿವಮೊಗ್ಗ: ‘ಒಳಮೀಸಲಾತಿ ವಿಚಾರದಲ್ಲಿ ಗಿಮಿಕ್ ಮಾಡುತ್ತಿರುವ ರಾಜ್ಯ ಸರ್ಕಾರ, ನೇಮಕಾತಿ ವೇಳೆ ಹಳೆಯ ಮೀಸಲಾತಿ ಪದ್ಧತಿಯನ್ನೇ ಅನುಸರಿಸುವುದಾಗಿ ಹೇಳಿ ಪರಿಶಿಷ್ಟರಿಗೆ ವಿಶ್ವಾಸ ದ್ರೋಹ ಮಾಡುತ್ತಿದೆ’ ಎಂದು ಸಂಸದ ಗೋವಿಂದ ಕಾರಜೋಳ ಆರೋಪಿಸಿದರು.


ಗೋವಿಂದ ಕಾರಜೋಳ

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಒಳ ಮೀಸಲಾತಿ ಮಸೂದೆಗೆ ರಾಜ್ಯಪಾಲರು ಅಂಕಿತ ಹಾಕಿದ ದಿನವೇ ಸರ್ಕಾರ 56,432 ಹುದ್ದೆಗಳ ನೇರ ನೇಮಕಾತಿಯ ನಿರ್ಧಾರ ಕೈಗೊಂಡಿರುವುದು ಖಂಡನೀಯ. ಒಳಮೀಸಲು ವರ್ಗೀಕರಣಕ್ಕೆ ಅನುಗುಣವಾಗಿ ನೇಮಕಾತಿ ನಡೆಯದಿದ್ದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಸ್ತೆಗಿಳಿದು ಓಡಾಡುವುದೇ ಕಷ್ಟವಾಗುತ್ತದೆ’ ಎಂದರು.

‘ಮುಖ್ಯಮಂತ್ರಿಯವರು ಎಸ್‌ಸಿ/ ಎಸ್‌ಟಿ ಸಮುದಾಯ ಕುರಿತು ಒಡೆದು ಆಳುವ ನೀತಿ ಅನುಸರಿಸುತ್ತಿದ್ದಾರೆ. ಮೀಸಲಾತಿ ಕಬಳಿಸುತ್ತಿರುವ ಕೆಲವರ ಪರ ನಿಂತಿದ್ದಾರೆ’ ಎಂದು ಆರೋಪಿಸಿದರು.

‘ಒಳ ಮೀಸಲಾತಿ ಅನ್ವಯ ನೇಮಕಾತಿ ಆಗದಿದ್ದರೆ ಸಹಿಸುವುದಿಲ್ಲ. ಕೂಡಲೇ ಸರ್ವ ಪಕ್ಷಗಳ ಹಾಗೂ ಎಸ್‌.ಸಿ. ಪಟ್ಟಿಯಲ್ಲಿರುವ 101 ಜಾತಿಗಳ ಮುಖಂಡರ ಸಭೆ ಕರೆದು ಚರ್ಚಿಸಬೇಕು’ ಎಂದರು.

‘ಸಿದ್ದರಾಮಯ್ಯ ದಲಿತರಿಗೆ ದ್ರೋಹ ಮಾಡುತ್ತಿದ್ದು, ಸಾಮಾಜಿಕ ನ್ಯಾಯದ ವಿರೋಧಿಯಾಗಿದ್ದಾರೆ. ಆರ್ಥಿಕವಾಗಿ ದಿವಾಳಿಯಾಗಿರುವ ರಾಜ್ಯ ಸರ್ಕಾರ ಒಳ ಮೀಸಲಾತಿ ಅನ್ವಯ ನಡೆಸಬೇಕಾದ ನೇಮಕಾತಿ ಪಕ್ರಿಯೆ ಮುಂದೂಡುತ್ತಿದೆ’ ಎಂದರು.

‘ಪರಿಶಿಷ್ಟರ ಕಲ್ಯಾಣಕ್ಕೆ ಮೀಸಲಿಟ್ಟ ₹39,000 ಕೋಟಿ ಅನುದಾನವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಮೂರು ವರ್ಷಗಳಿಂದಲೂ ಬೇರೆ ಉದ್ದೇಶಕ್ಕೆ ಬಳಸಿದ್ದಾರೆ. ಈ ಬಾರಿಯ ಬಜೆಟ್‌ನಲ್ಲಿ ಆ ಹಣ ವಾಪಸ್ ಕೊಡಲಿ’ ಎಂದು ಒತ್ತಾಯಿಸಿದರು.

‘ಮಾದಿಗ ಮಹಾಸಭಾ ರಚಿಸಿಕೊಂಡಿರುವ ಕೆ.ಎಚ್. ಮುನಿಯಪ್ಪ ಅವರು ಕೂಡಲೇ ಸಚಿವ ಸ್ಥಾನ ತೊರೆಯಬೇಕು. ಸಚಿವರಾದ ಆರ್‌.ಬಿ.ತಿಮ್ಮಾಪುರ, ಡಾ.ಎಚ್‌.ಸಿ.ಮಹದೇವಪ್ಪ ಅವರೂ ತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡಬೇಕು’ ಎಂದು ಆಗ್ರಹಿಸಿದರು.

ಹುದ್ದೆಗಳ ಭರ್ತಿಗೆ ನಮ್ಮ ಹೋರಾಟ ಕಾರಣ: ಅಶೋಕ

ಪ್ರಜಾವಾಣಿ ವಾರ್ತೆ

ಮೈಸೂರು: ‘ನಮ್ಮ ಹೋರಾಟದ ಕಾರಣದಿಂದಾಗಿಯೇ ಯುವಜನರಿಗೆ ಉದ್ಯೋಗ ಸಿಗುವಂತಾಗಿದೆ’ ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಆರ್‌.ಅಶೋಕ ಇಲ್ಲಿ ಶುಕ್ರವಾರ ಪ್ರತಿಪಾದಿಸಿದರು.

ಪತ್ರಕರ್ತರೊಂದಿಗೆ ಮಾತನಾಡಿ, ‘ಧಾರವಾಡದಲ್ಲಿ ವಿದ್ಯಾರ್ಥಿಗಳ ಹೋರಾಟಕ್ಕೆ ಪೊಲೀಸರು ಆರು ತಿಂಗಳಿಂದ ಅನುಮತಿ ಕೊಟ್ಟಿರಲಿಲ್ಲ. ಪಕ್ಷದ ಲೆಟರ್‌ಹೆಡ್‌ನಲ್ಲೇ ಅನುಮತಿ ಕೇಳಿದ್ದೆವು. ಪೊಲೀಸರು ಬಿಜೆಪಿಯ ಹೋರಾಟವೆಂಬ ಕಾರಣದಿಂದಲೇ ಸಮ್ಮತಿ ಕೊಟ್ಟಿದ್ದಾರೆ’ ಎಂದು ಸಮರ್ಥಿಸಿಕೊಂಡರು.

‘ಧಾರವಾಡದಲ್ಲಿ ನಡೆದ ವಿದ್ಯಾರ್ಥಿಗಳ ಹೋರಾಟ ಹಾಗೂ ನಮ್ಮ ಬೆಂಬಲದಿಂದಾಗಿ ಸರ್ಕಾರ ಕ್ರಮ ಕೈಗೊಂಡಿದೆ. ಹೋರಾಟದಲ್ಲಿ ನಮ್ಮವರು ಕಡಿಮೆ ಇದ್ದರು, ವಿದ್ಯಾರ್ಥಿಗಳೇ ಜಾಸ್ತಿ ಇದ್ದರು. ಆ ಹೋರಾಟದಿಂದಾಗಿಯೇ ಸರ್ಕಾರ 56ಸಾವಿರ ಉದ್ಯೋಗ ಭರ್ತಿ ಮಾಡುತ್ತೇವೆ ಎಂದು ಹೇಳಿದೆ’ ಎಂದರು.

‘ನಾವು ಹೋರಾಟ ಮಾಡಿದ್ದು 2.84 ಲಕ್ಷ ಹುದ್ದೆಗಳ ಭರ್ತಿಗಾಗಿ. ಕೇವಲ 57 ಸಾವಿರ ಹುದ್ದೆಗಳಿಗಲ್ಲ. ಸರ್ಕಾರ ಕೇವಲ ಹೇಳಿಕೆ ನೀಡಿ ಸುಮ್ಮನೆ ಕೂರುವುದಲ್ಲ. ಎಲ್ಲ ಹುದ್ದೆಗಳಿಗೂ ಯಾವಾಗ ನೇಮಕ ಮಾಡಲಾಗುತ್ತದೆ. ಯಾವಾಗ ಅಧಿಸೂಚನೆ ಹೊರಡಿಸಲಾಗುತ್ತದೆ ಎಂಬುದನ್ನು ಸ್ಪಷ್ಟವಾಗಿ ತಿಳಿಸಬೇಕು’ ಎಂದರು.

‘ಹುದ್ದೆಗಳ ಭರ್ತಿ ಬಗ್ಗೆ ಮುಂಬರುವ ಬಜೆಟ್‌ನಲ್ಲಿ ಪ್ರಸ್ತಾಪಿಸದಿದ್ದಲ್ಲಿ ದೊಡ್ಡ ಮಟ್ಟದ ಚಳವಳಿ ನಡೆಸುತ್ತೇವೆ. ಹುಬ್ಬಳ್ಳಿಯಿಂದ ಬೆಂಗಳೂರಿನವರೆಗೆ ಪಾದಯಾತ್ರೆ ಮಾಡಬೇಕಾಗುತ್ತದೆ’ ಎಂದು ಅವರು ಎಚ್ಚರಿಸಿದರು.

‘ಪ್ರಕರಣ ದಾಖಲಿಸಿದ್ದು ಸರಿಯಲ್ಲ’

ಹುಬ್ಬಳ್ಳಿ: ‘ಉದ್ಯೋಗಾಂಕಾಂಕ್ಷಿಗಳ ಪ್ರತಿಭಟನೆ ವೇಳೆ ಅಹಿತಕರ ಘಟನೆ ನಡೆದಿಲ್ಲ. ಆದರೂ ಸರ್ಕಾರ ‘ಅಕ್ಸಾ’ ಅಧ್ಯಕ್ಷ ಕಾಂತಕುಮಾರ್ ಮತ್ತು ಇತರರ ವಿರುದ್ಧ ಪ್ರಕರಣ ದಾಖಲಿಸಿದ್ದು ಸರಿಯಲ್ಲ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಅರವಿಂದ ಬೆಲ್ಲದ ಹೇಳಿದರು.

‘ಅಕ್ಸಾ ಜೊತೆಗೂಡಿ ಬಿಜೆಪಿ ಪ್ರತಿಭಟಿಸಿದ್ದಕ್ಕೆ ರಾಜ್ಯ ಸರ್ಕಾರ ಸ್ಪಂದಿಸಿದೆ. 3 ತಿಂಗಳೊಳಗೆ ನೇಮಕಾತಿಯ ಎಲ್ಲಾ ಪ್ರಕ್ರಿಯೆ ಮುಗಿಸಬೇಕು’ ಎಂದು ಶುಕ್ರವಾರ ಇಲ್ಲಿ ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಭ್ರಷ್ಟಾಚಾರಕ್ಕೆ ಆಸ್ಪದ ನೀಡದೇ, ನೇಮಕಾತಿ ನಡೆಸಬೇಕು. ಒಳ ಮೀಸಲಾತಿ ಕುರಿತು ಕೆಲ ಆಡಳಿತಾತ್ಮಕ ಗೊಂದಲ ಹಾಗೂ ನ್ಯಾಯಾಲಯದ ಅಡೆತಡೆಯಿದೆ. ಇದನ್ನು ಪರಿಗಣಿಸದೇ ಸದ್ಯಕ್ಕೆ ಒಳಮೀಸಲಾತಿ ಜಾರಿ ಆಗುವವರೆಗೆ ಹಳೆಯ ಪದ್ಧತಿ ಆಧರಿಸಿಯೇ ನೇಮಕಾತಿ ನಡೆಸಬೇಕು’ ಎಂದರು.


ಶಿಕಾರಿಪುರದಲ್ಲಿ ಶುಕ್ರವಾರ ರಾತ್ರಿ ನಡೆದ ಜನ್ಮದಿನ ಸಮಾರಂಭದಲ್ಲಿ ಒಡನಾಡಿಗಳು ಬಿ.ಎಸ್‌.ಯಡಿಯೂರಪ್ಪ ಅವರನ್ನು ಸನ್ಮಾನಿಸಿದರು

‘ದಕ್ಷಿಣದಲ್ಲಿ ಬಿಜೆಪಿ ಬೆಳೆಸಿದ ನಾಯಕ’

ಪ್ರಜಾವಾಣಿ ವಾರ್ತೆ

ಶಿಕಾರಿಪುರ (ಶಿವಮೊಗ್ಗ): ‘ದಕ್ಷಿಣ ಭಾರತದಲ್ಲಿ ಬಿಜೆಪಿ ಇಂದು ದೊಡ್ಡಪಕ್ಷವಾಗಿ ಹೊರಹೊಮ್ಮಿರುವುದಕ್ಕೆ ಮಾಜಿ ಮುಖ್ಯಮಂತ್ರಿ ಬಿ.ಎಸ್‌. ಯಡಿಯೂರಪ್ಪ ಕೊಡುಗೆ ಮಹತ್ವದ್ದು’ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಶುಕ್ರವಾರ ಇಲ್ಲಿ ಬಣ್ಣಿಸಿದರು.

ಇಲ್ಲಿ ನಡೆದ ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್‌.ಯಡಿಯೂರಪ್ಪ ಅವರ 84ನೇ ಜನ್ಮದಿನ ಆಚರಣೆ ಸಮಾರಂಭದಲ್ಲಿ ಮಾತನಾಡಿದರು.

‘ರಾಜ್ಯದ 224 ವಿಧಾನಸಭಾ ಕ್ಷೇತ್ರಗಳ ಪೈಕಿ ಶಿಕಾರಿಪುರ ತಾಲ್ಲೂಕಿನ ಹೆಸರು ಇಡೀ ದೇಶಕ್ಕೆ ಗೊತ್ತಿದ್ದರೆ ಅದಕ್ಕೆ ಯಡಿಯೂರಪ್ಪ ಅವರೇ ಕಾರಣ. ಯಡಿಯೂರಪ್ಪ ಅಂದರೆ ಶಿಕಾರಿಪುರ, ಶಿಕಾರಿಪುರ ಅಂದರೆ ಯಡಿಯೂರಪ್ಪ ಆಗಲು ಅವರ ಕರ್ತೃತ್ವ ಶಕ್ತಿ ಕಾರಣ’ ಎಂದು ಬಣ್ಣಿಸಿದರು. ಶಾಸಕರಾದ ಸಿಮೆಂಟ್ ಮಂಜು,.ಟಿ.ರವಿ, ಸಂಸದ ಪಿ.ಸಿ.ಮೋಹನ್, ಮಾಜಿ ಸಚಿವರಾದ ಹರತಾಳು ಹಾಲಪ್ಪ, ಬಿ.ಶ್ರೀರಾಮುಲು, ಬಿ.ಸಿ.ಪಾಟೀಲ ಇದ್ದರು.

> **ಮಾತು ಸಾಧನೆಯಾಗಬಾರದು; ಬದಲಿಗೆ ಸಾಧನೆಯೇ ಮಾತು ಆಗಬೇಕು. ಅದಕ್ಕೆ ಶ್ರಮವಹಿಸಿ ಕೆಲಸ ಮಾಡುವುದು ಅಗತ್ಯ**
> **ಬಿ.ಎಸ್‌.ಯಡಿಯೂರಪ್ಪ,** ಮಾಜಿ ಮುಖ್ಯಮಂತ್ರಿ

ಪರಿಶಿಷ್ಟರಿಗೆ ಶೇ 6ರಷ್ಟು ಹುದ್ದೆ ಕಾಯ್ದಿರಿಸಿ ನೇಮಕಾತಿ

ಒಂದನೇ ಪುಟದಿಂದ...

ಮೀಸಲಾತಿ ಪ್ರಮಾಣವನ್ನು ಶೇ 50ಕ್ಕಿಂತ ಹೆಚ್ಚಿಸಬಾರದು ಎಂದು ಸುಪ್ರೀಂ ಕೋರ್ಟ್ ನೀಡಿದ ತೀರ್ಪನ್ನು ಉಲ್ಲೇಖಿಸಿದ್ದ ಕೆಲವರು, ಸರ್ಕಾರದ ಆದೇಶವನ್ನು ಹೈಕೋರ್ಟ್‌ನಲ್ಲಿ ಪ್ರಶ್ನಿಸಿದ್ದರು.

‘ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೀಸಲಾತಿ ಪ್ರಮಾಣವನ್ನು ಹಿಗ್ಗಿಸಿ ಒಟ್ಟು ಮೀಸಲು ಪ್ರಮಾಣವನ್ನು ಶೇಕಡ 50ರಿಂದ 56ಕ್ಕೆ ಹೆಚ್ಚಿಸಿದ್ದ ಕಾಯ್ದೆ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಮುಂದಿನ ವಿಚಾರಣೆವರೆಗೂ ಯಾವುದೇ ಕ್ರಮ ಕೈಗೊಳ್ಳಬಾರದು’ ಎಂದು ಹೈಕೋರ್ಟ್ ಕೂಡ ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ. ಹೀಗಾಗಿ, ಮೀಸಲಾತಿ ಪ್ರಮಾಣ ಹೆಚ್ಚಳ ಹಾಗೂ ಒಳಮೀಸಲಾತಿ ಕುರಿತ ಸರ್ಕಾರದ ಆದೇಶಗಳಿದ್ದರೂ ನೇಮಕಾತಿಗೆ ತಡೆಯಾಗಿತ್ತು.

ಈ ಎಲ್ಲ ಬೆಳವಣಿಗೆಗಳನ್ನು ಗಮನದಲ್ಲಿಟ್ಟುಕೊಂಡು ಗುರುವಾರ ನಡೆದ ಸಂಪುಟ ಸಭೆಯಲ್ಲಿ ನ್ಯಾಯಾಲಯದ ಅಂತಿಮ ಆದೇಶಕ್ಕೆ ಒಳಪಟ್ಟು ಪರಿಶಿಷ್ಟ ಜಾತಿಗೆ ಶೇ 2, ಪರಿಶಿಷ್ಟ ಪಂಗಡಕ್ಕೆ ಶೇ 4ರಷ್ಟು ಹುದ್ದೆಗಳನ್ನು ಕಾಯ್ದಿರಿಸಿ ಉಳಿದ ಹುದ್ದೆಗಳನ್ನು ಭರ್ತಿ ಮಾಡಲು ನಿರ್ಧರಿಸಲಾಗಿದೆ. ಉದಾಹರಣೆಗೆ ಒಂದು ಇಲಾಖೆಯಲ್ಲಿ 1,000 ಹುದ್ದೆಗಳನ್ನು ಭರ್ತಿ ಮಾಡಿದರೆ 60 ಹುದ್ದೆಗಳನ್ನು ಕಾಯ್ದಿರಿಸಿ, ಕೋರ್ಟ್ ಆದೇಶದ ನಂತರ ಭರ್ತಿ ಮಾಡಲಾಗುತ್ತದೆ.

ಪರಿಶಿಷ್ಟ ಜಾತಿ ಪಟ್ಟಿಯಲ್ಲಿರುವ 101 ಜಾತಿಗಳನ್ನು ಮೂರು ಗುಂಪುಗಳಾಗಿ ವರ್ಗೀಕರಿಸಿ ಶೇ17ಕ್ಕೆ ಅನುಗುಣವಾಗಿ ಒಳ ಮೀಸಲಾತಿ ಕಲ್ಪಿಸಲು ರಾಜ್ಯ ಸರ್ಕಾರ ಹೊರಡಿಸಿದ್ದ ಆದೇಶವನ್ನೂ ಪ್ರಶ್ನಿಸಿ ಕೆಲವರು ಹೈಕೋರ್ಟ್ ಮೆಟ್ಟಿಲೇರಿದ್ದರು. ಈ ಆದೇಶಕ್ಕೆ ಹೈಕೋರ್ಟ್ ತಡೆಯಾಜ್ಞೆ ನೀಡಿದ್ದರಿಂದಾಗಿ, ಎಲ್ಲ ನೇಮಕಾತಿ ಪ್ರಕ್ರಿಯೆಗಳಿಗೂ ತಡೆ ಬಿದ್ದಿತ್ತು. ಇದಕ್ಕೆ ಕಾನೂನು ಬಲ ನೀಡಲು ‘ಕರ್ನಾಟಕ ಅನುಸೂಚಿತ ಜಾತಿಗಳ (ಉಪ-ವರ್ಗೀಕರಣ) ಕಾಯ್ದೆ’ಯನ್ನು ರಾಜ್ಯ ಸರ್ಕಾರ ತಂದಿದೆ. ಆದರೆ, ನ್ಯಾಯಾಲಯದ ಪ್ರಕರಣ ಇತ್ಯರ್ಥವಾಗುವವರೆಗೆ ಹಿಂದಿನಂತೆ ಶೇ 15ರಷ್ಟು ಒಳ ಮೀಸಲಾತಿ ಪ್ರಕಾರ ಹುದ್ದೆಗಳನ್ನು ಭರ್ತಿ ಮಾಡಲಾಗುತ್ತದೆ.

ಹಿಂದುಳಿದ ವರ್ಗಗಳೂ ಸೇರಿ ಇರುವ ಶೇ 50ರಷ್ಟು ಮೀಸಲಾತಿ ಆಧಾರದಲ್ಲೇ ಮುಂದಿನ 30 ದಿನದೊಳಗೆ ನೇರ ನೇಮಕಾತಿ ಪ್ರಕ್ರಿಯೆಯಡಿ 56,432 ಹುದ್ದೆಗಳನ್ನು ಭರ್ತಿ ಮಾಡಲಾಗುತ್ತಿದೆ. ಶಾಲಾ ಶಿಕ್ಷಣ, ಆರೋಗ್ಯ ಇಲಾಖೆ ಸೇರಿದಂತೆ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ 2.84 ಲಕ್ಷ ಹುದ್ದೆಗಳು ಖಾಲಿ ಇವೆ.

ನೇಮಕಾತಿ ಪ್ರಾಧಿಕಾರ	ನೇಮಕಾತಿ ಪ್ರಕ್ರಿಯೆ	ಅಂತಿಮ ಹಂತದ ಭರ್ತಿ
ಕೆಇಎ	915	3,755
ಕೆಪಿಎಸ್‌ಸಿ	2,729	654
ಒಟ್ಟು ಹುದ್ದೆಗಳು	3,644	4,409

24,300 ಆರ್ಥಿಕ ಇಲಾಖೆ ಅನುಮೋದನೆ ಪಡೆಯಬೇಕಿರುವ ಹುದ್ದೆಗಳು

32,132 ಅಧಿಸೂಚನೆ ಹೊರಡಿಸಬೇಕಾದ ಹುದ್ದೆಗಳು

‘ವಾಣಿಜ್ಯ ಒಪ್ಪಂದ: ರೈತರ ನಿರ್ಲಕ್ಷ್ಯ’

ಪ್ರಜಾವಾಣಿ ವಾರ್ತೆ

ಮೈಸೂರು: ‘ಜಾಗತಿಕ ರಾಜಕೀಯ ಶಕ್ತಿಗಳಿಗೆ ಕೇಂದ್ರ ಸರ್ಕಾರ ಶರಣಾಗಿದೆ. ದೇಶದ ರೈತರನ್ನು ಕಡೆಗಣಿಸಿ ಅಂತರರಾಷ್ಟ್ರೀಯ ವಾಣಿಜ್ಯ ಒಪ್ಪಂದಗಳನ್ನು ಮಾಡಿಕೊಂಡಿದೆ’ ಎಂದು ಕೇರಳದ ಸಾವಯವ ಕೃಷಿ ಸಮಿತಿಯ ಅಧ್ಯಕ್ಷ ವಿಶಾಲಾಕ್ಷನ್ ಶುಕ್ರವಾರ ಇಲ್ಲಿ ಕಳವಳ ವ್ಯಕ್ತಪಡಿಸಿದರು.

ಇಲ್ಲಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದಲ್ಲಿ ‘ಆಶಾ (ಅಲಯನ್ಸ್ ಫಾರ್ ಸಸ್ಟೈನಬಲ್ ಆ್ಯಂಡ್ ಹೋಲಿಸ್ಟಿಕ್ ಅಗ್ರಿಕಲ್ಚರ್) ಕಿಸಾನ್ ಸ್ವರಾಜ್’ ಸಂಸ್ಥೆಯು ಆಯೋಜಿಸಿರುವ 3 ದಿನಗಳ ರಾಷ್ಟ್ರಮಟ್ಟದ ‘ಕಿಸಾನ್ ಸ್ವರಾಜ್ ಸಮ್ಮೇಳನ’ವನ್ನು ಉದ್ಘಾಟಿಸಿ ಅವರು ಮಾತನಾಡಿದರು.

‘ಕೇಂದ್ರ ಸರ್ಕಾರವು ಪಾರದರ್ಶಕವಾಗಿ ನಡೆದುಕೊಳ್ಳುತ್ತಿಲ್ಲ. ಕುಲಾಂತರಿ ಬೀಜಗಳಿಂದ ಬೆಳೆ, ಬೀಜ ಮಸೂದೆ, ಅಮೆರಿಕ ವ್ಯಾಪಾರ ಒಪ್ಪಂದ ಸೇರಿದಂತೆ ಎಲ್ಲ ನಿರ್ಧಾರಗಳಲ್ಲಿಯೂ ರೈತ ಸಂಘಟನೆಗಳನ್ನು ಒಳಗೊಳ್ಳದೇ ಏಕಮುಖವಾಗಿ ನಿರ್ಧಾರವನ್ನು ತೆಗೆದುಕೊಂಡಿದೆ’ ಎಂದು ದೂರಿದರು.

‘ಮಾಲಿನ್ಯ ರಹಿತ ನೈಸರ್ಗಿಕ ಸಾವಯವ ಕೃಷಿಯ ಬಗ್ಗೆ ಅಂತರರಾಷ್ಟ್ರೀಯ ಸಮ್ಮೇಳನಗಳಲ್ಲಿ ದೊಡ್ಡದಾಗಿ ಮಾತನಾಡುವ ಸರ್ಕಾರಗಳು ಸಂಸತ್ತು, ವಿಧಾನ ಮಂಡಲಗಳಲ್ಲಿ ರೈತ ಪರವಾಗಿ ನೀತಿ ನಿಯಮಗಳನ್ನು ರೂಪಿಸುತ್ತಿಲ್ಲ. ಚರ್ಚೆಗಳು ನಡೆಯುತ್ತಿಲ್ಲ. ಬಂಡವಾಳ ಶಾಹಿಗಳ ಪರವಾಗಿ ನಡೆದುಕೊಳ್ಳುತ್ತಿವೆ’ ಎಂದರು.


ಬೆಂಬಲ ಬೆಲೆ ಘೋಷಿಸಿ: ‘ಬಿತ್ತನೆ, ಕಟಾವು ಸೇರಿದಂತೆ ಸಿರಿಧಾನ್ಯ ಕೃಷಿಕರಿಗೆ ಹೆಚ್ಚು ನಷ್ಟವಾಗುತ್ತಿದ್ದು, ಇತರ ಬೆಳೆಗಳಂತೇ ಬೆಂಬಲ ಬೆಲೆ ಘೋಷಿಸಬೇಕು. ಮಹಿಳಾ ಕೃಷಿಕರಿಗೂ ಪ್ರೋತ್ಸಾಹ ಕೊಡಬೇಕು’ ಎಂದು ರೈತ ಮಹಿಳೆ ಬೀಬಿಜಾನ್ ಆಗ್ರಹಿಸಿದರು.


ಮೈಸೂರಿನ ಕೆಎಸ್‌ಒಯು ಆವರಣದಲ್ಲಿ ಶುಕ್ರವಾರ ಆರಂಭವಾದ ‘ಕಿಸಾನ್ ಸ್ವರಾಜ್ ಸಮ್ಮೇಳನ’ದಲ್ಲಿ ಪ್ರದರ್ಶನಕ್ಕಿಡಲಾಗಿದ್ದ ಭತ್ತದ ತಳಿಗಳನ್ನು ರೈತರು ವೀಕ್ಷಿಸಿದರು

‘ಆಶಾ’ ಸಂಸ್ಥೆಯ ಕಪಿಲ್ ಷಾ, ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ, ಹೈದರಾಬಾದ್‌ನ ಸುಸ್ಥಿರ ಕೃಷಿ ಕೇಂದ್ರದ ಜಿ.ವಿ.ರಾಮಾಂಜನೇಯಲು, ನೈಸರ್ಗಿಕ ಕೃಷಿಕರಾದ ರಾಘವ ಐಕಾಂತಿಕ, ಕುಲಸಚಿವರಾದ ಸಿ.ಎಸ್‌.ಆನಂದ್ ಕುಮಾರ್, ಪ್ರೊ. ಎಸ್‌.ಕೆ.ನವೀನ್‌ಕುಮಾರ್, ಡೀನ್ ರಾಮನಾಥಂ ನಾಯ್ಡು, ನಿರಂಜನ್, ಚಂದ್ರೇಗೌಡ, ಕೃಷಿ ಇಲಾಖೆಯ ನಿವೃತ್ತ ಅಧಿಕಾರಿ ರಾಮಚಂದ್ರಪ್ಪ, ಕವಿತಾ ಶ್ರೀನಿವಾಸ್, ಪ್ರಸಾರಾಂಗ ನಿರ್ದೇಶಕ ಆರ್. ಸಂತೋಷ್ ನಾಯಕ್ ಪಾಲ್ಗೊಂಡಿದ್ದರು.

11 ರಾಜ್ಯಗಳ ನೂರಾರು ಸಾವಯವ ಕೃಷಿಕರು ಭಾಗವಹಿಸಿರುವ ಈ ಸಮ್ಮೇಳನದಲ್ಲಿ ಬೀಜ ಉತ್ಸವ, ಸಾಕ್ಷ್ಯಚಿತ್ರ ಪ್ರದರ್ಶನ, ಕೃಷಿಗೋಷ್ಠಿ ಸೇರಿ ವಿವಿಧ ಕಾರ್ಯಕ್ರಮಗಳು ನಡೆದವು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ:	25,496
ಇಂದಿನ ಅಂತ್ಯ:	25,178
ದಿನದ ಕನಿಷ್ಠ:	25,141
	317

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು	
100 ಕ್ಕೆ	₹530
12 ಕ್ಕೆ	₹78
ಮೈಸೂರು: 100 ಕ್ಕೆ	₹530

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹215
ಆರ್‌ಎಸ್‌ಎಸ್-5	₹209
ಗುಡ್ ಲಾಟ್	₹196

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹563-785
ದ್ವಿತಳಿ (ಬಿ.ವಿ)	₹411-935

ಮುದ್ರಮನೆ ಕಾಫಿ

ಎಪಿ	₹23000
ಎಸಿ	₹13000
ಆರ್‌ಪಿ	₹18200
ಆರ್‌ಸಿ	₹9850

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1690 (1730)
ಸೋಯಾ (ರಿಫೈನ್ಡ್)	₹1360 (1370)
ಸೂರ್ಯಕಾಂತಿ (ರಿಫೈನ್ಡ್)	₹1585 (1590)
ಪಾಮೋಲಿನ್	₹1285 (1290)

₹4.99 ಲಕ್ಷ ಕೋಟಿ ಸಾಲದ ಗುರಿ

ನಬಾರ್ಡ್: 2026–27ನೇ ಆರ್ಥಿಕ ವರ್ಷದ ಆದ್ಯತಾ ಪತ್ರ ಬಿಡುಗಡೆ


ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್‌ನಿಂದ (ನಬಾರ್ಡ್) ಕರ್ನಾಟಕದ ಆದ್ಯತಾ ವಲಯಕ್ಕೆ 2026–27ನೇ ಆರ್ಥಿಕ ವರ್ಷದಲ್ಲಿ ₹4.99 ಲಕ್ಷ ಕೋಟಿ ಸಾಲ ವಿತರಿಸುವ ಗುರಿ ನಿಗದಿಪಡಿಸಲಾಗಿದೆ.

2025–26ನೇ ಸಾಲಿನಡಿ ₹4.47 ಲಕ್ಷ ಕೋಟಿ ಸಾಲ ವಿತರಿಸುವ ಗುರಿ ನಿಗದಿಯಾಗಿತ್ತು. ಇದಕ್ಕೆ ಹೋಲಿಸಿದರೆ ಈ ಬಾರಿ ಶೇ 12ರಷ್ಟು ಹೆಚ್ಚಳವಾಗಿದೆ. ವಿವಿಧ ಬ್ಯಾಂಕ್‌ಗಳ ಮೂಲಕ ಈ ಸಾಲ ವಿತರಣೆಯ ಗುರಿ ಹೊಂದಲಾಗಿದೆ.

ರಾಜ್ಯದ ಎಲ್ಲಾ ಜಿಲ್ಲೆಗಳಿಂದ ಮಾಹಿತಿ ಸಂಗ್ರಹಿಸಿ ಆದ್ಯತಾ ವಲಯಗಳಿಗೆ ಅಗತ್ಯವಿರುವ ಆರ್ಥಿಕ ನೆರವಿನ ಕುರಿತು ನಬಾರ್ಡ್ ಸಿದ್ಧಪಡಿಸಿರುವ ಈ ಆದ್ಯತಾ ಪತ್ರವನ್ನು (ಸ್ಟೇಟ್ ಫೋಕಸ್ ಪೇಪರ್) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ ದಿನೇಶ್ ಗುಂಡೂರಾವ್ ಅವರು ಶುಕ್ರವಾರ ಬಿಡುಗಡೆಗೊಳಿಸಿದರು.

ವಲಯವಾರು ಸಾಲ (ಶೇಕಡವಾರು)



ನಮ್ಮ ಆರೋಗ್ಯ ಇಲಾಖೆಗೂ ನಬಾರ್ಡ್ ಸಾಕಷ್ಟು ಅನುದಾನ ನೀಡುತ್ತಿದೆ. ಜೊತೆಗೆ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ರಸ್ತೆಗಳ ನಿರ್ಮಾಣಕ್ಕೆ ಸಹಕಾರ ನೀಡುತ್ತಿದೆ. ರಾಜ್ಯದ ಗ್ರಾಮೀಣ ಭಾಗದಲ್ಲಿ ನಬಾರ್ಡ್ ಆರೋಗ್ಯ ಜಾಗೃತಿ ಅಭಿಯಾನಗಳನ್ನು ನಡೆಸಲು ಮುಂದಾಗಬೇಕಿದೆ ಎಂದರು.



ನಬಾರ್ಡ್ ಸಿದ್ಧಪಡಿಸಿರುವ ಆದ್ಯತಾ ಪತ್ರವನ್ನು (ಸ್ಟೇಟ್ ಫೋಕಸ್ ಪೇಪರ್) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ ದಿನೇಶ್ ಗುಂಡೂರಾವ್ ಅವರು ಶುಕ್ರವಾರ ಬಿಡುಗಡೆಗೊಳಿಸಿದರು

ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಮಾತನಾಡಿ, ಕೃಷಿ ಕ್ಷೇತ್ರದ ಅಭಿವೃದ್ಧಿಗೆ ನಬಾರ್ಡ್ ಮತ್ತಷ್ಟು ಒತ್ತು ನೀಡಬೇಕಿದೆ. ಕೃಷಿ, ಎಂಎಸ್‌ಎಂಇ, ಶಿಕ್ಷಣ, ವಸತಿ, ಸಾಮಾಜಿಕ ಮೂಲಸೌಕರ್ಯ ಮತ್ತು ನವೀಕರಿಸಬಹುದಾದ ಇಂಧನ ವಲಯವು ಆದ್ಯತಾ ವಲಯಗಳಾಗಿವೆ. ಈ ವಲಯಗಳಲ್ಲಿ ಏನಾದರೂ ಸಮಸ್ಯೆಗಳಿದ್ದರೆ, ಬಗೆಹರಿಸಲು ಸರ್ಕಾರ ಸಿದ್ಧವಾಗಿದೆ ಎಂದು ಹೇಳಿದರು.

ನಬಾರ್ಡ್‌ನ ಪ್ರಾದೇಶಿಕ ಕಚೇರಿಯ ಮುಖ್ಯ ಪ್ರಧಾನ ವ್ಯವಸ್ಥಾಪಕ ಸುರೇಂದ್ರ ಬಾಬು ಮಾತನಾಡಿ, ‘2026-27ನೇ ಆರ್ಥಿಕ ವರ್ಷಕ್ಕೆ ನಿಗದಿಪಡಿಸಿರುವ ₹4.99 ಲಕ್ಷ ಕೋಟಿ ಸಾಲದಲ್ಲಿ ಕೃಷಿ ಮತ್ತು ಸಂಬಂಧಿತ ವಲಯಗಳಿಗೆ ₹2.27 ಲಕ್ಷ ಕೋಟಿ, (ಶೇ 45ರಷ್ಟು) ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗೆ (ಎಂಎಸ್‌ಎಂಇ) ₹2.14 ಲಕ್ಷ ಕೋಟಿ (ಶೇ 42ರಷ್ಟು) ಮತ್ತು ಇತರೆ ಆದ್ಯತೆ ವಲಯದ ಚಟುವಟಿಕೆಗಳಿಗೆ ₹0.57 ಲಕ್ಷ ಕೋಟಿ (ಶೇ 11.62ರಷ್ಟು) ನಿಗದಿಪಡಿಸಲಾಗಿದೆ’ ಎಂದು ವಿವರಿಸಿದರು.

‘ಮುಂದಿನ ಆರ್ಥಿಕ ವರ್ಷದಲ್ಲಿ ₹4.99 ಲಕ್ಷ ಕೋಟಿ ಸಾಲ ನೀಡುವ ಗುರಿಯನ್ನು ನಬಾರ್ಡ್ ಹೊಂದಿದೆ. ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ ಶೇ 12ರಷ್ಟು ಅಧಿಕವಾಗಿದ್ದು, ಆರೋಗ್ಯಕರ ಬೆಳವಣಿಗೆಯನ್ನು ಇದು ಪ್ರತಿಬಿಂಬಿಸುತ್ತಿದೆ’ ಎಂದು ಆರ್‌ಬಿಐನ ಬೆಂಗಳೂರು ವಲಯದ ಪ್ರಧಾನ ವ್ಯವಸ್ಥಾಪಕ ಕಾರ್ತಿಕೇಯನ್ ತಿಳಿಸಿದರು.

ಇದೇ ವೇಳೆ ನಬಾರ್ಡ್ ಸಿದ್ಧಪಡಿಸಿರುವ ನಾಲ್ಕು ಕಿರು ಪುಸ್ತಕವನ್ನು ಬಿಡುಗಡೆ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಕೆನರಾ ಬ್ಯಾಂಕ್‌ನ ಕಾರ್ಯನಿರ್ವಾಹಕ ನಿರ್ದೇಶಕ ಭವೇಂದ್ರ ಕುಮಾರ್, ನಬಾರ್ಡ್ ಮತ್ತು ವಿವಿಧ ಬ್ಯಾಂಕ್‌ನ ಸಿಬ್ಬಂದಿ ಇದ್ದರು.

ಚೆಕ್ ಹಸ್ತಾಂತರ

ನಬಾರ್ಡ್‌ನ ಅಂಗ ಸಂಸ್ಥೆಯಾದ ನ್ಯಾಬ್ ಕಿಸಾನ್, ಎರಡು ರೈತ ಉತ್ಪಾದಕ ಸಂಸ್ಥೆಗಳಿಗೆ (ಎಫ್‌ಪಿಒ) ಚೆಕ್ ಅನ್ನು ಕಾರ್ಯಕ್ರಮದಲ್ಲಿ ಹಸ್ತಾಂತರಿಸಿತು. ವಿಜಯಪುರ ಜಿಲ್ಲೆಯ ವಾಗ್ದೇವಿ ಎಫ್‌ಪಿಒಗೆ ₹50 ಲಕ್ಷ ಮತ್ತು ಬೆಳಗಾವಿ ಜಿಲ್ಲೆಯ ಶ್ರೀ ಪಂಚಲಿಂಗೇಶ್ವರ ಎಫ್‌ಪಿಒಗೆ ₹45 ಲಕ್ಷದ ಮೊತ್ತದ ಚೆಕ್ ಅನ್ನು ನೀಡಿತು. ಕೃಷಿಗೆ ಸಂಬಂಧಿಸಿದ ಚಟುವಟಿಕೆಗಳಿಗಾಗಿ ಈ ಸಾಲದ ನೆರವು ನೀಡಲಾಗಿದೆ.

ಮುಚ್ಚಿದ ‘ಮೈಸೂರು ರೇಷ್ಮೆ ಸೀರೆ’ ಮಳಿಗೆ

ಪ್ರಜಾವಾಣಿ ವಾರ್ತೆ

ಮೈಸೂರು: ರಾಜ್ಯದಲ್ಲಿರುವ ಕೆಎಸ್‌ಐಸಿ ಮೈಸೂರು ರೇಷ್ಮೆ ಸೀರೆಗಳ 13 ಮಾರಾಟ ಮಳಿಗೆಗಳಲ್ಲಿ ದಾಸ್ತಾನು ಕೊರತೆ ಉಂಟಾಗಿದೆ. ಇಲ್ಲಿನ ಮಾನಂದವಾಡಿ ರಸ್ತೆಯಲ್ಲಿರುವ ಕಾರ್ಖಾನೆಯ ಆವರಣದ ಮಳಿಗೆಯನ್ನು ಸೀರೆಗಳಿಲ್ಲದ ಕಾರಣ ಮುಚ್ಚಲಾಗಿದೆ.

ತಿ.ನರಸೀಪುರದ ಕೆಎಸ್‌ಐಸಿ ಕಾರ್ಖಾನೆ ಆವರಣದಲ್ಲಿ ಕ್ರೀಡಾಂಗಣ ನಿರ್ಮಾಣ ವಿರೋಧಿಸಿ ನಿಗಮದ ಉತ್ಪಾದನಾ ಘಟಕದ 1,052 ಸಿಬ್ಬಂದಿ ಬುಧವಾರದಿಂದ ಕೆಲಸ ನಿಲ್ಲಿಸಿರುವ ಕಾರಣ, ಸೀರೆ ಉತ್ಪಾದನೆ ಸ್ಥಗಿತಗೊಂಡಿದೆ.

‘ಪ್ರತಿಭಟನೆ ನಡೆಸುತ್ತಿರುವ 900 ಮಂದಿ ಹೊರಗುತ್ತಿಗೆ ನೌಕರರೊಂದಿಗೆ ಸಂಸ್ಥೆಯ 150 ಸಿಬ್ಬಂದಿಯೂ ಸೇರಿದ್ದಾರೆ. ಕ್ರೀಡಾಂಗಣ ನಿರ್ಮಾಣವಾದರೆ ತಿ.ನರಸೀಪುರ ಘಟಕವು ಮುಚ್ಚುವ ಜೊತೆಗೆ ಮೈಸೂರು ಹಾಗೂ ಚನ್ನಪಟ್ಟಣದಲ್ಲಿರುವ ಸೀರೆ ನೇಯ್ಗೆಯ ಘಟಕಗಳೂ ಮುಚ್ಚಬಹುದು’ ಎಂದು ನೌಕರರೊಬ್ಬರು ಹೇಳಿದರು.

ಸುದ್ದಿ 2 ನಿಮಿಷ

ವಿತ್ತೀಯ ಕೊರತೆ ₹9.8 ಲಕ್ಷ ಕೋಟಿ

ನವದೆಹಲಿ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದ ಏಪ್ರಿಲ್‌ನಿಂದ ಜನವರಿವರೆಗಿನ ಅವಧಿಯಲ್ಲಿ ಕೇಂದ್ರ ಸರ್ಕಾರದ ವರಮಾನ ಮತ್ತು ವೆಚ್ಚದ ನಡುವಿನ ಅಂತರವಾದ ವಿತ್ತೀಯ ಕೊರತೆಯು ಇಡೀ ವರ್ಷದ ಗುರಿಯ ಶೇ 63ರಷ್ಟಾಗಿದೆ.

ಹಣಕಾಸಿನ ಮೌಲ್ಯದ ಲೆಕ್ಕದಲ್ಲಿ ಇದು ₹9.8 ಲಕ್ಷ ಕೋಟಿಯಾಗಿದೆ ಎಂದು ಶುಕ್ರವಾರ ಬಿಡುಗಡೆ ಆಗಿರುವ ಲೆಕ್ಕಪತ್ರಗಳ ಮಹಾನಿಯಂತ್ರಕರ (ಸಿಜಿಎ) ವರದಿ ತಿಳಿಸಿದೆ. 2024–25ರ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ವಿತ್ತೀಯ ಕೊರತೆಯು ಶೇ 74.5ರಷ್ಟಿತ್ತು.

2025–26ರ ಆರ್ಥಿಕ ವರ್ಷದಲ್ಲಿ ವಿತ್ತೀಯ ಕೊರತೆಯನ್ನು ಜಿಡಿಪಿಯ ಶೇ 4.4ಕ್ಕೆ (ಹಣಕಾಸಿನ ಮೌಲ್ಯದ ಲೆಕ್ಕದಲ್ಲಿ ₹15.58 ಲಕ್ಷ ಕೋಟಿ) ತಗ್ಗಿಸಲು ಸರ್ಕಾರ ಬಜೆಟ್‌ನಲ್ಲಿ ಗುರಿ ನಿಗದಿ ಮಾಡಿದೆ.

ಏಪ್ರಿಲ್‌ನಿಂದ ಜನವರಿವರೆಗೆ ಸರ್ಕಾರವು ₹27.08 ಲಕ್ಷ ಕೋಟಿ ವರಮಾನ ಸ್ವೀಕರಿಸಿದೆ.

ಕೇಂದ್ರ ಸರ್ಕಾರ ಸ್ವೀಕರಿಸಿದ ಈ ಮೊತ್ತದ ಪೈಕಿ ₹20.94 ಲಕ್ಷ ಕೋಟಿ ತೆರಿಗೆ ವರಮಾನದಿಂದ ಸಂಗ್ರಹಿಸಿದೆ. ₹5.57 ಲಕ್ಷ ಕೋಟಿ ತೆರಿಗೆಯೇತರ ವರಮಾನ ಮತ್ತು ಇತರೆ ಮೂಲಗಳಿಂದ ₹57,129 ಕೋಟಿ ಸಂಗ್ರಹಿಸಿದೆ.

ಕೇಂದ್ರ ಸರ್ಕಾರವು, ರಾಜ್ಯ ಸರ್ಕಾರಗಳಿಗೆ ₹11.39 ಲಕ್ಷ ಕೋಟಿಯನ್ನು ತೆರಿಗೆ ಪಾಲಾಗಿ ವರ್ಗಾಯಿಸಿದೆ. ಇದು ಕಳೆದ ಆರ್ಥಿಕ ವರ್ಷದ ಇದೇ ಅವಧಿಗೆ ಹೋಲಿಸಿದರೆ ₹65,588 ಕೋಟಿಯಷ್ಟು ಅಧಿಕವಾಗಿದೆ ಎಂದು ತಿಳಿಸಿದೆ.

ಇದೇ ಅವಧಿಯಲ್ಲಿ ಸರ್ಕಾರದ ಒಟ್ಟು ವೆಚ್ಚವು ₹36.9 ಲಕ್ಷ ಕೋಟಿಯಾಗಿದೆ. ಈ ಪೈಕಿ ಬಡ್ಡಿಗೆ ₹9.88 ಲಕ್ಷ ಕೋಟಿ ಪಾವತಿಸಲಾಗಿದ್ದು, ₹3.54 ಲಕ್ಷ ಕೋಟಿಯನ್ನು ಪ್ರಮುಖ ಸಬ್ಸಿಡಿಗಳಿಗೆ ನೀಡಲಾಗಿದೆ ಎಂದು ತಿಳಿಸಿದೆ.

ಎಫ್‌ಡಿಐ ಶೇ 18ರಷ್ಟು ಹೆಚ್ಚಳ: ಪ್ರಸಕ್ತ ಆರ್ಥಿಕ ವರ್ಷದ ಏಪ್ರಿಲ್‌ನಿಂದ ಡಿಸೆಂಬರ್‌ವರೆಗೆ ದೇಶದಲ್ಲಿನ ವಿದೇಶಿ ನೇರ ಹೂಡಿಕೆ (ಎಫ್‌ಡಿಐ) ಪ್ರಮಾಣ ಶೇ 18ರಷ್ಟು ಹೆಚ್ಚಳವಾಗಿದ್ದು, ₹4.35 ಲಕ್ಷ ಕೋಟಿಯಷ್ಟಾಗಿದೆ.



ಕಳೆದ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ವಿದೇಶಿ ನೇರ ಹೂಡಿಕೆ ₹3.70 ಲಕ್ಷ ಕೋಟಿಯಷ್ಟಾಗಿತ್ತು ಎಂದು ಕೇಂದ್ರ ಸರ್ಕಾರ ಶುಕ್ರವಾರ ತಿಳಿಸಿದೆ.

ಅದಾನಿ ಕಂಪನಿಯಿಂದ ಹೊರಬಂದ ನಾರ್ವೆ ಬ್ಯಾಂಕ್

ನವದೆಹಲಿ (ಪಿಟಿಐ): ₹109 ಲಕ್ಷ ಕೋಟಿ (1.2 ಟ್ರಿಲಿಯಲ್ ಡಾಲರ್) ಸಂಪತ್ತು ನಿಧಿ ಹೊಂದಿರುವ ನಾರ್ವೆಯ ಸಾವರಿನ್ ವೆಲ್ತ್ ಫಂಡ್ ಅದಾನಿ ಗ್ರೀನ್ ಎನರ್ಜಿ ಲಿಮಿಟೆಡ್‌ನಿಂದ (ಎಜಿಇಎಲ್) ಬಂಡವಾಳ ಹೂಡಿಕೆ ವಾಪಸ್ ಪಡೆಯಲು ನಿರ್ಧರಿಸಿದೆ. ಆರ್ಥಿಕ ಅಪರಾಧಗಳ ನಂಟಿನ ಹಿನ್ನೆಲೆಯಲ್ಲಿ ಈ ನಿರ್ಧಾರಕ್ಕೆ ಬಂದಿರುವುದಾಗಿ ಸಂಸ್ಥೆ ತಿಳಿಸಿದೆ.

2024ರಲ್ಲಿ ಗೌತಮ್ ಅದಾನಿ ಒಡೆತನದ ಅದಾನಿ ಪೋರ್ಟ್ಸ್ ಆ್ಯಂಡ್ ಸ್ಪೆಷಲ್ ಎಕನಾಮಿಕ್ ಜೋನ್ ಲಿಮಿಟೆಡ್‌ನಿಂದ ನಾರ್ವೆ ಬ್ಯಾಂಕ್ ಬಂಡವಾಳ ವಾಪಸ್ ಪಡೆದಿತ್ತು. ಇದೀಗ ಭ್ರಷ್ಟಾಚಾರ ಮತ್ತು ಗಂಭೀರ ಆರ್ಥಿಕ ಅಪರಾಧಗಳ ಕಾರಣದಿಂದಾಗಿ ಎಜಿಇಎಲ್‌ನಿಂದ ಹೊರ ಬಂದಿರುವುದಾಗಿ ತನ್ನ ವೆಬ್‌ಸೈಟ್‌ನಲ್ಲಿ ತಿಳಿಸಿದೆ.

2020ರಲ್ಲಿ ನಾರ್ವೆ ಕೇಂದ್ರೀಯ ಬ್ಯಾಂಕ್ ಹೂಡಿಕೆ ಮಾಡಿದಾಗ ಎಜಿಎಲ್ ಷೇರಿನ ಮುಖಬೆಲೆ ₹341ನಷ್ಟಿತ್ತು. ಸದ್ಯ ಷೇರಿನ ಮೌಲ್ಯ ₹944ಕ್ಕೆ ತಲುಪಿದೆ.

ನಾರ್ವೆ ಸಾವರಿನ್ ಸಂಸ್ಥೆಯ ಈ ನಿರ್ಧಾರದ ಬಗ್ಗೆ ಅದಾನಿ ಕಂಪನಿ ಈವರೆಗೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಆದರೆ ಉದ್ಯಮದ ಮೂಲಗಳು ಸಾವರಿನ್ ಫಂಡ್ ಸಂಸ್ಥೆಯು ನವೀಕರಿಸಬಹುದಾದ ಇಂಧನ ಕಂಪನಿ ಬಗ್ಗೆ ಸಲ್ಲದ ಅಪಪ್ರಚಾರ ಮಾಡುತ್ತಿದೆ ಎಂದು ಹೇಳಿದ್ದಾರೆ.

₹593 ಕೋಟಿ ಜಿಎಸ್‌ಟಿ ವಂಚನೆ: ಬಂಧನ

ಪ್ರಜಾವಾಣಿ ವಾರ್ತೆ

ಬೆಳಗಾವಿ: ನಕಲಿ ಇನ್‌ವಾಯ್ಸ್ ಸೃಷ್ಟಿಸಿ ₹593 ಕೋಟಿ ಜಿಎಸ್‌ಟಿ ವಂಚಿಸಿದ್ದ ಬೆಳಗಾವಿ ಮೂಲದ ಮೊಹಮ್ಮದ್ ಸೈಫುಲ್ಲಾ ಎಂಬ ಆರೋಪಿಯನ್ನು, ಸರಕು ಮತ್ತು ಸೇವಾ ತೆರಿಗೆ ಗುಪ್ತಚರ ಮಹಾ ನಿರ್ದೇಶನಾಲಯ (ಡಿಜಿಜಿಐ) ಬೆಳಗಾವಿ ವಲಯದ ಅಧಿಕಾರಿಗಳು ಬೆಂಗಳೂರಿನಲ್ಲಿ ಈಚೆಗೆ ಬಂಧಿಸಿದ್ದಾರೆ.

‘ಬೆಳಗಾವಿಯ ಜಿಎಸ್‌ಟಿ ಪ್ರ್ಯಾಕ್ಟಿಷನರ್ ಆಗಿರುವ ಮೊಹಮ್ಮದ್ ಸೈಫುಲ್ಲಾ ಬೆಂಗಳೂರಿನಲ್ಲಿ ವಿವಿಧ ಕಂಪನಿಗಳ ಹೆಸರಿನಲ್ಲಿ ನಕಲಿ ಬಿಲ್‌ಗಳನ್ನು ಸೃಷ್ಟಿಸಿದ ಅನುಮಾನ ಕಂಡುಬಂದ ಹಿನ್ನೆಲೆಯಲ್ಲಿ ಬಂಧಿಸ ಲಾಯಿತು’ ಎಂದು ಮೂಲಗಳು ತಿಳಿಸಿವೆ.

ಬೆಳಗಾವಿ ಮೂಲದ ವ್ಯಕ್ತಿ ಕೋಟ್ಯಂತರ ವ್ಯವಹಾರ ಮಾಡಿದ ಬಗ್ಗೆ ಇನ್‌ವಾಯ್ಸ್‌ಗಳು ಸಿದ್ಧಗೊಂಡಿದ್ದವು. ಅನುಮಾನಗೊಂಡ ಅಧಿಕಾರಿಗಳ ತಂಡ ಗೋಪ್ಯ ತನಿಖೆ ನಡೆಸಿತು. ಆಗ ಪ್ರಕರಣಗಳು ಹೊರಬಿದ್ದವು.

‘ಆರೋಪಿಯು ₹593 ಕೋಟಿ ಮೌಲ್ಯದ ನಕಲಿ ಬಿಲ್‌ಗಳನ್ನು ತೆಗೆದಿದ್ದೂ ಅಲ್ಲದೇ, ₹235 ಕೋಟಿ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಕೂಡ ಪಡೆದು ಇತರರಿಗೆ ವರ್ಗಾಯಿಸಿದ್ದಾರೆ. ಕಂಪನಿಗಳಿಗೆ ಅಕ್ರಮವಾಗಿ ಲಾಭ ಮಾಡಿಕೊಟ್ಟು ಇದರ ಮೇಲೆ ಶೇಕಡಾವಾರು ಕಮಿಷನ್ ಕೂಡ ಪಡೆದಿದ್ದಾರೆ’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಆರೋಪಿಗೆ ಈಚೆಗೆ ಬೆಂಗಳೂರಿನ ಆರ್ಥಿಕ ಅಪರಾಧಗಳ ವಿಶೇಷ ನ್ಯಾಯಾಲಯದ ಮುಂದೆ ಹಾಜರು ಪಡಿಸಲಾಯಿತು. ಬಳಿಕ ಟ್ರಾನ್ಸಿಟ್ ರಿಮಾಂಡ್ ಮೂಲಕ ಬೆಳಗಾವಿಯ ಜೆಎಂಎಫ್‌ಸಿ ನ್ಯಾಯಾ ಲಯದ ಮುಂದೆ ಹಾಜರುಪಡಿಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಅಲ್ಲದೇ, ಈ ಜಾಲದಲ್ಲಿ ಲಾಭಾಂಶ ಪಡೆದ ಎಲ್ಲ ಕಂಪನಿಗಳು ಹಾಗೂ ವ್ಯಕ್ತಿಗಳನ್ನೂ ಪತ್ತೆ ಮಾಡಲಾಗುತ್ತಿದೆ ಎಂದು ಜಿಎಸ್‌ಟಿ ಅಧಿಕಾರಿಗಳು ತಿಳಿಸಿದ್ದಾರೆ.

ಜಿಡಿಪಿ: ಶೇ 7.8ರಷ್ಟು ದಾಖಲು

ಮುಂಬೈ (ಎಎಫ್‌ಪಿ): ‘ಪ್ರಸಕ್ತ ಆರ್ಥಿಕ ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ದೇಶದ ಜಿಡಿಪಿ ಬೆಳವಣಿಗೆ ಶೇ 7.8ರಷ್ಟು ದಾಖಲಾಗಿದೆ.

ಭಾರತದ ಆರ್ಥಿಕತೆ ಬೆಳವಣಿಗೆಯ ವೇಗ ಹೆಚ್ಚಾಗಿರುವುದು, ಗ್ರಾಹಕರ ಖರೀದಿ ಭರಾಟೆಯು ಇದಕ್ಕೆ ಕಾರಣವಾಗಿವೆ’ ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿಯು ಶುಕ್ರವಾರ ಬಿಡುಗಡೆಗೊಳಿಸಿದ ದತ್ತಾಂಶದಲ್ಲಿ ತಿಳಿಸಿದೆ.

ಶೇ 7.6ರಷ್ಟು ನಿರೀಕ್ಷೆ: ಪ್ರಸಕ್ತ ಪೂರ್ಣ ಆರ್ಥಿಕ ವರ್ಷದಲ್ಲಿ ಜಿಡಿಪಿ ಬೆಳವಣಿಗೆಯ ಅಂದಾಜನ್ನು ಶೇ 7.6ಕ್ಕೆ ಏರಿಕೆ ಮಾಡಲಾಗಿದೆ.

ಜಾಗತಿಕ ವ್ಯಾಪಾರದ ಅಡೆತಡೆಯ ನಡುವೆಯೂ ವಿಶ್ವದಲ್ಲಿಯೇ ಅತ್ಯಂತ ವೇಗವಾಗಿ ದೇಶದ ಆರ್ಥಿಕತೆ ಚೇತರಿಸಿಕೊಂಡ ಕಾರಣ ಜಿಡಿಪಿ ಲೆಕ್ಕಾಚಾರದ ಪರಿಷ್ಕರಣೆ ನಿರ್ಧರಿಸಲಾಗಿದೆ.

ಹಳೆಯ ದತ್ತಾಂಶ ಸರಣಿಯ ಪ್ರಕಾರ, ಶೇ 7.1ರಷ್ಟು ಜಿಡಿಪಿ ಏರಿಕೆಯನ್ನು ನಿರೀಕ್ಷಿ ಸಲಾಗಿತ್ತು. 2024–25ರ ವಿತ್ತೀಯ ದತ್ತಾಂಶದ ಪ್ರಕಾರ ಏರಿಕೆಯು ಶೇ 7.1ರಷ್ಟಿತ್ತು.



ಲೆಕ್ಕಾಚಾರದ ಪರಿಷ್ಕರಣೆಯ ಪ್ರಕಾರ, ಮೂಲ ವರ್ಷವನ್ನು 2022–23ಕ್ಕೆ ಬದಲಾಯಿಸಲಾಗಿದ್ದು, ಆರ್ಥಿಕತೆಯು ವೇಗವಾಗಿ ಬೆಳೆಯುತ್ತಿರುವ ಸುಧಾರಿತ ಅಂಶಗಳ ಪರಿಗಣನೆಯನ್ನು ಒಳಗೊಂಡಿದೆ. ಆದಾಗ್ಯೂ, ಅಕ್ಟೋಬರ್– ಡಿಸೆಂಬರ್‌ನಲ್ಲಿ ಜಿಡಿಪಿ ಬೆಳವಣಿಗೆಯು ಮಧ್ಯಮ ಇಳಿಕೆಗೆ ಕಾರಣವಾಯಿತು. ಇದು ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಶೇ 8.4ರಷ್ಟಿತ್ತು. ಅದು ಈಗ ಶೇ 7.8ಕ್ಕೆ ಇಳಿಕೆಯಾಗಿದೆ.

ಮುಂಬೈ ಧಾರಣೆ (ಶೇಂಗಾ)

27-02-2026	
ಜಾವಾ 70/80(ಹೊಸ)	11200-11300
ಜಾವಾ 80/90(ಹೊಸ)	10500-10600
ದಪ್ಪ ಮಧ್ಯಪ್ರದೇಶ (ಹೊಸ)	8200-8300
ದಪ್ಪ ಗುಜರಾತ್ (ಹೊಸ)	9500-9600
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1700 (1740)
ಒಂದು ವಾರದ ಡೆಲಿವರಿ	1695 (1735)
ಪಾಮ್ ವಾರದ ಡೆಲಿವರಿ	1283 (1288)
ಸೂರ್ಯಕಾಂತಿ ಎಣ್ಣೆ ಕಚ್ಚಾ	1510 (1505)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,59,300 (1,57,300)
ಬೆಳ್ಳಿ ಕೆ.ಜಿಗೆ	2,70,500 (2,61,500)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ಅಡಿಕೆ ಧಾರಣೆ

ಚಿತ್ರದುರ್ಗ	
ಆಪಿ	53600-54000
ಬೆಟ್ಟೆ	37600-38000
ಕೆಂಪುಗೋಟು	31600-32000
ರಾಶಿ	53100-53500
ಕುಮಟಾ	
ಚಾಲಿ	48099-51499
ಚಿಪ್ಪು	30999-40099
ಕೋಕ	16029-36099
ಫ್ಯಾಕ್ಟರಿ	12019-27900
ಹೊಸಚಾಲಿ	43029-47899
ಪುತ್ತೂರು	
ಕೋಕ	20000-37500
ಹೊಸತು	26000-48000

ಶಿವಮೊಗ್ಗ	
ಬೆಟ್ಟೆ	54119-65609
ಗೊರಬಲು	19020-39599
ರಾಶಿ	46199-56359
ಸರಕು	61500-95050
ಸಿದ್ದಾಪುರ	
ಬಿಳಿಗೋಟು	28899-38109
ಚಾಲಿ	41000-48300
ಕೋಕ	23899-33299
ಹಳೆಚಾಲಿ	43000-50099
ಕೆಂಪುಗೋಟು	31899-37599
ರಾಶಿ	50699-55099
ತಟ್ಟಿಬೆಟ್ಟೆ	38869-50099
ಶಿರಸಿ	
ಬೆಟ್ಟೆ	40518-53099

ಬಿಳಿಗೋಟು	31699-42099
ಚಾಲಿ	43829-49061
ಕೆಂಪುಗೋಟು	32698-46618
ರಾಶಿ	49439-56199
ಯಲ್ಲಾಪುರ	
ಆಪಿ	61099-65119
ಬಿಳಿಗೋಟು	17412-41811
ಕೋಕ	14009-33900
ಹಳೆಚಾಲಿ	36243-52311
ಹೊಸಚಾಲಿ	42629-49599
ಕೆಂಪುಗೋಟು	17089-41200
ರಾಶಿ	48699-60115
ತಟ್ಟಿಬೆಟ್ಟೆ	3390-52399

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹19600-19600
ಬೆಳ್ತಂಗಡಿ	₹11000-21000
ಹೊಸದುರ್ಗ	₹16800-16800

ಕೇಜ್ರಿವಾಲ್ ಖುಲಾಸೆ: ವಿಪಕ್ಷಗಳ ಭಿನ್ನ ನಿಲುವು

ಪ್ರಜಾವಾಣಿ ವಾರ್ತೆ

ನವದೆಹಲಿ: ದೆಹಲಿ ಅಬಕಾರಿ ನೀತಿ ಪ್ರಕರಣದಲ್ಲಿ ಎಎಪಿ ಮುಖ್ಯಸ್ಥ ಅರವಿಂದ ಕೇಜ್ರಿವಾಲ್ ಅವರು ಖುಲಾಸೆ ಆಗಿರುವುದಕ್ಕೆ ವಿರೋಧ ಪಕ್ಷಗಳು ಭಿನ್ನ ನಿಲುವು ವ್ಯಕ್ತಪಡಿಸಿವೆ. ಈ ಮೂಲಕ ವಿಪಕ್ಷಗಳಲ್ಲಿನ ಗೊಂದಲ ಮತ್ತೊಮ್ಮೆ ಬಹಿರಂಗವಾಗಿದೆ.

‘ಇದು ಬಿಜೆಪಿಯ ಊಹಿಸಬಹುದಾದ ಸ್ಕ್ರಿಪ್ಟ್. ಗುಜರಾತ್ ಮತ್ತು ಪಂಜಾಬ್ ವಿಧಾನಸಭಾ ಚುನಾವಣೆಗಳಿಗೆ ಮುಂಚಿತವಾಗಿಯೇ ‘ಅನುಕೂಲಸಿಂಧು ಮಿತ್ರ’ರಿಗೆ ನೆರವಾಗುವ ತಂತ್ರ ಇದಾಗಿದೆ’ ಎಂದು ಕಾಂಗ್ರೆಸ್ ಜರಿದಿದೆ.

ಆದರೆ ಕಾಂಗ್ರೆಸ್‌ನ ಈ ಅಭಿಪ್ರಾಯಕ್ಕೆ ಅದರ ಮಿತ್ರ ಪಕ್ಷಗಳಾದ ಡಿಎಂಕೆ, ಸಮಾಜವಾದಿ ಪಕ್ಷ, ತೃಣಮೂಲ ಕಾಂಗ್ರೆಸ್, ಆರ್‌ಜೆಡಿ ಸಹಮತ ವ್ಯಕ್ತಪಡಿಸಿಲ್ಲ. ‘ಅಲ್ಪಾವಧಿಯ ರಾಜಕೀಯಕ್ಕಾಗಿ ತನಿಖಾ ಸಂಸ್ಥೆಗಳ ಸಮಗ್ರತೆಯನ್ನು ಅಡ ಇಡಬಾರದು’ ಎಂದು ಇತರ ವಿಪಕ್ಷಗಳು ಆಗ್ರಹಿಸಿವೆ.

‘ಕಾಂಗ್ರೆಸ್‌ಮುಕ್ತಗೊಳಿಸಲು ಯತ್ನ’: ಎಎಪಿ ಮತ್ತು ಟಿಎಂಸಿಯನ್ನು ಉಲ್ಲೇಖಿಸಿ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿರುವ ಕಾಂಗ್ರೆಸ್‌ನ ಮಾಧ್ಯಮ ಮತ್ತು ಪ್ರಚಾರ ವಿಭಾಗದ ಅಧ್ಯಕ್ಷ ಪವನ್ ಖೇರಾ, ‘ಕಾಂಗ್ರೆಸ್ ಅನ್ನು ಸೋಲಿಸಲು ಮತ್ತು ಕಾಂಗ್ರೆಸ್‌ಮುಕ್ತ ಭಾರತಕ್ಕಾಗಿ ಬಿಜೆಪಿ ಯಾವ ಮಟ್ಟಕ್ಕೆ ಬೇಕಾದರೂ ಇಳಿಯುತ್ತದೆ’ ಎಂದು ಟೀಕಿಸಿದ್ದಾರೆ.

‘ಬಿಜೆಪಿ ಒಂದು ರಾಜಕೀಯ ಪಕ್ಷದಂತೆ ನಡೆದುಕೊಳ್ಳುತ್ತಿಲ್ಲ. ಅದು ಆಕಾರ ಬದಲಿಸುವ ಸರ್ಪ, ಇಚ್ಛಾಧಾರಿ ನಾಗ... 12 ವರ್ಷಗಳ ಕಾಲ ಟಿಎಂಸಿ ವಿರುದ್ಧ ವಿಷ ಕಾರಿದ ಬಿಜೆಪಿ ಈಗ ಏನು ಮಾಡುತ್ತಿದೆ? ಮೋದಿ ಅವರೇ ಈಗ ಅದನ್ನು ಹೊಗಳುತ್ತಿದ್ದಾರೆ, ಅದೂ ಗೌರವದಿಂದ ಅಲ್ಲ, ಎಲ್ಲವೂ ಕಾಂಗ್ರೆಸ್ ಅನ್ನು ಮಣಿಸಲು’ ಎಂದು ಹೇಳಿದ್ದಾರೆ.

‘ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಅಲ್ಪಾವಧಿಯ ರಾಜಕೀಯ ಲಾಭಕ್ಕಾಗಿ ತನಿಖಾ ಸಂಸ್ಥೆಗಳ ಸಮಗ್ರತೆಯನ್ನು ಅಡ ಇಡಬಾರದು’ ಎಂದು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

‘ಯಾವುದೇ ಆರೋಪವು ಸತ್ಯವನ್ನು ಮರೆಮಾಚುವಷ್ಟು ದೊಡ್ಡದಾಗಲು ಸಾಧ್ಯವಿಲ್ಲ. ನ್ಯಾಯಾಲಯದ ಈ ಆದೇಶವು ಬಿಜೆಪಿ ಪಾಲಿಗೆ ನೈತಿಕ ಮರಣದಂಡನೆಗಿಂತ ಕಡಿಮೆಯಿಲ್ಲ’ ಎಂದು ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಹೇಳಿದ್ದಾರೆ.

‘ತನಿಖಾ ಸಂಸ್ಥೆಗಳನ್ನು ರಾಜಕೀಯ ಕತ್ತಿಗಳಂತೆ ಪ್ರಯೋಗಿಸಿದಾಗ ಮೊದಲಿಗೆ ಬಲಿಪಶುವಾಗುವುದು ನ್ಯಾಯ’ ಎಂದು ಪಿಡಿಪಿ ಮುಖ್ಯಸ್ಥೆ ಮೆಹಬೂಬಾ ಮುಫ್ತಿ ಬೇಸರ ವ್ಯಕ್ತಪಡಿಸಿದ್ದಾರೆ.

ಕೇಜ್ರಿವಾಲ್, ಸಿಸೋಡಿಯಾ, ಕವಿತಾ ಖುಲಾಸೆ

ಒಂದನೇ ಪುಟದಿಂದ...

ಈ ಪ್ರಕರಣದಲ್ಲಿ ಸಿಬಿಐ ಸಲ್ಲಿಸಿದ್ದ ದೋಷಾರೋಪ ಪಟ್ಟಿಯನ್ನು ಪರಿಗಣಿಸಲು ನ್ಯಾಯಾಧೀಶ ಜಿತೇಂದ್ರ ಸಿಂಗ್ ನಿರಾಕರಿಸಿದರು. ‘ತನಿಖಾ ಸಂಸ್ಥೆಯು ಕೇವಲ ಊಹೆಗಳ ಆಧಾರದ ಮೇಲೆ ಪಿತೂರಿಯ ನಿರೂಪಣೆ ಮಾಡಲು ಪ್ರಯತ್ನಿಸಿದೆ’ ಎಂದು ಅವರು ಸಿಬಿಐ ಅನ್ನು ಕಟುವಾಗಿ ಟೀಕಿಸಿದರು. ಈ ಪ್ರಕರಣದಲ್ಲಿ ಕೇಜ್ರಿವಾಲ್ ಆರು ತಿಂಗಳು, ಸಿಸೋಡಿಯಾ ಎರಡು ವರ್ಷ ಜೈಲಿನಲ್ಲಿದ್ದರು.

ಹಲವು ಲೋಪಗಳು: ‘ತನಿಖೆಯಲ್ಲಿ ಹಲವು ಲೋಪಗಳಿವೆ. ಕೇಜ್ರಿವಾಲ್ ವಿರುದ್ಧ ಯಾವುದೇ ಪ್ರಬಲ ಸಾಕ್ಷ್ಯಾಧಾರ, ಪುರಾವೆ ಇಲ್ಲ. ಅಂತೆಯೇ ಸಿಸೋಡಿಯಾ ಮತ್ತು ಇತರ ಆರೋಪಿಗಳ ವಿರುದ್ಧ ಮೇಲ್ನೋಟಕ್ಕೆ ಸಾಬೀತುಪಡಿಸಬಲ್ಲ ದಾಖಲೆಗಳಿಲ್ಲ. ಅಲ್ಲದೆ ಅಬಕಾರಿ ನೀತಿ ರೂಪಿಸುವಲ್ಲಿ ಯಾವುದೇ ಸಾಮಾನ್ಯ ಪಿತೂರಿ ಅಥವಾ ಕ್ರಿಮಿನಲ್ ಉದ್ದೇಶವೂ ಪತ್ತೆಯಾಗಿಲ್ಲ’ ಎಂದು ನ್ಯಾಯಾಧೀಶರು ಹೇಳಿದರು.

ಗಂಭೀರ ಉಲ್ಲಂಘನೆ: ‘ಮಾಫಿ ಸಾಕ್ಷಿದಾರರ ಹೇಳಿಕೆಗಳನ್ನೇ ಆಧರಿಸಿ ಇಡೀ ಪ್ರಕರಣವನ್ನು ಹೆಣೆಯಲಾಗಿದೆ. ಇದು ಸಾಂವಿಧಾನಿಕ ತತ್ವಗಳ ಗಂಭೀರ ಉಲ್ಲಂಘನೆ ಆಗುತ್ತದೆ’ ಎಂದು ನ್ಯಾಯಾಧೀಶರು ಟೀಕಿಸಿದರು.

ಖುಲಾಸೆಗೊಂಡ ಇತರರು: ಕುಲದೀಪ್ ಸಿಂಗ್, ನರೇಂದರ್ ಸಿಂಗ್, ವಿಜಯ್ ನಾಯರ್, ಅಭಿಷೇಕ್ ಬೋಯಿನಪಲ್ಲಿ, ಅರುಣ್ ರಾಮಚಂದ್ರ ಪಿಳ್ಳೈ, ಮೂತ ಗೌತಮ್, ಸಮೀರ್ ಮಹೇಂದ್ರು, ಅಮನದೀಪ್ ಸಿಂಗ್ ಧಲ್, ಅರ್ಜುನ್ ಪಾಂಡೆ, ಬುಚ್ಚಿಬಾಬು ಗೋರ್ನಾಟ್ಲಾ, ರಾಕೇಶ್ ಜೋಶಿ, ದಾಮೋದರ್ ಪ್ರಸಾದ್ ಶರ್ಮಾ, ಪ್ರಿನ್ಸ್ ಕುಮಾರ್, ಚನ್‌ಪ್ರೀತ್ ಸಿಂಗ್ ರಾಯತ್, ಅರವಿಂದ ಕುಮಾರ್ ಸಿಂಗ್, ದುರ್ಗೇಶ್ ಪಾಠಕ್, ಅಮಿತ್ ಅರೋರಾ, ವಿನೋದ್ ಚೌಹಾಣ್, ಆಶಿಶ್ ಮಾಥುರ್ ಮತ್ತು ಪಿ. ಶರತ್ ಚದ್ರಾ ರೆಡ್ಡಿ ಅವರನ್ನು ನ್ಯಾಯಾಲಯ ಈ ಪ್ರಕರಣದಿಂದ ಖುಲಾಸೆಗೊಳಿಸಿದೆ.



ದೆಹಲಿ ಅಬಕಾರಿ ನೀತಿ ಪ್ರಕರಣದಿಂದ ಖುಲಾಸೆಯಾದ ಎಎಪಿ ಮುಖ್ಯಸ್ಥ ಸುದ್ದಿಗಾರರ ಜತೆ ಮಾತನಾಡುವಾಗ ಭಾವುಕರಾಗಿ ಕಣ್ಣೀರಿಟ್ಟರು —ಪಿಟಿಐ ಚಿತ್ರ

ಹೈಕೋರ್ಟ್‌ಗೆ ಮೇಲ್ಮನವಿ: ವಿಚಾರಣಾ ನ್ಯಾಯಾಲಯದ ಈ ಆದೇಶದ ವಿರುದ್ಧ ದೆಹಲಿ ಹೈಕೋರ್ಟ್‌ನಲ್ಲಿ ಸಿಬಿಐ ಶುಕ್ರವಾರ ಮೇಲ್ಮನವಿ ಸಲ್ಲಿಸಿದೆ. ವಿಚಾರಣಾ ನ್ಯಾಯಾಲಯವು ತನಿಖೆಯ ಹಲವಾರು ಅಂಶಗಳನ್ನು ನಿರ್ಲಕ್ಷಿಸಿದೆ ಅಥವಾ ಸಮರ್ಪಕವಾಗಿ ಪರಿಗಣಿಸಿಲ್ಲ ಎಂದು ಸಿಬಿಐನ ವಕ್ತಾರರು ತಿಳಿಸಿದ್ದಾರೆ.

ದೊಡ್ಡ ರಾಜಕೀಯ ಪಿತೂರಿ: ಕೇಜ್ರಿವಾಲ್

ನವದೆಹಲಿ (ಪಿಟಿಐ): ‘ನಮ್ಮ ವಿರುದ್ಧದ ಈ ಭ್ರಷ್ಟಾಚಾರ ಪ್ರಕರಣವು ಸ್ವತಂತ್ರ ಭಾರತದ ಇತಿಹಾಸದಲ್ಲಿಯೇ ಅತ್ಯಂತ ದೊಡ್ಡ ರಾಜಕೀಯ ಪಿತೂರಿಯಾಗಿದೆ’ ಎಂದು ಎಎಪಿ ಮುಖ್ಯಸ್ಥ ಅರವಿಂದ ಕೇಜ್ರಿವಾಲ್ ಪ್ರತಿಪಾದಿಸಿದರು.

ದೆಹಲಿ ಅಬಕಾರಿ ನೀತಿ ಪ್ರಕರಣದಿಂದ ಖುಲಾಸೆಗೊಂಡ ಆದೇಶ ಹೊರಬಿದ್ದ ಕೂಡಲೇ, ಕೋರ್ಟ್‌ನಿಂದ ಹೊರಬಂದು ಸುದ್ದಿಗಾರರಿಗೆ ಪ್ರತಿಕ್ರಿಯಿಸಿದರು. ಈ ವೇಳೆ ಭಾವನಾತ್ಮಕವಾಗಿ ಮಾತನಾಡಿದ ಅವರು ಕಣ್ಣೀರು ಹಾಕಿದರು.

‘ನಾನು, ಸಿಸೋಡಿಯಾ ಮತ್ತು ಎಎಪಿ ಪಕ್ಷದವರು ಪೂರ್ಣ ಪ್ರಾಮಾಣಿಕರು ಎಂಬುದು ನ್ಯಾಯಾಲಯದ ಈ ಆದೇಶದಿಂದ ಸ್ಪಷ್ಟವಾಗುತ್ತದೆ’ ಎಂದರು.

ಮೋದಿ ಮೇಲೆ ಪಿತೂರಿ ಆರೋಪ: ‘ಅಬಕಾರಿ ನೀತಿ ಪ್ರಕರಣದ ಮೂಲಕ ಎಎಪಿಯನ್ನು ಮುಗಿಸಲು ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಪಿತೂರಿ ರೂಪಿಸಿದ್ದರು’ ಎಂದು ಕೇಜ್ರಿವಾಲ್ ಆರೋಪಿಸಿದರು.

ನಕಲಿ ಪ್ರಕರಣ: ‘ಅವರು ನಮ್ಮ ವಿರುದ್ಧ ನಕಲಿ ಪ್ರಕರಣ ದಾಖಲಿಸಿದ್ದರು. ನಾನು ಪ್ರಾಮಾಣಿಕನಾಗಿದ್ದು, ಪ್ರಾಮಾಣಿಕತೆಯನ್ನಷ್ಟೇ ಗಳಿಸಿದ್ದೇನೆ. ಅದೀಗ ಸಾಬೀತಾಗಿದೆ’ ಎಂದರು.

‘ಅಧಿಕಾರಕ್ಕಾಗಿ ದೇಶ ಮತ್ತು ಸಂವಿಧಾನದ ಜತೆ ಆಟವಾಡಬೇಡಿ ಎಂದು ಪ್ರಧಾನಿ ಮೋದಿ ಅವರಿಗೆ ಹೇಳಬಯಸುತ್ತೇನೆ’ ಎಂದು ಕೇಜ್ರಿವಾಲ್ ಹೇಳಿದರು.

ದೆಹಲಿ ಜನ ಈಗಾಗಲೇ ಪ್ರತಿಕ್ರಿಯಿಸಿದ್ದಾರೆ: ಬಿಜೆಪಿ

ನವದೆಹಲಿ (ಪಿಟಿಐ): ಸಾಕ್ಷ್ಯಾಧಾರಗಳ ಕೊರತೆ ಎಂದು ಹೇಳಿ ನ್ಯಾಯಾಲಯ ಎಎಪಿ ಮುಖ್ಯಸ್ಥ ಅರವಿಂದ ಕೇಜ್ರಿವಾಲ್ ಅವರನ್ನು ಖುಲಾಸೆಗೊಳಿಸಿರಬಹುದು. ಆದರೆ ದೇಶದ ರಾಜಧಾನಿಯ ಜನರು ಈಗಾಗಲೇ ಅವರಿಗೆ ರಾಜಕೀಯ ಪ್ರತಿಕ್ರಿಯೆ ನೀಡಿದ್ದಾರೆ ಎಂದು ಬಿಜೆಪಿ ಶುಕ್ರವಾರ ಹೇಳಿದೆ.

ಕೋರ್ಟ್ ಆದೇಶವನ್ನು ಪೂರ್ಣವಾಗಿ ಪರಿಶೀಲಿಸಿದ ಬಳಿಕವಷ್ಟೇ ಪಕ್ಷ ಪ್ರತಿಕ್ರಿಯೆ ನೀಡಲಿದೆ ಎಂದು ಬಿಜೆಪಿ ವಕ್ತಾರ ಸುಧಾಂಶು ತ್ರಿವೇದಿ ಹೇಳಿದರು.

ಪ್ರತಿದಾಳಿಯಲ್ಲಿ ಪಾಕಿಸ್ತಾನದ 55 ಸೈನಿಕರು ಹತ: ಅಫ್ಗಾನ್

274 ತಾಲಿಬಾನಿಗಳ ಹತ್ಯೆ: ಪಾಕ್

ಇಸ್ಲಾಮಾಬಾದ್/ಕಾಬೂಲ್ (ಎಎಫ್‌ಪಿ): ಪಾಕಿಸ್ತಾನ ಹಾಗೂ ಅಫ್ಗಾನಿಸ್ತಾನ ನಡುವೆ ಸಂಘರ್ಷ ತೀವ್ರಗೊಂಡಿದೆ. ಇದರ ಬೆನ್ನಲ್ಲೇ, ಅಫ್ಗಾನಿಸ್ತಾನದ ರಾಜಧಾನಿ ಕಾಬೂಲ್ ಸೇರಿದಂತೆ ಪ್ರಮುಖ ನಗರಗಳ ಮೇಲೆ ಪಾಕಿಸ್ತಾನವು ಬಾಂಬ್ ದಾಳಿ ನಡೆಸಿದೆ.

‘ಕಳೆದೊಂದು ತಿಂಗಳಿನಿಂದ ಎರಡು ರಾಷ್ಟ್ರಗಳ ನಡುವೆ ದಾಳಿ– ಪ್ರತಿದಾಳಿ ನಡೆಯುತ್ತಿದ್ದು, ಅಫ್ಗಾನಿಸ್ತಾನದ ವಿರುದ್ಧ ಯುದ್ಧ ಆರಂಭಿಸಲಾಗಿದೆ’ ಎಂದು ಪಾಕಿಸ್ತಾನ ರಕ್ಷಣಾ ಸಚಿವ ಖ್ವಾಜಾ ಅಸೀಫ್ ಘೋಷಣೆ ಮಾಡಿದ್ದಾರೆ.

2021ರಲ್ಲಿ ತಾಲಿಬಾನಿಗಳು ಅಫ್ಗಾನಿಸ್ತಾನದಲ್ಲಿ ಅಧಿಕಾರ ಹಿಡಿದ ಬಳಿಕ ಇದೇ ಮೊದಲ ಬಾರಿಗೆ ವಾಯುದಾಳಿಗೆ ಸಾಕ್ಷಿಯಾಗಿದೆ. ಕಾಬೂಲ್ ಹಾಗೂ ಕಂದಹಾರ್‌ನಲ್ಲಿ ಭಾರಿ ಸ್ಫೋಟ ಸಂಭವಿಸಿವೆ.

274 ಮಂದಿ ಬಲಿ: ಪಾಕಿಸ್ತಾನದ ಗಡಿ ಸೇನಾ ನೆಲೆಗಳನ್ನು ಗುರಿಯಾಗಿರಿಸಿ ಅಫ್ಗಾನ್ ಸೇನೆ ದಾಳಿ ನಡೆಸಿತ್ತು. ಇದಕ್ಕೆ ಪ್ರತಿಯಾಗಿ ಪಾಕಿಸ್ತಾನವು ನಡೆಸಿದ ಪ್ರತಿದಾಳಿಯಲ್ಲಿ ಅಫ್ಗಾನ್‌ನ 2740 ಮಂದಿ ಮೃತಪಟ್ಟಿದ್ದಾರೆ ಎಂದು ಪಾಕಿಸ್ತಾನ ಸರ್ಕಾರ ತಿಳಿಸಿದೆ.

‘ಸೇನೆಯು ನಡೆಸಿದ ದಾಳಿಯಲ್ಲಿ 274 ಅಫ್ಗಾನ್ ತಾಲಿಬಾನಿಗಳು ಮೃತಪಟ್ಟಿದ್ದು, 200 ಮಂದಿ ಗಾಯಗೊಂಡಿದ್ದಾರೆ’ ಎಂದು ಪಾಕಿಸ್ತಾನದ ಮಾಹಿತಿ ಹಾಗೂ ಪ್ರಸಾರ ಖಾತೆ ಸಚಿವ ಅತಾಹ್ ಉಲ್ಲಾ ತರಾರ್ ತಿಳಿಸಿದ್ದಾರೆ.

ದಾಳಿಯಲ್ಲಿ ಪಾಕಿಸ್ತಾನದ 12 ಸೈನಿಕರು ಮೃತಪಟ್ಟಿರುವುದನ್ನು ಅವರು ಖಚಿತಪಡಿಸಿದ್ದಾರೆ.

27 ನೆಲೆಗಳನ್ನು ಸಂಪೂರ್ಣವಾಗಿ ಧ್ವಂಸಗೊಳಿಸಲಾಗಿದೆ. 9 ಕೇಂದ್ರಗಳನ್ನು ವಶಕ್ಕೆ ಪಡೆಯಲಾಗಿದೆ’ ಎಂದು ಮಾಹಿತಿ ನೀಡಿದ್ದಾರೆ.

‘ಸೇನಾ ತುಕಡಿಗಳ ಎರಡು ಕೇಂದ್ರ ಕಚೇರಿ, ಮೂರು ಬ್ರಿಗೇಡ್ ಕೇಂದ್ರ ಕಚೇರಿ, ಎರಡು ಶಸ್ತ್ರಾಸ್ತ್ರ ಸಂಗ್ರಹಾಲಯ, ಒಂದು ಲಾಜಿಸ್ಟಿಕ್ ಕೇಂದ್ರ, ಮೂರು ಬೆಟಾಲಿಯನ್ ಕೇಂದ್ರ ಕಚೇರಿ, ಎರಡು ಸೆಕ್ಟರ್ ಕೇಂದ್ರ ಕಚೇರಿ ಹಾಗೂ 80 ಟ್ಯಾಂಕ್‌ಗಳನ್ನು ನಾಶಪಡಿಸಲಾಗಿದೆ’ ಎಂದು ವಿವರಿಸಿದ್ದಾರೆ.

ಅಫ್ಗಾನ್ ತಾಲಿಬಾನ್‌ಗೆ ಸೇರಿದ ಪ್ರಮುಖ ಸೇನಾ ನೆಲೆಗಳಾದ ಕಾಬೂಲ್, ಕಂದಹಾರ್ ಹಾಗೂ ಪಕ್ತಿಯಾದ ಮೇಲೆ ಪಾಕಿಸ್ತಾನವು ವಾಯುದಾಳಿ ನಡೆಸಿದೆ ಎಂದು ಪಾಕಿಸ್ತಾನಿ ಸರ್ಕಾರಿ ಸ್ವಾಮ್ಯದ ಸುದ್ದಿವಾಹಿನಿ ‘ಪಿಟಿವಿ ನ್ಯೂಸ್’ ವರದಿ ಮಾಡಿದೆ.

55 ಪಾಕ್ ಸೈನಿಕರ ಹತ್ಯೆ: ಡುರಾಂಡ್ ಲೇನ್ ಉದ್ದಕ್ಕೂ ಕೈಗೊಂಡ ಪ್ರತಿದಾಳಿಗಳಲ್ಲಿ ಪಾಕಿಸ್ತಾನ ಸೇನೆಯ 55 ಯೋಧರನ್ನು ಹತ್ಯೆ ಮಾಡಲಾಗಿದೆ ಎಂದು ಅಫ್ಗಾನಿಸ್ತಾನದ ರಕ್ಷಣಾ ಸಚಿವಾಲಯ ತಿಳಿಸಿದೆ.

‘ಪಾಕಿಸ್ತಾನದ ಎರಡು ಸೇನಾ ಕೇಂದ್ರ ಕಚೇರಿಗಳು ಹಾಗೂ 19 ಚೆಕ್‌ಪೋಸ್ಟ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ’ ಎಂದೂ ಸಚಿವಾಲಯ ತಿಳಿಸಿದೆ.

ಭಾರತದ ವಿರುದ್ಧ ಆರೋಪ

‘ತಾಲಿಬಾನಿಗಳು ಅಫ್ಗಾನಿಸ್ತಾನವನ್ನು ಭಾರತದ ಕಾಲೊನಿಯಾಗಿ ಮಾಡಿದ್ದಾರೆ. ಇಡೀ ವಿಶ್ವದ ಭಯೋತ್ಪಾದಕರನ್ನು ತನ್ನ ದೇಶದಲ್ಲಿ ಒಟ್ಟುಗೂಡಿಸಿ, ಭಯೋತ್ಪಾದನೆಯನ್ನು ರಫ್ತು ಮಾಡುತ್ತಿದ್ದಾರೆ’ ಎಂದು ಪಾಕಿಸ್ತಾನದ ರಕ್ಷಣಾ ಸಚಿವ ಖ್ವಾಜಾ ಆಸೀಫ್ ‘ಎಕ್ಸ್’ನಲ್ಲಿ ಮಾಡಿರುವ ಪೋಸ್ಟ್‌ನಲ್ಲಿ ಆರೋಪಿಸಿದ್ದಾರೆ.

ಸೆನ್ಸೆಕ್ಸ್ ಕುಸಿತ

ಮುಂಬೈ (ಪಿಟಿಐ): ವಾಹನ, ಎಫ್‌ಎಂಸಿಜಿ ಮತ್ತು ಔಷಧ ಕಂಪನಿಗಳ ಷೇರುಗಳು ಮಾರಾಟದ ಒತ್ತಡಕ್ಕೆ ಸಿಲುಕಿದ್ದರಿಂದ ಶುಕ್ರವಾರದ ವಹಿವಾಟಿನಲ್ಲಿ ದೇಶದ ಷೇರುಪೇಟೆ ಸೂಚ್ಯಂಕಗಳು ಶೇ 1ಕ್ಕೂ ಹೆಚ್ಚು ಕುಸಿತ ಕಂಡಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 961 ಅಂಶ (ಶೇ 1.17) ಇಳಿಕೆಯಾಗಿ, 81,287ಕ್ಕೆ ವಹಿವಾಟು ಅಂತ್ಯಗೊಂಡಿದೆ. ವಹಿವಾಟಿನ ವೇಳೆ 1,089 ಅಂಶ ಇಳಿದಿತ್ತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 371 ಅಂಶ (ಶೇ 1.25) ಕಡಿಮೆಯಾಗಿ, 25,178ಕ್ಕೆ ಕೊನೆಗೊಂಡಿದೆ.

ಸೂಚ್ಯಂಕಗಳ ಇಳಿಕೆಯಿಂದ ಹೂಡಿಕೆದಾರರ ಸಂಪತ್ತು ಒಂದೇ ದಿನ ₹4.98 ಲಕ್ಷ ಕೋಟಿಯಷ್ಟು ಕರಗಿದೆ.

‘ಜಾಗತಿಕ ಮಟ್ಟದಲ್ಲಿ ಉಂಟಾಗಿರುವ ರಾಜಕೀಯ ಬಿಕ್ಕಟ್ಟಿನಿಂದ ಹೂಡಿಕೆದಾರರು ಲಾಭದ ಗಳಿಕೆಗಾಗಿ ಷೇರುಗಳ ಮಾರಾಟಕ್ಕೆ ಮುಂದಾದರು. ಇದು ಸೂಚ್ಯಂಕಗಳ ಇಳಿಕೆಗೆ ಕಾರಣವಾಗಿದೆ’ ಎಂದು ಲೈವ್‌ಲಾಂಗ್ ವೆಲ್ತ್‌ನ ಸಂಶೋಧನಾ ವಿಶ್ಲೇಷಕ ಮತ್ತು ಸಂಸ್ಥಾಪಕ ಹರಿಪ್ರಸಾದ್ ಕೆ. ಹೇಳಿದ್ದಾರೆ.

ಸಿದ್ಧಸೂತ್ರದಲ್ಲಿ ಸಾಗುವ ಕ್ರಾಂತಿಯ ಕಥೆ


ಸಪ್ತಮಿ ಗೌಡ, ಸತೀಶ್ ನೀನಾಸಂ

ದಿ ರೈಸ್ ಆಫ್ ಅಶೋಕ (ಕನ್ನಡ)
- ನಿರ್ಮಾಣ: ವರ್ಧನ್ ಹರಿ, ಜೈಷ್ಣವಿ, ಸತೀಶ್ ನೀನಾಸಂ
- ನಿರ್ದೇಶನ: ವಿನೋದ್ ವಿ. ಧೋಂಡಾಳೆ
- ತಾರಾಗಣ: ಸತೀಶ್ ನೀನಾಸಂ, ಸಪ್ತಮಿ ಗೌಡ, ಸಂಪತ್, ಬಿ.ಸುರೇಶ, ಗೋಪಾಲಕೃಷ್ಣ ದೇಶಪಾಂಡೆ, ಯಶ್ ಶೆಟ್ಟಿ ಮತ್ತಿತರರು.

ಕುವೆಂಪು ಅವರ ‘ಮಲೆಗಳಲ್ಲಿ ಮದುಮಗಳು’ ಕೃತಿಯಲ್ಲಿನ ‘ಇಲ್ಲಿ ಯಾರೂ ಮುಖ್ಯರಲ್ಲ ಯಾರೂ ಅಮುಖ್ಯರಲ್ಲ’ ಎನ್ನುವ ತತ್ವವೇ ಈ ಸಿನಿಮಾದ ಜೀವಾಳ. ಇತ್ತೀಚೆಗೆ ತೆರೆಕಂಡ ‘ಹೆಬ್ಬುಲಿ ಕಟ್’, ‘ಲ್ಯಾಂಡ್‌ಲಾರ್ಡ್’ ಸಿನಿಮಾ ರೀತಿಯೇ ದಬ್ಬಾಳಿಕೆ, ಅಸ್ಪೃಶ್ಯತೆ, ದೌರ್ಜನ್ಯ ಮುಂತಾದ ಅಂಶಗಳ ಸುತ್ತ ಸುತ್ತುವ ಕ್ರಾಂತಿಯ ಕಥೆ ಇಲ್ಲಿದೆ.

70ರ ದಶಕ. ಆವರತ್ತಿ ಎಂಬ ಗ್ರಾಮದಲ್ಲಿ ತಮಿಳು ಮೂಲದ ‘ಕುಟ್ಟಿಬಾಬ್ಜಿ’(ಸಂಪತ್) ಎಂಬಾತ ದೇವಸ್ಥಾನದಲ್ಲಿ ಹರಕೆಯಾಗಿ ಕೊಡುವ ತಲೆಕೂದಲಿನ ವ್ಯಾಪಾರದ ಕೋಟೆ ಕಟ್ಟಿಕೊಂಡಿದ್ದಾನೆ. ಇಂತಹ ಕೋಟೆಯೊಳಗಿನ ಮುಡಿಕಟ್ಟೆಯಲ್ಲಿ ನಾಲ್ಕಾಣೆಗೆ ದುಡಿಯುವ ಕ್ಷೌರಿಕ ‘ಗಂಗರಾಜು’(ಬಿ.ಸುರೇಶ). ಈತನ ಮಗ ‘ಅಶೋಕ’(ಸತೀಶ್ ನೀನಾಸಂ). ತನ್ನ ವೃತ್ತಿಗೆ ಬಾರದೆ ‘ಅಶೋಕ’ ಸರ್ಕಾರಿ ನೌಕರನಾಗಬೇಕು ಎಂದು ಹಂಬಲಿಸಿ ಆತನನ್ನು ನಗರಕ್ಕೆ ಓದಲು ಕಳುಹಿಸಿದ್ದಾನೆ ‘ಗಂಗರಾಜು’. ಪದವಿ ಪಡೆದು ಊರಿಗೆ ಮರಳುವ ‘ಅಶೋಕ’ನಿಗೆ ‘ಕುಟ್ಟಿಬಾಬ್ಜಿ’ಯ ದಬ್ಬಾಳಿಕೆ, ತನ್ನ ಸಮುದಾಯ ಎದುರಿಸುತ್ತಿರುವ ಅಸ್ಪೃಶ್ಯತೆ, ದೌರ್ಜನ್ಯದ ಅರಿವಾಗುತ್ತದೆ. ‘ಅಂಬಿಕಾ’ಳ(ಸಪ್ತ-ಮಿ ಗೌಡ) ಪ್ರೀತಿ ಜೊತೆಗೆ ಕ್ರಾಂತಿಯ ಹಾದಿಯಲ್ಲಿ ‘ಅಶೋಕ’ ಹೆಜ್ಜೆ ಇಟ್ಟಾಗ ಕಥೆ ತೆರೆದುಕೊಳ್ಳುತ್ತದೆ.

ಹರಕೆಯ ಕೂದಲಿನ ವ್ಯಾಪಾರವೆಂಬ ಭಿನ್ನ ವಿಷಯಡಿ ಮೊದಲಾರ್ಧ ತೆರೆದುಕೊಳ್ಳುತ್ತದೆ. ಇಲ್ಲಿ ಹಳ್ಳಿಯಲ್ಲಿ ಮಗನ ಬರುವಿಕೆಗಾಗಿ ಅಪ್ಪನ ಕಾತರ, ಊರ ಹಬ್ಬ, ಅನ್ಯೋನ್ಯತೆ, ಖಳನಾಯಕನ ದಬ್ಬಾಳಿಕೆ ಮುಂತಾದ ವಿಷಯಗಳನ್ನು ಚೆನ್ನಾಗಿ ಬರೆದು, ಚಿತ್ರಿಸಲಾಗಿದೆ. ಆದರೆ ದ್ವಿತೀಯಾರ್ಧಕ್ಕೆ ಹೆಜ್ಜೆ ಇಡುತ್ತಿದ್ದಂತೆಯೇ ಚಿತ್ರಕಥೆಯ ವಿನ್ಯಾಸ, ಬರವಣಿಗೆ ಸೊರಗಿರುವುದು ಸ್ಪಷ್ಟವಾಗಿ ತೆರೆಯ ಮೇಲೆ ಗೋಚರಿಸುತ್ತದೆ. ಗಳಿಸಿದ ಶಿಕ್ಷಣವನ್ನೇ ಬಳಸಿಕೊಂಡು ಸಂವಿಧಾನದ ಪ್ರಕಾರವೇ ಬದಲಾವಣೆ ತರಲು ಸಾಧ್ಯ ಎನ್ನುವ ಅಂಶವನ್ನು ಕಥೆಯಲ್ಲಿ ಅಳವ-ಡಿಸಿಕೊಳ್ಳಬಹುದಿತ್ತು. ಆದರೆ ‘ಎಲ್ಲಾ ಯುದ್ಧಗಳು ಯುದ್ಧಭೂಮಿಯಲ್ಲಿ ಮಾತ್ರ ನಡೆಯುವುದಿಲ್ಲ’ ಎಂಬ ಅಡಿಬರಹವನ್ನಿಟ್ಟುಕೊಂಡ ಈ ಸಿನಿಮಾ ಅದಕ್ಕೆ ತದ್ವಿರುದ್ಧವಾಗಿ ಸಾಗುತ್ತದೆ. ‘ಕೋಪದ ಕೈಗೆ ಬುದ್ಧಿ ಕೊಡಬೇಡ’ ಎಂಬ ದನಿ ಹಿನ್ನೆಲೆಯಲ್ಲಿ ಬರುತ್ತಿದ್ದರೆ ನಾಯಕ ಆವೇಶದಿಂದ ಪ್ರತೀಕಾರಕ್ಕೆ ಸಜ್ಜಾಗುತ್ತಾನೆ! ‘ಸಂವಿಧಾನ’ವನ್ನು ಉಲ್ಲೇಖಿಸುವ ಸಿನಿಮಾ ಕಥೆಯಲ್ಲಿ ಕಾನೂನು ಕೈಗೆ-ತ್ತಿಕೊಳ್ಳುವಂಥ ಹಲವು ದೃಶ್ಯಗಳನ್ನು ಅಡಕ ಮಾಡಲಾಗಿದೆ!

ನಾವು ನೋಡಿದ ಸಿನಿಮಾ

ಸಿದ್ಧಸೂತ್ರದ-ಲ್ಲೇ ಸಾಗುವ ಕಥೆ ಸಿನಿಮಾದಲ್ಲಿದೆ. ತನ್ನ ತಂದೆ, ಊರು ಎದುರಿಸುತ್ತಿರುವ ಸಮಸ್ಯೆಯ ಬಗ್ಗೆ ಪದವಿ ಪಡೆದು ಮರಳುವವರೆಗೂ ನಾಯಕನಿಗೆ ಮಾಹಿತಿ ಇರಲಿಲ್ಲವೇ? ಪೊಲೀಸ್ ವ್ಯವಸ್ಥೆ ಎಲ್ಲಿತ್ತು? ನಟ ಡ್ರ್ಯಾಗನ್ ಮಂಜು ಪಾತ್ರವೇನು? ಎನ್ನುವ ಪ್ರಶ್ನೆಗಳಿಗೆ ಉತ್ತರವಿಲ್ಲ. ನಟನೆಯಲ್ಲಿ ಬಿ.ಸುರೇಶ ‘ಅಪ್ಪ’ನ ಪಾತ್ರದಲ್ಲಿ ಕಾಡುತ್ತಾರೆ. ಸತೀಶ್, ಸಪ್ತಮಿ ಗೌಡ, ಸಂಪತ್ ತಮ್ಮ ಪಾತ್ರಗಳಿಗೆ ನ್ಯಾಯ ಒದಗಿಸಿದ್ದಾರೆ. ‘ಏಳೋ ಮಾದೇವ’ ಹಾಡು ಚೆನ್ನಾಗಿದೆ. ಸಾಹಸ ದೃಶ್ಯಗಳ ಸಂಯೋಜನೆ ಕೃತಕವಾಗಿದೆ. ಮೊದಲಾ-ರ್ಧದಲ್ಲಿ ಬರುವ ‘ಮುಂಜಾನೆ..’ ಹಾಡು ತೆರೆ ಅವಧಿ ಹೆಚ್ಚಿಸಿದೆ.

–ಅಭಿಲಾಷ್ ಪಿ.ಎಸ್.

‘ಕಂಬಳ’ದಲ್ಲಿ ತುಳುನಾಡಿನ ಸಂಸ್ಕೃತಿ ದರ್ಶನ



ವೀರ ಕಂಬಳ
- ನಿರ್ಮಾಣ: ಅರುಣ್ ರೈ
- ನಿರ್ದೇಶನ: ಎಸ್.ವಿ. ರಾಜೇಂದ್ರ ಸಿಂಗ್ ಬಾಬು
- ತಾರಾಗಣ: ಆದಿತ್ಯ, ಪ್ರಕಾಶ್ ರಾಜ್, ರವಿಶಂಕರ್ ಮತ್ತಿತರರು

ಚಿತ್ರದ ಶೀರ್ಷಿಕೆಯೇ ಹೇಳುವಂತೆ ಪೂರ್ತಿಯಾಗಿ ಕಂಬಳದ ಸುತ್ತ ಸುತ್ತುವ ಕಥೆ ‘ವೀರ ಕಂಬಳ’. ತುಳುನಾಡಿಗೂ ದುಬೈಗೂ ಎಲ್ಲಿಲ್ಲದ ನಂಟು. ಬಹುತೇಕ ಕೊಲ್ಲಿ ರಾಷ್ಟ್ರಗಳಲ್ಲಿ ತುಳುನಾಡು, ಕೇರಳದವರೇ ಹೆಚ್ಚಾಗಿ ಕಾಣಸಿಗುತ್ತಾರೆ. ತುಳುನಾಡಿನಲ್ಲಿ ನಡೆಯುವ ಕಂಬಳವನ್ನು ನಿಯಂತ್ರಿಸುವುದು ದುಬೈನಲ್ಲಿ ಕುಳಿತ ಮಾಯಾಜಾಲವೆಂಬ ಕಾಲ್ಪನಿಕ ಕಥೆಯೊಂದಿಗೆ ದುಬೈನಿಂದಲೇ ಚಿತ್ರ ಪ್ರಾರಂಭವಾಗುತ್ತದೆ. ಕಂಬಳವನ್ನು ಬೆಟ್ಟಿಂಗ್ ಜಾಲದವರ ನಿಯಂತ್ರಣದಿಂದ ಹೊರಗೆ ತರಬೇಕೆಂದು ಕಥಾನಾಯಕ ಸತ್ಯ ದುಬೈನಲ್ಲಿ ಹೋರಾಡುತ್ತಾನೆ.

ಸತ್ಯನ ಮೂಲ ಕುಟುಂಬ ವಿರುವುದು ತುಳುನಾಡಿನಲ್ಲಿ. ಈತನ ಮಂಜೊಟ್ಟಿ ಗುತ್ತು ಮನೆತನ ಕಥೆಯೊಂದಿಗೆ ಕಂಬಳದ ಲೋಕ ತೆರೆದುಕೊಳ್ಳುತ್ತದೆ. ದುಬೈನಲ್ಲಿ ನಡೆಯುವ ಕಾಳಗಕ್ಕೂ ಇಲ್ಲಿನ ಶಿವರಾಮಣ್ಣನ ಕುಟುಂಬದ ಕಥೆಗೂ ಒಂದು ಕೊಂಡಿಯಿದೆ. ಹೀಗಾಗಿ ಅಲ್ಲಿನ ಕಾಳಗದ ಬಿಸಿ ಇಲ್ಲಿಗೂ ತಟ್ಟುತ್ತದೆ. 68 ವರ್ಷಗಳ ಹಿಂದೆ ಎರಡು ಕುಟುಂಬಗಳ ನಡುವಿನ ಕಲಹದಿಂದ ನಿಂತಿದ್ದ ಮಂಜೊಟ್ಟಿ ಗುತ್ತಿನ ಕಂಬಳವೇ ನಡೆಯುತ್ತಿರುವ ಅನಾಹುತಗಳಿಗೆ ಕಾರಣವೆಂಬುದು ದೈವದಲ್ಲಿ ಪ್ರಶ್ನೆ-ಯಿಟ್ಟಾಗ ಗೊತ್ತಾಗುತ್ತದೆ. ಮಂಜೊಟ್ಟಿ ಗುತ್ತಿನ ಶಿವರಾಮಣ್ಣ ತಮ್ಮ ಪೂರ್ವಿಕರ ಕಂಬಳವನ್ನು ಮತ್ತೆ ಪ್ರಾರಂಭಿಸಲು ತಯಾರಾಗುತ್ತಾನೆ. ಆಗ ಏನೆಲ್ಲ ಆಗುತ್ತದೆ ಎಂಬುದೇ ಚಿತ್ರದ ಒಟ್ಟಾರೆ ಕಥೆ.

ಕಂಬಳದ ದೃಶ್ಯ ವೈಭವ ಕಣ್ತುಂಬಿ-ಕೊಳ್ಳುವುದು ಬಹಳ ಸುಲಭ. ಆದರೆ ಕಂಬಳ ಸುಲಭವಾಗಿ ನಡೆಯುವುದಿಲ್ಲ. ಅದರ ಹಿಂದಿನ ಪರಿಶ್ರಮ ಸಾಕಷ್ಟಿದೆ. ಅದಕ್ಕೆ ಕೋಣಗಳನ್ನು ಗುರುತಿಸಿ, ಸಿದ್ಧಗೊಳಿಸುವ ವಿಧಾನ ಬಹಳ ಸೊಗಸಾಗಿದೆ. ಕಂಬಳದ ಪೂರ್ವತಯಾರಿ, ಅದರ ಹಿಂದಿನ ನಂಬಿಕೆ, ಆಚರಣೆಗಳನ್ನು ನಿರ್ದೇಶಕರು ಸೊಗಸಾಗಿ ಕಟ್ಟಿಕೊಟ್ಟಿದ್ದಾರೆ. ಇದರ ಜೊತೆಜೊತೆಗೆ ತುಳುನಾಡಿನ ಸಾಂಸ್ಕೃತಿಕ ಲೋಕವನ್ನು ಅನಾವ-ರಣಗೊಳಿಸುತ್ತ ಹೋಗಿದ್ದಾರೆ. ಈ ಪಯಣದಲ್ಲಿ ಅಲ್ಲಲ್ಲಿ ಸಾಕ್ಷ್ಯಚಿತ್ರದ ಅನುಭವ ನೀಡುವ ಕಥೆಯನ್ನು ಇನ್ನಷ್ಟು ಸಿನಿಮೀಯವಾಗಿಸುವ ಅವಕಾಶ ನಿರ್ದೇಶಕರಿಗಿತ್ತು.

ಕಂಬಳದ ಹಿಂದಿರುವ ಸ್ಥಳೀಯ ರಾಜಕೀಯ, ಈ ಕ್ರೀಡೆಯನ್ನು ನಿಲ್ಲಿಸಲು ಪ್ರಾಣಿ ದಯಾ ಸಂಘದವರ ಕಾನೂನು ಹೋರಾಟ, ಜಾತಿ ರಾಜಕೀಯ, ಬೆಟ್ಟಿಂಗ್ ಜಗತ್ತು, ಸ್ಥಳೀಯ ಹಾಸ್ಯ ಮುಂತಾದ ಅಂಶಗಳನ್ನು ಕಥೆಯಲ್ಲಿ ತಂದಿದ್ದಾರೆ. ಕಂಬಳ ನಿಲ್ಲಿಸಬೇಕೆಂದು ಪ್ರಾಣಿ ದಯಾ ಸಂಘದವರು ನ್ಯಾಯಾಲಯದ ಮೆಟ್ಟಿಲು ಏರಿದಾಗ ನ್ಯಾಯವಾದಿ-ಗಳಾಗಿ ಪ್ರಕಾಶ್ ರಾಜ್, ರವಿಶಂಕರ್ ನಡೆಸುವ ವಾದ–ವಿವಾದ ಒಂದಷ್ಟು ವಿಚಾರಗಳನ್ನು ಹೇಳುತ್ತ ಪ್ರೇಕ್ಷಕರ-ನ್ನು ರಂಜಿಸುತ್ತ, ಕಂಬಳದ ಮಹತ್ವ ತಿಳಿಸುತ್ತದೆ. ಕೋಣ ಓಡಿಸುವ ಸಮುದಾಯದ ಯುವಕರಿಬ್ಬರ ಪ್ರೇಮಕಥೆಯ ಸನ್ನಿವೇಶಗಳು, ಅಲ್ಲಿ ಬರುವ ಹಾಡುಗಳು ಮುಖ್ಯ ಕಥೆಗೆ ಹೆಚ್ಚು ಕೊಡುಗೆ ನೀಡದೆ ಅನವಶ್ಯ ಎಂಬ ಭಾವನೆ ಮೂಡಿಸುತ್ತವೆ.

ಜನಪ್ರಿಯ ಕಲಾವಿದರ ದಂಡೇ ಚಿತ್ರದಲ್ಲಿದೆ. ಆದರೆ ಬಹುತೇಕರು ಅತಿಥಿ ಪಾತ್ರದಲ್ಲಿ ಬರುತ್ತಾರೆ. ಹೀಗಾಗಿ ಯಾವ ಪಾತ್ರವೂ ನೆನಪಿನಲ್ಲಿ ಉಳಿಯುದಿಲ್ಲ. ಹಿನ್ನೆಲೆ ಸಂಗೀತ, ಛಾಯಾಚಿತ್ರಗ್ರಹಣದಲ್ಲಿ ಹೊಸತನ ಕಾಣಿಸುವುದಿಲ್ಲ. ಕಂಬಳದ ಜಗತ್ತಿನ ದೃಶ್ಯ ವೈಭವವನ್ನು ಇನ್ನಷ್ಟು ಸೊಗಸಾಗಿ ತೋರಿಸುವ ಅವಕಾಶ ಛಾಯಾಚಿತ್ರ-ಗ್ರಾಹಕರಿಗಿತ್ತು. ಒಟ್ಟಾರೆ ಕಥೆಗೆ ಇನ್ನಷ್ಟು ಸಿನಿಮೀಯ ಸ್ಪರ್ಶ ನೀಡಿ, ಚಿತ್ರಕಥೆ-ಯನ್ನು ಬಿಗಿಗೊಳಿಸಿದ್ದರೆ, ತುಳುನಾ-ಡಿನವರಲ್ಲದವರಿಗೂ ಸಿನಿಮಾ ಬಹಳ ರುಚಿಸುವ ಸಾಧ್ಯತೆಯಿತ್ತು.

ನೋಡಬಹುದಾದ ಸಿನಿಮಾ

ವಿನಾಯಕ ಕೆ.ಎಸ್.

ಕೇರಳ ಸ್ಟೋರಿ–2: ಬಿಡುಗಡೆಗೆ ಅಸ್ತು

ವಿಭಾಗೀಯ ಪೀಠದ ತೀರ್ಪಿನ ಬೆನ್ನಲ್ಲೇ ಆನ್‌ಲೈನ್ ಬುಕ್ಕಿಂಗ್‌ಗೆ ಅನುಮತಿ



ಕೊಚ್ಚಿ (ಪಿಟಿಐ): ‘ದಿ ಕೇರಳ ಸ್ಟೋರಿ 2–ಗೋಸ್ ಬಿಯಾಂಡ್’ ಸಿನಿಮಾ ಬಿಡುಗಡೆಗೆ 15 ದಿನಗಳ ತಡೆ ನೀಡಿದ್ದ ಕೇರಳ ಹೈಕೋರ್ಟ್‌ನ ಏಕಸದಸ್ಯ ಪೀಠದ ಆದೇಶಕ್ಕೆ ವಿಭಾಗೀಯ ಪೀಠವು ತಡೆ ನೀಡುವ ಮೂಲಕ ಚಿತ್ರದ ಬಿಡುಗಡೆಯ ದಾರಿ ಸುಗಮಗೊಂಡಿದೆ.

ಏಕಸದಸ್ಯ ಪೀಠದ ಆದೇಶವನ್ನು, ಸಿನಿಮಾ ನಿರ್ಮಾಪಕ ವಿಪುಲ್ ಅಮೃತ್‌ಲಾಲ್ ಶಾ ಅವರು ವಿಭಾಗೀಯ ಪೀಠದಲ್ಲಿ ಪ್ರಶ್ನಿಸಿದ್ದರು. ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸುಶ್ರುತ್ ಅರವಿಂದ್ ಧರ್ಮಾಧಿಕಾರಿ, ಪಿ.ವಿ. ಬಾಲಕೃಷ್ಣನ್ ಅವರಿದ್ದ ನ್ಯಾಯಪೀಠವು ಮಧ್ಯಂತರ ಆದೇಶ ಪ್ರಕಟಿಸಿದೆ.

ಸಿನಿಮಾದ ಟೀಸರ್ ಜನರ ಭಾವನೆಯನ್ನು ವಿರೂಪಗೊಳಿಸಿ, ಕೋಮು ಸಾಮರಸ್ಯ ಕದಡಲಿದೆ. ಸಿನಿಮಾ ಬಿಡುಗಡೆಗೆ ಪ್ರಮಾಣಪತ್ರ ನೀಡುವ ವೇಳೆ ಸೆನ್ಸಾರ್ ಬೋರ್ಡ್ ತನ್ನ ವಿವೇಚನೆಯನ್ನು ಬಳಸಿಲ್ಲ ಎಂದು ಏಕಸದಸ್ಯ ಪೀಠ ಅಭಿಪ್ರಾಯಪಟ್ಟಿತ್ತು. ಪೂರ್ತಿಯಾಗಿ ಸಿನಿಮಾ ವೀಕ್ಷಿಸದೇ, ಕೆಲವೇ ತುಣುಕುಗಳನ್ನು ನೋಡಿ ಈ ನಿರ್ಧಾರಕ್ಕೆ ಬರಲಾಗಿತ್ತು. ಹೀಗಾಗಿ, ಇದನ್ನು ಒಪ್ಪಲು ಸಾಧ್ಯವಿಲ್ಲ’ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿತ್ತು.

‘ಇದಲ್ಲದೇ, ಮೇಲ್ಮನವಿದಾರರು (ವಿಪುಲ್) ಸಿಬಿಎಫ್‌ಸಿ ಸೂಚನೆಯಂತೆ ಸಿನಿಮಾಕ್ಕೆ ಕೆಲವಡೆ ಸೇರ್ಪಡೆ, ಕತ್ತರಿ ಹಾಗೂ ಮಾರ್ಪಾಡುಗಳನ್ನು ಮಾಡಿದ್ದಾರೆ. ಮಂಡಳಿಯು ಇದನ್ನು ಗಮನಿಸಿಯೇ ಪ್ರಮಾಣಪತ್ರ ನೀಡಿದೆ. ಒಮ್ಮೆ ಪ್ರಮಾಣಪತ್ರ ನೀಡಿದ ನಂತರ, ಸಂಬಂಧಪಟ್ಟ ಪ್ರಾಧಿಕಾರವು ಸಾರ್ವಜನಿಕ ಸುವ್ಯವಸ್ಥೆ ಹಾಗೂ ನಿಯಮಾವಳಿಗಳನ್ನು ಗಮನದಲ್ಲಿರಿಸಿ ಕೊಂಡಿದೆ’ ಎಂದು ಪೀಠವು ತಿಳಿಸಿದೆ.

‘ಸಿನಿಮಾ ಬಿಡುಗಡೆಯಿಂದಾಗಿ ಸಾರ್ವಜನಿಕ ಕಾನೂನು ಸುವ್ಯವಸ್ಥೆಗೆ ಹಾನಿ ಉಂಟಾದರೆ, ಅದನ್ನು ನಿಭಾಯಿಸುವುದು ರಾಜ್ಯಗಳ ಕರ್ತವ್ಯವಾಗಿದೆ’ ಎಂದು ನ್ಯಾಯಪೀಠವು ಸ್ಪಷ್ಟಪಡಿಸಿದೆ.

ಶುಕ್ರವಾರದ ಬುಕ್ಕಿಂಗ್ ಹಣ ಮರುಪಾವತಿ: ‘ಈ ಹಿಂದೆ ನಿಗದಿಪಡಿಸಿದಂತೆ ಶುಕ್ರವಾರ ಸಿನಿಮಾ ಬಿಡುಗಡೆ ಮಾಡುವುದಿಲ್ಲ. ಹಣ ಮರುಪಾವತಿ ಮಾಡಲು ಒಪ್ಪಿರುವ ಕಾರಣ, ಸಿನಿಮಾ ನಿರ್ಮಾಪಕರ ವಿರುದ್ಧ ನ್ಯಾಯಾಂಗ ನಿಂದನೆ ಅರ್ಜಿ ಸಲ್ಲಿಸುವುದಿಲ್ಲ’ ಅರ್ಜಿದಾರ ಶ್ರೀದೇವ್ ನಂಬೂದಿರಿ ಪರ ಹಾಜರಾದ ವಕೀಲೆ ಮೈತ್ರೇಯಿ ಸಚ್ಚಿದಾನಂದ ಹೆಗಡೆ ಅವರು ತೀರ್ಪಿಗೂ ಮುನ್ನ ತಿಳಿಸಿದ್ದರು.

ನ್ಯಾಯಾಲಯದ ತೀರ್ಪಿನ ಬೆನ್ನಲ್ಲೇ, ಶನಿವಾರದಿಂದ ಸಿನಿಮಾ ಬುಕ್ಕಿಂಗ್‌ಗೆ ಆನ್‌ಲೈನ್‌ನಲ್ಲಿ ಅವಕಾಶ ನೀಡಲಾಗಿದೆ.

‘ಕಲೆಯು ಶಾಂತಿ, ಪ್ರೀತಿ ಹಂಚಲಿ’


ಪ್ರಿಯಾಂಕಾ ಗಾಂಧಿ

ವಯನಾಡ್, ಕೇರಳ (ಪಿಟಿಐ): ‘ಜನರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಲು ಅವಕಾಶ ನೀಡಬೇಕು. ಇದೇ ವೇಳೆ, ಜನರಲ್ಲಿ ಶಾಂತಿ, ಪ್ರೀತಿ ಹಾಗೂ ಸದಾಶಯ ಉತ್ತೇಜಿಸುವ ವಿಚಾರ ಹಂಚುವುದು ಉತ್ತಮ’ ಎಂದು ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ, ಸಂಸದೆ ಪ್ರಿಯಾಂಕಾ ಗಾಂಧಿ ವಾದ್ರಾ ಅಭಿಪ್ರಾಯಪಟ್ಟಿದ್ದಾರೆ.


ಸ್ವಕ್ಷೇತ್ರ ವಯನಾಡ್ ಪ್ರವಾಸದಲ್ಲಿರುವ ಅವರು ‘ಕೇರಳ ಸ್ಟೋರಿ–2’ ಸಿನಿಮಾ ಬಿಡುಗಡೆ ಕುರಿತು ಮಾಧ್ಯಮ ಪ್ರತಿನಿಧಿಗಳಿಗೆ ಪ್ರತಿಕ್ರಿಯಿಸಿದರು.

‘ಪರಸ್ಪರ ದ್ವೇಷ, ಅಸೂಯೆ ತುಂಬಿರುವ ಪರಿಸರದಲ್ಲಿ ಕರುಣೆ ಹೆಚ್ಚಿಸುವ ಕೆಲಸವಾಗಬೇಕಿದೆ. ಕಲೆಯು, ನೆಮ್ಮದಿ, ಶಾಂತಿ, ಪ್ರೀತಿ ಹಾಗೂ ಜನರ ಏಳ್ಗೆಯನ್ನು ಹೆಚ್ಚಿಸುವಂತಿರಬೇಕು’ ಎಂದು ತಿಳಿಸಿದ್ದಾರೆ.

‘ಮುಂಡಕ್ಕೈ ಮತ್ತು ಚೂರಲ್‌ಮಲ ಭಾಗದಲ್ಲಿ ಭೂಕುಸಿತ ಸಂಭವಿಸಿದ ಸಂದರ್ಭದಲ್ಲಿ ನೂರಾರು ಮಂದಿ ಪ್ರಾಣ ಕಳೆದುಕೊಂಡರು. ಜನರು ಜಾತಿ–ಧರ್ಮ ನೋಡದೇ ಪರಸ್ಪರ ಸಹಾಯ ಮಾಡಿದ್ದರು. ಈ ಮನೋಭಾವವೇ ಭಾರತದ ನಿಜವಾದ ಸಾರವಾಗಿದೆ. ಕೇರಳದ ಈ ವಿಚಾರಗಳನ್ನು ತೋರಿಸಬೇಕಿದೆ. ಈ ಬಗ್ಗೆ ಏಕೆ ಮಾತನಾಡಬಾರದು’ ಎಂದು ಪ್ರಶ್ನಿಸಿದ್ದಾರೆ.

ಆನೆ ಬಂತೊಂದಾನೆ..

ಪಿಟಿಐ ಚಿತ್ರ:


ಜಾರ್ಖಂಡ್‌ನ ರಾಂಚಿಯಲ್ಲಿ ಕಾಡಾನೆಯೊಂದು ರಸ್ತೆ ದಾಟುವಾಗ ಹಲವು ಜನರು ಕುತೂಹಲದಿಂದ ವೀಕ್ಷಿಸಿದರು

ಆಕ್ಷೇಪಣೆ ವಿಚಾರಣೆಗೆ ‘ಸುಪ್ರೀಂ’ ನಕಾರ

ನವದೆಹಲಿ (ಪಿಟಿಐ): ‘ಪಶ್ಚಿಮ ಬಂಗಾಳದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯ (ಎಸ್‌ಐಆರ್) ಭಾಗವಾಗಿ ಸಲ್ಲಿಕೆಯಾಗಿರುವ 50 ಲಕ್ಷ ದೂರುಗಳು ಮತ್ತು ಆಕ್ಷೇಪಗಳ ವಿಚಾರಣೆಗಾಗಿ ನಿಯೋಜಿಸಲಾದ ಸಿವಿಲ್ ನ್ಯಾಯಾಧೀಶರು ಯಾರಿಂದಲೂ ಪ್ರಭಾವಕ್ಕೆ ಒಳಗಾಗುವುದಿಲ್ಲ’ ಎಂದು ಸುಪ್ರೀಂ ಕೋರ್ಟ್ ತಿಳಿಸಿದೆ.

ನ್ಯಾಯಾಧೀಶರಿಗೆ ಚುನಾವಣಾ ಆಯೋಗವು ಹಮ್ಮಿಕೊಂಡಿದ್ದ ತರಬೇತಿ ಕುರಿತು ಆಕ್ಷೇಪಣೆ ಸಲ್ಲಿಸಿದ್ದ ಪಶ್ಚಿಮ ಬಂಗಾಳದ ಅರ್ಜಿಯನ್ನು ಪುರಸ್ಕರಿಸಲು ಇದೇ ವೇಳೆ ನಿರಾಕರಿಸಿದೆ.

ಪಶ್ಚಿಮ ಬಂಗಾಳ ಸರ್ಕಾರದ ಪರವಾಗಿ ಹಾಜರಾಗಿದ್ದ ಕಪಿಲ್ ಸಿಬಲ್, ‘ಏನೋ ವಿಚಿತ್ರವಾದುದು ಸಂಭವಿಸಿದೆ. ಸುಪ್ರೀಂ ಕೋರ್ಟ್ ನೀಡಿದ ಆದೇಶದಂತೆ ಕಲ್ಕತ್ತ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಗಳು ಎಸ್‌ಐಆರ್ ಆಕ್ಷೇಪಣೆ ವಿಚಾರಿಸಲು ನ್ಯಾಯಾಧೀಶರನ್ನು ನಿಯೋಜಿಸಿದ್ದಾರೆ. ಆದರೆ ಹಿಂಬಾಗಿಲಿನಲ್ಲಿ ನ್ಯಾಯಾಂಗ ಅಧಿಕಾರಿಗಳಿಗೆ ಚುನಾವಣಾ ಆಯೋಗವು ತರಬೇತಿಯ ಮಾದರಿಯನ್ನು ಬಿಡುಗಡೆಗೊಳಿಸಿದ್ದು, ಯಾವ ದಾಖಲೆಗಳನ್ನು ಸ್ವೀಕರಿಸಬೇಕು, ಯಾವುದನ್ನು ಸ್ವೀಕರಿಸಬಾರದು’ ಎಂದು ತಿಳಿಸಿದೆ’ ಎಂದು ಪೀಠದ ಗಮನಸೆಳೆದರು.

‘ಈ ಕುರಿತು ನ್ಯಾಯಾಂಗ ಅಧಿಕಾರಿಗಳೇ ಸೂಕ್ತ ನಿರ್ಧಾರ ತೆಗೆದುಕೊಳ್ಳಲಿದ್ದಾರೆ. ಇದು ಇಲ್ಲಿಗೆ ಕೊನೆಯಾಗಬೇಕು. ನ್ಯಾಯಾಂಗ ಅಧಿಕಾರಿಗಳು ಯಾರಿಂದಲೂ ಪ್ರಭಾವಿತರಾಗಲು ಸಾಧ್ಯವಿಲ್ಲ’ ಎಂದು ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ತಿಳಿಸಿದರು.

‘ನಮ್ಮ ಆದೇಶವು ಸೂರ್ಯಸ್ಪಷ್ಟವಾಗಿದೆ’ ಎಂದು ನ್ಯಾಯಮೂರ್ತಿ ಜಾಯ್‌ಮಾಲ್ಯ ಬಾಗ್ಚಿ ತಿಳಿಸಿದರು.

‘ನಮ್ಮ ತೀರ್ಪನ್ನು ಮೀರಿ ರಾಜ್ಯವಾಗಲೀ, ಆಯೋಗವಾಗಲೀ ನಡೆಯಲು ಸಾಧ್ಯವಿಲ್ಲ’ ಎಂದು ಪೀಠ ಸ್ಪಷ್ಟಪಡಿಸಿದೆ.

ಸಂಕ್ಷಿಪ್ತ ಸುದ್ದಿ

ಬಂಗಾಳ: ಭೂಕಂಪದ ಅನುಭವ


ಭೂಮಿ ಕಂಪಿಸುತ್ತಿದ್ದಂತೆಯೇ ಕೋಲ್ಕತ್ತದಲ್ಲಿ ಜನರು ಮೆಟ್ರೊ ಭವನದಿಂದ ಹೊರಬಂದರು —ಪಿಟಿಐ ಚಿತ್ರ

ಕೋಲ್ಕತ್ತ (ಪಿಟಿಐ): ಬಾಂಗ್ಲಾದೇಶದ ಕೆಲವು ಪ್ರದೇಶಗಳಲ್ಲಿ 5.5ರಷ್ಟು ತೀವ್ರತೆಯ ಭೂಕಂಪ ಸಂಭವಿಸಿದ್ದು, ಇದರ ಪರಿಣಾಮವಾಗಿ ಕೋಲ್ಕತ್ತ ಮತ್ತು ಪಶ್ಚಿಮ ಬಂಗಾಳದ ಕೆಲ ಜಿಲ್ಲೆಗಳಲ್ಲಿ ಶುಕ್ರವಾರ ಮಧ್ಯಾಹ್ನ ಭೂಮಿ ಕಂಪಿಸಿದ ಅನುಭವವಾಗಿದೆ ಎಂದು ಅಧಿಕಾರಿಗಳು ತಿಳಿಸಿದರು.

ಮಧ್ಯಾಹ್ನ 1.22ರ ಸುಮಾರಿಗೆ ಭೂಮಿ ಕಂಪಿಸಿದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಅಧಿಕಾರಿಗಳು ತಿಳಿಸಿದರು.

ಬಾಂಗ್ಲಾದೇಶದ ನಯಾಬಜಾರ್‌ನಲ್ಲಿ ಭೂಕಂಪನ ಕೇಂದ್ರ ಬಿಂದು ಪತ್ತೆಯಾಗಿದೆ. ಕೋಲ್ಕತ್ತ ಮತ್ತು ಪಶ್ಚಿಮ ಬಂಗಾಳದಲ್ಲಿ ಪ್ರಾಣಹಾನಿ ಅಥವಾ ಆಸ್ತಿಪಾಸ್ತಿಗೆ ಹಾನಿಯಾದ ಬಗ್ಗೆ ವರದಿಯಾಗಿಲ್ಲ ಎಂದು ಹೇಳಿದರು.

ಭೂಮಿ ಕಂಪಿಸಿಸುತ್ತಿದ್ದಂತೆಯೇ ಜನರು ಆತಂಕದಿಂದ ಸುರಕ್ಷಿತ ಸ್ಥಳಕ್ಕೆ ದೌಡಾಯಿಸಿದ್ದರು. ಸಿಬ್ಬಂದಿ ಸಚಿವಾಲಯ, ಮುಖ್ಯ ಚುನಾವಣಾ ಆಯುಕ್ತರ ಕಚೇರಿ ಮತ್ತು ವಿಧಾನ ಸಭೆಗಳಲ್ಲಿ ಕೆಲಸ ಮಾಡುವ ಉದ್ಯೋಗಿಗಳು ಆತಂಕದಿಂದ ಕಟ್ಟಡದಿಂದ ಹೊರಬಂದಿದ್ದರು.

ವಿವಾದಿತ ಪುಸ್ತಕ ಮರಳಿಸಲು ಎನ್‌ಸಿಇಆರ್‌ಟಿ ಸೂಚನೆ

ನವದೆಹಲಿ (ಪಿಟಿಐ): ‘ನ್ಯಾಯಾಂಗದಲ್ಲಿ ಭ್ರಷ್ಟಾಚಾರ’ ಎಂಬ ಅಧ್ಯಾಯ ಇರುವ ಎಂಟನೇ ತರಗತಿಯ ನಿಷೇಧಿತ ಪಠ್ಯ ಪುಸ್ತಕದ ಪ್ರತಿಗಳು ಯಾರದ್ದೇ ಬಳಿ ಇದ್ದರೂ ಮಂಡಳಿಗೆ ಮರಳಿಸುವಂತೆ ರಾಷ್ಟ್ರೀಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಮಂಡಳಿ (ಎನ್‌ಸಿಇಆರ್‌ಟಿ) ಶುಕ್ರವಾರ ಸೂಚನೆ ಹೊರಡಿಸಿದೆ.

ಎಲ್ಲಾ ಸಾಮಾಜಿಕ ಮಾಧ್ಯಮಗಳು ತಮ್ಮ ವೇದಿಕೆಯಲ್ಲಿರುವ ನಿಷೇಧಿತ ಪಠ್ಯದ ಅಂಶಗಳನ್ನು ಕಡ್ಡಾಯವಾಗಿ ಅಳಿಸಿ ಹಾಕುವಂತೆಯೂ ಮಂಡಳಿ ಕಟ್ಟುನಿಟ್ಟಾಗಿ ಹೇಳಿದೆ.

ಸುಪ್ರೀಂ ಕೋರ್ಟ್ ನಿಷೇಧಿಸಿರುವ ಪಠ್ಯವನ್ನು ಡಿಜಿಟಲ್ ವೇದಿಕೆ, ಸಾಮಾಜಿಕ ಮಾಧ್ಯಮಗಳಲ್ಲಿ ಪ್ರಸರಣ ಮಾಡದಂತೆ ಕೇಂದ್ರ ಮಾಹಿತಿ ಮತ್ತು ಪ್ರಸಾರ ಇಲಾಖೆಗೆ ಗುರುವಾರ ಕೇಂದ್ರ ಶಿಕ್ಷಣ ಇಲಾಖೆ ಪತ್ರ ಬರೆದಿತ್ತು.

ಜೆಎನ್‌ಯು: 14 ಮಂದಿ ಬಂಧನ

ನವದೆಹಲಿ (ಪಿಟಿಐ): ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದಲ್ಲಿ (ಜೆಎನ್‌ಯು) ಗುರುವಾರ ನಡೆದ ಪ್ರತಿಭಟನೆಗೆ ಸಂಬಂಧಿಸಿದಂತೆ 14 ಪ್ರತಿಭಟನ ಕಾರರನ್ನು ಪೊಲೀಸರು ಬಂಧಿಸಿದ್ದಾರೆ.

ಒಟ್ಟಾರೆ 51 ಜನರನ್ನು ವಶಕ್ಕೆ ಪಡೆಯಲಾಗಿದ್ದು, ಜೆಎನ್‌ಯು ವಿದ್ಯಾರ್ಥಿ ಸಂಘದ (ಜೆಎನ್‌ಯುಎಸ್‌ಯು) ಅಧ್ಯಕ್ಷೆ ಅದಿತಿ ಮಿಶ್ರಾ, ಉಪಾಧ್ಯಕ್ಷೆ ಗೋಪಿಕಾ ಬಾಬು, ಮಾಜಿ ಅಧ್ಯಕ್ಷ ನಿತೀಶ್ ಕುಮಾರ್ ಮತ್ತು ಜಂಟಿ ಕಾರ್ಯದರ್ಶಿ ಡ್ಯಾನಿಶ್ ಅಲಿ ಸೇರಿದಂತೆ 14 ಜನರನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ವಿಚ್ಛೇದನಕ್ಕೆ ವಿಜಯ್ ಪತ್ನಿ ಅರ್ಜಿ


ವಿಜಯ್

ಚೆನ್ನೈ (ಪಿಟಿಐ): ನಟ, ತಮಿಳಿಗ ವೆಟ್ರಿ ಕಳಗಂ (ಟಿವಿಕೆ) ಪಕ್ಷದ ಸಂಸ್ಥಾಪಕ ವಿಜಯ್ ಅವರ ಪತ್ನಿ ಸಂಗೀತಾ ಅವರು ವಿಚ್ಛೇದನ ಕೋರಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದಾರೆ.

‘ನನ್ನ ಪತಿಯು ನಟಿಯೊಬ್ಬರೊಂದಿಗೆ ವಿವಾಹೇತರ ಸಂಬಂಧ ಹೊಂದಿದ್ದಾರೆ. ನನಗೆ ನಿರಂತರವಾಗಿ ಮಾನಸಿಕ ಹಿಂಸೆ ನೀಡುತ್ತಿದ್ದು, ನನ್ನನ್ನು ನಿರ್ಲಕ್ಷಿಸುತ್ತಿದ್ದಾರೆ’ ಎಂದು ಆರೋಪಿಸಿದ್ದಾರೆ.

ಚೆಂಗಲ್ಪಟ್ಟು ಜಿಲ್ಲೆಯ ಕುಟುಂಬ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದು, ಏ. 10ರಂದು ವಿಚಾರಣೆಗೆ ಬರುವ ಸಾಧ್ಯತೆ ಇದೆ.

ಈ ಪ್ರಕರಣದ ವಿಚಾರಣೆಯ ವಿಡಿಯೊ ಚಿತ್ರೀಕರಣ ಮಾಡುವಂತೆ ಸಂಗೀತಾ ಅವರು ನ್ಯಾಯಾಲಯಕ್ಕೆ ಮನವಿ ಮಾಡಿಕೊಂಡಿದ್ದಾರೆ.

‘ವಿಜಯ್ ಅವರು 2021ರಿಂದಲೂ ನನ್ನನ್ನು ಭಾವನಾತ್ಮಕವಾಗಿ ದೂರವಿಟ್ಟಿದ್ದಾರೆ. ಮನೆ ಬಿಟ್ಟು ಹೋಗುವಂತೆ ಹೇಳಿದ್ದರು. ಅದಕ್ಕೆ ಸ್ಪಂದಿಸದಿದ್ದಾಗ ಪ್ರತ್ಯೇಕವಾಗಿ ವಾಸಿಸುವಂತೆ ಒತ್ತಾಯಿಸಿದರು. ಆದರೆ, ನಟಿಯೊಂದಿಗೆ ಮುಕ್ತ ಒಡನಾಟ ಹೊಂದಿದ್ದರು’ ಎಂದು ಅರ್ಜಿಯಲ್ಲಿ ದೂರಿದ್ದಾರೆ.

‘ಸಾರ್ವಜನಿಕವಾಗಿ ಮುಜುಗರಕ್ಕೊಳಗಾಗುವುದನ್ನು ತಪ್ಪಿಸಲು ವಕೀಲರ ಮೂಲಕ ಸೌಹಾರ್ದಯುತ ನಿರ್ಣಯಕ್ಕಾಗಿ 2024ರ ಆಗಸ್ಟ್‌ನಿಂದ 2025ರ ಫೆಬ್ರುವರಿ ನಡುವೆ ವಿಜಯ್‌ಗೆ ಹಲವು ನೋಟಿಸ್ ನೀಡಿದ್ದು, ಪತ್ರ ವ್ಯವಹಾರವನ್ನೂ ನಡೆಸಿದ್ದೇನೆ’ ಎಂದಿದ್ದಾರೆ.

ವಿಜಯ್– ಸಂಗೀತಾ ವಿವಾಹವನ್ನು ಲಂಡನ್‌ನಲ್ಲಿ 1998ರ ಜು.10ರಂದು ನೋಂದಾಯಿಸಲಾಗಿತ್ತು. 1999ರ ಆ. 25ರಂದು ಚೆನ್ನೈನಲ್ಲಿ ವಿಧ್ಯುಕ್ತವಾಗಿ ಮದುವೆ ನಡೆದಿತ್ತು ಎಂದು ಅರ್ಜಿಯಲ್ಲಿ ಉಲ್ಲೇಖಿಸಲಾಗಿದೆ.

ಶಂಕಾಸ್ಪದ ಡ್ರೋನ್ ಹಾರಾಟ: ಶೋಧ

ಜಮ್ಮು (ಪಿಟಿಐ): ಜಮ್ಮು–ಕಾಶ್ಮೀರದ ಪೂಂಛ್ ಜಿಲ್ಲೆಯ ಗಡಿ ನಿಯಂತ್ರಣ ರೇಖೆಯ ಬಳಿ ಸಂಶಯಾಸ್ಪದ ಡ್ರೋನ್ ಹಾರಾಟ ಕಂಡುಬಂದ ಕಾರಣ ಭದ್ರತಾ ಪಡೆಗಳು ಶುಕ್ರವಾರ ಶೋಧ ಕಾರ್ಯಾಚರಣೆ ಆರಂಭಿಸಿವೆ.

ಗುಲಪುರ ವ್ಯಾಪ್ತಿಯಲ್ಲಿ ಶೋಧ ಕಾರ್ಯ ಆರಂಭಗೊಂಡಿದ್ದು, ಭದ್ರತಾ ಕ್ರಮದ ಭಾಗವಾಗಿ ಪಡೆಗಳು ಹಲವು ಸುತ್ತು ಗುಂಡು ಹಾರಿಸಿವೆ. ಆ ಬಳಿಕ ಗಡಿಯಿಂದ ಡ್ರೋನ್ ಹಿಂದೆ ಸರಿದಿದೆ ಎಂದು ಮೂಲಗಳು ತಿಳಿಸಿವೆ.

ನಾಲ್ಕು ರಾಜ್ಯಗಳ ವಿಧಾನಸಭಾ ಚುನಾವಣೆ: ಅಸ್ಸಾಂನಲ್ಲಿ ಬಿಜೆಪಿ–ಕಾಂಗ್ರೆಸ್ ನೇರ ಸ್ಪರ್ಧೆ

ಎನ್‌ಡಿಎ– ಇಂಡಿಯಾ ಮೈತ್ರಿ ಎಚ್ಚರಿಕೆ ನಡೆ

• ಸುಮಿತ್ ಪಾಂಡೆ


ನರೇಂದ್ರ ಮೋದಿ


ರಾಹುಲ್ ಗಾಂಧಿ

ನವದೆಹಲಿ: ಕೇರಳ, ತಮಿಳುನಾಡು, ಪಶ್ಚಿಮ ಬಂಗಾಳ, ಅಸ್ಸಾಂ ಮತ್ತು ಕೇಂದ್ರಾಡಳಿತ ಪ್ರದೇಶ ಪುದುಚೇರಿಯಲ್ಲಿ ನಡೆಯಲಿರುವ ವಿಧಾನಸಭಾ ಚುನಾವಣೆಯು ರಾಷ್ಟ್ರ ರಾಜಕಾರಣದಲ್ಲಿ ಮಹತ್ವದ ಬದಲಾವಣೆಗಳಿಗೆ ಮುನ್ನುಡಿ ಬರೆಯುವ ಸಾಧ್ಯತೆ ಇರುವುದಿಂದ, ಎನ್‌ಡಿಎ ಮತ್ತು ಇಂಡಿಯಾ ಮೈತ್ರಿಕೂಟವು ಎಚ್ಚರಿಕೆಯಿಂದ ಕಣಕ್ಕಿಳಿಯಲು ನಿರ್ಧರಿಸಿವೆ.

ಕೇರಳದಲ್ಲಿ ಸತತ ಎರಡು ಅವಧಿಗೆ ವಿರೋಧ ಪಕ್ಷದ ಕುರ್ಚಿಯಲ್ಲಿ ಕುಳಿತಿದ್ದ ಕಾಂಗ್ರೆಸ್, ಈ ಬಾರಿ ವಿವಿಧ ಬಣಗಳನ್ನು ಒಗ್ಗೂಡಿಸುವ ಮೂಲಕ ಮರಳಿ ಅಧಿಕಾರಕ್ಕೆ ಬರಲು ಯತ್ನಿಸುತ್ತಿದೆ.


ಕೇರಳದಲ್ಲಿ ಎಡಪಕ್ಷಗಳ ವಿರುದ್ಧ ಹೋರಾಡುತ್ತಿರುವ ಕಾಂಗ್ರೆಸ್ ಪಶ್ಚಿಮ ಬಂಗಾಳದಲ್ಲೂ ಸಿಪಿಎಂ ಬೆಂಬಲಿಸದಿರಲು ನಿರ್ಧರಿಸಿದೆ. ಪಶ್ಚಿಮ ಬಂಗಾಳದಲ್ಲಿ ಮಮತಾ ಬ್ಯಾನರ್ಜಿ ನೇತೃತ್ವದ ಟಿಎಂಸಿಯನ್ನು ಅಧಿಕಾರದಿಂದ ಕೆಳಗಿಳಿಸಲು ಪ್ರಯತ್ನಿಸುತ್ತಿರುವ ಬಿಜೆಪಿಗೆ ಇದು ಪೂರಕವಾಗಿದೆ.

ತಮಿಳುನಾಡಿನಲ್ಲಿ ಬಿಜೆಪಿಯು ಎನ್‌ಡಿಎ ನಾಯಕತ್ವವನ್ನು ಎಐಎಡಿಎಂಕೆಗೆ ಬಿಟ್ಟುಕೊಟ್ಟಿದೆ. ಇದು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ನೇತೃತ್ವದ ಇಂಡಿಯಾ ಬಣಕ್ಕೆ ಪ್ರಬಲ ಸ್ಪರ್ಧೆ ಒಡ್ಡುವ ನಿರೀಕ್ಷೆ ಇದೆ.

ಎರಡು ರಾಷ್ಟ್ರೀಯ ಪಕ್ಷಗಳಾದ ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ ನೇರ ಸ್ಪರ್ಧೆ ಇರುವ ಏಕೈಕ ರಾಜ್ಯ ಅಸ್ಸಾಂ. ಹೀಗಾಗಿ ಅಸ್ಸಾಂ ವಿಧಾನಸಭಾ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಪ್ರಧಾನಿ ಮೋದಿ ಅವರು ಈಶಾನ್ಯ ರಾಜ್ಯದ ಮೂಲಸೌಕರ್ಯ ಕ್ಷೇತ್ರಕ್ಕೆ ಭರಪೂರ ಕೊಡುಗೆಯನ್ನು ಪ್ರಕಟಿಸಿದ್ದಾರೆ. ಅಸ್ಸಾಂ ಚುನಾವಣೆ ವಿಷಯದಲ್ಲಿ ಕಾಂಗ್ರೆಸ್ ಕೂಡ ಹೆಚ್ಚಿನ ಉತ್ಸಾಹ ತೋರಿದ್ದು, ಸಂಸತ್ ಅಧಿವೇಶನದ ಸಂದರ್ಭದಲ್ಲೇ ಕಾಂಗ್ರೆಸ್ ಮುಖಂಡರು ದೆಹಲಿಯಲ್ಲಿ ಸಭೆ ಸೇರಿ, ಚುನಾವಣಾ ಕಾರ್ಯತಂತ್ರದ ಕುರಿತು ಚರ್ಚೆ ನಡೆಸಿದ್ದಾರೆ.

2024ರ ಲೋಕಸಭಾ ಚುನಾವಣೆಯ ನಂತರ, ಹರಿಯಾಣ ಮತ್ತು ಮಹಾರಾಷ್ಟ್ರದಲ್ಲಿ ಬಿಜೆಪಿಯ ಸತತ ಗೆಲುವಿನೊಂದಿಗೆ ಪ್ರಧಾನಿ ಮೋದಿ ಅವರು ತಮ್ಮ ಸ್ಥಾನವನ್ನು ಬಲಪಡಿಸಿಕೊಂಡಿದ್ದಾರೆ.

ಡಿಎಂಕೆ ಸೇರಿದ ಒ.ಪನ್ನೀರ್‌ಸೆಲ್ವಂ


ಪನ್ನೀರ್‌ಸೆಲ್ವಂ

ಚೆನ್ನೈ (ಪಿಟಿಐ): ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರ ಸಮ್ಮುಖದಲ್ಲಿ ಮಾಜಿ ಮುಖ್ಯಮಂತ್ರಿ, ಎಐಎಡಿಎಂಕೆ ನಾಯಕ ಒ.ಪನ್ನೀರ್ ಸೆಲ್ವಂ ಮತ್ತು ಅವರ ಬೆಂಬಲಿಗರು ಶುಕ್ರವಾರ ಡಿಎಂಕೆ ಪಕ್ಷವನ್ನು ಸೇರಿದರು.

ಎಐಎಡಿಎಂಕೆ ನಾಯಕತ್ವದ ವಿಷಯದಲ್ಲಿ ಸಂಘರ್ಷಕ್ಕಿಳಿದು ಪಕ್ಷದಿಂದ ವಜಾಗೊಂಡಿದ್ದ ಒ.ಪನ್ನೀರ್ ಸೆಲ್ವಂ ಅವರು, ಅಧಿಕಾರಕ್ಕಾಗಿ ಮೂರು ವರ್ಷ ಪಕ್ಷದಲ್ಲಿ ಆಂತರಿಕ ಹೋರಾಟ ನಡೆಸಿದ್ದರು. ಈಗ ಡಿಎಂಕೆ ಪಕ್ಷದ ಜೊತೆ ಕೈಜೋಡಿಸಿದ್ದಾರೆ. ಒ.ಪನ್ನೀರ್‌ಸೆಲ್ವಂ ಅವರು ಎಐಎಡಿಎಂಕೆಯಿಂದ ಮೂರು ಬಾರಿ ಮುಖ್ಯಮಂತ್ರಿಯಾಗಿದ್ದರು.

ಐತಿಹಾಸಿಕ ಸಾಧನೆ ಸನಿಹ ಕಾಶ್ಮೀರ

ಕರ್ನಾಟಕ ತಂಡಕ್ಕೆ ಮೊದಲ ಇನಿಂಗ್ಸ್‌ನಲ್ಲಿ ಭಾರಿ ಹಿನ್ನಡೆ
• ನಬಿ ಐದು ವಿಕೆಟ್ • ಕಮ್ರನ್ ಉತ್ತಮ ಬ್ಯಾಟಿಂಗ್


• ಗಿರೀಶ ದೊಡ್ಡಮನಿ

ಹುಬ್ಬಳ್ಳಿ: ಶುಕ್ರವಾರ ಬಿಸಿಲು ಕಾವೇರುವ ಮುನ್ನವೇ ಆತಿಥೇಯ ಕರ್ನಾಟಕ ಕ್ರಿಕೆಟ್ ತಂಡದಲ್ಲಿ 'ಮಂಕು' ಕವಿಯಿತು. ಹನ್ನೊಂದು ವರ್ಷಗಳಿಂದ ಕಾದಿದ್ದ ಒಂಬತ್ತನೇ ರಣಜಿ ಟ್ರೋಫಿ ಗೆಲುವಿನ ಕನಸು ಕೈಜಾರಿದ ಹತಾಶೆ ಮನೆಮಾಡಿತು. ಆದರೆ 67 ವರ್ಷಗಳಲ್ಲಿ ಮೊದಲ ಬಾರಿ ಮಿರಿಮಿರಿ ಮಿಂಚುವ ಟ್ರೋಫಿ ಜಯದ ಹೊಸ್ತಿಲಿಗೆ ಜಮ್ಮು–ಕಾಶ್ಮೀರ ತಂಡವು ಬಂದು ನಿಂತಿದೆ.

ರಾಜನಗರದ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ರಣಜಿ ಟ್ರೋಫಿ ಕ್ರಿಕೆಟ್ ಫೈನಲ್‌ನಲ್ಲಿ ನಾಲ್ಕನೇ ದಿನದಾಟದ ಬೆಳಿಗ್ಗೆಯೇ 291 ರನ್‌ಗಳ ಮೊದಲ ಇನಿಂಗ್ಸ್ ಹಿನ್ನಡೆ ಅನುಭವಿಸಿತು. ಮಧ್ಯಮವೇಗಿ ಅಕೀಬ್ ನಬಿ ದಾರ್ ಐದು ವಿಕೆಟ್ ಪೂರ್ಣಗೊಳಿಸಿಕೊಂಡರು.

ದಿನದಾಟದ ಮುಕ್ತಾಯಕ್ಕೆ ಪ್ರವಾಸಿ ತಂಡವು ಎರಡನೇ ಇನಿಂಗ್ಸ್‌ನಲ್ಲಿ 57 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 186 ರನ್ ಗಳಿಸಿದೆ. ಕಮ್ರನ್ ಇಕ್ಬಾಲ್ (ಬ್ಯಾಟಿಂಗ್ 94; 160ಎ, 4X11, 6X1) ಮತ್ತು ಸಾಹಿಲ್ ಲೋತ್ರಾ (ಬ್ಯಾಟಿಂಗ್ 16; 41ಎ, 4X2) ಕ್ರೀಸ್‌ನಲ್ಲಿದ್ದಾರೆ. ಜಮ್ಮು–ಕಾಶ್ಮೀರವು ಒಟ್ಟು 477 ರನ್ ಮುನ್ನಡೆಯಲ್ಲಿದೆ.

ಜಮ್ಮು ಮತ್ತು ಕಾಶ್ಮೀರ ತಂಡವು ಮೊದಲ ಇನಿಂಗ್ಸ್‌ನಲ್ಲಿ 584 ರನ್ ಗಳಿಸಿತ್ತು. ಅದಕ್ಕೆ ಉತ್ತರವಾಗಿ ಗುರುವಾರ ಇನಿಂಗ್ಸ್ ಪ್ರಾರಂಭಿಸಿದ್ದ ಕರ್ನಾಟಕವು ಆರಂಭದಲ್ಲಿಯೇ (57ಕ್ಕೆ4) ಆಘಾತ ಅನುಭವಿಸಿತ್ತು. ಮಯಂಕ್ ಅಗರವಾಲ್ ಶತಕ ಗಳಿಸಿ ಮುನ್ನಡೆಯ ಆಸೆ ಜೀವಂತವಿರಿಸಿದ್ದರು.



ಮೂರನೇ ದಿನದಾಟದ ಅಂತ್ಯಕ್ಕೆ 69 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 220 ರನ್ ಗಳಿಸಿತ್ತು. ಕ್ರೀಸ್‌ನಲ್ಲಿದ್ದ ಮಯಂಕ್ ಮತ್ತು ಕೃತಿಕ್ ಶುಕ್ರವಾರ ಬೆಳಿಗ್ಗೆಯೂ ಜೊತೆಯಾಟ ಮುಂದುವರಿಸಿದರು. ಸಾಹಿಲ್ ಲೂತ್ರಾ ಬೌಲಿಂಗ್‌ನಲ್ಲಿ ಕೃತಿಕ್ (36; 101ಎ, 4X2) ಎಲ್‌ಬಿಡಬ್ಲ್ಯು ಬಲೆಗೆ ಬಿದ್ದರು. ಆದರೆ ಕೃತಿಕ್ ಅವರು ಅಂಪೈರ್ ತೀರ್ಪನ್ನು ಪ್ರಶ್ನಿಸಿ ಡಿಆರ್‌ಎಸ್ ಪಡೆದರು. ದೀರ್ಘ ಸಮಯ, ಎಲ್ಲ ಆಯಾಮಗಳ ವಿಡಿಯೊ ತುಣುಕುಗಳು ಮತ್ತು ಬಾಲ್ ಟ್ರ್ಯಾಕಿಂಗ್ ಪರಿಶೀಲಿಸಿದ ಮೂರನೇ ಅಂಪೈರ್ ವಿರೇಂದ್ರ ಶರ್ಮಾ ಔಟ್ ಎಂದು ತೀರ್ಪು ನೀಡಿದರು. ಚೆಂಡು ಮತ್ತು ಪ್ಯಾಡ್‌ಗೆ ಬ್ಯಾಟ್ ಅಂಚು ಏಕಕಾಲಕ್ಕೆ ತಗುಲಿದಂತೆ ಭಾಸವಾಗಿತ್ತು. ಕೃತಿಕ್ ಅಸಮಾಧಾನದಿಂದ ಪೆವಿಲಿಯನ್‌ನತ್ತ ಹೆಜ್ಜೆ ಹಾಕಿದರು. ನಂತರ ಅಕೀಬ್ ನಬಿ ದಾರ್ ಅವರು ಮಯಂಕ್ (160; 266ಎ, 4X21) ಅವರನ್ನು ಎಲ್‌ಬಿಡಬ್ಲು ಬಲೆಗೆ ಕೆಡವಿದರು.

ಋತುವಿನ ಕೆಲವು ಪಂದ್ಯಗಳಲ್ಲಿ ಉತ್ತಮ ಬ್ಯಾಟಿಂಗ್ ಮಾಡಿದ್ದ ವಿದ್ಯಾಧರ್ (11 ರನ್) ಅವರಿಗೆ ಸುನಿಲ್ ಕುಮಾರ್ ಪೆವಿಲಿಯನ್ ಹಾದಿ ತೋರಿಸಿದರು. ಶಿಖರ್ ಶೆಟ್ಟಿ ಅವರು ನಬಿಗೆ ಈ ಋತುವಿನ 60ನೇ ವಿಕೆಟ್ ಆದರು. ಪ್ರಸಿದ್ಧಕೃಷ್ಣ ವಿಕೆಟ್ ಯುದ್ಧವೀರ್ ಪಾಲಾಯಿತು.

ಪ್ರಸಿದ್ಧ ವೇಗ; ಕಮ್ರನ್ ಬ್ಯಾಟಿಂಗ್: ಊಟದ ವಿರಾಮಕ್ಕೂ ಮುನ್ನ ಆರಂಭವಾದ ಎರಡನೇ ಇನಿಂಗ್ಸ್‌ನಲ್ಲಿ ಪ್ರವಾಸಿ ಬಳಗವನ್ನು ಎಷ್ಟು ಸಾಧ್ಯವೋ ಅಷ್ಟು ಕಡಿಮೆ ಮೊತ್ತಕ್ಕೆ ಆಲೌಟ್ ಮಾಡಿ, ಕೊನೆಯ ದಿನವಾದ ಶನಿವಾರ ಗುರಿ ಬೆನ್ನಟ್ಟುವ ಯೋಚನೆಯಲ್ಲಿತ್ತು. ಅದಕ್ಕೆ ತಕ್ಕಂತೆ ಪ್ರಸಿದ್ಧ ಕೃಷ್ಣ ಅವರು ಎರಡನೇ ಓವರ್‌ನ ಮೊದಲ ಎಸೆತದಲ್ಲಿಯೇ ಯವರ್ ಹುಸೇನ್ ಅವರನ್ನು ಕ್ಲೀನ್‌ಬೌಲ್ಡ್ ಮಾಡಿದರು. ನಂತರದ ಓವರ್‌ನಲ್ಲಿ ವೈಶಾಖ್ ವಿಜಯಕುಮಾರ್ ಎಸೆತದಲ್ಲಿ ಶುಭಂ ಪುಂದೀರ ಅವರ ಕ್ಯಾಚ್ ಪಡೆದ ಬದಲೀ ವಿಕೆಟ್‌ಕೀಪರ್ ಕೆ.ಎಲ್. ಶ್ರೀಜಿತ್ ಹರ್ಷಿಸಿದರು.

ಊಟದ ನಂತರದ ಅವಧಿಯಲ್ಲಿ ಕಮ್ರನ್ ಮತ್ತು ಪಾರಸ್ ಡೋಗ್ರಾ ಅವರು 61 ರನ್‌ಗಳ ಜೊತೆಯಾಟವಾಡಿ ಬೌಲರ್‌ಗಳಿಗೆ ಬೆವರಿಳಿಸಿದರು.

21ನೇ ಓವರ್‌ನಲ್ಲಿ ಡೋಗ್ರಾ ಅವರನ್ನು ಕ್ಲೀನ್ ಬೌಲ್ಡ್ ಮಾಡುವಲ್ಲಿ ಪ್ರಸಿದ್ಧ ಯಶಸ್ವಿಯಾದರು. ಆದರೆ ಇನ್ನೊಂದು ಬದಿಯಲ್ಲಿ ಕಮ್ರನ್ ಮಾತ್ರ ವಿಚಿತ್ರ ರೀತಿಯ ಫುಟ್‌ವರ್ಕ್ ಮೂಲಕ ಬೌಲರ್‌ಗಳ ಎಸೆತಗಳನ್ನು ದಂಡಿಸಿದರು.

ಅವರು ಅಬ್ದುಲ್ ಸಮದ್ (32 ರನ್) ಜೊತೆಗೂ 73 ರನ್ ಸೇರಿಸಿದರು. ಸಮದ್ ವಿಕೆಟ್ ಗಳಿಸುವಲ್ಲಿ ಸ್ಪಿನ್ನರ್ ಶ್ರೇಯಸ್ ಗೋಪಾಲ್ ಸಫಲರಾದರು. ಆದರೆ ಕಮ್ರನ್ ಜೊತೆಗೂಡಿದ ಸಾಹಿಲ್ ವಿಕೆಟ್ ಪತನಕ್ಕೆ ಅವಕಾಶ ಕೊಡಲಿಲ್ಲ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಜಮ್ಮು–ಕಾಶ್ಮೀರ: 173.1 ಓವರ್‌ಗಳಲ್ಲಿ 584. ಕರ್ನಾಟಕ: 93.3 ಓವರ್‌ಗಳಲ್ಲಿ 293 (ಮಯಂಕ್ ಅಗರವಾಲ್ 160, ಕೃತಿಕ್ ಕೃಷ್ಣ 36, ವೈಶಾಖ ವಿಜಯಕುಮಾರ್ ಔಟಾಗದೇ 17; ಅಕೀಬ್ ನಬಿ ದಾರ್ 54ಕ್ಕೆ5, ಸುನಿಲ್ ಕುಮಾರ್ 51ಕ್ಕೆ2, ಯುದ್ಧವೀರ್ ಸಿಂಗ್ 55ಕ್ಕೆ2) ಎರಡನೇ ಇನಿಂಗ್ಸ್: ಜಮ್ಮು–ಕಾಶ್ಮೀರ: 57 ಓವರ್‌ಗಳಲ್ಲಿ 4ಕ್ಕೆ186 (ಕಮ್ರನ್ ಇಕ್ಬಾಲ್ ಔಟಾಗದೇ 94, ಪಾರಸ್ ಡೋಗ್ರಾ 16, ಅಬ್ದುಲ್ ಸಮದ್ 32, ಸಾಹಿಲ್ ಲೋತ್ರಾ ಔಟಾಗದೇ 16; ಪ್ರಸಿದ್ಧಕೃಷ್ಣ 42ಕ್ಕೆ2).



ಜಮ್ಮು ಮತ್ತು ಕಾಶ್ಮೀರ ತಂಡದ ಕಮ್ರನ್ ಇಕ್ಬಾಲ್ ಚಿತ್ರ: ಗೋವಿಂದರಾಜ ಜವಳಿ

ಕಾವೇರಿದ ವೈಶಾಖ್–ಕಮ್ರನ್ ಜಟಾಪಟಿ

ಫೈನಲ್ ಪಂದ್ಯದ ಎರಡನೇ ದಿನದಾಟದಲ್ಲಿ ಪಾರಸ್ ಡೋಗ್ರಾ ಅವರು ಫೀಲ್ಡರ್ ಕೆ.ವಿ. ಅನೀಶ್ ಅವರಿಗೆ ಡಿಚ್ಚಿ ಹೊಡೆದಿದ್ದು ದೊಡ್ಡ ಸುದ್ದಿಯಾಗಿತ್ತು.

ಶುಕ್ರವಾರ ಮತ್ತೆ ಉಭಯ ತಂಡಗಳ ಆಟಗಾರರ ನಡುವೆ ಮಾತಿನ ಚಕಮಕಿ ನಡೆದವು. ಎರಡನೇ ಇನಿಂಗ್ಸ್ ಆಡಿದ ಜಮ್ಮು ಕಾಶ್ಮೀರ ತಂಡದ ಬ್ಯಾಟರ್ ಕಮ್ರನ್ ಇಕ್ಬಾಲ್ ಹಾಗೂ ವೇಗಿ ವೈಶಾಖ್ ವಿಜಯಕುಮಾರ್ ಅವರ ನಡುವೆ ಜಟಾಪಟಿ ನಡೆಯಿತು.

49ನೇ ಓವರ್‌ನಲ್ಲಿ ವೈಶಾಖ ಎಸೆತವು ಕಮ್ರನ್ ಪ್ಯಾಡ್‌ಗೆ ಬಡಿಯಿತು. ಅವರು ವೈಶಾಖ ಅವರಿಗೆ ತಮ್ಮ ಅಂಗೈ ತಿರುವಿ ಸನ್ನೆ ಮಾಡಿದರು. ಇದರಿಂದ ಕುಪಿತರಾದ ವೈಶಾಖ ಕೂಡ ಜೋರಾಗಿಯೇ ವಾಗ್ವಾದಕ್ಕಿಳಿದರು. ಅಂಪೈರ್‌ಗೂ ದೂರಿದರು. ಉಳಿದ ಆಟಗಾರರು ಬಂದು ವೈಶಾಖ ಅವರನ್ನು ಸಮಾಧಾನ ಮಾಡಿದರು. ಇನ್ನೊಂದು ಎಸೆತದಲ್ಲಿಯೂ ಇಂತಹದೇ ಸನ್ನಿವೇಶ ಎದುರಾಯಿತು. ವೈಶಾಖ ಅವರು ಬೌನ್ಸರ್, ಲೆಗ್‌ಸೈಡ್ ಎಸೆತಗಳನ್ನು ಪ್ರಯೋಗಿಸಿದರು. ಅದೇ ಓವರ್‌ನಲ್ಲಿ ಕಮ್ರನ್ ಒಂದು ಸಿಕ್ಸರ್ ಕೂಡ ಹೊಡೆದರು.

ಇದಕ್ಕೂ ಮುನ್ನ 13ನೇ ಓವರ್‌ನಲ್ಲಿ ಪಾರಸ್ ಡೋಗ್ರಾ ಮತ್ತು ಕಮ್ರನ್ ಅವರು ವಿದ್ಯಾಧರ್ ಪಾಟೀಲ ಅವರನ್ನು ಕೆಣಕಿದ್ದರು.

ಸ್ಟಂಪ್‌ಗೆ ತಗುಲಿದ ಚೆಂಡು: ಕರ್ನಾಟಕ ತಂಡಕ್ಕೆ ಅದೃಷ್ಟ ಜೊತೆಗಿರಲಿಲ್ಲ. 11ನೇ ಓವರ್‌ನಲ್ಲಿ ಕಮ್ರನ್ ಅವರಿಗೆ ವಿದ್ಯಾಧರ್ ಹಾಕಿದ್ದ ಎಸೆತವು ಆಫ್‌ಸ್ಟಂಪ್‌ಗೆ ತಗುಲಿ ವಿಕೆಟ್‌ಕೀಪರ್ ಕೈಸೇರಿತ್ತು. ಆದರೆ ಬೇಲ್ಸ್ ಬೀಳದ ಕಾರಣ ಔಟ್ ನೀಡಲಿಲ್ಲ.

ಲಂಕಾ ಕೈಯಲ್ಲಿ ನ್ಯೂಜಿಲೆಂಡ್ ನಾಕೌಟ್ ಭವಿಷ್ಯ

ಜ್ಯಾಕ್ಸ್, ರೆಹಾನ್ ಸಾಹಸಕ್ಕೆ ಜಯ

ಕೊಲಂಬೊ: ಈಗಾಗಲೇ ಸೆಮಿಫೈನಲ್‌ಗೆ ಅರ್ಹತೆ ಪಡೆದಿರುವ ಇಂಗ್ಲೆಂಡ್ ತಂಡವು ಶುಕ್ರವಾರ ನ್ಯೂಜಿಲೆಂಡ್ ತಂಡವನ್ನು ನಾಲ್ಕು ವಿಕೆಟ್‌ಗಳಿಂದ ಸೋಲಿಸಿ ಟಿ20 ವಿಶ್ವಕಪ್‌ನ ಸೂಪರ್ ಎಂಟರ ಹಂತದಲ್ಲಿ ಹ್ಯಾಟ್ರಿಕ್ ಗೆಲುವು ಸಾಧಿಸಿತು. ಇದರಿಂದಾಗಿ ಪಾಕಿಸ್ತಾನ ತಂಡದ ನಾಕೌಟ್ ಅವಕಾಶವೂ ಜೀವಂತವಾಗಿದೆ.

ಈ ಪಂದ್ಯವನ್ನು ಗೆದ್ದು ಸೆಮಿಫೈನಲ್ ಪ್ರವೇಶಿಸುವ ಕನಸು ಕಂಡಿದ್ದ ನ್ಯೂಜಿಲೆಂಡ್‌ಗೆ ಹಿನ್ನಡೆಯಾಯಿತು. ಮಿಚೆಲ್ ಸ್ಯಾಂಟ್ನರ್ ಪಡೆಯ ನಾಕೌಟ್ ಭವಿಷ್ಯ ಶನಿವಾರ ನಡೆಯುವ ಪಾಕಿಸ್ತಾನ ಮತ್ತು ಶ್ರೀಲಂಕಾ ನಡುವಿನ ಪಂದ್ಯದ ಫಲಿತಾಂಶವನ್ನು ಅವಲಂಬಿತವಾಗಿದೆ.

ಸ್ಪಿನ್ನರ್‌ಗಳ ಉತ್ತಮ ಪ್ರದರ್ಶನದಿಂದ ನ್ಯೂಜಿಲೆಂಡ್ ತಂಡವನ್ನು 7 ವಿಕೆಟ್‌ಗೆ 159 ರನ್‌ಗಳಿಗೆ ನಿಯಂತ್ರಿಸಿದ ಎರಡು ಬಾರಿಯ ಚಾಂಪಿಯನ್ ಇಂಗ್ಲೆಂಡ್ ತಂಡವು ನಂತರ ನಿಯಮಿತವಾಗಿ ವಿಕೆಟ್‌ಗಳನ್ನು ಕಳೆದುಕೊಂಡಿತು. ಆದರೆ, ಮುರಿಯದ ಏಳನೇ ವಿಕೆಟ್‌ಗೆ ಆಪತ್ಬಾಂಧವ ವಿಲ್ ಜ್ಯಾಕ್ಸ್ (ಔಟಾಗದೇ 32;18ಎ) ಮತ್ತು ರೆಹಾನ್ ಅಹ್ಮದ್ (ಔಟಾಗದೇ 19;7ಎ) ಅವರು ಕೇವಲ 16 ಎಸೆತಗಳಲ್ಲಿ 44 ರನ್ ಸೇರಿಸಿ ತಂಡಕ್ಕೆ ಅಮೋಘ ಗೆಲುವು ತಂದುಕೊಟ್ಟರು. ತಂಡವು ಮೂರು ಎಸೆತಗಳಿರುವಂತೆ 6 ವಿಕೆಟ್‌ಗೆ 161 ರನ್ ಗಳಿಸಿತು. ಆಲ್‌ರೌಂಡ್ ಪ್ರದರ್ಶನ ನೀಡಿದ ಜ್ಯಾಕ್ಸ್ ಟೂರ್ನಿಯಲ್ಲಿ ನಾಲ್ಕನೇ ಬಾರಿ ಪಂದ್ಯದ ಆಟಗಾರ ಗೌರವಕ್ಕೆ ಪಾತ್ರರಾದರು.

ಸವಾಲಿನ ಗುರಿ ಬೆನ್ನಟ್ಟಿದ ಇಂಗ್ಲೆಂಡ್ ತಂಡವು ಆರಂಭದಲ್ಲೇ ಆಘಾತ ಅನುಭವಿಸಿತು. ಎರಡು ರನ್ ಗಳಿಸುವಷ್ಟರಲ್ಲಿ ಫಿಲ್ ಸಾಲ್ಟ್ (2) ಮತ್ತು ಜೋಸ್ ಬಟ್ಲರ್ (0) ಅವರನ್ನು ಕಳೆದುಕೊಂಡಿತು. ಈ ವೇಳೆ ನಾಯಕ ಹ್ಯಾರಿ ಬ್ರೂಕ್ (26) ಮತ್ತು ಜೇಕಬ್ ಬೆಥೆಲ್ (21) ಮೂರನೇ ವಿಕೆಟ್‌ಗೆ 48 ರನ್ ಸೇರಿಸಿದರು. ಬಳಿಕ ಟಾಮ್ ಬ್ಯಾಂಟನ್ (33) ಮತ್ತು ಸ್ಯಾಮ್ ಕರನ್ (24) ಉಪಯುಕ್ತ ಕಾಣಿಕೆ ನೀಡಿದರು.

ಈ ಹಂತದಲ್ಲಿ ಸ್ಪಿನ್ನರ್ ರಚಿನ್ ರವೀಂದ್ರ (19ಕ್ಕೆ 3) ದಾಳಿಗೆ ಸಿಲುಕಿದ ಇಂಗ್ಲೆಂಡ್ 117 ರನ್‌ಗಳಿಗೆ ಆರು ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು. ಕೊನೆಯ 19 ಎಸೆತಗಳಲ್ಲಿ ಗೆಲುವಿಗೆ 43 ರನ್ ಬೇಕಿತ್ತು. ಈ ಹಂತದಲ್ಲಿ ಜ್ಯಾಕ್ಸ್ ಮತ್ತು ರೆಹಾನ್ ಎದುರಾಳಿ ಬೌಲರ್‌ಗಳನ್ನು ದಿಟ್ಟವಾಗಿ ಎದುರಿಸಿ ತಂಡವನ್ನು ದಡ ಸೇರಿಸಿದರು.

ಸ್ಪಿನ್ನರ್‌ಗಳ ಕಡಿವಾಣ: ಇದಕ್ಕೂ ಮುನ್ನ ಟಾಸ್ ಗೆದ್ದು ಬ್ಯಾಟಿಂಗ್ ಆಯ್ದುಕೊಂಡ ನ್ಯೂಜಿಲೆಂಡ್ ದೊಡ್ಡ ಮೊತ್ತ ಗಳಿಸದಂತೆ ಸ್ಪಿನ್ನರ್‌ಗಳು ಲಗಾಮು ಹಾಕಿದರು. ನ್ಯೂಜಿಲೆಂಡ್ ಇನಿಂಗ್ಸ್‌ನಲ್ಲಿ ಒಬ್ಬರೂ ದೊಡ್ಡ ಇನಿಂಗ್ಸ್ ಆಡದಿರುವುದು ಕೊರತೆ ಎನಿಸಿತು. ಗ್ಲೆನ್ ಫಿಲಿಪ್ಸ್ (39;28ಎ), ಟಿಮ್ ಸೀಫರ್ಟ್ (35; 25ಎ) ಮತ್ತು ಫಿನ್ ಅಲೆನ್ (29;19 ಎ) ಕೊಂಚ ಹೋರಾಟ ತೋರಿದರು.

ವೇಗದ ಬೌಲರ್‌ಗಳೆದುರು ಕಿವೀಸ್ ಬ್ಯಾಟರ್‌ಗಳು ಉತ್ತಮವಾಗಿ ಆಡಿದರು. ಆದರೆ ಸ್ಪಿನ್ನರ್‌ಗಳಾದ ವಿಲ್ ಜ್ಯಾಕ್ಸ್ (23ಕ್ಕೆ2), ಅದಿಲ್ ರಶೀದ್ (28ಕ್ಕೆ2) ಮತ್ತು ರೆಹಾನ್ ಅಹ್ಮದ್ (28ಕ್ಕೆ2) ಮಧ್ಯಮ ಹಂತದಲ್ಲಿ ಪರಿಣಾಮಕಾರಿಯಾಗಿ ಬೌಲಿಂಗ್ ಮಾಡಿದರು.

ಸಂಕ್ಷಿಪ್ತ ಸ್ಕೋರು: ನ್ಯೂಜಿಲೆಂಡ್: 20 ಓವರುಗಳಲ್ಲಿ 20 ಓವರುಗಳಲ್ಲಿ 7 ವಿಕೆಟ್‌ಗೆ 159 (ಟಿಮ್ ಸೀಫರ್ಟ್ 35, ಫಿನ್ ಅಲೆನ್ 29, ಗ್ಲೆನ್ ಫಿಲಿಪ್ಸ್ 39; ಅದಿಲ್ ರಶೀದ್ 28ಕ್ಕೆ2, ವಿಲ್ ಜಾಕ್ಸ್ 23ಕ್ಕೆ2, ರೆಹಾನ್ ಅಹ್ಮದ್ 28ಕ್ಕೆ2). ಇಂಗ್ಲೆಂಡ್: 19.3 ಓವರ್‌ಗಳಲ್ಲಿ 6 ವಿಕೆಟ್‌ಗೆ 161 (ಹ್ಯಾರಿ ಬ್ರೂಕ್ 26, ಟಾಮ್ ಬ್ಯಾಂಟನ್ 33, ವಿಲ್ ಜ್ಯಾಕ್ಸ್ ಔಟಾಗದೇ 32, ರೆಹಾನ್ ಅಹ್ಮದ್ ಔಟಾಗದೇ 19; ರಚಿನ್ ರವೀಂದ್ರ 19ಕ್ಕೆ 3). ಪಂದ್ಯದ ಆಟಗಾರ: ವಿಲ್ ಜ್ಯಾಕ್ಸ್.



ವಿಲ್ ಜ್ಯಾಕ್ಸ್

ಸೆಮಿಫೈನಲ್: ಪಾಕ್‌ಗೆ ಹೀಗಿದೆ ಲೆಕ್ಕಾಚಾರ

ಪಾಕಿಸ್ತಾನ ತಂಡವು ಶನಿವಾರ ನಡೆಯುವ ಎರಡನೇ ಗುಂಪಿನ ಸೂಪರ್ ಎಂಟರ ಹಂತದ ಕೊನೆಯ ಪಂದ್ಯದಲ್ಲಿ ಆತಿಥೇಯ ಶ್ರೀಲಂಕಾ ತಂಡವನ್ನು ಎದುರಿಸಲಿದೆ. ಈ ಪಂದ್ಯ ಪಾಕಿಸ್ತಾನದ ಪಾಲಿಗಷ್ಟೇ ಮಹತ್ವದ್ದು.

ಶ್ರೀಲಂಕಾ ಈಗಾಗಲೇ ನಾಕೌಟ್ ಹಾದಿಯಿಂದ ಹೊರಬಿದ್ದಿದೆ. ಇಂಗ್ಲೆಂಡ್ ವಿರುದ್ಧ ಶುಕ್ರವಾರ ನಡೆದ ಪಂದ್ಯದಲ್ಲಿ ನ್ಯೂಜಿಲೆಂಡ್ ಸೋತಿರುವ ಕಾರಣ ಪಾಕಿಸ್ತಾನದ ಸೆಮಿಫೈನಲ್ ಆಸೆ ಜೀವಂತವಾಗಿ ಉಳಿದಿದೆ. ಆದರೆ ಪಾಕಿಸ್ತಾನ ಗೆಲುವಷ್ಟೇ ಸಾಲದು. ಅದು 64 ರನ್‌ಗಳ ಅಂತರದಿಂದ ಗೆಲ್ಲಬೇಕು. ಎರಡನೇಯದಾಗಿ ಬ್ಯಾಟ್ ಮಾಡಿದಲ್ಲಿ ಕನಿಷ್ಠ 13.1 ಓವರುಗಳಲ್ಲಿ ಶ್ರೀಲಂಕಾ ನಿಗದಿಪಡಿಸಿದ ಗುರಿ ಸಾಧಿಸಬೇಕಾಗುತ್ತದೆ.

ಇಂದಿನ ಪಂದ್ಯ
ಶ್ರೀಲಂಕಾ V/s ಪಾಕಿಸ್ತಾನ
ತಾಣ: ಪಲ್ಲೆಕೆಲೆ, ರಾತ್ರಿ: 7
ಲೈವ್: ಸ್ಟಾರ್ ಸ್ಪೋರ್ಟ್ಸ್‌ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್

'ಸೂಪರ್ 8' ಹಂತದ ಅಂಕಪಟ್ಟಿ (ಎರಡನೇ ಗುಂಪು)

ತಂಡ	ಪಂದ್ಯ	ಜಯ	ಸೋಲು	ರದ್ದು	ಅಂಕ	ಎನ್‌ಆರ್‌ಆರ್
ಇಂಗ್ಲೆಂಡ್	3	3	0	0	6	1.096
ನ್ಯೂಜಿಲೆಂಡ್	3	1	1	1	3	1.390
ಪಾಕಿಸ್ತಾನ	2	0	1	1	1	-0.461
ಶ್ರೀಲಂಕಾ	2	0	2	0	0	-2.800

'ರಾಜನಗರ'ದಲ್ಲಿ ವೇಗಿಗಳ ಮಿಂಚು

• ಸತೀಶ ಬಿ.

ಹುಬ್ಬಳ್ಳಿ: ಇಲ್ಲಿ ನಡೆಯುತ್ತಿರುವ ಕರ್ನಾಟಕ ಮತ್ತು ಜಮ್ಮು ಕಾಶ್ಮೀರ ನಡುವಿನ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಫೈನಲ್ ಪಂದ್ಯದಲ್ಲಿ ಎರಡೂ ತಂಡಗಳ ವೇಗಿಗಳು ಯಶಸ್ಸು ಕಂಡರು. ಲೈನ್ ಮತ್ತು ಲೆಂತ್ ಕಾಪಾಡಿಕೊಂಡು ನಿಖರ ದಾಳಿ ನಡೆಸಿದ ವೇಗಿಗಳು ಯಶಸ್ಸು ಕಂಡರು.

ಅಮೋಘ ಲಯದಲ್ಲಿರುವ ಜಮ್ಮು–ಕಾಶ್ಮೀರ ತಂಡದ 29 ವರ್ಷದ ವೇಗಿ ಅಕೀಬ್ ನಬಿ ದಾರ್ ಐದು ವಿಕೆಟ್ ಗೊಂಚಲು (54ಕ್ಕೆ 5) ಗಳಿಸಿದರು. ಪ್ರಮುಖ ಬ್ಯಾಟರ್‌ಗಳಾದ ಕೆ.ಎಲ್. ರಾಹುಲ್, ಮಯಂಕ್ ಅಗರವಾಲ್, ಕರುಣ್ ನಾಯರ್, ಸ್ಮರಣ್ ಆರ್. ಮತ್ತು ಶಿಖರ್ ಶೆಟ್ಟಿ ಅವರ ವಿಕೆಟ್‌ಗಳು ನಬಿ ಪಾಲಾದವು. ಈ ಋತುವಿನಲ್ಲಿ ಒಟ್ಟು ಏಳನೇ ಬಾರಿ ಐದು ವಿಕೆಟ್ ಗುಚ್ಛ ಗಳಿಸಿದ ನಬಿ, ಟೂರ್ನಿಯಲ್ಲಿ ಅತಿ ಹೆಚ್ಚು ವಿಕೆಟ್ ಗಳಿಸಿದ (60) ಬೌಲರ್ ಎನಿಸಿದರು.

ವೇಗಿ ಪ್ರಸಿದ್ಧ ಕೃಷ್ಣ ಅವರೂ 5 ವಿಕೆಟ್ ಪಡೆದು ಆತಿಥೇಯ ತಂಡದ ಪರ ಯಶಸ್ವಿ ಬೌಲರ್ ಎನಿಸಿದ್ದರು. ಎರಡನೇ ಇನಿಂಗ್ಸ್‌ನಲ್ಲಿಯೂ ಅವರು 2 ವಿಕೆಟ್ ಗಳಿಸಿದರು. ನಾಲ್ಕನೇ ದಿನದಾಟದ ಅಂತ್ಯಕ್ಕೆ ಒಟ್ಟು 19 ವಿಕೆಟ್‌ಗಳು ವೇಗಿಗಳ ಪಾಲಾದರೆ, ಸ್ಪಿನ್ನರ್‌ಗಳು 4 ವಿಕೆಟ್ ಪಡೆದರು.

ನವೆಂಬರ್‌ನಲ್ಲಿ ಇಲ್ಲೇ ನಡೆದಿದ್ದ ಚಂಡೀಗಢ ಎದುರಿನ ರಣಜಿ ಪಂದ್ಯದಲ್ಲಿ ಸ್ಪಿನ್ನರ್‌ಗಳಾದ ಶ್ರೇಯಸ್ ಗೋಪಾಲ್ (73ಕ್ಕೆ 7) ಮತ್ತು ಶಿಖರ್ ಶೆಟ್ಟಿ (61ಕ್ಕೆ 5) ಮಿಂಚಿದ್ದರು. 2024ರಲ್ಲಿ ಪಂಜಾಬ್ ಎದುರಿನ ಪಂದ್ಯದಲ್ಲಿ ಮಧ್ಯಮ ವೇಗಿ ವಿ.ಕೌಶಿಕ್ (ಈಗ ಗೋವಾ ತಂಡ) 41ಕ್ಕೆ 7 ವಿಕೆಟ್ ಪಡೆದಿದ್ದರು. 2023ರಲ್ಲಿ ನಡೆದಿದ್ದ ಕೂಚ್ ಬಿಹಾರ್ ಟ್ರೋಫಿ ಟೂರ್ನಿಯ ಮಧ್ಯಪ್ರದೇಶ ಎದುರಿನ ಕ್ವಾರ್ಟರ್ ಫೈನಲ್‌ನಲ್ಲಿ ಕರ್ನಾಟಕದ ಧೀರಜ್ ಗೌಡ 77ಕ್ಕೆ 6 ವಿಕೆಟ್ ಕಬಳಿಸಿದ್ದರು.

ಗೆಲುವಿಗೆ ಪ್ರಯತ್ನಿಸುತ್ತೇವೆ: ಮಯಂಕ್

'ಫೈನಲ್‌ನಲ್ಲಿ ಶತಕ ಗಳಿಸುವುದು ಖುಷಿ ನೀಡುತ್ತದೆ. ಆದರೆ ಅಕೀಬ್ ನಬಿ ದಾರ್ ಸೇರಿದಂತೆ ಜಮ್ಮು ಮತ್ತು ಕಾಶ್ಮೀರ ತಂಡದ ಬೌಲರ್‌ಗಳು ಉತ್ತಮವಾಗಿ ಬೌಲಿಂಗ್ ಮಾಡಿ ಈ ಪಂದ್ಯದಲ್ಲಿ ನಮ್ಮ ಮೇಲೆ ಒತ್ತಡ ಹೇರಿದರು' ಎಂದು ಕರ್ನಾಟಕ ತಂಡದ ಆರಂಭಿಕ ಬ್ಯಾಟರ್ ಮಯಂಕ್ ಅಗರವಾಲ್ ಹೇಳಿದರು.

'ಈ ಪಂದ್ಯದಲ್ಲಿ ನಾವು ಬಹಳ ಹಿಂದೆ ಇದ್ದೇವೆ. ಕೊನೆಯ ದಿನದ ಆಟ ಬಾಕಿ ಇದೆ. ಜಮ್ಮು–ಕಾಶ್ಮೀರ ತಂಡದ ಉಳಿದ ವಿಕೆಟ್‌ಗಳನ್ನು ಬೇಗನೇ ಪಡೆದು ಲೀಗ್ ಹಂತದಲ್ಲಿ ಪಂಜಾಬ್ ವಿರುದ್ಧ ಆಡಿದ ರೀತಿ ಆಡಿದರೆ ಗೆಲ್ಲುವ ಅವಕಾಶವಿದೆ. ಈ ನಿಟ್ಟಿನಲ್ಲಿ ಪ್ರಯತ್ನಿಸುತ್ತೇವೆ' ಎಂದರು.

'ಟ್ರೋಫಿಯೊಂದಿಗೆ ಹೋಗುತ್ತೇವೆ'

'ನಮ್ಮ ತಂಡ ಮೊದಲ ಬಾರಿಗೆ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಫೈನಲ್ ಪ್ರವೇಶಿಸಿದ್ದು ಹೆಮ್ಮೆಯ ಸಂಗತಿ. ನಾವು ಇಲ್ಲಿಂದ ಟ್ರೋಫಿ ಜೊತೆಗೆ ಹೋಗುತ್ತೇವೆ' ಎಂದು ಜಮ್ಮು–ಕಾಶ್ಮೀರ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಹೇಳಿದರು

ಫೈನಲ್ ಪಂದ್ಯದ ವೀಕ್ಷಣೆಗಾಗಿ ಶುಕ್ರವಾರ ಹುಬ್ಬಳ್ಳಿಗೆ ಬಂದ ಅವರು ವಿಮಾನ ನಿಲ್ದಾಣದಲ್ಲಿ ಸುದ್ದಿಗಾರರ ಜೊತೆ ಮಾತನಾಡಿದರು. 'ಫೈನಲ್‌ನಲ್ಲಿ ನಮ್ಮ ತಂಡ ಗೆಲ್ಲುವುದು ಕಷ್ಟ ಎಂಬಂತೆ ಬಿಂಬಿಸಲಾಗಿತ್ತು. ಆದರೆ ತಂಡ ಉತ್ತಮವಾಗಿ ಆಡಿದೆ. ರಣಜಿ ಫೈನಲ್ ಪ್ರವೇಶಿಸುವ ಮೂಲಕ ಜಮ್ಮು ಕಾಶ್ಮೀರದಲ್ಲೂ ಉತ್ತಮ ಕ್ರಿಕೆಟಗರು ಇದ್ದಾರೆ ಎಂಬುದು ಜನರಿಗೆ ಗೊತ್ತಾಗುತ್ತಿದೆ. ಅವಕಾಶಗಳ ಕೊರತೆಯಿಂದ ನಮ್ಮ ಆಟಗಾರರು ರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಳ್ಳುತ್ತಿಲ್ಲ. ಫೈನಲ್ ಪಂದ್ಯದ ಬಳಿಕ ತಂಡದ ಒಂದಿಬ್ಬರಾದರೂ ಭಾರತ ತಂಡಕ್ಕೆ ಆಡುವ ವಿಶ್ವಾಸ ಇದೆ' ಎಂದರು.

ಕ್ರಿಕೆಟಿಗ ರಿಂಕು ತಂದೆ ಖಾನಚಂದ್ ನಿಧನ

ಅಲಿಗಢ/ನೊಯ್ಡಾ (ಪಿಟಿಐ): ಭಾರತ ಕ್ರಿಕೆಟ್ ತಂಡದ ಮಧ್ಯಮ ಕ್ರಮಾಂಕದ ಬ್ಯಾಟರ್ ರಿಂಕು ಸಿಂಗ್ ಅವರ ತಂದೆ ಖಾನಚಂದ್ ಸಿಂಗ್ (60) ಅವರು ಯಕೃತ್ತಿನ ಕ್ಯಾನ್ಸರ್ ನಿಂದಾಗಿ ಶುಕ್ರವಾರ ಬೆಳಿಗ್ಗೆ ನಿಧನರಾದರು.



ಖಾನಚಂದ್

ಖಾನಚಂದ್ ಅವರ ಆರೋಗ್ಯ ಬಿಗಡಾಯಿಸಿದ ಕಾರಣ ಫೆ.21ರಂದು ಅವರನ್ನು ಗ್ರೇಟರ್ ನೊಯ್ಡಾದ ಯತಾರ್ಥ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಟಿ20 ವಿಶ್ವಕಪ್ ಟೂರ್ನಿಯಲ್ಲಿ ಆಡುತ್ತಿರುವ ರಿಂಕು, ತಂದೆಯವರನ್ನು ನೋಡಲು ದಿಢೀರನೇ ತವರಿಗೆ ಮರಳಿದ್ದರು. ಗುರುವಾರ ನಡೆದ ಜಿಂಬಾಬ್ವೆ ವಿರುದ್ಧದ ಪಂದ್ಯದಲ್ಲಿ ಆಡುವ 11ರಲ್ಲಿ ಸ್ಥಾನ ಪಡೆಯದಿದ್ದರೂ ಫೀಲ್ಡಿಂಗ್‌ನಲ್ಲಿ ಕಾಣಿಸಿಕೊಂಡಿದ್ದರು.

ಉತ್ತರಪ್ರದೇಶದ ಅಲಿಗಢದಲ್ಲಿ ಗ್ಯಾಸ್ ಸಿಲಿಂಡರ್ ವಿತರಕರಾಗಿದ್ದ ಖಾನಚಂದ್ ಅವರು ಬಡತನದಲ್ಲಿಯೂ ರಿಂಕು ಅವರ ಕ್ರಿಕೆಟ್ ಕನಸಿಗೆ ಬೆನ್ನೆಲುಬಾಗಿ ನಿಂತಿದ್ದರು.

'ರಿಂಕು ಅವರು ವೆಸ್ಟ್ ಇಂಡೀಸ್ ವಿರುದ್ಧದ ಪಂದ್ಯಕ್ಕೂ ಮುನ್ನ ಶನಿವಾರ ಕೋಲ್ಕತ್ತದಲ್ಲಿ ತಂಡವನ್ನು ಸೇರಿಕೊಳ್ಳಲಿದ್ದಾರೆ' ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.

ಈಡನ್‌ಗಾರ್ಡನ್‌ನಲ್ಲಿ ರನ್‌ಹೊಳೆ ನಿರೀಕ್ಷೆ

ಭಾರತ– ವೆಸ್ಟ್ ಇಂಡೀಸ್ ನಡುವಣ 'ಕ್ವಾರ್ಟರ್‌ಫೈನಲ್' ಪಂದ್ಯಕ್ಕೆ ಕೋಲ್ಕತ್ತ ಸಜ್ಜು

ಕೋಲ್ಕತ್ತ (ಪಿಟಿಐ): ಭಾರತ ಮತ್ತು ವೆಸ್ಟ್ ಇಂಡೀಸ್ ನಡುವಣ ಭಾನುವಾರ ಇಲ್ಲಿ ನಡೆಯಲಿರುವ ಟಿ20 ವಿಶ್ವಕಪ್ 'ಸೂಪರ್ 8' ಹಂತದ ಪಂದ್ಯ 'ಕ್ವಾರ್ಟರ್ ಫೈನಲ್' ಸ್ವರೂಪ ಪಡೆದಿದೆ. ಕೋಲ್ಕತ್ತದ ಪಿಚ್‌ನಲ್ಲಿ ರನ್‌ಹೊಳೆ ಹರಿಯುವ ನಿರೀಕ್ಷೆಯಿದೆ.

ಹಾಲಿ ವಿಶ್ವಕಪ್‌ನಲ್ಲಿ ಮೊದಲ ಬಾರಿ 200+ ಮೊತ್ತ ದಾಖಲಾಗಿದ್ದು ಇದೇ ಪಿಚ್‌ನಲ್ಲಿ. ಸ್ಕಾಟ್ಲೆಂಡ್, ಇಟಲಿ ವಿರುದ್ಧ ಫೆ. 9ರಂದು ನಡೆದ ಆ ಪಂದ್ಯದಲ್ಲಿ 207 ರನ್ ಹೊಡೆದಿತ್ತು. ಇದೇ ಪಿಚ್‌ನಲ್ಲಿ ಮಾರ್ಚ್ 1ರಂದು ಪಂದ್ಯ ನಡೆಯಲಿದೆ ಎಂದು ಸ್ಥಳೀಯ ಕ್ಯುರೇಟರ್ ಸುಜನ್ ಮುಖರ್ಜಿ ತಿಳಿಸಿದ್ದಾರೆ.


ಬಂಗಾಳ ಕ್ರಿಕೆಟ್ ಸಂಸ್ಥೆ ಅಧ್ಯಕ್ಷ ಸೌರವ್ ಗಂಗೂಲಿ ಅವರು ಶುಕ್ರವಾರ ಪಿಚ್‌ಗೆ ಹೊದಿಕೆಹಾಕುವ ಮೊದಲು ಒಂದು ಸುತ್ತು ಪರಿಶೀಲನೆ ನಡೆಸಿದರು. ಮುಖರ್ಜಿ ಜೊತೆ ಬಿಸಿಸಿಐ ಮಾಜಿ ಅಧ್ಯಕ್ಷ ಸಹ ಆಗಿರುವ ಗಂಗೂಲಿ, ಬಿಸಿಸಿಐನ ಮುಖ್ಯ ಕ್ಯುರೇಟರ್ ಆಶಿಶ್ ಭೌಮಿಕ್ ಅವರು ದೀರ್ಘ ಸಮಾಲೋಚನೆ ನಡೆಸಿದರು. ಗಂಗೂಲಿ ಅವರು ಪಿಚ್‌ನ ಎರಡೂ ಎಂಡ್‌ಗಳ ದೃಢತೆ ಪರೀಕ್ಷಿಸಿದರು.

'ಪಿಚ್ ತಯಾರಿ ನೋಡಿ ಗಂಗೂಲಿ ಸಂತೃಪ್ತರಾದಂತೆ ಕಂಡರು. ಈಡನ್‌ನ ಮಾಮೂಲಿ ಪಿಚ್‌ನಂತೆ ಇಲ್ಲಿ ರನ್‌ಗಳು ಹರಿಯಲಿವೆ. ಬೌಲರ್‌ಗಳಿಗೂ ಇಲ್ಲಿ ಸ್ವಲ್ಪ ನೆರವು ಸಿಗಲಿದೆ' ಎಂದು ಮುಖರ್ಜಿ ಸುದ್ದಿಸಂಸ್ಥೆಗೆ ತಿಳಿಸಿದರು. ರಾತ್ರಿಯ ಇಬ್ಬನಿಯೂ ಗಮನಾರ್ಹವಾಗಿರಲಿದೆ ಎಂದರು.

ಇಂಗ್ಲೆಂಡ್‌ನ ವೇಗಿ ಜೋಫ್ರಾ ಆರ್ಚರ್ ಇಲ್ಲಿ ಗಮನಸೆಳೆದಿದ್ದರು. ಹೀಗಾಗಿ ಜಸ್‌ಪ್ರೀತ್ ಬೂಮ್ರಾ, ಎಡಗೈ ವೇಗಿ ಅರ್ಷದೀಪ್ ಸಿಂಗ್, ಹಾರ್ದಿಕ್ ಪಾಂಡ್ಯ ಅವರೂ ಪಿಚ್‌ನಿಂದ ನೆರವು ನಿರೀಕ್ಷಿಸಬಹುದು. ಈ ವಿಶ್ವಕಪ್‌ನಲ್ಲಿ ಭಾರತ ಮೊದಲ ಬಾರಿ ಈಡನ್ ಗಾರ್ಡನ್ಸ್‌ನಲ್ಲಿ ಆಡಲಿದೆ. ವೆಸ್ಟ್ ಇಂಡೀಸ್ ಈ ಕ್ರೀಡಾಂಗಣದಲ್ಲಿ ಈಗಾಗಲೇ ಎರಡು ಪಂದ್ಯಗಳನ್ನು (ಸ್ಕಾಟ್ಲೆಂಡ್ ಮತ್ತು ಇಟಲಿ ವಿರುದ್ಧ) ಆಡಿದೆ.

ಭಾನುವಾರದ ಸೂಪರ್ ಎಂಟರ ಈ ಪಂದ್ಯ 'ಕ್ವಾರ್ಟರ್‌ಫೈನಲ್' ರೂಪ ತಳೆದಿದೆ. ದಕ್ಷಿಣ ಆಫ್ರಿಕಾ ತಂಡವು, ವೆಸ್ಟ್ ಇಂಡೀಸ್, ಭಾರತ ಎರಡೂ ತಂಡಗಳಿಗೆ ಸೋಲುಣಿಸಿದೆ. ಭಾರತ ಗುರುವಾರ ಜಿಂಬಾಬ್ವೆ ತಂಡವನ್ನು ಸೋಲಿಸಿ ಟೂರ್ನಿಯಿಂದ ಹೊರದೂಡಿದೆ.





ಸೂರ್ಯಕುಮಾರ್ ಯಾದವ್

ಡ್ರಾ ಮಾಡಿದ ಗುಕೇಶ್

ಪ್ರಾಗ್ (ಝೆಕ್ ರಿಪಬ್ಲಿಕ್), (ಪಿಟಿಐ): ವಿಶ್ವ ಚಾಂಪಿಯನ್ ಡಿ.ಗುಕೇಶ್, ಪ್ರಾಗ್ ಇಂಟರ್‌ನ್ಯಾಷನಲ್ ಚೆಸ್ ಟೂರ್ನಿಯ ಎರಡನೇ ಸುತ್ತಿನಲ್ಲಿ ಉಜ್ಬೇಕಿಸ್ತಾನದ ನಾದಿರ್ಬೆಕ್ ಯಾಕು ಬೊಯೆವ್ ಜೊತೆ ಡ್ರಾ ಮಾಡಿಕೊಂಡರು. ಅರವಿಂದ ಚಿದಂಬರಂ ಅವರು ಹ್ಯಾನ್ಸ್ ಮೋಕ್ ನೀಮನ್ ಅವರನ್ನು ಸೋಲಿಸಿದರು.



ಬೆಂಗಳೂರು ಎಫ್‌ಸಿ ತಂಡದ ವಿರುದ್ಧ ಪಂಜಾಬ್ ಎಫ್‌ಸಿ ತಂಡದ ಎಫಿಯಾಂಗ್ (ಎಡ) ಗೋಲು ದಾಖಲಿಸಲು ಯತ್ನಿಸಿದರು ಚಿತ್ರ: ವಿ.ಪುಷ್ಕರ್

ಪಂಜಾಬ್‌ಗೆ ಮಣಿದ ಬಿಎಫ್‌ಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೈಜೀರಿಯಾದ ಮುಂಚೂಣಿ ಆಟಗಾರ ಎಫಿಯಾಂಗ್ ಅವರ ಅಮೋಘ ಆಟದ ನೆರವಿನಿಂದ ಪಂಜಾಬ್ ಎಫ್‌ಸಿ ತಂಡವು ಶುಕ್ರವಾರ ನಡೆದ ಇಂಡಿಯನ್ ಸೂಪರ್ ಲೀಗ್‌ನ ಪಂದ್ಯದಲ್ಲಿ 2–0 ಗೋಲುಗಳಿಂದ ಆತಿಥೇಯ ಬೆಂಗಳೂರು ಎಫ್‌ಸಿ ತಂಡವನ್ನು ಮಣಿಸಿತು.

ಕಂಠೀರವ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಎಫಿಯಾಂಗ್ 20ನೇ ಮತ್ತು 32ನೇ ನಿಮಿಷದಲ್ಲಿ ಗೋಲು ದಾಖಲಿಸಿ, ಪಂಜಾಬ್ ತಂಡದ ಗೆಲುವಿನ ರೂವಾರಿಯಾದರು. ಇದರೊಂದಿಗೆ ಪಂಜಾಬ್ ಹಾಲಿ ಆವೃತ್ತಿಯಲ್ಲಿ ಗೆಲುವಿನ ಖಾತೆ ತೆರೆಯಿತು. ತನ್ನ ಮೊದಲ ಪಂದ್ಯದಲ್ಲಿ ಜೆಮ್ಶೆಡ್‌ಪುರ ತಂಡಕ್ಕೆ ಸೋತಿತ್ತು.

ಈ ಸೋಲಿನೊಂದಿಗೆ ಸುನಿಲ್ ಚೆಟ್ರಿ ಬಳಗದ ಅಜೇಯ ಓಟಕ್ಕೂ ತೆರೆಬಿತ್ತು. ಸ್ಪೋರ್ಟಿಂಗ್ ಡೆಲ್ಲಿ ತಂಡವನ್ನು ಮಣಿಸಿ ಅಭಿಯಾನ ಆರಂಭಿಸಿದ ಬಿಎಫ್‌ಸಿ ತಂಡವು ತನ್ನ ಎರಡನೇ ಪಂದ್ಯದಲ್ಲಿ ನಾರ್ತ್‌ಈಸ್ಟ್ ಯುನೈಟೆಡ್ ಎಫ್‌ಸಿ ವಿರುದ್ಧ ಡ್ರಾ ಸಾಧಿಸಿತ್ತು. ಲೀಗ್ ಪಟ್ಟಿಯಲ್ಲಿ ಬಿಎಫ್‌ಸಿ (4 ಅಂಕ) ಆರನೇ ಸ್ಥಾನದಲ್ಲಿದ್ದರೆ, ಪಂಜಾಬ್ (3 ಅಂಕ) ಏಳನೇ ಸ್ಥಾನಕ್ಕೇರಿತು.

ಬೆಂಗಳೂರು ಎಫ್‌ಸಿ ತಂಡವು ಮಾರ್ಚ್ 7ರಂದು ಕೋಲ್ಕತ್ತದಲ್ಲಿ ಮೊಹಮ್ಮಡನ್ ಎಫ್‌ಸಿ ತಂಡವನ್ನು ಎದುರಿಸಲಿದೆ.

ಜಮ್ಶೆಡ್‌ಪುರಕ್ಕೆ ಹ್ಯಾಟ್ರಿಕ್ ಗೆಲುವು: ಅಜೇಯ ಓಟವನ್ನು ಮುಂದುವರಿಸಿದ ಜಮ್ಶೆಡ್‌ಪುರ ಎಫ್‌ಸಿ ತಂಡವು 2–1 ಗೋಲುಗಳಿಂದ ಬಲಿಷ್ಠ ಈಸ್ಟ್ ಬೆಂಗಾಲ್ ತಂಡವನ್ನು ಮಣಿಸಿ ಹ್ಯಾಟ್ರಿಕ್ ಗೆಲುವು ದಾಖಲಿಸಿತು.

ಕೋಲ್ಕತ್ತದ ವಿವೇಕಾನಂದ ಯುವ ಭಾರತಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಜಮ್ಶೆಡ್‌ಪುರ ಪರ ಸ್ಟೀಫನ್ ಈಜ್ (61ನೇ) ಮತ್ತು ರೇಯ್ ತಚಿಕಾವಾ (87ನೇ) ಅವರು ತಲಾ ಒಂದು ಗೋಲು ದಾಖಲಿಸಿದರು. ಬೆಂಗಾಲ್ ಪರ ಎಡ್ಮಂಡ್ ಲಾಲ್ರಿಂಡಿಕಾ (40ನೇ) ಏಕೈಕ ಗೋಲು ತಂದಿತ್ತರು. ಸತತ ಮೂರು ಪಂದ್ಯಗಳನ್ನು ಗೆದ್ದ ಜಮ್ಶೆಡ್‌ಪುರ 9 ಅಂಕಗಳೊಂದಿಗೆ ಲೀಗ್ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿತು.

ಆಸ್ಟ್ರೇಲಿಯಾ ವನಿತೆಯರಿಗೆ 5 ವಿಕೆಟ್ ಜಯ • ಸರಣಿ ಕೈವಶ

ಮಿಂಚಿದ ವೋಲ್, ಲಿಚ್‌ಫೀಲ್ಡ್

ಹೋಬಾರ್ಟ್ (ಪಿಟಿಐ): ಜೀವದಾನಗಳ ಲಾಭ ಪಡೆದ ಜಾರ್ಜಿಯಾ ವೋಲ್ ಅವರು ಶತಕ (101) ಬಾರಿಸಿದರೆ, ಫೋಬಿ ಲಿಚ್‌ಫೀಲ್ಡ್ 80 ರನ್ ಬಾರಿಸಿದರು. ಇವರಿಬ್ಬರ ಬ್ಯಾಟಿಂಗ್ ನೆರವಿನಿಂದ ಆಸ್ಟ್ರೇಲಿಯಾ ತಂಡ ಮಹಿಳೆಯರ ಏಕದಿನ ಸರಣಿಯ ಎರಡನೇ ಪಂದ್ಯದಲ್ಲಿ ಭಾರತ ತಂಡದ ನಮೇಲೆ ಶುಕ್ರವಾರ ಐದು ವಿಕೆಟ್‌ಗಳ ಸುಲಭ ಜಯಗಳಿಸಿತು. ಇನ್ನೂ ಒಂದು ಪಂದ್ಯ ಇರುವಂತೆ ಆತಿಥೇಯ ತಂಡ ಸರಣಿಯನ್ನು 2–0ಯಿಂದ ತನ್ನದಾಗಿಸಿಕೊಂಡಿತು.

ಮೂರನೇ ಹಾಗೂ ಅಂತಿಮ ಏಕದಿನ ಪಂದ್ಯ ಭಾನುವಾರ ನಡೆಯಲಿದೆ.

ಭಾರತ ತಂಡ ಬ್ಯಾಟಿಂಗ್‌ಸ್ನೇಹಿ ಪಿಚ್‌ನಲ್ಲಿ 9 ವಿಕೆಟ್‌ಗೆ 251 ರನ್ ಹೊಡೆಯಿತು. ಪ್ರತೀಕಾ ರಾವಲ್ (52, 81ಎ, 4x6) ಮತ್ತು ಹರ್ಮನ್‌ಪ್ರೀತ್ ಕೌರ್ (54, 70 ಎಸೆತ, 4x2, 6x1) ಅವರು ಅರ್ಧಶತಕಗಳನ್ನು ಬಾರಿಸಿದರು. ಆಸ್ಟ್ರೇಲಿಯಾ ಇನ್ನೂ 13.5 ಓವರುಗಳಿರುವಂತೆ 5 ವಿಕೆಟ್‌ಗೆ 252 ರನ್ ಬಾರಿಸಿತು.

ವಿಕೆಟ್‌ಕೀಪರ್ ರಿಚಾ ಘೋಷ್ ಅವರು ಲೆಗ್‌ಸೈಡ್‌ನಲ್ಲಿ ಕ್ಯಾಚ್‌ಪಡೆಯಲು ವಿಫಲರಾದ ಬಳಿಕ ವೋಲ್, ಏಕದಿನ ಪಂದ್ಯಗಳಲ್ಲಿ ತಮ್ಮ ಎರಡನೇ ಶತಕ ಪೂರೈಸಿದರು. ಅದಕ್ಕೆ ಮೊದಲು ಅವರಿಗೆ ಎರಡು ಜೀವದಾನ ದೊರಕಿತ್ತು. 22 ವರ್ಷ ವಯಸ್ಸಿನ ವೋಲ್ ಅವರು 19 ರನ್ ಗಳಿಸಿದ್ದಾಗ ದೀಪ್ತಿ ಶರ್ಮಾ ಬೌಲಿಂಗ್‌ನಲ್ಲಿ (14ನೇ ಓವರ್) ಕ್ರಾಂತಿ ಗೌಡ್ ಲಾಂಗ್‌ಆನ್‌ನಲ್ಲಿ ಕಷ್ಟದ ಕ್ಯಾಚ್ ಬಿಟ್ಟರು. ನಂತರ ಕಶ್ವಿ ಗೌತಮ್ ಬೌಲಿಂಗ್‌ನಲ್ಲಿ ಮಿಡ್‌ವಿಕೆಟ್‌ನಲ್ಲಿ ಸ್ಮೃತಿ ಮಂದಾನ ಸುಲಭವಾಗಿದ್ದ ಕ್ಯಾಚ್ ನೆಲಕ್ಕೆ ಹಾಕಿದರು.

ವೋಲ್ ಮತ್ತು ಲಿಚ್‌ಫೀಲ್ಡ್ ಎರಡನೇ ವಿಕೆಟ್‌ಗೆ 119 ರನ್ ಸೇರಿಸಿದ್ದರಿಂದ ಆಸ್ಟ್ರೇಲಿಯಾ ತಂಡದ ಹಾದಿ ಸುಗಮವಾಯಿತು. 82 ಎಸೆತಗಳನ್ನು ಆಡಿದ ವೋಲ್ ಒಂದು ಸಿಕ್ಸರ್, 13 ಬೌಂಡರಿಗಳನ್ನು ಬಾರಿಸಿದರು. ಲಿಚ್‌ಫೀಲ್ಡ್ 62 ಎಸೆತಗಳ ಇನಿಂಗ್ಸ್‌ನಲ್ಲಿ ಒಂದು ಸಿಕ್ಸರ್, 11 ಬೌಂಡರಿಗಳನ್ನು ಹೊಡೆದರು.

ಇದಕ್ಕೆ ಮೊದಲು, ಪ್ರತಿಕಾ ರಾವಲ್ ಮತ್ತು ಸ್ಮೃತಿ ಮಂದಾನ (31) ಜೋಡಿ ಮೊದಲ ವಿಕೆಟ್‌ಗೆ 78 ರನ್ ಸೇರಿಸಿ ಭಾರತ ತಂಡಕ್ಕೆ ಉತ್ತಮ ಆರಂಭ ನೀಡಿತ್ತು. ಮಧ್ಯಮ ಹಂತದಲ್ಲಿ ಹರ್ಮನ್‌ಪ್ರೀತ್ ಉಪಯುಕ್ತ ಇನಿಂಗ್ಸ್ ಆಡಿದರು.

ಸಂಕ್ಷಿಪ್ತ ಸ್ಕೋರು: ಭಾರತ: 50 ಓವರುಗಳಲ್ಲಿ 9 ವಿಕೆಟ್‌ಗೆ 251 (ಪ್ರತೀಕಾ ರಾವಲ್ 52, ಹರ್ಮನ್‌ಪ್ರೀತ್ ಕೌರ್ 54, ಕಶ್ವಿ ಗೌತಮ್ 25; ಆ್ಯಶ್ಲೆ ಗಾರ್ಡನರ್ 39ಕ್ಕೆ2, ಅನ್ನಾಬೆಲ್ ಸದರ್‌ಲ್ಯಾಂಡ್ 37ಕ್ಕೆ2, ಅಲನಾ ಕಿಂಗ್ 41ಕ್ಕೆ2); ಆಸ್ಟ್ರೇಲಿಯಾ: 36.1 ಓವರುಗಳಲ್ಲಿ 5 ವಿಕೆಟ್‌ಗೆ 252 (ಫೋಬಿ ಲಿಚ್‌ಫೀಲ್ಡ್ 80, ಜಾರ್ಜಿಯಾ ವೋಲ್ 101, ಬೆತ್ ಮೂನಿ 31; ಕಶ್ವಿ ಗೌತಮ್ 47ಕ್ಕೆ2, ದೀಪ್ತಿ ಶರ್ಮಾ 32ಕ್ಕೆ2).
ಪಂದ್ಯದ ಆಟಗಾರ್ತಿ: ಜಾರ್ಜಿಯಾ ವೋಲ್.

ಜಾರ್ಜಿಯಾ ವೋಲ್
ರನ್ 101
ಎಸೆತ 82
ಬೌಂಡರಿ 13
ಸಿಕ್ಸರ್ 1



ಕ್ಲಾಸಿಫೈಡ್ಸ್


ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331







ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/ 9845114560 / 9731810277/ 9886213331

REAL ESTATE SELLING

Sites

Anjanapura

ANJANAPURA 8TH Block, 30x40,BDA Site For sale Good Location Genuine Buyers Contact : 9980775693

Banashankari

BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

BSK 3RD-STAGE SALE 40x60 PRIME RESIDENTIAL SITE HOUSE NEAR WATER TANK RS.30K NEGOTIABLE. Shivu: 9880004149

BANASHANKARI 6TH STAGE, 11th BLOCK, CLOSE UTTARAHALLI MAIN ROAD, 40x60 SALE, GOOD LOCATION. MANOJ: 9731410616

WEST FACING BDA site 9Mx12M for sale in BSK 6th Stage, 2nd Block. call: 9663611844

BSK 2ND stage 15th main, 50x90 West (Old Bungalow) 14.50 crore. Brokers excuse. Aumkaran's -9448487387.

SALE BDA 30x40 East Facing, BSK 6th Stage, 2nd Block, 18.5k per sft. Contact Owner: 9980333100

Gnanabharathi

30X40 RESIDENTIAL SITE FOR SALE, NORTH FACING, JNANABHARATHI 1st BLOCK, NEAR to METRO STATION. Call: 8147618891.

Hennur

HENNUR 20X45 North West Corner B ekatha site sale HIREMATH LAYOUT, KOTHANUR Rs.6000/- 9945033366

Hanumanthnagar

FOR SALE 40x60 North in HANUMANTHANAGAR and 30x50, 40x60 in GIRINAGAR. Contact immediately : 8618373754

Kempegowda Layout

KEMPEGOWDA LAYOUT, Commercial/ Residential BDA Site for Sale 20x30, 30x40, 40x60, 50x80 Contact Kumar 9945119449

BDA SITE for Sale 40 feet Road, 20/30 Kempegowda Layout 1st block Broker Excuse:7349549087

Nelamangala

BYRASHETTYHALLI AISHWARYA County BMRDA 40x60, East And Banashankari BDA 30x40,Sites For Sale : 9620117773/9845857006

BTM Layout

SITE FOR Sale 30×40 40×60 East North Facing BTM 2nd Stage 25000 to 30000, 9945377119 /9844099557

Vishweshwariah Layout

BDA SITE SALE VISHWESHWARAIAH LAYOUT 2nd Block 40X60 NORTH FACE NEAR 100FT ROAD GOOD LOCATION CONTACT: 8892901567

SMV LAYOUT 2nd BLOCK 20x30 WEST FACE, BUILDER LOCATION, SITE FOR SALE. Call: 9164089633, 9663226688.

RAILWAY LAYOUT 2nd Stage, West South Corner, 1170 Sqft. Near Vidhyanikethan School Ullal Road, BDA-KHATHA. Call: 9164089633.

SMV LAYOUT 8TH BLOCK, 50x80 N/F, 40ft ROAD, NEAR NPS SCHOOL, PRIME LOCATION, SITE SALE: 9164089633/ 9663226688

DIRECT OWNER 20x30 E/F BDA Site Sale, VISHWESHWARAIAH LAYOUT BLOCK-9 near RTO Office Mallathalli. 9742681666

DIRECT OWNER 20x30,30x40 Sites Sale, Near RTO Office, Vishweshwaraiah Layout, Very Good Location: 9620696913/ 9880781399

BDA-SITE FOR-SALE @ Sir. M. Vishweshwaraiah Layout 30x40 Contact: 6363496142

Dodda Aladamara

TWO 40×60' Sites in KNS NESTER, West Facing, BMRDA approved, 2,650 /sqft. Slightly Negotiable. 9686885275

Outer Ring Road

ORR(SUMANAHALLI-LAGGERE BRIDGE) direct facing Corner Commercial Site 2,800 Sft. "A"&"E" Katha at Chowdeshwarinagar Call: 9980555558

Rajarajeshwari Nagar

RR.NAGAR BEML 5th Stage 6560 Sqft. West Facing, Vastu Site Sale, Suitable for Apartment. Contact: 9448121223.

House

Nagarabhavi

BDA 20X20 G+2 Building N/F Pattegarapalya, Nagarabhavi, A/E Katha, Price 68 Lakh Owner 9740073482

Bannerghatta Road

BHANNERGHATTA ROAD 30x40 East with old Duplex House near M.S.Ramaiah City and Aradhana school 1.8crores. Contact: 9945033366

Basavanagudi

SALE 45X110 Semi Commercial Site near DVG Road with House, 39k/= Sft, negotiable. Call. 9886044313.

Uttarahalli

UTTARAHALLI BHARAT HOUSING SOCIETY, OPPOSITE PARK, 20X40 WEST FACING 3 BHK DUPLEX HOUSE SALE. 9945724472.

Yelahanka

YELAHANKA ATTUR MAIN ROAD, MUNESHWAREA BADAVANE: 40x70 site with Builtup 1550sft Vaastu INDEPENDENT HOUSE SALE 5.5crores. Serious buyers Contact: 9483700875

Anjanapura

ANJANAPURA BDA 4TH BLOCK BRAND NEW DUPLEX HOUSE BUILT ON 700 SQFT WITH LIFT OWNER 9980079792

Residential/ Commercial

Bangalore North

SALE 6825 sqft residential plot Lush greenery coconut Teak silver fruits trees atchikkajala just 20mins BLR airport 9448717222

Commercial Building

Jayanagar

FOR SALE Commercial Property, Three Floors Building Approximately 6000 Sft @ 28th Main, Byrasandra. 9845022435.

Commercial Land

Tumkur Road

SALE COMMERCIAL BDA Site Facing Tumkur Road, Opposite Metro cash and carry, Measuring 150x125 Fully or partly. Owner 9480060249.

Flat

Nagarabhavi

FLATS FOR-SALE @ Nagarabhavi Chandra Layout 2 & 3BHK Ready to Move In Good Location Call:9538472420 9845066608

Industrial & Factory

Intl Airport Road

SALE RED CATEGORY Industrial Land & Building in AP Hindupur APIIC allotted Suitable for Chemical, Pharma, Organic, Fertilisers Manufacturers. 20000sft, 41500sft, 135000sft clear titles. Call Verna Developers, Barton Centre, MG Road. 9916310226.

Agricultural Land

Hosur Road

HOSUR AGRICULTURAL LAND for sale 1.5ACRE 320x200ft 500mtrs from STRR Bagalur 3.3crores. Contact: 9945033366

REAL ESTATE BUYING

Commerical

General

COMMERCIAL/ SEMI Commercial Rental income building with clear titles, good location. Only interested owners (brokers excuse) contact 9035464075, 9035838641

WEEKEND CORNER ಕ್ಲಾಸಿಫೈಡ್ಸ್

UGADI OFFER !



₹ 17,500/- Inclusive of all taxes
1 KVA UPS + 150 AH Amaron Quanta Tubular Battery + Trolley
9538773551, 9538097448 | www.synergytechups.in

SITE FOR SALE
NELAMANGALA ENTRANCE
BMRDA APPROVED
40X60
EAST FACING SITE



240 Feet From NH 4, Tumkur Road, Surrounded By Constructed Houses.
300 Meter From Upcoming Metro Station
Bank loan available
Scan for Site Location
Contact No. 97416 30708

FOR SALE
30000 SQ.FT.BUILDING WITH 3 FLOORS AND PARKING
AT ESI LAYOUT, KUDLU GATE,
CONTACT
9880498007
Email- associates.blr10@gmail.com

LAND FOR SALE



10 Gunta, 19 Gunta, 25 Gunta, 28 Gunta Land Available for Sale in Developed Farmland
Project @ Solur near Nelamangala, Water and Electricity Connection, 30ft Road Gated Community. 1.25km from NH 48 Nelamangala to Mangalore Highway, 15 km from Nelamangala
Scan for Site Location
Contact No. 97416 30708

Sites

Anjanapura

WANTED BDA Site Anjanapura, Banashankari 6th Stage, Vishweshwaraiah layout & any BDA Katha & Mysore MUDA Sites, immediate settlement, genuine Sellers Contact: 9902038118, 9449060605

WANTED SITE ANJANAPURA BCCHS Layout Narayan Nagar Jayanagar Housing Society, Banashankari 6th Stage 30x40,40x60. Direct Registration. Broker Excuse. Call:9663454878

Banashankari

BDA-SITES WANTED @ BSK 6th Stage all Blk Vishweshwaraiah Lyt Kempegowda Lyt 30x40, 40x60, 50x80 Call:9845555666

Multiple Locations

WANTED BDA Sites Anjanapura-Arkavathi, Banashankari 6th stage, Vishweswaraiah, Kempegowda, Dr. Shivaramkaranth Layout. Contact: Sapthagiri "(Opposite BDA Head Office) "9036360366.

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

EPOXY GROUTING for bathroom & balconies. Heat reflecting coating for terraces. Contact Roof & Walls, Bangalore. 9845987989

RENTAL PROPERTIES

Accommodation Available

Commercial

COMMERCIAL SPACE for-Rent 6000 Sq.ft 1st Floor 2000 Sqft, 2nd floor 2000 Sqft, 3rd-floor 2000 Sqft Suitable for Study centre, Office,Bank, Gym Etc.,at Marenahalli Main-Road, Vijayanagar Bangalore. Contact: 9880200117/ 9448068082

PRIME COMMERCIAL RR.NAGAR RENT 4000.sqft CORNER.& PRIME COMMERCIAL 100 FEET ROAD, HAROHALLI, JAIN UNIVERSITY OPP. RENT 7000.sqft. Call:8147618891

FOR RENT/ SALE Fully Furnished Office 3rd Floor on Old Airport Road VDB TOUCHDOWN Next to HAL Museum 7447Sqft 96 Work Stations 5 Cabins 3 Meeting Room 1 Board 1 MD Cabin 6 Carparks. No PHONE CALLS WHATS APP MESSAGE ONLY TO: 9845031550

Flats

NEW FLATS FOR RENT
2/3 BHK New Semi Furnished Flats with Modern Kitchen Ready to move at
AARNA RAJPATH, GUNJUR.
East Bangalore just in front of Lakeview, Prestige MSB & IT Complex, with rent
Rs.35,000/- for 2BHK & Rs.45,000/- for 3BHK
Negotiable
Excluding Monthly Maintenance
SAA
Those interested May Contact:
97413 33222
99621 82221
Email:vrsn@live.com

Industrial And Factory

AVAILABLE INDUSTRIAL Warehouse 160000 sqft Vijipura, Hoskote. Contact: 9341234288/ 9663224353/ 9845417487.

TOURS & TRAVEL

Travel Agencies

DUBAI TOUR 6 Days, Vietnam Tour 6 Days, Bangkok Tour 5 Days,Krabi Phuket 5 Days SuvarnaYatra 6360146483/ 9008381022

Travel

8 DAYS Kshmir Vaishnodevi. 13 Days Chardham Yatra. 7 Days Kashi Ayodhya. 7 Days Amarnath Yatra. Nandi Holidays Banglore Mob: 9740228186, 9035513332

PERSONAL

Change of Name

I, KHORANA UMA W/o.Gajinder Lal Khorana R/a.Villa #137,DSR Elite Mahadevpura Main Road, Mahadevapura Bangalore 560048 have changed my Name to KHORANA UMA GAJINDER LAL vide affidavit Dated:27.2.2026 before Notary J.Anand Kumar Bangalore.

I, GULFIYA Abdul Rahiman Shaikh, residing at Flat No. 311, Sipani Jardin Apartment, B Block, 3rd Floor, Madivala Village, Marasur Post, Kasaba Hobli, Anekal Taluk, Bangalore – 562106, have changed my name to Gulfiya Abdul Rehman Shaikh and shall hereafter be known as Gulfiya Abdul Rehman Shaikh for all purposes.

CHANGE OF NAME
I, **VENKATALAKSHMAMMA** residing at # 117/2, Sri Rama Temple Street, Byatarayanapura, Sahakaranagar PO, Bengaluru-560092, have changed my name to **LAKSHMI ANANTHRAJ** vide affidavit dated 24-02-2026 before notary G.R. Ravichandra Reddy, Bengaluru. Henceforth I shall be known as **LAKSHMI ANANTHRAJ** only.

I SURESHA BUNTS VISHWANATH, R/a #8, 2nd main, 2nd cross, Kaverinagar BSK 3rd stage. Bangalore-85, have changed my name from B.V SURESHA. To SURESH RAI B.V. Vide affidavit dated 26/02/2026 before notary Mohammad Hussain K. Bangalore

Lost

DOCUMENT LOST
I, **Nikhil J.P.** S/o Late J.T. Puttaswamy Gowda, R/at. Yelahanka new town, Blr, have lost **Original Sale Deed Doc No: 2690/92-93 Property: 1601/D, Maruti Nagar, Yelahanka owned by Chennakeshava Gramodyoga Sangha.** If found contact: **7259318886**





email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ ಕ್ಲಾಸಿಫೈಡ್ಸ್

ಕಗ್ಗಲೀಪುರ ಸಮೀಪ ವಸತಿ ನಿವೇಶನಗಳು



" ಅನುಮೋದಿತ ಬಡಾವಣೆಗಳು ಲಭ್ಯ "

ಮನೆ ಕಟ್ಟೋದು ಆಗಲೀ, ಇನ್ವೆಸ್ಟ್ ಮಾಡೋದು ಆಗಲೀ,
ಇದು ನಿಮ್ಮ ಫ್ಯೂಚರ್‌ಗಾಗಿ ಸೂಪರ್ ಆಯ್ಕೆ.

ಆಕರ್ಷಕ ಬೆಲೆಗಳಲ್ಲಿ ನಿವೇಶನಗಳು ಲಭ್ಯ

ನಾಳೆ ಬೆಲೆ ಏರುವುದು ಖಚಿತ

ಭೂಮಿ ನಿಮ್ಮದಾಗಿಸೊ **ಸಮಯ ಇದು!**

ಈ ವಾರಾಂತ್ಯದಲ್ಲಿ ಸೈಟ್‌ಗೆ ಬನ್ನಿ — ನೋಡಿ,
ನೀವು ಖಂಡಿತಾ ಇಷ್ಟಪಡ್ತೀರಾ!

89700 56056

ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡಿದೆ

- Electricity
- Water
- Tar Road
- Park
- Drainage

ಬಾಕಿ ಹಣವನ್ನು 3 ಕಂತುಗಳಲ್ಲಿ ಪಾವತಿಸಬಹುದು.

ಬೆಲೆ ಕೇವಲ **₹13.99** ಲಕ್ಷ ದಿಂದ ಪ್ರಾರಂಭ